ಶುಕ್ರವಾರ, ಸೆಪ್ಟೆಂಬರ್ 16, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರೋಜರ್ ಫೆಡರರ್ ವಿದಾಯ

ಸ್ವಿಟ್ಜರ್ಲೆಂಡ್‌ನ ದಿಗ್ಗಜ ಆಟಗಾರ ರೋಜರ್ ಫೆಡರರ್ ವೃತ್ತಿಪರ ಟೆನಿಸ್‌ಗೆ ಗುರುವಾರ ನಿವೃತ್ತಿ ಘೋಷಿಸಿದರು

14



ಶುಕ್ರವಾರ, ಸೆಪ್ಟೆಂಬರ್ 16, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 257 | ಪುಟ 18

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
ಬಾನಲ್ಲಿ ಗಾಳಿಪಟ ಹಾರಿಸಿ ಬಂದ ವೈಭವಿ ಶಾಂಡಿಲ್ಯ ಮಾರ್ಟಿನ್‌ನಲ್ಲಿ ಬಬ್ಲಿ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರಂತೆ...

ಭಾರತಕ್ಕೆ ಕಚ್ಚಾ ತೈಲ ಪೂರೈಕೆ: ಮತ್ತೆ ಎರಡನೇ ಸ್ಥಾನಕ್ಕೆ ಸೌದಿ 12

‘ಭ್ರಷ್ಟಾಚಾರದ ಹಣ: ಎಎಪಿ ಚುನಾವಣಾ ಪ್ರಚಾರ’ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,934	17,877	₹51,940 (ಬೆಂಗಳೂರು)	₹58,000 (ಬೆಂಗಳೂರು)	79.71

ಮೊಬೈಲ್ ಬ್ಯಾಂಕಿಂಗ್: ವೈರಸ್ ಭೀತಿ

ಕೇಂದ್ರ ಸರ್ಕಾರದ ಸಿಇಆರ್‌ಟಿ ಸಂಸ್ಥೆಯಿಂದ ಎಚ್ಚರಿಕೆ ● ನಕಲಿ ಆ್ಯಪ್ ಮೂಲಕ ಮೊಬೈಲ್ ಪ್ರವೇಶ

ನವದೆಹಲಿ (ಪಿಟಿಐ): ಮೊಬೈಲ್ ಬ್ಯಾಂಕಿಂಗ್ ಆ್ಯಪ್‌ಗಳಿಂದ ಮಾಹಿತಿ ಕದಿಯುವ ಹೊಸ ಟ್ರೋಜನ್ ವೈರಸ್ ಭಾರತದ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಬಳಕೆದಾರರನ್ನು ಗುರಿ ಮಾಡಿಕೊಂಡಿದೆ ಎಂದು ಕೇಂದ್ರ ಸರ್ಕಾರದ ಸೈಬರ್ ಭದ್ರತಾ ಸಂಸ್ಥೆ ‘ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್’ (ಸಿಇಆರ್‌ಟಿ) ಎಚ್ಚರಿಕೆ ನೀಡಿದೆ.

ಈ ವೈರಸ್ ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿ ಇರುವ ಮಾಹಿತಿಯನ್ನು ಗ್ರಾಹಕನಿಗೆ ಗೊತ್ತೇ ಆಗದಂತೆ ಕದಿಯಬಲ್ಲದು. ಈ ವೈರಸ್‌ಅನ್ನು ಫೋನ್‌ನಿಂದ ತೆಗೆಯುವುದು ಕೂಡ ಕಷ್ಟ. ಜುಲೈ ತಿಂಗಳಲ್ಲಿ ಇದು ಮೊದಲ ಬಾರಿಗೆ ದೇಶದ ಸೈಬರ್ ಲೋಕದಲ್ಲಿ ಕಾಣಿಸಿಕೊಂಡಿತ್ತು. ಈಗ ಇದರ ಐದನೆಯ ಆವೃತ್ತಿ ಕಾಣಿಸಿಕೊಂಡಿದೆ.

‘ದೇಶದ ಬ್ಯಾಂಕಿಂಗ್ ಗ್ರಾಹಕರನ್ನು ಈ ಹೊಸ ಮೊಬೈಲ್ ಬ್ಯಾಂಕಿಂಗ್ ವೈರಸ್ ಗುರಿಯಾಗಿಸಿಕೊಂಡಿದೆ ಎಂಬ ಮಾಹಿತಿ ಬಂದಿದೆ. ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ ಇರುವ ಸ್ಮಾರ್ಟ್‌ಫೋನ್‌ಗಳಲ್ಲಿ ಕೆಲಸ ಮಾಡುವ ಎಸ್‌ಒವಿಎ (ಅಥವಾ ಸೋವಾ) ಟ್ರೋಜನ್ (ಒಂದು ಬಗೆಯ ವೈರಸ್) ಇದು. ಇದು 2021ರ ಸೆಪ್ಟೆಂಬರ್‌ನಲ್ಲಿ ಕಾಳಸಂತೆಯಲ್ಲಿ ಮಾರಾಟಕ್ಕೆ ಮೊದಲ ಬಾರಿಗೆ ಲಭ್ಯವಾಗಿತ್ತು. ಗ್ರಾಹಕರು ಕೀಬೋರ್ಡ್ ಮೂಲಕ ಟೈಪ್ ಮಾಡುವ ಮಾಹಿತಿಯನ್ನು (ಬಳಕೆದಾರರ ಹೆಸರು ಮತ್ತು ಪಾಸ್‌ವರ್ಡ್) ಇದು ರಹಸ್ಯವಾಗಿ ಸಂಗ್ರಹಿಸುವ ಶಕ್ತಿ ಹೊಂದಿದೆ’ ಎಂದು ಸಿಇಆರ್‌ಟಿ ನೀಡಿರುವ ಎಚ್ಚರಿಕೆಯ ಸಂದೇಶದಲ್ಲಿ ವಿವರಿಸಲಾಗಿದೆ.

ಸುರಕ್ಷಿತವಾಗಿರಲು ಏನು ಮಾಡಬೇಕು?

ಇಂತಹ ಆ್ಯಪ್‌ಗಳಿಂದ ರಕ್ಷಿಸಿಕೊಳ್ಳಲು ಗ್ರಾಹಕರು ಕೆಲವು ಕ್ರಮಗಳನ್ನು ಅನುಸರಿಸಬೇಕು ಎಂದು ಸಿಇಆರ್‌ಟಿ ಸಲಹೆ ನೀಡಿದೆ

- ಗ್ರಾಹಕರು ಅಧಿಕೃತ ಆ್ಯಪ್ ಸ್ಟೋರ್‌ನಿಂದ ಮಾತ್ರ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಅಂದರೆ, ಫೋನ್‌ನ ತಯಾರಕರ ಆ್ಯಪ್ ಸ್ಟೋರ್ ಅಥವಾ ಫೋನ್‌ನಲ್ಲಿನ ಕಾರ್ಯಾಚರಣೆ ವ್ಯವಸ್ಥೆಯ ಅಧಿಕೃತ ಆ್ಯಪ್ ಸ್ಟೋರ್‌ನಿಂದ (ಉದಾಹರಣೆಗೆ, ಆ್ಯಂಡ್ರಾಯ್ಡ್ ಆ್ಯಪ್ ಸ್ಟೋರ್) ಡೌನ್‌ಲೋಡ್ ಮಾಡಿಕೊಳ್ಳಬೇಕು.
- ಆ್ಯಪ್ ಇನ್‌ಸ್ಟಾಲ್ ಮಾಡುವಾಗ ಅದರ ವಿವರಗಳನ್ನು, ಎಷ್ಟು ಜನ ಅದನ್ನು ಡೌನ್‌ಲೋಡ್ ಮಾಡಿಕೊಂಡಿದ್ದಾರೆ ಎಂಬುದನ್ನು, ಬಳಕೆದಾರರು ಆ್ಯಪ್ ಬಗ್ಗೆ ಬರೆದಿರುವ ವಿಮರ್ಶೆಗಳನ್ನು ಪರಿಶೀಲಿಸಬೇಕು. ಅಲ್ಲದೆ, ಆ್ಯಪ್ ಕುರಿತ ಹೆಚ್ಚುವರಿ ಮಾಹಿತಿ ವಿಭಾಗವನ್ನು ಗಮನಿಸಬೇಕು.
- ಆ್ಯಪ್ ಕಾರ್ಯಾಚರಣೆಗೆ ಅಗತ್ಯವಿರುವಷ್ಟು ಅನುಮತಿಗಳನ್ನು ಮಾತ್ರ ಅದಕ್ಕೆ ನೀಡಬೇಕು.
- ಆ್ಯಂಡ್ರಾಯ್ಡ್‌ಗೆ ಕಾಲಕಾಲಕ್ಕೆ ನೀಡುವ ಅಪ್ಡೇಟ್‌ಗಳನ್ನು ಮತ್ತು ಪ್ಯಾಚ್‌ಗಳನ್ನು ಇನ್‌ಸ್ಟಾಲ್ ಮಾಡಿಕೊಳ್ಳಬೇಕು.
- ವಿಶ್ವಾಸಾರ್ಹ ಅಲ್ಲದ ವೆಬ್‌ಸೈಟ್‌ಗೆ ಭೇಟಿ ಕೊಡಬಾರದು. ವಿಶ್ವಾಸಾರ್ಹ ಅಲ್ಲದ ವೆಬ್ ಕೊಂಡಿಗಳ ಮೇಲೆ ಕ್ಲಿಕ್ ಮಾಡುವಾಗ ಎಚ್ಚರಿಕೆ ವಹಿಸಬೇಕು.



ಈ ವೈರಸ್ ಈ ಮೊದಲು ಅಮೆರಿಕ, ರಷ್ಯಾ ಮತ್ತು ಸ್ಪೇನ್ ದೇಶಗಳನ್ನು ಕೇಂದ್ರೀಕರಿಸಿಕೊಂಡಿತ್ತು. ಆದರೆ, ಈ ವರ್ಷದ ಜುಲೈನಲ್ಲಿ ಭಾರತ ಸೇರಿದಂತೆ ಇನ್ನಷ್ಟು ದೇಶಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಅದು ವಿವರಿಸಿದೆ.

ಕ್ರೋಮ್, ಅಮೆಜಾನ್‌ನಂತಹ ಜನಪ್ರಿಯ ಆ್ಯಪ್‌ಗಳ ಲೋಗೊ ಬಳಕೆ ಮಾಡುವ ಕೆಲವು ನಕಲಿ ಆ್ಯಂಡ್ರಾಯ್ಡ್ ಆ್ಯಪ್‌ಗಳ ಹಿಂದೆ ಈ ವೈರಸ್ ಬಚ್ಚಿಟ್ಟು- ಕೊಂಡಿರುತ್ತದೆ. ಇವುಗಳನ್ನು ತಮ್ಮ ಫೋನ್‌ಗೆ ಇನ್‌ಸ್ಟಾಲ್ ಮಾಡಿಕೊಳ್ಳುವ ಗ್ರಾಹಕರನ್ನು ವಂಚಿಸುವುದು ಇದರ ಉದ್ದೇಶ.

‘ಗ್ರಾಹಕರು ಇಂಟರ್ನೆಟ್ ಬ್ಯಾಂಕಿಂಗ್ ಆ್ಯಪ್ ಬಳಕೆ ಮಾಡಿದಾಗ ಈ ವೈರಸ್, ಗ್ರಾಹಕರ ವಿವರಗಳನ್ನು ಕದಿಯುತ್ತದೆ. ಅವರ ಬ್ಯಾಂಕ್ ಖಾತೆಗಳಿಗೆ ಕೈಹಾಕುತ್ತದೆ. ಬ್ಯಾಂಕಿಂಗ್ ಆ್ಯಪ್‌ಗಳು ಹಾಗೂ ಕ್ರಿಪ್ಟೊ ಕರೆನ್ಸಿ ವಿನಿಮಯ ಆ್ಯಪ್‌ಗಳು ಸೇರಿದಂತೆ 200ಕ್ಕೂ ಹೆಚ್ಚಿನ ಆ್ಯಪ್‌ಗಳನ್ನು ಈ ವೈರಸ್ ಗುರಿಯಾಗಿಸಿಕೊಂಡಿದೆ’ ಎಂದು ಎಚ್ಚರಿಕೆ ನೀಡಲಾಗಿದೆ.

ಇದು ಏನು ಮಾಡುತ್ತದೆ?: ಬಹುತೇಕ ಆ್ಯಂಡ್ರಾಯ್ಡ್ ಬ್ಯಾಂಕಿಂಗ್ ಟ್ರೋಜನ್‌ಗಳ ರೀತಿಯಲ್ಲಿಯೇ ಈ ವೈರಸ್ ಅನ್ನು ಎಸ್‌ಎಂಎಸ್ ಮೂಲಕ ಹರಡಲಾಗುತ್ತಿದೆ. ನಕಲಿ ಆ್ಯಪ್‌ಅನ್ನು ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಇನ್‌ಸ್ಟಾಲ್ ಮಾಡಿದ ನಂತರದಲ್ಲಿ ಅದು ಆ ಫೋನ್‌ನಲ್ಲಿ ಇರುವ ಇತರ ಎಲ್ಲ ಆ್ಯಪ್‌ಗಳ ವಿವರವನ್ನು ದುಷ್ಕರ್ಮಿಗೆ ರವಾನಿಸುತ್ತದೆ. ಯಾವ ಆ್ಯಪ್‌ಅನ್ನು ಗುರಿಯಾಗಿಸಿಕೊಂಡು ಕೆಲಸ

ಆಳ-ಅಗಲ

ಆ್ಯಂಡ್ರಾಯ್ಡ್ ಫೋನ್ ಬಳಕೆದಾರರೇ ಸೋವಾ ಒಳಹೊಕ್ಕೀತು ಎಚ್ಚರ

ಮಾಡಬೇಕು ಎಂಬ ಸಂದೇಶವನ್ನು ನಂತರ ದುಷ್ಕರ್ಮಿಯಿಂದ ಪಡೆದುಕೊಳ್ಳುತ್ತದೆ.

ಈ ವೈರಸ್ ಫೋನ್‌ನ ಸ್ಕ್ರೀನ್‌ಶಾಟ್ ತೆಗೆದುಕೊಳ್ಳಬಲ್ಲದು, ವೆಬ್‌ಕ್ಯಾಮ್ ಮೂಲಕ ವಿಡಿಯೊ ಮಾಡಬಲ್ಲದು. ಮೊಬೈಲ್ ಪರದೆಯನ್ನು ತಾನಾಗಿಯೇ ಸ್ವೈಪ್ ಮಾಡಬಲ್ಲದು. ‘ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಇರುವ ಎಲ್ಲ ಮಾಹಿತಿ, ವಿವರಗಳನ್ನು ಗೂಢಲಿಪಿಗೆ ಪರಿವರ್ತಿಸಿ, ಫೋನ್ ಬಳಕೆದಾರರಿಂದ ಹಣಕ್ಕೆ ಪೀಡಿಸುವ ಸಾಮರ್ಥ್ಯ ಕೂಡ ಈ ವೈರಸ್ ಇದೆ’ ಎಂದು ಸಿಇಆರ್‌ಟಿ ಹೇಳಿದೆ.

ಬಳಕೆದಾರ ಈ ವೈರಸ್‌ಅನ್ನು ಫೋನ್‌ನಿಂದ ತೆಗೆದುಹಾಕಲು ಮುಂದಾದರೆ, ಮತ್ತೆ ಹೋಮ್ ಸ್ಕ್ರೀನ್‌ಗೆ ಮರಳುವ ಇದು ‘ಈ ಆ್ಯಪ್ ಸುರಕ್ಷಿತ- ವಾಗಿದೆ’ ಎಂಬ ಸಂದೇಶವು ಫೋನ್ ಪರದೆಯ ಮೇಲೆ ಮೂಡುವಂತೆ ಕೂಡ ಮಾಡುತ್ತದೆ. ಈ ಆ್ಯಪ್ ಗ್ರಾಹಕರ ದತ್ತಾಂಶವನ್ನು ಅಪಾಯಕ್ಕೆ ನೂಕಬಲ್ಲದು, ಹಣಕಾಸಿನ ವಂಚನೆಗೆ ಕಾರಣವಾಗಬಲ್ಲದು ಎಂದು ಕೂಡ ಸಿಇಆರ್‌ಟಿ ತಿಳಿಸಿದೆ.

ಬಿಜೆಪಿಯ ಚಂದ್ರಪ್ಪ ವಿರುದ್ಧ ದಾಖಲೆ ಬಿಡುಗಡೆ

‘ಶಾಸಕನಿಗೆ ಶಾಲೆಯ ನಿವೇಶನ’

ಪ್ರಜಾವಾಣಿ ವಾರ್ತೆ

₹10 ಕೋಟಿಗೆ ಮಾರಾಟ, ₹1 ಕೋಟಿ ಪಾವತಿ

‘ಶಾಸಕ ಎಂ. ಚಂದ್ರಪ್ಪ ಅವರಿಗೆ ನಿವೇಶನ ಮಂಜೂರಾಗಿ 11 ವರ್ಷ ಕಳೆದರೂ ಶಾಲೆ ನಿರ್ಮಾಣವಾಗಿಲ್ಲ. ಸದ್ಯ ಮಾರುಕಟ್ಟೆಯಲ್ಲಿ ₹20 ಕೋಟಿ ಬೆಲೆ ಬಾಳುವ ಸಿಎ ನಿವೇಶನವನ್ನು 2021ರ ಡಿಸೆಂಬರ್ 27ರಂದು ಬಿಡಿಎ ಕೇವಲ ₹10 ಕೋಟಿಗೆ ಮಾರಾಟ ಮಾಡಿ, ಶುದ್ಧ ಕ್ರಯಪತ್ರ ನೀಡಲು ನಿರ್ಣಯ ಕೈಗೊಂಡಿದೆ. 2022ರ ಏಪ್ರಿಲ್ 5ರಂದು ಚಂದ್ರಪ್ಪನವರು ₹1 ಕೋಟಿ ಮೊತ್ತವನ್ನು ಬಿಡಿಎಗೆ ಪಾವತಿಸಿದ್ದಾರೆ’ ಎಂದು ಬಿ.ಎಂ. ಶಿವಕುಮಾರ್ ಮಾಹಿತಿ ನೀಡಿದರು.

ಬೆಂಗಳೂರು: ‘ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಬಿಬಿಎಂಪಿ ಕನ್ನಡ ಶಾಲೆಗೆ ಮಂಜೂರಾಗಿದ್ದ ₹ 20 ಕೋಟಿ ಮೌಲ್ಯದ ಸಿ.ಎ. (ನಾಗರಿಕ ಸೌಕರ್ಯಗಳ) ನಿವೇಶನವನ್ನು ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ ಕಬಳಿಸಲು ಯತ್ನಿ- ಸುತ್ತಿದ್ದಾರೆ’ ಎಂದು ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ ಆರೋಪಿಸಿದೆ.



ಎಂ.ಚಂದ್ರಪ್ಪ

ಗುರುವಾರ ಸುದ್ದಿಗೋಷ್ಠಿಯಲ್ಲಿ ದಾಖಲೆಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ವೇದಿಕೆ ಅಧ್ಯಕ್ಷ ಬಿ.ಎಂ. ಶಿವಕುಮಾರ್, ‘ಕೆಂಗೇರಿ ಉಪನಗರದ- ದಲ್ಲಿರುವ ಈ ಬಡಾವಣೆಯ 2ನೇ ಬ್ಲಾಕ್‌ನಲ್ಲಿರುವ ಬಿಡಿಎ 25,225 ಚದರ ಅಡಿ ವಿಸ್ತೀರ್ಣದ ಸಿ.ಎ ನಿವೇಶನವನ್ನು 2010ರ ಫೆಬ್ರುವರಿ 2ರಂದು ಬಿಬಿಎಂಪಿಯ ಕನ್ನಡ ಶಾಲೆಗೆ ಹಂಚಿಕೆ ಮಾಡಿತ್ತು. 2010ರ ಜುಲೈ 17ರಂದು ಹಂಚಿಕೆ ಪತ್ರವನ್ನು ನೀಡಲಾಗಿತ್ತು. ಆದರೆ ಶಾಲೆ ನಿರ್ಮಿಸುವುದಾಗಿ ಹೇಳಿ ಚಂದ್ರಪ್ಪ ಅವರು ಮುಖ್ಯಮಂ- ತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಮೂಲಕ ಒತ್ತಡ ತಂದು ನಿವೇಶನವನ್ನು ಪಡೆದು, 11 ವರ್ಷಗಳಿಂದ ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದಾರೆ’ ಎಂದರು.

9ನೇ ಪುಟ ನೋಡಿ

ಮತಾಂತರ ನಿಷೇಧಕ್ಕೆ ಮೇಲ್ಮನೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರ ತೀವ್ರ ವಿರೋಧ, ಗದ್ದಲ, ಧಿಕ್ಕಾರ, ಸಭಾತ್ಯಾಗದ ನಡುವೆಯೇ ‘ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆ’ (ಮತಾಂತರ ನಿಷೇಧ) ವಿಧಾನ ಪರಿಷತ್‌ನಲ್ಲಿ ಧ್ವನಿಮತದ ಮೂಲಕ ಗುರುವಾರ ಅಂಗೀಕಾರಗೊಂಡಿತು.



ಈ ಮಸೂದೆಗೆ 2021ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದ ವಿಧಾನಮಂಡಲ ಅಧಿವೇ- ಶನದಲ್ಲಿ ವಿಧಾನಸಭೆ ಅಂಗೀಕಾರ ನೀಡಿತ್ತು. ಆದರೆ, ಸಂಖ್ಯಾಬಲದ ಕೊರತೆ ಕಾರಣಕ್ಕೆ ಅಂದು ವಿಧಾನ ಪರಿಷತ್‌ನಲ್ಲಿ ಮಂಡಿಸದ ಸರ್ಕಾರ, ಕಳೆದ ಮೇ ತಿಂಗಳಲ್ಲಿ ಸುಗ್ರೀವಾಜ್ಞೆ ಮೂಲಕ ಕಾಯ್ದೆಯನ್ನು ಜಾರಿಗೊಳಿಸಿತ್ತು.

ಮಸೂದೆಯು ಕಾಯ್ದೆ ಸ್ವರೂಪ ಪಡೆಯಲು ಎರಡೂ ಸದನಗಳ ಅಂಗೀಕಾರ ಅಗತ್ಯ. ಹೀಗಾಗಿ, ಗುರುವಾರ ಬೆಳಿಗ್ಗೆ ಗೃಹ ಸಚಿವ ಆರಗ ಜ್ಞಾನೇಂದ್ರ ವಿಧಾನ ಪರಿಷತ್‌ನಲ್ಲಿ ಮಸೂದೆ ಮಂಡಿಸಿದರು. ನಾಲ್ಕು ಗಂಟೆಗೂ ಹೆಚ್ಚು ಕಾಲ ನಡೆದ ಏಟು–ಎದಿರೇಟಿನ ವಾಗ್ಯುದ್ಧದ ಬಳಿಕ ಮಸೂದೆಗೆ ಅಂಗೀಕಾರ ನೀಡುವಂತೆ ಗೃಹ ಸಚಿವರು ಕೋರಿದರು.

9ನೇ ಪುಟ ನೋಡಿ





4 ವಲಯ: 29 ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಸರಹಳ್ಳಿ, ಬೊಮ್ಮನಹಳ್ಳಿ ವಲಯದಲ್ಲಿ ಗುರುವಾರ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಿರುವ ಬಿಬಿಎಂಪಿ ಸಿಬ್ಬಂದಿ, ಯಲಹಂಕ, ಮಹದೇವಪುರ ವಲಯ ಸೇರಿದಂತೆ ಒಟ್ಟಾರೆ 29 ಸ್ಥಳಗಳಲ್ಲಿ ಒತ್ತುವರಿ ತೆರವು ಮಾಡಿದ್ದಾರೆ.

ದಾಸರಹಳ್ಳಿ ವಲಯದ ನೆಲಗದರನಹಳ್ಳಿ ರಸ್ತೆ ರುಕ್ಮಿಣಿ ನಗರದಲ್ಲಿ ಮೂರುಕಾಲು ಗುಂಟೆ ಜಾಗದಲ್ಲಿ ನಾಲ್ಕು ತಡೆಗೋಡೆ, ಒಂದು ಮೆಟ್ಟಿಲು ಜಾಗ, ಒಂದು ಶೌಚಾಲಯ, ಒಂದು ಎಲೆಕ್ಟ್ರಿಕಲ್ ಬಾಕ್ಸ್ ರೂಂ ಹಾಗೂ ಕಾಲುವೆಯ ಮೇಲಿದ್ದ ಮನೆಯ ಮೂಲೆ ಭಾಗಗಳು ಸೇರಿದಂತೆ 11 ಒತ್ತು- ವರಿಗಳನ್ನು ತೆರವು ಮಾಡಲಾಗಿದೆ. ಶುಕ್ರವಾರವೂ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.



ಟಿ. ದಾಸರಹಳ್ಳಿಯ ರುಕ್ಮಿಣಿ ನಗರದಲ್ಲಿ ರಾಜಕಾಲುವೆ ಒತ್ತುವರಿಯನ್ನು ತೆರವುಗೊಳಿಸಲಾಯಿತು —ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಯಲಹಂಕ ವಲಯದ ಕುವೆಂಪುನಗರ ಸಿಂಗಾಪುರ ಲೇಔಟ್‌ನಲ್ಲಿ ಸರ್ವೆ ಸಂಖ್ಯೆ 97 ಹಾಗೂ 100ರಲ್ಲಿ ಸಿಂಗಾಪುರ ಕೆರೆ ಹಿಂಭಾಗದಲ್ಲಿರುವ ಲ್ಯಾಂಡ್ ಮಾರ್ಕ್ ಅಪಾರ್ಟ್‌ಮೆಂಟ್‌ನಿಂದ 2.4 ಅಡಿ ಅಗಲ ಹಾಗೂ 75 ಮೀಟರ್ ಉದ್ದದ ತೂಬುಗಾಲುವೆ ಒತ್ತುವರಿಯನ್ನು ತೆರವು ಮಾಡಲಾಗಿದೆ. ಸಿಂಗಾಪುರ ಕೆರೆಯ ಬಳಿ ಸರ್ವೇ ಸಂಖ್ಯೆ 95 ರಲ್ಲಿ ಮಳೆ ನೀರುಗಾಲುವೆ ತೆರವು ಮಾಡಲಾಗಿದೆ.

3B ಪುಟ ನೋಡಿ

ಕೆರೆ ಒತ್ತುವರಿಯಲ್ಲೂ ಹಲವರ ಪಾಲು

ಬೆಂಗಳೂರು: ನಗರದಲ್ಲಿ ರಾಜಕಾಲುವೆಗಳ ಜೊತೆಗೆ ಕೆರೆಗಳ ಒತ್ತುವರಿಯಲ್ಲಿ ಐಟಿ ಕಂಪನಿಗಳು, ಡೆವಲಪರ್‌ಗಳು, ಶಾಲೆ, ಕಾಲೇಜು, ಆಸ್ಪತ್ರೆಯವರು ಭಾಗಿಯಾಗಿದ್ದಾರೆ. ಖಾಸಗಿ ವ್ಯಕ್ತಿಗಳು ಸೇರಿ ಸರ್ಕಾರದ ಬಹುತೇಕ ಎಲ್ಲ ಇಲಾಖೆಗಳೂ ಕೆರೆ ಒತ್ತುವರಿ ಮಾಡಿಕೊಂಡಿವೆ.

3B

‘ದೈಹಿಕ ಶಿಕ್ಷಣ ಶಿಕ್ಷಕರ ನೇಮಕಾತಿಗೆ ಪ್ರಸ್ತಾವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಉಳಿದಿರುವ 2,120 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳ ಭರ್ತಿಗೆ ಸಂಬಂಧಿಸಿದ ಕಡತವು ಆರ್ಥಿಕ ಇಲಾಖೆ ಪರಿಶೀಲನೆಯಲ್ಲಿದೆ’ ಎಂದು ಶಾಲಾ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.

ಶೂನ್ಯ ವೇಳೆಯಲ್ಲಿ ಬಿಜೆಪಿಯ ಬಸವರಾಜ ಹೊರಟ್ಟಿ ಅವರ ಪ್ರಶ್ನೆಗೆ ಉತ್ತರಿಸಿರುವ ಅವರು, ‘ಸರ್ಕಾರಿ ಪ್ರೌಢ- ಶಾಲೆಗಳಲ್ಲಿನ 200 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳನ್ನು ಬೆಂಗಳೂರಿನ ಕೇಂದ್ರಿಕೃತ ದಾಖಲಾತಿ ಘಟಕದ ಮೂಲಕ ಭರ್ತಿ ಮಾಡಿಕೊಳ್ಳಲು ಶಿಕ್ಷಣ ಇಲಾಖೆ ಆಯುಕ್ತರಿಗೆ ಸೂಚಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಪದವಿ ಪೂರ್ವ ಕಾಲೇಜುಗಳಲ್ಲಿ ಮಂಜೂರಾಗಿರುವ 20 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳು ಖಾಲಿ ಉಳಿದಿವೆ. ಇವುಗಳಲ್ಲಿ ಶೇ 50ರಷ್ಟು ಹುದ್ದೆಗಳನ್ನು ಸರ್ಕಾರಿ ಪ್ರೌಢಶಾ- ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೇಡ್–1 ದೈಹಿಕ ಶಿಕ್ಷಣ ಶಿಕ್ಷಕರಿಗೆ ಬಡ್ತಿ ನೀಡುವ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಉಳಿದ 10 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಉಕ್ರೇನ್‌ನಿಂದ ಬಂದ ವಿದ್ಯಾರ್ಥಿಗಳಿಗೆ ದೇಶದಲ್ಲಿ ವ್ಯಾಸಂಗಕ್ಕೆ ಅವಕಾಶವಿಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಯುದ್ಧ ಪೀಡಿತ ಉಕ್ರೇನ್‌ನಿಂದ ಭಾರತಕ್ಕೆ ಹಿಂತಿರುಗಿರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಭಾರತೀಯ ವಿಶ್ವವಿದ್ಯಾಲಯ- ಗಳಲ್ಲಿ ವ್ಯಾಸಂಗ ಮುಂದುವರಿಸಲು ಅವಕಾಶ ಕಲ್ಪಿಸಲಾಗದು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಕಾನೂನಿನಲ್ಲಿ ಈ ಕುರಿತು ಯಾವುದೇ ಅವಕಾಶ ಇಲ್ಲದಿರುವ ಕಾರಣ ಹಾಗೂ ದೇಶದ ವೈದ್ಯಕೀಯ ಶಿಕ್ಷಣದ ಗುಣಮಟ್ಟವನ್ನು ಹಾಳುಗೆಡಹುವ ಸಾಧ್ಯತೆ ಇರುವುದರಿಂದ ಈ ವಿದ್ಯಾರ್ಥಿಗ- ಳನ್ನು ಭಾರತದ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ವರ್ಗಾಯಿಸಲು ಸಾಧ್ಯವಿಲ್ಲ ಎಂದು ಕೇಂದ್ರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿದೆ.

‘ಉಕ್ರೇನ್‌ನಿಂದ ವಾಪಸಾಗಿರುವ ವಿದ್ಯಾರ್ಥಿಗಳನ್ನು ಭಾರತದ ವೈದ್ಯಕೀಯ ಕಾಲೇಜುಗಳಿಗೆ ವರ್ಗಾ- ಯಿಸುವುದಕ್ಕೆ ಭಾರತೀಯ ವೈದ್ಯಕೀಯ ಮಂಡಳಿ ಕಾಯ್ದೆ 1956 ಮತ್ತು ರಾಷ್ಟ್ರೀಯ ವೈದ್ಯಕೀಯ ಆಯೋಗ ಕಾಯ್ದೆ 2019ರಲ್ಲಿ ಅವಕಾಶಗಳಿ- ಲ್ಲ. ಅಲ್ಲದೆ ಇದು ದೇಶದ ವೈದ್ಯಕೀಯ ಶಿಕ್ಷಣ ಗುಣಮಟ್ಟದ ಮಾನದಂಡಗಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆ’ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ.

‘ನೀಟ್’ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯದ ಹಾಗೂ ವಿದೇಶಗಳಲ್ಲಿ ಕೈಗೆಟಕುವ ದರದಲ್ಲಿ ವೈದ್ಯಕೀಯ ಶಿಕ್ಷಣ ದೊರೆಯುತ್ತಿದೆ ಎಂಬ ಕಾರಣಗಳಿಗಾಗಿ ಈ ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೋಗಿದ್ದರು ಎಂದು ಕೇಂದ್ರ ಹೇಳಿದೆ.

‘ನೀಟ್’ನಲ್ಲಿ ಕಡಿಮೆ ಅಂಕಗಳನ್ನು ಪಡೆದಿರುವ ಈ ವಿದ್ಯಾರ್ಥಿಗಳಿಗೆ ಒಂದು ವೇಳೆ ಭಾರತದ ಪ್ರಮುಖ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಕಲ್ಪಿಸಿದರೆ ಅದರಿಂದ ಕಾನೂನಾತ್ಮಕ ತೊಡಕುಗಳು ಎದುರಾಗುತ್ತವೆ. ಈ ಪ್ರತಿಷ್ಠಿತ ಕಾಲೇಜುಗಳಲ್ಲಿ ವೈದ್ಯಕೀಯ ಸೀಟು ಸಿಗದೆ, ಅದಕ್ಕಿಂತ ಕೆಳಮಟ್ಟದ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಹಾಗೂ ಎಲ್ಲೂ ಸೀಟು ಸಿಗದೆ ವೈದ್ಯಕೀಯ ಶಿಕ್ಷಣದಿಂದ ವಂಚಿತರಾಗಿರುವ ವಿದ್ಯಾರ್ಥಿಗಳು ಕಾನೂನು ಹೋರಾಟ ನಡೆಸಬಹುದು. ಈ ವಿದ್ಯಾರ್ಥಿಗ- ಳಿಗೆ ಒಂದು ವೇಳೆ ದೇಶದ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಒದಗಿಸಿದರೂ, ಈ ಕಾಲೇಜುಗಳ ಶುಲ್ಕ ಭರಿಸುವುದು ಅವರಿಗೆ ಕಷ್ಟವಾಗಬಹು- ದು ಎಂದು ಹೇಳಿದೆ.

ಭಾರತದಲ್ಲಿ ವೈದ್ಯಕೀಯ ವ್ಯಾಸಂಗ ಮುಂದುವರಿಸಲು ಅವಕಾಶ ಕಲ್ಪಿಸುವಂತೆ ಕೋರಿ ಉಕ್ರೇನ್‌ನಿಂದ ಹಿಂದಿರುಗಿರುವ ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಹೇಮಂತ್ ಗುಪ್ತಾ ಮತ್ತು ಸುಧಾಂಶು ಧುಲಿಯಾ ಅವರ ಪೀಠ ಶುಕ್ರವಾರ ವಿಚಾರಣೆ ನಡೆಸುವ ಸಾಧ್ಯತೆ ಇದೆ. ರಷ್ಯಾವು ಉಕ್ರೇನ್ ಮೇಲೆ ಸೇನಾ ಕಾರ್ಯಾಚರಣೆ ಕೈಗೊಂಡ ಬಳಿಕ ಸುಮಾರು 20,000 ವಿದ್ಯಾರ್ಥಿಗಳು ಅಲ್ಲಿಂದ ಭಾರತಕ್ಕೆ ವಾಪಸಾಗಿದ್ದಾರೆ.

ಮೃತ ಸೈನಿಕರ ಕುಟುಂಬಕ್ಕೆ ಸರ್ಕಾರಿ ಉದ್ಯೋಗ

ಬೆಂಗಳೂರು: ಯುದ್ಧ ಹಾಗೂ ಯುದ್ಧದ ಮಾದರಿ ಕಾರ್ಯಾಚರಣೆಗಳಲ್ಲಿ ಮೃತಪಟ್ಟ, ರಾಜ್ಯದ ಮೂಲನಿವಾಸಿ ಸೈನಿಕರ ಅವಲಂಬಿತ ಕುಟುಂಬದ ಒಬ್ಬರು ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಉದ್ಯೋಗ ನೀಡುವ ಪ್ರಸ್ತಾವಕ್ಕೆ ಸರ್ಕಾರ ಅನುಮೋದನೆ ನೀಡಿದೆ.


ಸೈನಿಕರು ಮತ್ತು ಪುನರ್ವಸತಿ ಇಲಾಖೆಯ ಪ್ರಸ್ತಾವಕ್ಕೆ ಆರ್ಥಿಕ ಇಲಾಖೆಯೂ ಅನುಮೋದನೆ ನೀಡಿದ್ದು, ಸರ್ಕಾರವೂ ಸಮ್ಮತಿಸಿದೆ.

ಮೃತ ಸೈನಿಕರ ಅವಲಂಬಿತ ಕುಟುಂಬಗಳಿಗೆ ರಾಜ್ಯ ಸರ್ಕಾರ ಪ್ರಸ್ತುತ ₹ 50 ಲಕ್ಷ ನಗದು, ಅಧಿಕಾರಿ ಶ್ರೇಣಿಯವರಿಗೆ 60X40 ಹಾಗೂ ಸೈನಿಕರಿಗೆ 40X30 ನಿವೇಶನ, ಮನೆ- ಕಟ್ಟಿಕೊಳ್ಳಲು ₹ 6 ಲಕ್ಷ ಹಾಗೂ ₹ 4.5 ಲಕ್ಷ, 2ರಿಂದ 8 ಎಕರೆ ಉಚಿತ ಜಮೀನು, ಪ್ರತಿ 15 ವರ್ಷಕ್ಕೆ ಒಮ್ಮೆ ಮನೆ ದುರಸ್ತಿಗೆ ₹ 3 ಲಕ್ಷ, ಇಬ್ಬರು ಹೆಣ್ಣು ಮಕ್ಕಳ ಮದುವೆಗೆ ತಲಾ ₹ 5 ಲಕ್ಷ, ಆಸ್ತಿ ತೆರಿಗೆಯಲ್ಲಿ ಶೇ 50ರಷ್ಟು ರಿಯಾಯಿತಿ ನೀಡುತ್ತಿದೆ.

ಹೊಸ ಆದೇಶದ ನಂತರ ಹಿಂದೆ ನೀಡಲಾಗುತ್ತಿದ್ದ ಸವಲತ್ತುಗಳನ್ನು ಸ್ಥ- ಗಿತಗೊಳಿಸಲಾಗುತ್ತದೆಯೋ, ಮುಂ- ದುವರಿಸಲಾಗುವುದೋ ಎನ್ನುವ ಕುರಿತು ಆದೇಶದಲ್ಲಿ ಯಾವ ಮಾಹಿತಿಯೂ ಇಲ್ಲ.

ಚಿನಕುರಳಿ

ಪ್ರಕಾಶ್ ಶೆಟ್ಟಿ



₹10 ಲಕ್ಷಕ್ಕೆ ಶಿಕ್ಷಕ ಹುದ್ದೆ ಮಾರಾಟ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಪ್ರೌಢಶಾಲೆಗಳ ಗ್ರೇಡ್–2 ಸಹ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ರಾಜ್ಯದ ಮೂರು ಜಿಲ್ಲೆಗಳ ನೇಮಕಾತಿಯಲ್ಲಿ ಅಕ್ರಮ ನಡೆ- ದಿರುವುದನ್ನು ದಾಖಲೆ ಸಮೇತ ಪತ್ತೆ ಮಾಡಿದ್ದಾರೆ.

ವಿಧಾನಸೌಧ ಠಾಣೆಯಲ್ಲಿ ದಾಖಲಾಗಿದ್ದ ಎರಡು ಪ್ರತ್ಯೇಕ ಪ್ರಕರ- ಣಗಳಲ್ಲಿ 12 ಸಹ ಶಿಕ್ಷಕರನ್ನು ಬಂಧಿಸಿ ವಿಚಾರಣೆ ನಡೆಸಿದ್ದ ಅಧಿಕಾರಿಗಳು, ಅವರೆಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. 13ನೇ ಆರೋಪಿಯನ್ನಾಗಿ ಶಿಕ್ಷಣ ಇಲಾಖೆಯ ಬೆಂಗಳೂರು ವಿಭಾಗ ಸಹ ನಿರ್ದೇಶಕ ಕಚೇರಿ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಕೆ.ಎಸ್. ಪ್ರಸಾದ್ ಅವರನ್ನು ಬಂಧಿಸಲಾಗಿದ್ದು, ಇವರು ಸದ್ಯ ಸಿಐಡಿ ಕಸ್ಟಡಿಯಲ್ಲಿದ್ದಾರೆ.

‘ರಾಜ್ಯದ ಸರ್ಕಾರಿ ಪ್ರೌಢಶಾಲೆ- ಗಳಲ್ಲಿ ಖಾಲಿ ಇದ್ದ ಗ್ರೇಡ್–2 ಸಹ ಶಿಕ್ಷಕರು ಹಾಗೂ ದೈಹಿಕ ಶಿಕ್ಷಕರ ನೇಮಕಾತಿಗಾಗಿ 2012–13 ಹಾಗೂ 2014–15ನೇ ಸಾಲಿನಲ್ಲಿ ಪ್ರಕ್ರಿಯೆ ನಡೆಸಲಾಗಿತ್ತು. ಜಿಲ್ಲಾವಾರು ಹುದ್ದೆಗಳಿಗೆ ತಕ್ಕಂತೆ ನೇಮಕಾತಿ ನಡೆದಿತ್ತು’ ಎಂದು ಸಿಐಡಿ ಮೂಲಗಳು ಹೇಳಿವೆ. ‘ತುಮಕೂರು, ವಿಜಯಪುರ ಹಾಗೂ ಕೋಲಾರ ಜಿಲ್ಲೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದು ದಾಖಲೆಗಳಿಂದ ಗೊತ್ತಾಗಿದೆ' ಎಂದಿವೆ.

9ನೇ ಪುಟ ನೋಡಿ

ಬಾಲಕಿಯರ ಮೇಲೆ ಅತ್ಯಾಚಾರ, ಹತ್ಯೆ

ಲಖಿಂಪುರ ಖೇರಿ: ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ಪರಿಶಿಷ್ಟ ಜಾತಿಯ ಸೋದರಿಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಕೊಲೆ ಮಾಡಲಾಗಿದೆ. ಅತ್ಯಾಚಾರ ಎಸಗಿದ ನಂತರ ಆರೋಪಿಗಳು ಬಾಲಕಿಯರನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದಾರೆ. ನಂತರ ಅವರ ಶವಗಳನ್ನು ಮರಕ್ಕೆ ನೇತು ಹಾಕಿದ್ದಾರೆ.

13



‘ಮಲೆನಾಡಿಗರನ್ನು ಉಳಿಸಿ’ ಪ್ರತಿಭಟನೆ 20ಕ್ಕೆ

ಬೆಂಗಳೂರು: ಮಲೆನಾಡು ಜನಪರ ಒಕ್ಕೂಟದ ವತಿಯಿಂದ ‘ಮಲೆನಾಡಿಗರನ್ನು ಉಳಿಸಿ’ ಎಂದು ಆಗ್ರಹಿಸಿ ಇದೇ 20ರಂದು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಅರಣ್ಯ ಕಾನೂನಿನ ತೊಡಕಿನಿಂದ ಇನ್ನೂ ಸೂರಿಲ್ಲದವರಿಗೆ ಹಕ್ಕುಪತ್ರ ವಿತರಿಸಬೇಕು. ಪಶ್ಚಿಮಘಟ್ಟದ ಮಲೆನಾಡು ಪ್ರದೇಶವನ್ನು ವಿಶೇಷ ಕೃಷಿ ವಲಯವನ್ನಾಗಿ ಘೋಷಿಸಬೇಕು ಎಂದು ಒಕ್ಕೂಟದ ಅಧ್ಯಕ್ಷ ಅನಿಲ್ ಹೊಸಕೊಪ್ಪ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ವಾರ್ಡ್‌ವಾರು ಹಸಿ ಕಸ ಸಂಸ್ಕರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ತ್ಯಾಜ್ಯ ನಿರ್ವಹಣೆಯು ಅತಿ ದೊಡ್ಡ ಸವಾಲು. ಹೀಗಾಗಿ, ಹಸಿ ಕಸದ ಸಂಸ್ಕರಣೆನ್ನು ವಾರ್ಡ್‌ವಾರು ಮಾಡುವ ಬಗ್ಗೆ ಯೋಚಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಗುರುವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಹಸಿ ಕಸ ನಿರ್ವಹಣೆಗೆ ಹೊಸ ತಂತ್ರಜ್ಞಾನ ಅಳವಡಿಸಿರುವ ಪ್ರಯೋಗವು ಬಿಟಿಎಂ ಬಡಾವಣೆಯಲ್ಲಿ ಯಶಸ್ವಿಯಾಗಿದೆ. ಇದೇ ತಂತ್ರಜ್ಞಾನವನ್ನು ಎಲ್ಲ ವಾರ್ಡ್‌ಗಳಲ್ಲಿ ಅಳವಡಿಸಲು ಉದ್ದೇಶಿಸಲಾಗಿದೆ’ ಎಂದು ವಿವರಿಸಿದರು.

‘ಕಸ ನಿರ್ವಹಣೆಗಾಗಿಯೇ ಈಗಾಗಲೇ ಕಂಪನಿ ಸ್ಥಾಪಿಸಲಾಗಿದೆ. ಹಸಿ ಕಸ ನಿರ್ವಹಣೆಯ ಸಮಸ್ಯೆಯನ್ನು ಆದ್ಯತೆ ಮೇರೆಗೆ ಬಗೆಹರಿಸಲಾಗುವುದು. ಅತ್ಯುತ್ತಮ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗುವುದು’ ಎಂದು ತಿಳಿಸಿದರು.

‘ಕೆಲವು ಕಂಪನಿಗಳು ಕಸದಿಂದ ವಿದ್ಯುತ್ ಉತ್ಪಾದನೆ ಮಾಡುವುದಾಗಿ ಕಳೆದ 20 ವರ್ಷಗಳಿಂದ ಹೇಳುತ್ತಿವೆ. ಆದರೆ, ಇದುವರೆಗೆ ಒಂದೂ ಯೂನಿಟ್ ವಿದ್ಯುತ್ ಉತ್ಪಾದಿಸಿಲ್ಲ’ ಎಂದರು.

ಪಿ.ಆರ್. ರಮೇಶ್ ಮಾತನಾಡಿ, ‘ಪ್ರತಿ ದಿನ ಐದು ಸಾವಿರ ಮೆಟ್ರಿಕ್ ಟನ್ ಕಸ ನಗರದಲ್ಲಿ ಸೃಷ್ಟಿಯಾಗುತ್ತದೆ. ಇದರಲ್ಲಿ 2000 ಮೆಟ್ರಿಕ್ ಟನ್ ಹಸಿ ಕಸ. ಕೋಟ್ಯಂತರ ರೂಪಾಯಿಗಳನ್ನು ಕಸ ನಿರ್ವಹಣೆಗಾಗಿ ವೆಚ್ಚ ಮಾಡುತ್ತಿದ್ದರೂ ಫಲಿತಾಂಶ ಮಾತ್ರ ಶೂನ್ಯ’ ಎಂದರು.

ಸಿಇಟಿ: ಮೇಲ್ಮನವಿ ವಿಚಾರಣೆ 19ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ, 2020-21ನೇ ಸಾಲಿನಲ್ಲಿ ದ್ವಿತೀಯ ಪಿಯು ತೇರ್ಗಡೆಯಾದ ವಿದ್ಯಾರ್ಥಿಗಳು ಗಳಿಸಿದ ಶೇ 50 ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಪಡೆದ ಶೇ 50ರಷ್ಟು ಅಂಕಗಳನ್ನು ಪರಿಗಣಿಸಿ ರೀ–ಡೂ ಮಾಡಿ ಹೊಸ ರ‍್ಯಾಂಕ್ ಪಟ್ಟಿ ಪ್ರಕಟಿಸಬೇಕು’ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನಿರ್ದೇಶಿಸಿದ್ದ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ಪ್ರಶ್ನಿಸಿದ ಮೇಲ್ಮನವಿ ವಿಚಾರಣೆ ಮುಂದೂಡಲಾಗಿದೆ.

ಈ ಸಂಬಂಧ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ, ಪಿಯು ಮಂಡಳಿಯ ಅಧೀನ ಕಾರ್ಯದರ್ಶಿ ಮತ್ತು ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಲ್ಲಿಸಿರುವ ಮೇಲ್ಮನವಿಯು, ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠದ ಮುಂದೆ ಗುರುವಾರ ನಿಗದಿಯಾಗಿತ್ತು. ‘ಮೇಲ್ಮನವಿಗೆ ಸಂಬಂಧಿಸಿದಂತೆ ಕಚೇರಿಯ ದಸ್ತಾವೇಜುಗಳ ಆಕ್ಷೇಪಣೆ ಪರಿಹರಿಸಿ’ ಎಂದು ಅರ್ಜಿದಾರರಿಗೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿದೆ.

‘ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ 2020-21ನೇ ಸಾಲಿನ ಪಿಯು ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪರಿಗಣಿಸಲಾಗದು’ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) 2022 ಜುಲೈ 30ರಂದು ಹೊರಡಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಸ್. ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಇತ್ತೀಚೆಗೆ ರದ್ದುಗೊಳಿಸಿತ್ತು. ‘ಈ ತೀರ್ಪು ರದ್ದುಗೊಳಿಸಬೇಕು. ಮೇಲ್ಮನವಿ ಇತ್ಯರ್ಥವಾಗುವವರೆಗೆ ಏಕಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಬೇಕು’ ಎಂದು ಮಧ್ಯಂತರ ಮನವಿ ಮಾಡಲಾಗಿದೆ.





ನೇಮಕಾತಿಯಲ್ಲಿ 10 ಸಾವಿರದಿಂದ 12 ಸಾವಿರ ಶಿಕ್ಷಕರು ಲಭ್ಯವಾಗುವ ನಿರೀಕ್ಷೆ

ನವೆಂಬರ್‌ನಲ್ಲಿ ಮತ್ತೆ ಟಿಇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 47,000 ಶಿಕ್ಷಕರ ಹುದ್ದೆಗಳು ಖಾಲಿ ಇವೆ. 15,000 ಶಿಕ್ಷಕರ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಗತಿಯಲ್ಲಿದ್ದು, ನವೆಂಬರ್‌ನಲ್ಲಿ ಮತ್ತೊಮ್ಮೆ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ನಡೆಸಲಾಗುವುದು ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯ ನರಸಿಂಹ ನಾಯಕ್ (ರಾಜು ಗೌಡ) ಪ್ರಶ್ನೆಗೆ ಗುರುವಾರ ಉತ್ತರಿಸಿದ ಅವರು, ‘ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗಿಸಲು 27,000 ಅತಿಥಿ ಶಿಕ್ಷಕರನ್ನು ನೇಮಿಸಲಾಗಿದೆ. ಈಗ ನಡೆಯುತ್ತಿರುವ ನೇಮಕಾತಿಯಲ್ಲಿ 10,000 ದಿಂದ 12,000 ಶಿಕ್ಷಕರು ಲಭ್ಯವಾಗಬಹುದು ಎಂಬ ನಿರೀಕ್ಷೆ ಇದೆ. ಕೊರತೆ ತಗ್ಗಿಸಲು ಮತ್ತೆ ನವೆಂಬರ್‌ನಲ್ಲಿ ಪರೀಕ್ಷೆ ನಡೆಸಿ ಫೆಬ್ರುವರಿಯೊಳಗೆ ನೇಮಕಾತಿ ಆದೇಶ ನೀಡಲಾಗುವುದು’ ಎಂದರು.

‘ರಾಜ್ಯದಲ್ಲಿ ಕೊರತೆ ಇರುವ ಶಿಕ್ಷಕರ ಸಂಖ್ಯೆಗೆ ಹೋಲಿಸಿದರೆ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಶೇಕಡ 48ರಷ್ಟು ಹುದ್ದೆಗಳು ಖಾಲಿ ಇವೆ. ಪರಿಸ್ಥಿತಿ ಹೀಗೆಯೇ ಇದ್ದರೆ ನಮ್ಮ ಭಾಗದ ಮಕ್ಕಳ ಭವಿಷ್ಯ ಏನಾಗಬೇಕು? ಶಿಕ್ಷಕರನ್ನು ಒದಗಿಸಲು ಸಾಧ್ಯವಾಗದಿದ್ದರೆ ಆ ಭಾಗದ ಮಕ್ಕಳಿಗೆ ಪರೀಕ್ಷೆಗಳಿಲ್ಲದೇ ಉದ್ಯೋಗ ನೀಡುವ ವ್ಯವಸ್ಥೆ ಜಾರಿಗೊಳಿಸಿ’ ಎಂದು ರಾಜು ಗೌಡ ಆಗ್ರಹಿಸಿದರು.

ಕಾಂಗ್ರೆಸ್‌ನ ಅಮರೇಗೌಡ ಬಯ್ಯಾಪುರ, ಈಶ್ವರ ಖಂಡ್ರೆ ಸೇರಿದಂತೆ ಹಲವು ಶಾಸಕರು ಶಿಕ್ಷಕರ ಕೊರತೆ ನೀಗಿಸುವಂತೆ ಆಗ್ರಹಿಸಿದರು.

‘ಹೊಸ ಕಾಲೇಜು ಆರಂಭಿಸುವುದಿಲ್ಲ’

ಬೆಂಗಳೂರು: ರಾಜ್ಯದಲ್ಲಿ ಹಾಲಿ ಇರುವ ಸರ್ಕಾರಿ ಪದವಿ ಕಾಲೇಜುಗಳಿಗೆ ಮೂಲಸೌಕರ್ಯ ಅಭಿವೃದ್ಧಿಪಡಿಸುವುದಕ್ಕೆ ಆದ್ಯತೆ ನೀಡಲಾಗುವುದು. ಹೊಸ ಕಾಲೇಜು ಆರಂಭಿಸುವ ಪ್ರಸ್ತಾವವಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಕಾಂಗ್ರೆಸ್‌ನ ಕೆ.ವೈ. ನಂಜೇಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಜ್ಯದಲ್ಲಿ 440 ಸರ್ಕಾರಿ ಪದವಿ ಕಾಲೇಜುಗಳಿವೆ. 75 ಕಾಲೇಜುಗಳ ಗುಣಮಟ್ಟ ಉತ್ತಮವಾಗಿದೆ. 150 ಕಾಲೇಜುಗಳಿಗೆ ಮಾತ್ರ ನ್ಯಾಕ್ ಮಾನ್ಯತೆ ಹೊಂದಿವೆ. ಉಳಿದ ಕಾಲೇಜುಗಳ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುವುದು’ ಎಂದರು.

ಜಂಟಿ ಆಯುಕ್ತರ ಹುದ್ದೆಗೆ ಕೆಎಎಸ್ ಅಧಿಕಾರಿಗಳು

ಬೆಂಗಳೂರು: ‘ಬಿಬಿಎಂಪಿ ಜಂಟಿ ಆಯುಕ್ತರ ಹುದ್ದೆಗಳಿಗೆ ಕೆಎಎಸ್ ಅಥವಾ ಐಎಎಸ್ ಅಧಿಕಾರಿಗಳನ್ನು ನೇಮಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಬೊಮ್ಮನಹಳ್ಳಿ ವಲಯದ ಪುಟ್ಟೇನಹಳ್ಳಿಯ ಸರ್ವೇ ನಂ.39ರಲ್ಲಿ ಅಕ್ರಮ ಖಾತಾ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು’ ಎಂದು ತಿಳಿಸಿದರು.

‘ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಸಹಾಯಕ ಕಂದಾಯ ಅಧಿಕಾರಿ ಎಸ್.ವಿ. ಮಂಜುನಾಥ್, ಕಂದಾಯ ಪರಿವೀಕ್ಷಕ ನರಸಿಂಹಮೂರ್ತಿ ಅವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ’ ಎಂದು ವಿವರಿಸಿದರು.

ವೆಂಕಟೇಶ್ ಮಾತನಾಡಿ, ‘ಬೊಮ್ಮನಹಳ್ಳಿಯು ಹಣ ಮಾಡುವ ವಲಯವಾಗಿದೆ. ತಪ್ಪು ಮಾಡಿರುವ ಹಿರಿಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ’ ಎಂದು ಒತ್ತಾಯಿಸಿದರು.


ಆರ್‌ಪಿಐಬಿ ಪಕ್ಷ ಉದ್ಘಾಟನೆ

ಬೆಂಗಳೂರು: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಭಾರತ (ಆರ್‌ಪಿಐಬಿ) ಪಕ್ಷ ಬುಧವಾರ ಉದ್ಘಾಟನೆಗೊಂಡಿತು.

ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅವರು ಪಕ್ಷವನ್ನು ಉದ್ಘಾಟಿಸಿದರು. ಬಳಿಕ ಮತನಾಡಿದ ಅವರು, ‘ಹೊಸ ರಾಜಕೀಯ ಪಕ್ಷವು ಭ್ರಷ್ಟಾಚಾರದಿಂದ ಮುಕ್ತವಾಗಿ ಸ್ವಚ್ಛ ರಾಜಕೀಯ ವ್ಯವಸ್ಥೆ ನಿರ್ಮಿಸಲಿ’ ಎಂದು ಆಶಿಸಿದರು.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎನ್. ಮೂರ್ತಿ ಮಾತನಾಡಿ, ‘ರಾಷ್ಟ್ರೀಯ ಪಕ್ಷವನ್ನು ನೋಂದಣಿ ಮಾಡಿಸಲಾಗಿದ್ದು, ಪಕ್ಷದ ಬಾವುಟ ನೀಲಿ ಎಂದು ತೀರ್ಮಾನಿಸಲಾಗಿದೆ. ದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಸಮ್ಮೇಳನದಲ್ಲಿ ಪಕ್ಷದ ಲಾಂಛನ ಬಿಡುಗಡೆ ಮಾಡಲಾಗುವುದು’ ಎಂದರು.

ಪಕ್ಷದ ಪದಾಧಿಕಾರಿಗಳನ್ನು ತಿಂಗಳಲ್ಲಿ ಆಯ್ಕೆ ಮಾಡಲಾಗುವುದು. 2023ರ ವಿಧಾನಸಭೆ ಚುನಾವಣೆಗೆ ಈಗಾಗಲೇ 75 ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಲಾಗಿದೆ ಎಂದು ಹೇಳಿದರು.



ಮೆಟ್ರೊ ರೈಲಿಗಾಗಿ ಕಾಯುತ್ತಿರುವ ಪ್ರಯಾಣಿಕರು

ತಾಂತ್ರಿಕ ದೋಷ: ಮೆಟ್ರೊ ಸಂಚಾರದಲ್ಲಿ ವ್ಯತ್ಯಯ

ಬೆಂಗಳೂರು: ಮೈಸೂರು ರಸ್ತೆ ಮತ್ತು ಕೆಂಗೇರಿ ನಡುವಿನ ಮೆಟ್ರೊ ರೈಲು ಮಾರ್ಗದಲ್ಲಿ (ನೇರಳೆ ಮಾರ್ಗ) ತಾಂತ್ರಿಕ ದೋಷ ಕಾಣಿಸಿಕೊಂಡು ಗುರುವಾರ ಮಧ್ಯಾಹ್ನದ ತನಕ ರೈಲುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು.

ರೈಲು ಸಂಚಾರದಲ್ಲಿ ವ್ಯತ್ಯಯ ಆಗಿರುವುದರಿಂದ ಮೈಸೂರು ರಸ್ತೆಯಿಂದ ಕೆಂಗೇರಿ ತನಕದ ನಿಲ್ದಾಣಗಳಲ್ಲಿ ಪ್ರಯಾಣಿಕರು ರೈಲಿಗಾಗಿ ಅರ್ಧ ಗಂಟೆಗಳಿಗೂ ಹೆಚ್ಚು ಕಾಲ ಕಾಯಬೇಕಾಯಿತು. ಸಮಯಕ್ಕೆ ಸರಿಯಾಗಿ ಕಚೇರಿಗಳಿಗೆ ತೆರಳಲು ಸಾಧ್ಯವಾಗದೆ ಪರದಾಡಿದರು.

ಬಿಎಂಆರ್‌ಸಿಎಲ್ ತಾಂತ್ರಿಕ ತಂಡ ದೋಷ ಪತ್ತೆ ಮಾಡಿ ಮಧ್ಯಾಹ್ನ 12ರ ವೇಳೆಗೆ ಸರಿಪಡಿಸಿತು. ಬಳಿಕ ಸಂಚಾರ ಯಥಾಸ್ಥಿತಿಗೆ ಮರಳಿತು.

ಮೆಟ್ರೊ ರೈಲು ಮಾರ್ಗದಲ್ಲಿ ಹೋಗಲು ಮತ್ತು ಬರಲು ಜೋಡಿ ಮಾರ್ಗ ಇದ್ದು, ಒಂದು ಮಾರ್ಗದ ಹಳಿಯಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಆದ್ದರಿಂದ ರೈಲು ಸಂಚಾರವನ್ನು ಒಂದು ಮಾರ್ಗದಲ್ಲಿ ಸ್ಥಗಿತಗೊಳಿಸಿ, ಮಿಕ್ಕ ಒಂದೇ ಮಾರ್ಗದಲ್ಲಿ ರೈಲುಗಳು ಹೋಗಿ ಬರಲು ವ್ಯವಸ್ಥೆ ಮಾಡಲಾಗಿತ್ತು. ಆದ್ದರಿಂದ 25ರಿಂದ 30 ನಿಮಿಷಕ್ಕೆ ಒಂದರಂತೆ ರೈಲುಗಳು ಸಂಚರಿಸಲು ಸಾಧ್ಯವಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳಿದರು.

ತಾತ್ಕಾಲಿಕವಾಗಿ ಬೆಸುಗೆ ಹಾಕಿ ಹಳಿ ಜೋಡಿಸಲಾಗಿದೆ. ಸದ್ಯಕ್ಕೆ ಸಮಸ್ಯೆ ಪರಿಹರಿಸಲಾಗಿದೆ. ಮುಂದಿನ ದಿನಗಳಲ್ಲಿ ಹಳಿ ಬದಲಿಸಲಾಗುವುದು ಎಂದು ತಿಳಿಸಿದರು.

ಮೋಹನ್‌ಕೃಷ್ಣ ಸಿಎಂ ಮಾಧ್ಯಮ ಸಲಹೆಗಾರ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮಾಧ್ಯಮ ಸಲಹೆಗಾರರಾಗಿ ಬಿಜೆಪಿ ವಕ್ತಾರ ಮೋಹನ್ ಕೃಷ್ಣ ಮತ್ತು ಮಾಧ್ಯಮ ಸಂಯೋಜಕರಾಗಿ ಪತ್ರಕರ್ತ ಶಂಕರ್ ಪಾಗೋಜಿ ಅವರನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ.



ಮೋಹನ್ ಕೃಷ್ಣ



ಶಂಕರ್ ಪಾಗೋಜಿ

ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘದ ಸಭೆ 22ಕ್ಕೆ

ಬೆಂಗಳೂರು: ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘದ 2020–21ನೇ ಸಾಲಿನ ಸದಸ್ಯರ ವಾರ್ಷಿಕ ಸಭೆಯನ್ನು ಸೆ.22ರಂದು ಹಮ್ಮಿಕೊಳ್ಳಲಾಗಿದೆ. ನಗರದ ಮುದ್ದಿನಪಾಳ್ಯದಲ್ಲಿರುವ ಗಿಡದಕೋನೇನಹಳ್ಳಿಯಲ್ಲಿರುವ ಮಲ್ಲತ್ತಹಳ್ಳಿ ಕ್ಲಬ್ ಸಭಾಂಗಣದಲ್ಲಿ ಬೆಳಿಗ್ಗೆ 10.30ಕ್ಕೆ ಸಭೆ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಗಂಗಾಧರ್ ಮೊದಲಿಯಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

‘ಕಥಾ ಲೋಕ’ ಕೃತಿ ಬಿಡುಗಡೆ: ಅತಿಥಿಗಳು: ಥಾವರಚಂದ್ ಗೆಹಲೋತ್, ಬಿ.ಎಸ್. ಯಡಿಯೂರಪ್ಪ, ಬಿ.ಸಿ. ನಾಗೇಶ್, ಚಂದ್ರಶೇಖರ್ ಕಂಬಾರ. ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಆಯೋಜನೆ: ಪಿಇಎಸ್ ವಿಶ್ವವಿದ್ಯಾಲಯ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10

ಉದಯೋನ್ಮುಕ್ತಿ: ಉದ್ಘಾಟನೆ: ಕೆ.ಸಿ. ರಾಮಮೂರ್ತಿ, ಕೆ.ಇ. ರಾಧಾಕೃಷ್ಣ, ಜ್ಯೋತಿ ರಘುರಾಮ್, ಬಿ.ವಿ. ಮಲ್ಲರೆಡ್ಡಿ, ಎಚ್.ಎನ್. ಸುರೇಶ, ಆಯೋಜನೆ: ಎಸ್.ವಿ. ನಾರಾಯಣಸ್ವಾಮಿ ಮ್ಯೂಸಿಕ್ ಅಕಾಡೆಮಿ, ಸ್ಥಳ: ಭಾರತೀಯ ವಿದ್ಯಾಭವನ, ಬೆಳಿಗ್ಗೆ 10

ಭಾರತ ಉತ್ಪಾದನಾ ಪ್ರದರ್ಶನ: ಅತಿಥಿಗಳು: ಅಜಯ್ ಭಟ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಓಂಪ್ರಕಾಶ ಸಕ್ಲೇಚಾ, ಆಯೋಜನೆ: ಐಎಂಎಸ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ಬೆಳಿಗ್ಗೆ 10

ಬೀಳ್ಕೊಡುಗೆ ಸಮಾರಂಭ: ಅತಿಥಿಗಳು: ಸೂರಜ್ ಗೋವಿಂದರಾಜ್, ಪ್ರಸನ್ನಕುಮಾರ್ ಸಾಮ್ಯುಯಲ್, ಪೌಲ್ ದಿನಕರನ್, ವಿನ್ಸೆಂಟ್ ವಿನೋದ್ ಕುಮಾರ್, ಆಯೋಜನೆ: ಬಿಶಪ್ ಕಾಟನ್ಸ್ ವುಮೆನ್ಸ್ ಕ್ರಿಶ್ಚಿಯನ್ ಲಾ ಕಾಲೇಜು, ಮಿಷನ್ ರಸ್ತೆ, ಬೆಳಿಗ್ಗೆ 9.30

‘ಆನಂದ ಕೆ. ಕುಮಾರಸ್ವಾಮಿ: ನಮಗೆ ಏಕೆ ಬೇಕು?’ ಸಂವಾದ: ಅತಿಥಿಗಳು: ಮಂಜುಶ್ರೀ ಹೆಗಡೆ, ಬಿ.ಎನ್. ಶಶಿಕಿರಣ್, ಹರೀಶ ಹಾಗಲವಾಡಿ, ಎನ್.ಪಿ. ಸಾಯಿಗಣೇಶ್, ಬಿ.ಎಸ್. ಸೂರ್ಯಪ್ರಕಾಶ್, ಎಸ್. ಸೂರ್ಯಪ್ರಕಾಶ್ ಪಂಡಿತ್, ಆಯೋಜನೆ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಸ್ಥಳ: ವಾಡಿಯಾ ಹಾಲ್, ಸಂಜೆ 6

ಹರಿನಾಮ ಸಂಕೀರ್ತನೆ: ಪ್ರಸ್ತುತಿ: ರಜನಿ ಗುರುರಾಜ್, ಪಿಟೀಲು: ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಪಂಡಿತ್ ಭೀಮಸೇನ್ ಜೋಶಿ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಸಂಗೀತ ಕಾರ್ಯಕ್ರಮ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಕೊಳಲು: ರೋಣು ಮಜುಮದಾರ ಹಾಗೂ ಹೃಷಿಕೇಶ್ ಮಜುಮದಾರ, ಸಿತಾರ್: ಸ್ವೀಕಾರ್ ಕಟ್ಟಿ, ತಬಲಾ: ರಾಜೇಂದ್ರ ನಾಕೋಡ್, ಗಾಯನ: ಪರಮೇಶ್ವರ ಹೆಗಡೆ, ತಬಲಾ: ಗುರುಮೂರ್ತಿ ವೈದ್ಯ, ಹಾರ್ಮೋನಿಯಂ: ಮಧುಸೂದನ ಭಟ್, ಆಯೋಜನೆ: ಏಮ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವಯ್ಯಾಲಿ ಕಾವಲ್, ಸಂಜೆ 6.30

‘ಮೂಗ್ ಮಸಾಲಾ’ ನಾಟಕ ಪ್ರದರ್ಶನ: ನಿರ್ದೇಶನ: ಜೋಸೆಫ್ ಜಾನ್, ಕಲಾವಿದರು: ಲಕ್ಷ್ಮೀ ಚಂದ್ರಶೇಖರ್, ಸುರಭಿ ವಸಿಷ್ಠ, ಚಂದ್ರಕೀರ್ತಿ, ಗೌತಮ ಉಪಾಧ್ಯ, ರಾಘವೇಂದ್ರ, ಸಂಗೀತ: ಎಸ್.ಆರ್. ರಾಮಕೃಷ್ಣ, ಆಯೋಜನೆ: ಕ್ರಿಯೇಟಿವ್ ಥಿಯೇಟರ್, ಸ್ಥಳ: ರಂಗಶಂಕರ, ಸಂಜೆ 7.30



‘ಪ್ರಧಾನಿ ಜನ್ಮದಿನಕ್ಕೆ ಜಿಲ್ಲೆಗಳಲ್ಲಿ ರಕ್ತದಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನದ ಪ್ರಯುಕ್ತ ಇದೇ ಶನಿವಾರ (ಸೆಪ್ಟೆಂಬರ್ 17) ಬಿಜೆಪಿ ಯುವ ಮೋರ್ಚಾ ವತಿಯಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ರಕ್ತದಾನ ಶಿಬಿರ ನಡೆಸಲಾಗುವುದು. ಒಟ್ಟು 11,000 ಯೂನಿಟ್ ರಕ್ತ ಸಂಗ್ರಹಿಸುವ ಗುರಿ ಇದೆ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ತಿಳಿಸಿದರು.

ಪಕ್ಷದ ಕಚೇರಿಯಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರಧಾನಿಯವರ ಜನ್ಮದಿನದ ಅಂಗವಾಗಿ ವಿವಿಧೆಡೆ ‘ಮೋದಿ@20 ಡ್ರೀಮ್ ಮೀಟ್ ಡೆಲಿವರಿ’ ಪುಸ್ತಕ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಅರಳಿ ಸಸಿಗಳನ್ನು ನೆಡುವುದು, ಅಂಗವಿಕಲರಿಗೆ ಅಗತ್ಯ ಸಾಧನಗಳ ವಿತರಣೆ, ಜಲ ಮರುಪೂರಣ ಅಭಿಯಾನ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು’ ಎಂದರು.

‘ಇದೇ ಶನಿವಾರದಿಂದ ಅಕ್ಟೋಬರ್ 2ರವರೆಗೂ ಸೇವಾ ಪಾಕ್ಷಿಕ ನಡೆಯಲಿದೆ. ಅ.2ರಂದು ಮಹಾತ್ಮ ಗಾಂಧೀಜಿಯವರ ಜನ್ಮದಿನದ ಪ್ರಯುಕ್ತ ಪಕ್ಷದ ಎಲ್ಲ ಕಾರ್ಯಕರ್ತರು ಒಂದು ಜೊತೆ ಖಾದಿ ವಸ್ತ್ರ, ಖಾದಿ ಕರವಸ್ತ್ರ ಮತ್ತು ಖಾದಿ ಟವೆಲ್ ಖರೀದಿ ಮಾಡುವ ಅಭಿಯಾನ ನಡೆಸಲಾಗುವುದು. ಪ್ರಧಾನಿಯವರ ಕರೆಯಂತೆ ಕ್ಷಯರೋಗ ಮುಕ್ತ ಭಾರತ ನಿರ್ಮಾಣಕ್ಕೂ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು’ ಎಂದು ಹೇಳಿದರು.

ಅರ್ಧಕ್ಕೂ ಅಧಿಕ ಮತದಾರರು ಬೆಂಗಳೂರಿಗರು • ಮತದಾರರ ಒಲೈಕೆಗೆ ಅಭ್ಯರ್ಥಿಗಳ ಕಸರತ್ತು

ಲೇಖಕಿಯರ ಸಂಘ: ಅಧ್ಯಕ್ಷ ಗಾದಿಗೆ ತ್ರಿಕೋನ ಸ್ಪರ್ಧೆ

• ವರುಣ ಹೆಗಡೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆಯುತ್ತಿರುವ ಈ ಬಾರಿಯ ಚುನಾವಣೆಯಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಬೆಂಗಳೂರು ಕೇಂದ್ರೀಕೃತವಾಗಿರುವ ಸಂಘವನ್ನು, ಪ್ರಾದೇಶಿಕ ಮಟ್ಟಕ್ಕೆ ಕೊಂಡೊಯ್ಯುವ ಭರವಸೆಯೊಂದಿಗೆ ಸ್ಪರ್ಧಿಗಳು ಮತಯಾಚಿಸುತ್ತಿದ್ದಾರೆ.

ಹಾಲಿ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್, ಲೇಖಕಿ ಎಚ್.ಎಲ್. ಪುಷ್ಪಾ ಹಾಗೂ ಕಥೆಗಾರ್ತಿ ಶೈಲಜಾ ಸುರೇಶ್ ಈ ಬಾರಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ. ಇದೇ 18ರಂದು ಬೆಂಗಳೂರಿನ ಎನ್.ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ. ಪ್ರತಿಷ್ಠಾನ ಸಭಾಂಗಣದಲ್ಲಿ ಬೆಳಿಗ್ಗೆ 10ರಿಂದ ಸಂಜೆ 4 ವರೆಗೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಅದೇ ದಿನ ಸಂಜೆ ಫಲಿತಾಂಶ ಘೋಷಣೆ ಆಗಲಿದೆ. ಬೆಂಗಳೂರು ಹೊರತುಪಡಿಸಿ, ಹೊರ ಜಿಲ್ಲೆಯ ಸದಸ್ಯರು ಅಂಚೆ ಮೂಲಕ ಮತ ಚಲಾಯಿಸಲಿದ್ದಾರೆ. 1979ರಲ್ಲಿ ಅಸ್ತಿತ್ವಕ್ಕೆ ಬಂದ ಸಂಘ, ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಕಚೇರಿ ಹೊಂದಿದೆ.

ಸಂಘದ ಹಾಲಿ ಕಾರ್ಯಕಾರಿ ಸಮಿತಿಯ ಅಧಿಕಾರಾವಧಿ 2021ಕ್ಕೆ ಮುಕ್ತಾಯವಾಗಿತ್ತು. ಆದರೆ, ಕೋವಿಡ್ ಕಾರಣ ಅಧಿಕಾರಾವಧಿಯನ್ನು ಒಂದು ವರ್ಷ ವಿಸ್ತರಿಸಿಕೊಳ್ಳಲು ಸಲಹಾ ಸಮಿತಿ ಅವಕಾಶ ನೀಡಿತ್ತು. ಹಾಲಿ ಕಾರ್ಯಕಾರಿ ಸಮಿತಿಯೇ ಮತ್ತೊಂದು ಅವಧಿಗೆ ಮುಂದುವರಿಯುವುದಕ್ಕೆ ಕೆಲವರಿಂದ ಆಕ್ಷೇಪ ವ್ಯಕ್ತವಾಗಿತ್ತು. ಲೇಖಕಿಯರಾದ ಹೇಮಲತಾ ಮಹಿಷಿ, ಬಿ.ಟಿ. ಲಲಿತಾ ನಾಯಕ್, ವಿಜಯಮ್ಮ, ಉಷಾ ಪಿ. ರೈ, ಕೆ.ಆರ್. ಸಂಧ್ಯಾ ರೆಡ್ಡಿ, ವಸುಂಧರಾ ಭೂಪತಿ ಮುಂತಾದವರು ಚುನಾವಣೆ ನಡೆಸುವಂತೆ ಸಹಕಾರ ಸಂಘಗಳ ಇಲಾಖೆ ರಿಜಿಸ್ಟ್ರಾರ್ ಅವರಿಗೆ ಪತ್ರ ಬರೆದಿದ್ದರು. ಹೀಗಾಗಿ, ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುತ್ತಿದೆ.

ಮೂರು ವರ್ಷ ಅವಧಿ: ಸಂಘದ ನಿಬಂಧನೆಗಳ ಪ್ರಕಾರ ಮೂರು ವರ್ಷಗಳಿಗೊಮ್ಮೆ ಚುನಾವಣೆ ನಡೆಸಬೇಕು. ಕನಿಷ್ಠ 5 ವರ್ಷಗಳು ಸತತವಾಗಿ ಸಂಘದ ಸದಸ್ಯರಾಗಿರುವವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬಹುದು. ಸತತ ಎರಡು ಅವಧಿಗೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಬಹುದಾಗಿದೆ. ಅಧ್ಯಕ್ಷರು ತಮ್ಮ ಅಧಿಕಾರಾವಧಿಯಲ್ಲಿ ಬೆಂಗಳೂರಿನಲ್ಲಿಯೇ ವಾಸವಿರಬೇಕು ಎಂದು ನಿಬಂಧನೆಯಲ್ಲಿದೆ.

ಕಳೆದ ಬಾರಿ ನಡೆದ ಚುನಾವಣೆಯಲ್ಲಿ ವನಮಾಲಾ ಸಂಪನ್ನಕುಮಾರ್ ಅವರು ಪತ್ರಕರ್ತೆ, ಲೇಖಕಿ ಆರ್. ಪೂರ್ಣಿಮಾ ಅವರ ವಿರುದ್ಧ 20 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಲೇಖಕಿ ಟಿ. ಸುನಂದಮ್ಮ, ಎಚ್.ಎಸ್. ಪಾರ್ವತಿ, ಹೇಮಲತಾ ಮಹಿಷಿ, ನಾಗಮಣಿ ಎಸ್. ರಾವ್, ಶಶಿಕಲಾ ವೀರಯ್ಯ ಸ್ವಾಮಿ, ಉಷಾ ಪಿ. ರೈ, ಕೆ.ಆರ್. ಸಂಧ್ಯಾ ರೆಡ್ಡಿ, ಡಾ. ವಸುಂಧರಾ ಭೂಪತಿ ಹಾಗೂ ವನಮಾಲ ಸಂಪನ್ನಕುಮಾರ್ ಈವರೆಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಅಂಕಿ-ಅಂಶಗಳು

1,330 ಲೇಖಕಿಯರ ಸಂಘದ ಸದಸ್ಯರು	1,295 ಮತದಾನ ಅರ್ಹತೆ ಇರುವವರು
650 ಬೆಂಗಳೂರಿನ ಮತದಾರರು	35 ಮತದಾನದ ಅರ್ಹತೆ ಇಲ್ಲದವರು

‘ಸುಸಜ್ಜಿತ ಕಟ್ಟಡ, ಸಭಾಂಗಣಕ್ಕೆ ಕ್ರಮ’



ಕೋವಿಡ್ ಬಿಕ್ಕಟ್ಟಿನಿಂದಾಗಿ ಎರಡು ವರ್ಷಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿಲ್ಲ. ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು, ರೂಪಿಸಿದ ಯೋಜನೆಗಳನ್ನು ಕಾರ್ಯಗತಗೊಳಿಸಲು ಕೋವಿಡ್ ಅಡ್ಡಿಪಡಿಸಿತು. ಆದ್ದರಿಂದ ಮತ್ತೊಂದು ಅವಧಿಗೆ ಸ್ಪರ್ಧಿಸಿದ್ದೇನೆ. ಸಂಘಕ್ಕೆ ಸುಸಜ್ಜಿತ ಕಟ್ಟಡ ಹಾಗೂ ಸಭಾಂಗಣದ ಅಗತ್ಯವಿದೆ. ಇದನ್ನು ಸಾಕಾರಗೊಳಿಸಲು ಶ್ರಮಿಸುವೆ. ಪ್ರತಿ ಜಿಲ್ಲೆಯಲ್ಲಿಯೂ ಮಹಿಳಾ ಸಮಾವೇಶ ನಡೆಸಲಾಗುವುದು.

ವನಮಾಲಾ ಸಂಪನ್ನಕುಮಾರ್

‘ಲೇಖಕಿಯರ ಅಸ್ಮಿತೆ ಎತ್ತಿಹಿಡಿಯಲು ಕ್ರಮ’



ಎಲ್ಲ ಲೇಖಕಿಯರನ್ನು ಒಗ್ಗೂಡಿಸಿ, ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು. ಸದ್ಯ ರಾಜಧಾನಿ ಕೇಂದ್ರೀಕರಿಸಿ ಕಾರ್ಯಕ್ರಮ ಮಾಡಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮ ನಡೆಸಿದರೆ ಸ್ಥಳೀಯ ಪ್ರತಿಭೆಗಳಿಗೆ ಪ್ರೋತ್ಸಾಹ ಸಿಗಲಿದೆ. ತಮ್ಮನ್ನು ಕಡೆಗಣಿಸಲಾಗುತ್ತಿದೆ ಎಂಬ ಕೊರಗು ಉತ್ತರ ಕರ್ನಾಟಕ ಭಾಗದ ಲೇಖಕಿಯರಲ್ಲಿದೆ. ಅಕಾಡೆಮಿಕ್ ವಲಯ ಹಾಗೂ ಸಾಮಾನ್ಯ ವಲಯದ ಲೇಖಕಿಯರ ನಡುವಿನ ಅಂತರ ಹೋಗಲಾಡಿಸಲು ಕ್ರಮವಹಿಸುತ್ತೇನೆ.

ಶೈಲಜಾ ಸುರೇಶ್

‘ಪ್ರಾದೇಶಿಕ ಸಮ್ಮೇಳನ ಆಯೋಜನೆ’



ಪ್ರಾದೇಶಿಕ ಸಮ್ಮೇಳನಗಳನ್ನು ನಡೆಸಲಾಗುವುದು. ಸದ್ಯ ಸಂಘಕ್ಕೆ ಸುಸಜ್ಜಿತ ಕಟ್ಟಡವಿಲ್ಲ. ಆದ್ದರಿಂದ ಸ್ವಂತ ಕಟ್ಟಡ ಹಾಗೂ ಸಭಾಂಗಣಕ್ಕೆ ಪ್ರಯತ್ನ ಮಾಡುತ್ತೇನೆ. ಇ–ಗ್ರಂಥಾಲಯ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು. ಸದ್ಯ ಇರುವ ಗ್ರಂಥಾಲಯವನ್ನು ಮಹಿಳಾ ಅಧ್ಯಯನ ಕೇಂದ್ರವಾಗಿ ರೂಪಿಸಲಾಗುವುದು. ಹೊಸ ತಲೆಮಾರನ್ನು ವಿಶ್ವಾಸಕ್ಕೆ ಪಡೆದು, ಮುನ್ನಡೆಯುತ್ತೇನೆ. ಈ ಹಿಂದಿನವರು ನಡೆಸಿಕೊಂಡು ಬಂದ ಉತ್ತಮವಾದ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗಲಾಗುವುದು.

ಎಚ್.ಎಲ್. ಪುಷ್ಪಾ

ಸುದ್ದಿ 2 ನಿಮಿಷ

ಸುರತ್ಕಲ್ ಟೋಲ್ ಪ್ಲಾಜಾ ತೆರವಿಗೆ ಒಪ್ಪಿಗೆ: ಸಚಿವ ಸಿ.ಸಿ. ಪಾಟೀಲ

ಬೆಂಗಳೂರು: ಮಂಗಳೂರಿನ ಸುರತ್ಕಲ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿರುವ ಟೋಲ್ ಸಂಗ್ರಹ ಕೇಂದ್ರ ತೆರವುಗೊಳಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ತಾತ್ವಿಕ ಒಪ್ಪಿಗೆ ನೀಡಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್, ‘ಮಂಗಳೂರಿನಲ್ಲಿ 60 ಕಿ.ಮೀ. ಅಂತರದಲ್ಲಿ ಮೂರು ಟೋಲ್ ಕೇಂದ್ರಗಳಿವೆ. ಸುರತ್ಕಲ್ ಟೋಲ್ ಪ್ಲಾಜಾ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿದೆ. ಅದನ್ನು ತೆರವುಗೊಳಿಸುವಂತೆ ಆಗ್ರಹಿಸಿ ಮೂರು ದಿನಗಳಿಂದ ಧರಣಿ ನಡೆಯುತ್ತಿದೆ. ತಕ್ಷಣ ಟೋಲ್ ಪ್ಲಾಜಾ ತೆರವು ಮಾಡಬೇಕು’ ಎಂದು ಒತ್ತಾಯಿಸಿದರು.



ಪ್ರತಿಕ್ರಿಯಿಸಿದ ಸಚಿವರು, ‘60 ಕಿ.ಮೀ. ಅಂತರದೊಳಗೆ ಇರುವ ಟೋಲ್ ಸಂಗ್ರಹಣಾ ಕೇಂದ್ರಗಳನ್ನು ತೆರವುಗೊಳಿಸಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ತೀರ್ಮಾನಿಸಿದೆ. ಈ ಕಾರಣದಿಂದ ಸುರತ್ಕಲ್ ಟೋಲ್ ಸಂಗ್ರಹ ಕೇಂದ್ರವನ್ನು ತೆರವುಗೊಳಿಸಲು ಎನ್‌ಎಚ್‌ಎಐಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಅದನ್ನು ಪ್ರಾಧಿಕಾರ ಒಪ್ಪಿಕೊಂಡಿದೆ’ ಎಂದರು.

ದಶಪಥ ಹೆದ್ದಾರಿ ಅವೈಜ್ಞಾನಿಕ: ಜೆಡಿಎಸ್ ಆಕ್ಷೇಪ

ಬೆಂಗಳೂರು: ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಿಂದ ಗ್ರಾಮೀಣ ಪ್ರದೇಶದ ಜನರಿಗೆ ಯಾವುದೇ ರೀತಿಯಲ್ಲಿ ಅನುಕೂಲವಾಗುವುದಿಲ್ಲ ಮತ್ತು ರಸ್ತೆ ಅವೈಜ್ಞಾನಿಕತೆಯಿಂದ ಕೂಡಿದೆ ಎಂದು ಜೆಡಿಎಸ್ ಶಾಸಕರು ವಿಧಾನಸಭೆಯಲ್ಲಿ ಗುರುವಾರ ದೂರಿದರು.

ಈ ಹೆದ್ದಾರಿಯಿಂದಾಗಿ ರಾಮನಗರ, ಬಿಡದಿ, ಚನ್ನಪಟ್ಟಣ, ಮದ್ದೂರು, ಮಂಡ್ಯದ ವ್ಯಾಪಾರಸ್ಥರಿಗೆ ತೊಂದರೆ ಆಗುತ್ತದೆ. ಇದು ಬೆಂಗಳೂರು ಮತ್ತು ಮೈಸೂರು ಮಧ್ಯೆ ಸಂಚರಿಸುವ ಪ್ರಯಾಣಿಕರ ಹಿತವನ್ನು ಮಾತ್ರ ಹೊಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮದ್ದೂರು ಶಾಸಕ ಡಿ.ಸಿ.ತಮ್ಮಣ್ಣ ಮಾತನಾಡಿ, ಈ ಭಾಗದ ಹಳ್ಳಿಯ ಜನ ತಮ್ಮ ಮನೆಗಳಿಗೆ ಹೋಗಲು ಕಷ್ಟವಾಗುತ್ತದೆ. ಸರ್ವಿಸ್ ರಸ್ತೆ ಕೂಡ ಸರಿಯಾಗಿಲ್ಲ. ರಸ್ತೆಯ ಎರಡೂ ಕಡೆಗಳಲ್ಲಿ ನೀರು ಹರಿದು ಹೋಗಲು ಸೂಕ್ತ ವ್ಯವಸ್ಥೆ ಆಗಿಲ್ಲ ಎಂದು ಹೇಳಿದರು.

ಈ ಹೆದ್ದಾರಿಯಲ್ಲಿ ವಿವಿಧ ಪಟ್ಟಣಗಳಿಗೆ ಪ್ರವೇಶ ಮತ್ತು ನಿರ್ಗಮನಕ್ಕೆ ವ್ಯವಸ್ಥೆಯೇ ಇಲ್ಲ. ಹಲವು ಕಡೆಗಳಲ್ಲಿ ಅಪಾಯಕಾರಿ ತಿರುವುಗಳಿವೆ. ರಸ್ತೆಯ ಪ್ಲಾನ್ ತರಿಸಿ ಪರಿಶೀಲಿಸಬೇಕು. ಆದರೆ, ಸಂಸದರೊಬ್ಬರು ಪ್ರತಿನಿತ್ಯವೂ ಫೇಸ್‌ಬುಕ್ ಲೈವ್ ಮೂಲಕ ರಸ್ತೆಯನ್ನು ತಾವೇ ಮಾಡಿಸುತ್ತಿರುವುದಾಗಿ ಹೇಳಿಕೊಳ್ಳುತ್ತಿದ್ದಾರೆ ಮಾಗಡಿ ಶಾಸಕ ಎ.ಮಂಜುನಾಥ್ ವ್ಯಂಗ್ಯವಾಡಿದರು.

2 ವರ್ಷಗಳಲ್ಲಿ ಪರಿಹಾರ ವಿತರಿಸಲು ಸೂಚನೆ

ನ್ಯಾಯೋಚಿತ ಪರಿಹಾರ, ಪಾರದರ್ಶಕತೆ, ಪುನರ್ವಸತಿ ಕಾಯ್ದೆ-2013ರ ಕಲಂ 25ರ ಪ್ರಕಾರವೂ ಅಧಿಸೂಚನೆ ಹೊರಡಿಸಿದ 12 ತಿಂಗಳಲ್ಲಿ ಪರಿಹಾರ ವಿತರಿಸಬೇಕು

ಭೂ ಸ್ವಾಧೀನ: ಪರಿಹಾರ ವಿಳಂಬವಾದರೆ ಮಾನ್ಯತೆ ರದ್ದು

ಬೆಂಗಳೂರು: ‘ಭೂ ಸ್ವಾಧೀನ ಕಾಯ್ದೆ-1894ರ ಪ್ರಕಾರ ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ ಎರಡು ವರ್ಷಗಳಲ್ಲಿ ಪರಿಹಾರ ವಿತರಿಸಬೇಕು. ಇಲ್ಲವಾದಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಮಾನ್ಯತೆ ಕಳೆದುಕೊಳ್ಳುತ್ತದೆ’ ಎಂದು ಹೈಕೋರ್ಟ್ ಆದೇಶಿಸಿದೆ.

ಭೂ ಸ್ವಾಧೀನಕ್ಕೆ ಹೊರಡಿಸಲಾಗಿದ್ದ ಅಧಿಸೂಚನೆ ಮತ್ತು ಪರಿಹಾರ ಘೋಷಣೆ ಮಾಡಿ 2021ರ ಜನವರಿ 7ರಂದು ಹೊರಡಿಸಿದ್ದ ಅಧಿಸೂಚನೆ ಪ್ರಶ್ನಿಸಿ ಸುರೇಶ್ ಕುಮಾರ್ ಮತ್ತಿತರರು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಗುಳಿಮಂಗಲ ಗ್ರಾಮದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ಮಾರುಕಟ್ಟೆ ನಿರ್ಮಾಣಕ್ಕಾಗಿ ಎರಡು ದಶಕಗಳ ಹಿಂದೆ ಹೊರಡಿಸಿದ್ದ ಭೂ ಸ್ವಾಧೀನ ಅಧಿಸೂಚನೆಯನ್ನು ರದ್ದುಪಡಿಸಿದೆ.

‘ಮಾಲೀಕರು ಈ ಪ್ರಕರಣದಲ್ಲಿ ತಮಗಾಗಿರುವ ನಷ್ಟವನ್ನು ವಸೂಲಿ ಮಾಡಿಕೊಳ್ಳುವ ದಿಸೆಯಲ್ಲಿ ಸರ್ಕಾರದ ವಿರುದ್ಧ ಸೂಕ್ತ ಕಾನೂನು ಕ್ರಮ ಕೋರಲು ಸ್ವತಂತ್ರರಿದ್ದಾರೆ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. ‘ಭೂ ಸ್ವಾಧೀನಪಡಿಸಿಕೊಂಡ ನಮ್ಮ ಜಮೀನಿಗೆ ನಿಗದಿತ ಅವಧಿಯಲ್ಲಿ ಪರಿಹಾರ ಒದಗಿಸಿಲ್ಲ’ ಎಂದು ಆಕ್ಷೇಪಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

‘ವಿಶ್ವೇಶ್ವರಯ್ಯರದು ಸಾಧನೆಯ ಬದುಕು’

ಬ್ರಿಗೇಡ್ ಗ್ರೂಪ್ಸ್ ಅಧ್ಯಕ್ಷ ಎಂ.ಆರ್.ಜೈಶಂಕರ್‌ಗೆ ಸರ್ ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬ್ರಿಗೇಡ್ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಅಧ್ಯಕ್ಷ ಎಂ.ಆರ್.ಜೈಶಂಕರ್ ಅವರ ಪರವಾಗಿ ಬ್ರಿಗೇಡ್ ಗ್ರೂಪ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅಮರ್ ಮೈಸೂರು ಮತ್ತು ಗೀತಾ ಶಂಕರ್ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಎಫ್‌ಕೆಸಿಸಿಐ ನಿಕಟಪೂರ್ವ ಅಧ್ಯಕ್ಷ ಪೆರಿಕಲ್ ಎಂ. ಸುಂದರ್, ಎಂ.ಆರ್.ಜೈಶಂಕರ್ ಕುಟುಂಬದ ಸದಸ್ಯರಾದ ವರುಣ್ ರವೀಂದ್ರ, ಪವಿತ್ರಾ ಶಂಕರ್, ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್.ಪ್ರಸಾದ್ ಇದ್ದರು. – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಸರ್ ಎಂ.ವಿಶ್ವೇಶ್ವರಯ್ಯ ಅವರದು ಸಾಧನೆಯ ಬದುಕು. ಒಬ್ಬ ವ್ಯಕ್ತಿ ಬದ್ಧತೆಯಿಂದ ಕೆಲಸ ಮಾಡಿದರೆ ನಾಡು ಕಟ್ಟಬಹುದು ಎಂಬುದನ್ನು ಅವರು ತೋರಿಸಿಕೊಟ್ಟರು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ(ಎಫ್‌ಕೆಸಿಸಿಐ) ಆಯೋಜಿಸಿದ್ದ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

‘ವಿಶ್ವೇಶ್ವರಯ್ಯ ಒಬ್ಬ ದಾರ್ಶನಿಕ, ರಾಜನೀತಿ ತಜ್ಞ, ಸಾಮಾಜ ಸುಧಾರಕ ಕೂಡ ಆಗಿದ್ದರು. ಅವರೊಬ್ಬ ಮೇಧಾವಿ. ಸಾಮಾನ್ಯ ಜ್ಞಾನವನ್ನೂ ಹೊಂದಿದ್ದರು. ಈ ರೀತಿಯ ಎಲ್ಲಾ ಗುಣಗಳನ್ನು ಹೊಂದಿರುವ ವ್ಯಕ್ತಿಗಳು ವಿರಳ. ಅವರು ನಮ್ಮ ಕನ್ನಡ ನಾಡಿಗೆ ದೊರೆತಿದ್ದು ನಮ್ಮ ಪುಣ್ಯ’ ಎಂದರು.

‘ಅವರು ಹಾಕಿಕೊಟ್ಟಿರುವ ದಾರಿಯಲ್ಲಿ ನಾವೆಲ್ಲರೂ ಮುನ್ನಡೆಯಬೇಕಿದೆ. ಸರ್ಕಾರಕ್ಕೆ ಮನವಿಪತ್ರಗಳನ್ನು ನೀಡುವುದಕ್ಕೆ ಮಾತ್ರ ಎಫ್‌ಕೆಸಿಸಿಐ ಸೀಮಿತ ಆಗಬಾರದು. ಕೈಗಾರಿಕಾ ಕ್ಷೇತ್ರವನ್ನು ಇನ್ನಷ್ಟು ಮೇಲೆತ್ತುವ ಬಗ್ಗೆ ಆಲೋಚಿಸಬೇಕು. ಈ ನಿಟ್ಟಿನಲ್ಲಿ ದಾಖಲೆ, ಅಂಕಿ-ಅಂಶಗಳ ಸಹಿತ ಸಲಹೆಗಳನ್ನು ನೀಡಿದರೆ ಅದರಿಂದ ಕೈಗಾರಿಕಾ ಕ್ಷೇತ್ರಕ್ಕೆ ಒಳ್ಳೆಯದಾಗಲಿದೆ. ನಿಮ್ಮ ಸಲಹೆ ಸ್ವೀಕರಿಸಲು ನನ್ನ ಮನೆ ಮತ್ತು ಹೃದಯ ಎರಡು ತೆರೆದಿರುತ್ತದೆ’ ಎಂದರು.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಮಾತನಾಡಿ, ‘ಜಗತ್ತು ತುಂಬಾ ವಿಶಾಲವಾಗಿದೆ. ಆದರೆ, ಕೈಗಾರಿಕೆಗಳಿಗೆ ರಾಜ್ಯದಲ್ಲಿ ಇರುವಷ್ಟು ಉತ್ತಮವಾದ ವಾತಾವರಣ ಎಲ್ಲೂ ಇಲ್ಲ. ನೀತಿ-ನಿಯಮಗಳಲ್ಲಿ ಬದಲಾವಣೆ ಅಗತ್ಯ ಇದ್ದರೆ ಮಾಡಲು ಸರ್ಕಾರ ಸಿದ್ಧವಿದೆ. ಸಲಹೆಗಳನ್ನು ಇ-ಮೇಲ್ ಅಥವಾ ವಾಟ್ಸ್‌ಆ್ಯಪ್ ಮೂಲಕ ನೀಡಿದರೆ ಸಾಕು’ ಎಂದರು.



ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಗುರುವಾರ ಹಮ್ಮಿಕೊಂಡ ಸರ್.ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು, ಪತ್ರಕರ್ತ ತಿಮ್ಮಪ್ಪ ಭಟ್, ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗ ಶೆಟ್ಟಿ ಹಾಗೂ ಕೆ. ಮಹಾಲಿಂಗಯ್ಯ ಅವರು ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.



ವಿಧಾನ ಮಂಡಲದಲ್ಲಿ

ತುಂಗಾ ಏತ ನೀರಾವರಿ: ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ತುಂಗಾ ಏತ ನೀರಾವರಿ ಯೋಜನೆಯ ಸಹಾಯಕ ಎಂಜಿನಿಯರ್ ಮತ್ತು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅವರನ್ನು ಅಮಾನತು ಮಾಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಆಯನೂರು ಮಂಜುನಾಥ್ ಒತ್ತಾಯಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ‘ಈ ಇಬ್ಬರು ಅಧಿಕಾರಿಗಳು ರಾಜಕಾರಣ ಮಾಡುತ್ತಿದ್ದಾರೆ. ಜನರಿಗೆ ಪ್ರಚೋದನೆ ನೀಡಿ ಪ್ರತಿಭಟನೆ ಮಾಡಿಸುತ್ತಿದ್ದಾರೆ’ ಎಂದು ದೂರಿದರು.

‘2007ರಲ್ಲಿ ಆರಂಭವಾದ ಯೋಜನೆ ಇದುವರೆಗೆ ಪೂರ್ಣಗೊಂಡಿಲ್ಲ. ಇಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ’ ಎಂದರು. ಈ ಬಗ್ಗೆ ಪ್ರತಿಕ್ರಿಯಿಸಿದ ಸಣ್ಣ ನೀರಾವರಿ ಸಚಿವ ಮಾಧುಸ್ವಾಮಿ, ‘ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಗೊಳ್ಳಲಾಗುವುದು’ ಎಂದರು.

‘ಕಳಪೆ ಕಾಮಗಾರಿ– ಶ್ರೀಮಂತ ಗುತ್ತಿಗೆದಾರರು’

ಬೆಂಗಳೂರು: ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆಯ ಗುತ್ತಿಗೆದಾರರು ಶೇ 40 ರಷ್ಟು ಕಡಿಮೆ ದರ ಕೋಟ್ ಮಾಡಿ, ಟೆಂಡರ್ ಪಡೆದು ಕಳಪೆ ಕಾಮಗಾರಿ ಮಾಡುತ್ತಿದ್ದಾರೆ. ಇದೊಂದು ದೊಡ್ಡ ಜಾಲವಾಗಿದ್ದು, ಇಂತಹವರನ್ನು ಕಪ್ಪು ಪಟ್ಟಿಗೆ ಸೇರಿಸಬೇಕು ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಆಗ್ರಹಿಸಿದರು.

ವಿಧಾನಸಭೆಯಲ್ಲಿ ಗುರುವಾರ ಮಾತನಾಡಿದ ಅವರು, ಕಾಮಗಾರಿಯ ನೈಜ ದರಕ್ಕಿಂತ ಶೇ 40 ರಷ್ಟು ಕಡಿಮೆ ಕೋಟ್ ಮಾಡುತ್ತಾರೆ. 5 ವರ್ಷ ಬಾಳಿಕೆ ಬರಬೇಕಾದ ರಸ್ತೆ, ಕೇವಲ ಒಂದು ವರ್ಷದಲ್ಲೇ ಹಾಳಾಗುತ್ತಿದೆ. ಇವರು ಸರ್ಕಾರದ ಮಾನ ಹರಾಜು ಮಾಡುತ್ತಿದ್ದಾರೆ ಎಂದು ಹೇಳಿದರು.

₹50 ಲಕ್ಷದಲ್ಲಿ ಮಾಡಬೇಕಾದ ಕಾಮಗಾರಿಯನ್ನು ₹25 ರಿಂದ ₹30 ಲಕ್ಷದಲ್ಲೇ ಮಾಡಿ ಗುತ್ತಿಗೆದಾರರು ಶ್ರೀಮಂತರಾಗುತ್ತಿದ್ದಾರೆ ಎಂದು ಜಿ.ಟಿ.ದೇವೇಗೌಡ ತಿಳಿಸಿದರು.

326 ಪಿಡಿಒಗಳ ಭರ್ತಿಗೆ ಕ್ರಮ: ಬೊಮ್ಮಾಯಿ

ಬೆಂಗಳೂರು: ‘ಗ್ರಾಮ ಪಂಚಾಯಿತಿಗಳಿಗೆ 326 ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ನೇಮಕಾತಿಗೆ ಕ್ರಮ ಕೈಗೊಳ್ಳಲಾಗಿದೆ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಮಂಜುನಾಥ್ ಭಂಡಾರಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಒಟ್ಟು 6,021 ಪಿಡಿಒ ಹುದ್ದೆಗಳಲ್ಲಿ 5,029 ಹುದ್ದೆಗಳು ಭರ್ತಿಯಾಗಿವೆ. ಈಗ 326 ಹುದ್ದೆಗಳ ನೇಮಕಾತಿಗೆ ಹಣಕಾಸು ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದರು.

‘ಕಾರ್ಯದರ್ಶಿ ಗ್ರೇಡ್-1ರ ಹುದ್ದೆಗೆ 487 ಅಭ್ಯರ್ಥಿಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದು. ಕಾರ್ಯದರ್ಶಿ ಗ್ರೇಡ್–2ರ 556 ಹುದ್ದೆಗಳ ಖಾಲಿ ಉಳಿದಿದ್ದು, 343 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುವುದು. ಈ ಎಲ್ಲ ಹುದ್ದೆಗಳನ್ನು ನಾಲ್ಕು ತಿಂಗಳ ಒಳಗೆ ಭರ್ತಿ ಮಾಡಲಾಗುವುದು’ ಎಂದರು.

‘ಅಮೃತ ಗ್ರಾಮ ಪಂಚಾಯತ್ ಯೋಜನೆ ಅಡಿಯಲ್ಲಿ ಈ ವರ್ಷವೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ 750 ಗ್ರಾಮ ಪಂಚಾಯಿತಿಗಳಿಗೆ ₹25 ಲಕ್ಷ ಮೊತ್ತವನ್ನು ಪ್ರೋತ್ಸಾಹ ಧನದ ರೂಪದಲ್ಲಿ ನೀಡಲಾಗುವುದು’ ಎಂದರು.

3 ಮಸೂದೆ ಮಂಡನೆ

ಬೆಂಗಳೂರು: ಮೂರು ಮಸೂದೆಗಳನ್ನು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ವಿಧಾನಸಭೆಯಲ್ಲಿ ಗುರುವಾರ ಮಂಡಿಸಿದರು.

‘ಕರ್ನಾಟಕ ಸರಕು ಮತ್ತು ಸೇವೆಗಳ (ತೆರಿಗೆ) ತಿದ್ದುಪಡಿ) ಮಸೂದೆ-2022’, ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ಮಸೂದೆ- 2022’ ಹಾಗೂ ‘ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ-2022’ಗಳನ್ನು ವಿಧಾನಸಭೆಯ ಅಂಗೀಕಾರಕ್ಕಾಗಿ ಸಚಿವರು ಸದನದಲ್ಲಿ ಮಂಡನೆ ಮಾಡಿದರು.

ತಮಿಳುನಾಡಿಗೆ 416.65 ಟಿಎಂಸಿ ನೀರು

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ ಸಮೃದ್ಧವಾದ ಮಳೆಯಿಂದ ತಮಿಳುನಾಡಿಗೆ 416.65 ಟಿಎಂಸಿ ನೀರು ಹರಿಸಲಾಗಿದೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಸೆಮಿಕಂಡಕ್ಟರ್, ಎಫ್‌ಎಂಸಿಜಿಗೆ ಪ್ರೋತ್ಸಾಹ: ರಾಜ್ಯವೇ ಮೊದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಮಿಕಂಡಕ್ಟರ್ ಹಾಗೂ ಎಫ್‌ಎಂಸಿಜಿಗಳಿಗೆ ಪಿಎಲ್‌ಐ (ಉತ್ಪಾದನಾ ಆಧಾರಿತ ಪ್ರೋತ್ಸಾಹಕ) ನೀಡುತ್ತಿರುವ ಮೊದಲ ರಾಜ್ಯ ಕರ್ನಾಟಕ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

’ಲಘು ಉದ್ಯೋಗ ಭಾರತ-ಕರ್ನಾಟಕ‘ವು ಬೆಂಗಳೂರು ಅಂತರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಿರುವ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಶೋ-2022 ಅನ್ನು ಗುರುವಾರ ಉದ್ಘಾಟಿಸಿ, ಅವರು ಮಾತನಾಡಿದರು.

ಚೆನ್ನೈ ಬಾಂಬೆ ಕಾರಿಡಾರ್‌ನಲ್ಲಿ ಕೈಗಾರಿಕಾ ಟೌನ್, ತುಮಕೂರು, ಚಿತ್ರದುರ್ಗ, ಹಾವೇರಿ, ಧಾರವಾಡ, ಬೆಳಗಾವಿಯಲ್ಲಿ ಕೈಗಾರಿಕಾ ಅಭಿವೃದ್ಧಿ, ಕಲಬುರಗಿ, ಯಾದಗಿರಿ, ಮೈಸೂರಿನಲ್ಲಿ ಕೈಗಾರಿಕಾ ಪಾರ್ಕ್‌ಗಳ ಸ್ಥಾಪನೆ, ಬೆಂಗಳೂರಿನಲ್ಲಿ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆ ಆಗುತ್ತಿದೆ ಎಂದು ತಿಳಿಸಿದರು.

ಅಂತರರಾಷ್ಟ್ರೀಯ ಮಟ್ಟದ 400 ಆರ್‌ಎಂಡ್‌ಡಿ ಕೇಂದ್ರಗಳು ರಾಜ್ಯದಲ್ಲಿದ್ದು, 400 ಫಾರ್ಚೂನ್ ಕಂಪನಿಗಳು ಬೆಂಗಳೂರಿನಲ್ಲಿವೆ. ಸೆಮಿ ಕಂಡಕ್ಟರ್ ನೀತಿ, ಆರ್ ಆ್ಯಂಡ್ ಡಿ ನೀತಿ, ಉದ್ಯೋಗ ನೀತಿಗಳೂ ರಾಜ್ಯದಲ್ಲಿದೆ. ರಾಜ್ಯದ ಯುವಕರಿಗೆ ಉದ್ಯೋಗಾವಕಾಶ ನೀಡುವ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು ಎಂದರು.

ಶೇ 60 ರಷ್ಟು ರಕ್ಷಣಾ ಸಾಮಗ್ರಿಗಳು ದೇಶದಲ್ಲಿಯೇ ಉತ್ಪಾದನೆಯಾಗುತ್ತಿದೆ. ದೊಡ್ಡಮಟ್ಟದ ಆರ್ ಆ್ಯಂಡ್ ಡಿ ಅಗತ್ಯವಿದೆ. ಅತಿ ಶೀಘ್ರದಲ್ಲಿಯೇ ಶೇ 90ರಷ್ಟು ಉತ್ಪಾದನೆ ಸ್ವದೇಶಿ ಆಗಲಿದ್ದು, ಅಭಿವೃದ್ಧಿಶೀಲ ದೇಶಗಳಿಗೆ ರಫ್ತು ಮಾಡಲಾಗುವುದು ಎಂದು ಹೇಳಿದರು.

ಎಥೆನಾಲ್– ಮುಂಚೂಣಿಯಲ್ಲಿ ರಾಜ್ಯ

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಪರಿಶ್ರಮದಿಂದ ರಾಜ್ಯದಲ್ಲಿನ ಕಲ್ಲಿದ್ದಲಿನ ಗಣಿಗಾರಿಕೆ ಹಾಗೂ ಇಂಧನ ಕ್ಷೇತ್ರದ ಅಭಿವೃದ್ಧಿ ಸಾಧ್ಯವಾಗಿದೆ. ಮುಂಬರುವ 5-10 ವರ್ಷದೊಳಗೆ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ಆಗಲಿದೆ. ನವೀಕರಿಸಬಹುದಾದ ಇಂಧನದ ಉತ್ಪಾದನೆಗೆ ₹1,30,000 ಕೋಟಿ ಒಪ್ಪಂದಕ್ಕೆ ಸರ್ಕಾರ ಸಹಿ ಮಾಡಿದೆ. ಹೆಚ್ಚಿನ ಸಕ್ಕರೆ ಕಾರ್ಖಾನೆಗಳನ್ನು ಹೊಂದಿರುವುದರಿಂದ ಎಥೆನಾಲ್ ಉತ್ಪಾದನೆಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ ಎಂದೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮೈಸೂರು ರೇಸ್

ಮಿರಾ ಗೆಲ್ಲುವ ನಿರೀಕ್ಷೆ

ಮೈಸೂರು 1000 ಗಿನ್ನೀಸ್ 2022 ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿರಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ರ್‍ಯೂಮರ್ ಲೇಡಿ 5, ವರ್ಜಿನಿಯಾ ಕ್ವೀನ್ 13, ಸ್ಪಿರಿಚ್ಯುಯಲ್ ಕ್ವೀನ್ 12

2ನೇ ರೇಸ್: ಫೆಲಿಸಿಟಾ 12, ಸ್ಟಾರ್ ಸ್ಪೇಕ್ 3, ಕಂಟ್ರೇಸ್ ಡಿಲೈಟ್ 5

3ನೇ ರೇಸ್: ರಾವಿಶಿಂಗ್ ಫಾರ್ಮ್ 3, ಡೌಗ್ಲಾಸ್ 4, ಅಚೂಕ್ 2

4ನೇ ರೇಸ್: ಎಲೂಸಿವ್ ಗರ್ಲ್ 8, ಪೆಲೂಷೆ 5, ಅನ್‌ಯೀಲ್ಡಿಂಗ್ 1

5ನೇ ರೇಸ್: ಮಿರಾ 2, ಫಿಲಾಸಫಿ 4, ಓ ಹನ್ನಿನಿ 3

6ನೇ ರೇಸ್: ಸಕ್ಸಸ್ 6, ಡಿವೈನ್ ರೇ 4, ಟ್ರಸ್ಟ್ ಬಾಂಡ್ 1

7ನೇ ರೇಸ್: ಸರ್ ಕ್ಯಾಲ್‌ಕ್ಯುಲಸ್ 4, ಕೆಟಲಿನ 5, ಫ್ಲೈಯಿಂಗ್ ಫಾಲ್ಕನ್ 1

ಉತ್ತಮ ಬೆಟ್: ರಾವಿಶಿಂಗ್ ಫಾರ್ಮ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನರಸೀಪುರ, ಚನ್ನೋಹಳ್ಳಿ, ತಿಮ್ಮಪ್ಪನ ಪಾಳ್ಯ ಸೇರಿ ಹಲವೆಡೆ ಕರಡಿ ಓಡಾಟ

ರಾತ್ರಿ ವೇಳೆ ಕರಡಿ: ಗ್ರಾಮಸ್ಥರಲ್ಲಿ ಭೀತಿ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ನರಸೀಪುರ, ಚನ್ನೋಹಳ್ಳಿ, ತಿಮ್ಮಪ್ಪನ ಪಾಳ್ಯ, ಇಮಚೇನಹಳ್ಳಿ ಹಾಗೂ ಇಮಚೇನಹಳ್ಳಿ ಪಾಳ್ಯ ಸುತ್ತಮುತ್ತ ಕೆಲವು ದಿನಗಳಿಂದ ರಾತ್ರಿ ವೇಳೆ ಕರಡಿಯೊಂದು ಕಾಣಿಸಿಕೊಳ್ಳುತ್ತಿದ್ದು, ಈ ಗ್ರಾಮಗಳ ಜನರಲ್ಲಿ ಭಯ ಮೂಡಿದೆ.

ಜನ ರಾತ್ರಿ ವೇಳೆ ಒಂಟಿಯಾಗಿ ಓಡಾಡಲು ಹೆದರುತ್ತಿದ್ದಾರೆ.

ಕರಡಿ ನರಸೀಪುರದ ರೈತರ ಹೊಲಗಳ ಬದುಗಳಲ್ಲಿ ಗುಗ್ಗೆ ಕಿತ್ತು ತಿಂದು ಓಡಾಡಿದೆ. ತಿಮ್ಮಪ್ಪನ ಪಾಳ್ಯದ ಜಯ್ಯಮ್ಮ ಅವರ ಮನೆ ಹತ್ತಿರದ ಹಲಸಿನ ಮರದಲ್ಲಿ ಹಣ್ಣು ಕಿತ್ತು ತಿಂದಿದೆ.





ಹುತ್ತದಲ್ಲಿ ಗುಗ್ಗೆ ತಿಂದಿರುವ ಕರಡಿ (ಎಡಚಿತ್ರ) ರೈತ ಹನುಮಂತರಾಯಪ್ಪ ಹೊಲದ ಬದುವಿನಲ್ಲಿ ಕರಡಿ ಗುಗ್ಗೆ ತಿಂದಿರುವುದು

ಇಮಚೇನಹಳ್ಳಿ ಗ್ರಾಮದ ಆಂಜನೇಯ ದೇವಾಲಯದ ಬಳಿಗೂ ಬಂದು ಹೋಗಿದೆ. ದಾಬಸ್ ಪೇಟೆ-ಮಧುಗಿರಿ ರಸ್ತೆಯಲ್ಲಿ ಓಡಾಡುವ ವಾಹನ ಸವಾರರು ಕರಡಿ ಕಂಡಿದ್ದಾರೆ.

‘ಸಾಮಾನ್ಯವಾಗಿ ಕರಡಿಗಳು ಬೆಳಿಗ್ಗೆ ಕಾಣಿಸಿಕೊಳ್ಳುವುದಿಲ್ಲ. ರಾತ್ರಿ ವೇಳೆ ಆಹಾರ ಹುಡುಕಿಕೊಂಡು, ಹಗಲಲ್ಲಿ ಗುಡ್ಡ ಗವಿಯಲ್ಲಿ ಇರುತ್ತವೆ‘ ಎನ್ನುತ್ತಾರೆ ಅರಣ್ಯಾಧಿಕಾರಿ ಮಲ್ಲಿಕಾರ್ಜುನ್.

ಎರಡು ತಿಂಗಳಿಂದ ಕರಡಿಗಳು ಓಡಾಡುತ್ತಿವೆ. ಬೆಳ್ಳಂ ಬೆಳಿಗ್ಗೆ ನಾವು ಹೊಲಗಳ ಹತ್ತಿರ ಹೋಗಲು ಭಯವಾಗುತ್ತಿದೆ’ ಎನ್ನುತ್ತಾರೆ ತಿಮ್ಮಪ್ಪನಪಾಳ್ಯದ ಹನುಮಂತರಾಯಪ್ಪ.

ಪೊದೆಗಳಲ್ಲಿ ಉಳಿದುಕೊಂಡು ದನ-ಕರುಗಳನ್ನು ಮೇಯಿಸಲು ಹೋದವರ ಮೇಲೆ ದಾಳಿ ಮಾಡಿದರೆ ಅನ್ನುವ ಭಯ ಕಾಡುತ್ತಿದೆ ಎಂದರು ನರಸೀಪುರದ ರಾಮಚಂದ್ರಯ್ಯ.

ರಾಮದೇವರ ಕಾಡಿಗೆ ಹೊಂದಿಕೊಂಡಂತೆ ತುಮಕೂರು ಭಾಗದ ಅಲ್ಪ ಕಾಡು ಇದೆ. ಅಲ್ಲೆಲ್ಲಾ ಗಣಿಗಾರಿಕೆ, ಕ್ರಷರ್ ನಡೆಯುತ್ತಿದೆ. ಕರಡಿಗಳು ಉಳಿದುಕೊಳ್ಳಲು ಜಾಗ ಇಲ್ಲವಾಗಿವೆ ಎಂದು ದೂರುತ್ತಾರೆ ಸ್ಥಳೀಯರು.



ಸಿದ್ದರಾಮಯ್ಯ ಅವರನ್ನು ಅರ್ಚಕರು, ಆಗಮಿಕರು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು

ಅರ್ಚಕರಿಂದ ಸಿದ್ದರಾಮಯ್ಯಗೆ ಅಭಿನಂದನೆ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಅರ್ಚಕರು, ಆಗಮಿಕರು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಹಾಗೂ ಉಪಾಧಿವಂತರ ಒಕ್ಕೂಟದ ಪದಾಧಿಕಾರಿಗಳು, ‘ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ಮುಜರಾಯಿ ಅರ್ಚಕರ ತಸ್ತೀಕ್ ಮೊತ್ತವನ್ನು ₹24 ಸಾವಿರದಿಂದ ₹48 ಸಾವಿರಕ್ಕೆ ಹೆಚ್ಚಿಸಿದ್ದನ್ನು ಒಕ್ಕೂಟ ಸದಾ ಸ್ಮರಿಸುತ್ತದೆ’ ಎಂದು ತಿಳಿಸಿದರು. ಶಾಸಕ ದಿನೇಶ್ ಗುಂಡೂರಾವ್ ಜತೆಯಲ್ಲಿದ್ದರು.

ಬಾಗ್ಮನೆ, ದಿವ್ಯಶ್ರೀ ಟೆಕ್‌ಪಾರ್ಕ್, ರೈನ್‌ಬೊ ಬಿಲ್ಡಿಂಗ್, ಬಿಜಿಎಸ್ ಆಸ್ಪತ್ರೆಯಿಂದ ಕಬಳಿಕೆ

ಕೆರೆ ಒತ್ತುವರಿಯಲ್ಲೂ ಹಲವರ ಪಾಲು

ಬಿಬಿಎಂಪಿ ವ್ಯಾಪ್ತಿ



201 ಒಟ್ಟು ಕೆರೆಗಳು

6,008 ಎಕರೆ 17 ಗುಂಟೆ ಒಟ್ಟು ಕೆರೆಗಳ ವಿಸ್ತೀರ್ಣ

949 ಎಕರೆ 26 ಗುಂಟೆ ಒಟ್ಟು ಒತ್ತುವರಿ

38 ಎಕರೆ 9 ಗುಂಟೆ ತೆರವು

851 ಎಕರೆ 11 ಗುಂಟೆ ಬಾಕಿ ಒತ್ತುವರಿ



ಬೆಂಗಳೂರು ನಗರ ಜಿಲ್ಲೆ

837 ಒಟ್ಟು ಕೆರೆಗಳು

28,264 ಎಕರೆ ಒಟ್ಟು ವಿಸ್ತೀರ್ಣ

4,551 ಎಕರೆ 734 ಕೆರೆಗಳಲ್ಲಿ ಒತ್ತುವರಿ

2,145 ಎಕರೆ 429 ಕೆರೆಗಳಲ್ಲಿ ತೆರವು

2,366 ಎಕರೆ 305 ಕೆರೆಗಳಲ್ಲಿ ಬಾಕಿ ಒತ್ತುವರಿ

(ಜಿಲ್ಲಾಡಳಿತ ಮಾಹಿತಿ)

● ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ರಾಜಕಾಲುವೆಗಳ ಜೊತೆಗೆ ಕೆರೆಗಳ ಒತ್ತುವರಿಯಲ್ಲಿ ಐಟಿ ಕಂಪನಿಗಳು, ಡೆವಲಪರ್‌ಗಳು, ಶಾಲೆ, ಕಾಲೇಜು, ಆಸ್ಪತ್ರೆಯವರು ಭಾಗಿಯಾಗಿದ್ದಾರೆ. ಖಾಸಗಿ ವ್ಯಕ್ತಿಗಳು ಸೇರಿ ಸರ್ಕಾರದ ಬಹುತೇಕ ಎಲ್ಲ ಇಲಾಖೆಗಳೂ ಕೆರೆ ಒತ್ತುವರಿ ಮಾಡಿಕೊಂಡಿವೆ.

ಬಾಗ್ಮನೆ ಟೆಕ್‌ಪಾರ್ಕ್, ಬಾಗ್ಮನೆ ಡೆವಲಪರ್ಸ್, ಐಶ್ವರ್ಯ ಅಪಾರ್ಟ್‌ಮೆಂಟ್, ರೈನ್‌ಬೊ ಬಿಲ್ಡಿಂಗ್ಸ್, ಕ್ಲಬ್ ಹೌಸ್, ಸೇಂಟ್ ಆನ್ನೇಸ್ ಕಾಲೇಜ್, ಕಾನ್‌ಕಾರ್ಡ್ ಸ್ಕೂಲ್, ವಿ.ಕೆ. ಟೆಕ್ ಪಾರ್ಕ್, ದಿವ್ಯಶ್ರೀ ಟೆಕ್ ಪಾರ್ಕ್, ಬಿಎನ್‌ಆರ್ ಮೆಮೊರಿಯಲ್ ಸ್ಕೂಲ್, ಬಿಜಿಎಸ್ ಆಸ್ಪತ್ರೆಗಳು ಕೆರೆಗಳನ್ನು ಒತ್ತುವರಿ ಮಾಡಿಕೊಂಡಿವೆ ಎಂದು ಬಿಬಿಎಂಪಿ ಸಿದ್ಧಪಡಿಸಿರುವ ಒತ್ತುವರಿ ಪಟ್ಟಿಯಲ್ಲಿ ದಾಖಲಾಗಿದೆ. ಈ ಪಟ್ಟಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಬಿಬಿಎಂಪಿ ದಾಖಲೆಯಲ್ಲಿರುವ 201 ಕೆರೆಗಳಲ್ಲಿ 851 ಎಕರೆಗೂ ಹೆಚ್ಚು ಒತ್ತುವರಿಯಾಗಿದೆ. ಇದರಲ್ಲಿ ಬಿಡಿಎ, ನೈಸ್, ಸ್ಲಂ ಬೋರ್ಡ್, ಸರ್ಕಾರಿ-ಬಿಬಿಎಂಪಿ ಶಾಲೆ, ಉದ್ಯಾನ, ಕೇಂದ್ರ ಕಾರಾಗೃಹ, ಸ್ಮಶಾನ, ಕೆಎಚ್‌ಬಿ ಕ್ವಾರ್ಟರ್ಸ್, ಮಿಲಿಟರಿ, ರೈಲ್ವೆ ಇಲಾಖೆ, ಕೆಐಎಡಿಬಿ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಂಟಿಸಿ, ಪೊಲೀಸ್ ಠಾಣೆ, ತಹಶೀಲ್ದಾರ್ ಕಚೇರಿಗಳೂ ಸೇರಿವೆ. ಬೆಂಗಳೂರಿನಲ್ಲಿ 10 ವರ್ಷಗಳಿಂದೀಚೆಗೆ ಅಭಿವೃದ್ಧಿಗೊಂಡಿರುವ ಕೆರೆಗಳಲ್ಲೂ ಒತ್ತುವರಿ ಇದೆ. ಗೋವು ಆಶ್ರಮ, ಕೃಷಿ, ಸೈಕಲ್ ಶಾಪ್, ಪೆಟ್ರೋಲ್ ಬಂಕ್, ರಸ್ತೆ ಹೀಗೆ ಹಲವು ರೀತಿ ಹಾಗೂ ಖಾಸಗಿ ವ್ಯಕ್ತಿಗಳ ಹೆಸರಿನಲ್ಲೂ ಒತ್ತುವರಿಯ ಪ್ರಮಾಣವನ್ನು ಬಿಬಿಎಂಪಿ ದಾಖಲು ಮಾಡಿದೆ.

ಇನ್ನು ಬೆಂಗಳೂರು ಜಿಲ್ಲಾಡಳಿತದ ದಾಖಲೆಯಂತೆ ನಗರ ಜಿಲ್ಲೆಯಲ್ಲಿ 305 ಕೆರೆಗಳಲ್ಲಿ 2,366 ಎಕರೆ ಒತ್ತುವರಿ ಬಾಕಿ ಇದೆ.

ವಲಯ	ಒಟ್ಟು ಕೆರೆಗಳು	ಕೆರೆಗಳ ಒಟ್ಟು ವಿಸ್ತೀರ್ಣ	ಒತ್ತುವರಿ	ತೆರವು	ಬಾಕಿ
ಬೊಮ್ಮನಹಳ್ಳಿ	47	1,167 ಎಕರೆ 7 ಗುಂಟೆ	196 ಎಕರೆ 33 ಗುಂಟೆ	0	196 ಎಕರೆ 33 ಗುಂಟೆ
ದಕ್ಷಿಣ	12	162 ಎಕರೆ 7 ಗುಂಟೆ	77 ಎಕರೆ 19 ಗುಂಟೆ	0	77 ಎಕರೆ 19 ಗುಂಟೆ
ಮಹದೇವಪುರ	52	1,845 ಎಕರೆ 6 ಗುಂಟೆ	225 ಎಕರೆ 15 ಗುಂಟೆ	11 ಎಕರೆ 12 ಗುಂಟೆ	214 ಎಕರೆ 2 ಗುಂಟೆ
ಯಲಹಂಕ	28	1371 ಎಕರೆ 20 ಗುಂಟೆ	133 ಎಕರೆ 35 ಗುಂಟೆ	24.16 ಎಕರೆ 9 ಗುಂಟೆ	50 ಎಕರೆ 21 ಗುಂಟೆ
ಪೂರ್ವ	10	303 ಎಕರೆ 24 ಗುಂಟೆ	116 ಎಕರೆ 35 ಗುಂಟೆ	2 ಎಕರೆ 21 ಗುಂಟೆ	113 ಎಕರೆ 32 ಗುಂಟೆ
ಆರ್.ಆರ್. ನಗರ	37	852 ಎಕರೆ 19 ಗುಂಟೆ	160 ಎಕರೆ 6 ಗುಂಟೆ	0	160 ಎಕರೆ 6 ಗುಂಟೆ
ದಾಸರಹಳ್ಳಿ	9	220 ಎಕರೆ 13 ಗುಂಟೆ	9 ಎಕರೆ 2 ಗುಂಟೆ	0	9 ಎಕರೆ 2 ಗುಂಟೆ
ಪಶ್ಚಿಮ	6	86 ಎಕರೆ 1 ಗುಂಟೆ	30 ಎಕರೆ	6 ಗುಂಟೆ	29 ಎಕರೆ 34 ಗುಂಟೆ

(ಬಿಬಿಎಂಪಿ ಅಂಕಿ–ಅಂಶ)

ಪ್ರಮುಖ ಒತ್ತುವರಿದಾರರು

ಪೂರ್ವ ವಲಯ

ಕಗ್ಗದಾಸಪು ರ ಕೆರೆ: ಬಾಗ್ಮನೆ ಡೆವಲಪರ್ಸ್ ಕಾಂಪೌಂಡ್– 3.89 ಗುಂಟೆ, ಬಾಗ್ಮನೆ ಡೆವಲಪರ್ಸ್ ಫೆನ್ಸಿಂಗ್– 3.72 ಗುಂಟೆ, ಗಾರ್ಡನ್ ವ್ಯೂ ಅಪಾರ್ಟ್‌ಮೆಂಟ್–0.9 ಗುಂಟೆ, ರಾಕ್ ಬಿಲ್ಡರ್ಸ್ ಅಪಾರ್ಟ್‌ಮೆಂಟ್– 1.05 ಗುಂಟೆ, ಐಶ್ವರ್ಯ ಅಪಾರ್ಟ್‌ಮೆಂಟ್– 9.46 ಗುಂಟೆ,.

ಬೈರಸಂದ್ರ ಕೆಳಗಿನ ಕೆರೆ: ಬಾಗ್ಮನೆ ಟೆಕ್‌ಪಾರ್ಕ್– 36 ಗುಂಟೆ, ಪೈನ್ ವುಡ್ ವಿಲ್ಲಾ– 1 ಗುಂಟೆ, ಗ್ರ್ಯಾಂಟ್ ಥೋರ್ಟನ್ ಪ್ರೈ. ಲಿ,– 13 ಗುಂಟೆ, ಕಾಗ್ನಿಜೆಂಟ್ ಟೆಕ್ನಾಲಜೀಸ್ ಪ್ರೈ. ಲಿ– 14 ಗುಂಟೆ, ಎಲ್‌ಆರ್‌ಡಿಇ– 19 ಗುಂಟೆ

ಕೋನೇನ ಅಗ್ರಹಾರ ಕೆರೆ: ಸರ್ ಎಂ. ವಿಶ್ವೇಶ್ವರಯ್ಯ ಕಾಲೇಜು– 3 ಎಕರೆ

ಮಹದೇವಪುರ ವಲಯ

ಅಂಬಲಿಪುರ ಮೇಲಿನ ಕೆರೆ: ಜನಜೀವನ್ ಸಿಲ್ವರ್ ಅಪಾರ್ಟ್‌ಮೆಂಟ್– 3.5 ಗುಂಟೆ

ಕಸವನಹಳ್ಳಿ ಕೆರೆ: ಕ್ಲಬ್ ಹೌಸ್ ಲೇಕ್ ವ್ಯೂ– 28 ಗುಂಟೆ

ಕೌದೇನಹಳ್ಳಿ ಕೆರೆ: ಸೇಂಟ್ ಆನ್ನೇಸ್ ಕಾಲೇಜ್– 10 ಎಕರೆ 25 ಗುಂಟೆ, ಬಿಎನ್‌ಆರ್ ಮೆಮೊರಿಯಲ್ ಸ್ಕೂಲ್– 26 ಗುಂಟೆ, ಐಟಿಐ ಲೇಔಟ್– 28 ಗುಂಟೆ

ಹರಳೂರು ಕೆರೆ: ಲೇಕ್ ಡ್ಯೂ ರೆಸಿಡೆನ್ಸಿ– 2 ಗುಂಟೆ

ಚಳ್ಳಕೆರೆ: ಕಾನ್‌ಕಾರ್ಡ್ ಸ್ಕೂಲ್– 2 ಎಕರೆ

ಕುಂದಲಹಳ್ಳಿ ಕೆರೆ: ವಿ.ಕೆ. ಟೆಕ್ ಪಾರ್ಕ್– 1 ಗುಂಟೆ, ದಿವ್ಯಶ್ರೀ ಟೆಕ್ ಪಾರ್ಕ್– 1.5 ಗುಂಟೆ

ವಿಭೂತಿಪುರ ಕೆರೆ: ಎಸ್‌ಎಲ್‌ಎನ್ ಪಬ್ಲಿಕ್ ಶಾಲೆ– .51 ಗುಂಟೆ, ಅಫಾನಾ ಸ್ಕೂಲ್– 14.10 ಗುಂಟೆ, ಸರೋಜಾ ಅಪಾರ್ಟ್‌ಮೆಂಟ್– 38.69 ಗುಂಟೆ, ಆರ್. ಆರ್. ಕ್ಯಾಸ್ಟ್ರಾಕ್ ಅಪಾರ್ಟ್‌ಮೆಂಟ್– 1.5 ಗುಂಟೆ, ಐಶ್ವರ್ಯ ಅಪಾರ್ಟ್‌ಮೆಂಟ್– 3.53 ಗುಂಟೆ.

ಭೋಗನಹಳ್ಳಿ ಕೆರೆ: ಆದರ್ಶ ಡೆವಲಪರ್ಸ್– 6.25 ಗುಂಟೆ

ಜುನ್ನಸಂದ್ರ ಕೆರೆ: ರೈನ್‌ಬೊ ಬಿಲ್ಡಿಂಗ್– 1.5 ಗುಂಟೆ, ಶಾಂತಿ ಡೆವಲಪರ್ಸ್– 6 ಗುಂಟೆ.

ಬೊಮ್ಮನಹಳ್ಳಿ ವಲಯ

ಯಲಚೇನಹಳ್ಳಿ ಕೆರೆ: ಆರ್.ಎಸ್. ರೆಸಿಡೆನ್ಸಿ– 6 ಗುಂಟೆ

ಕೂಡ್ಲು ದೊಡ್ಡಕೆರೆ: ಎಸ್‌ಜೆಆರ್ ಡೆವಲಪರ್ಸ್ ಅಪಾರ್ಟ್‌ಮೆಂಟ್– 22 ಗುಂಟೆ

ಸಾರಕ್ಕಿ ಕೆರೆ: ನಂದಿನಿ ಅಪಾರ್ಟ್‌ಮೆಂಟ್– 2.5 ಗುಂಟೆ

ಕೂಡ್ಲು ಚಿಕ್ಕಕೆರೆ: ಎನ್.ಡಿ. ಡೆವಲಪರ್ಸ್– 3 ಗುಂಟೆ; ಅಬ್ಬಾನ್ ಎಸೆನ್ಸ್ ಅಪಾರ್ಟ್‌ಮೆಂಟ್– 6 ಗುಂಟೆ

ಇಬ್ಲೂರು ಕೆರೆ: ಶೋಭಾ ನಿಂಬಸ್ ಅಪಾರ್ಟ್‌ಮೆಂಟ್– 0.25 ಗುಂಟೆ

ಯಲಚೇನಹಳ್ಳಿ ಕೆರೆ: ಹೇಮಕ್ಕ ಅಪಾರ್ಟ್‌ಮೆಂಟ್, ದಯಾನಂದ ಸ್ಕೂಲ್, ಓಂಶಕ್ತಿ ದೇವಸ್ಥಾನ–13 ಗುಂಟೆ

ದೊಡ್ಡಕಲ್ಲಸಂದ್ರ ಕೆರೆ: ಶ್ರೀ ಶಿವ ಆಂಜನೇಯ ಚಾರಿಟಬಲ್ ಟ್ರಸ್ಟ್– 19 ಗುಂಟೆ

ಕೋಣನಕುಂಟೆ ಕೆರೆ: ಖೋಡೇಸ್ ಡಿಸ್ಟಿಲರೀಸ್– 30 ಗುಂಟೆ, ಜೆಎಸ್‌ಎಸ್ ಹೈಸ್ಕೂಲ್– 1.25 ಗುಂಟೆ

ಅರೆಕೆರೆ ಕೆರೆ: ಮ್ಯಾಗ್ನೊಲಿಯಾ ಮಾರುತಿ ಪಬ್ಲಿಕ್ ಸ್ಕೂಲ್– 2 ಗುಂಟೆ, ಶಾಹಿ ಗಾರ್ಮೆಂಟ್ಸ್– 5 ಗುಂಟೆ.

ರಾಜರಾಜೇಶ್ವರಿನಗರ ವಲಯ

ಶ್ರೀಗಂಧಕಾವಲ್: ಅಂಬಾಭವಾನಿ ಸೇವಾ ಟ್ರಸ್ಟ್– .07 ಗುಂಟೆ

ಬೂಸೇಗೌಡನ ಕೆರೆ: ಬಿಜಿಎಸ್ ಆಸ್ಪತ್ರೆ– 8.5 ಗುಂಟೆ

ಯಲಹಂಕ ವಲಯ

ಅಲ್ಲಾಳಸಂದ್ರ ಕೆರೆ: ಜನಪ್ರಿಯ ಅಪಾರ್ಟ್‌ಮೆಂಟ್–.4 ಗುಂಟೆ

ನರಸಿಪುರ ಕೆರೆ: ಇಂಡಸ್ಟ್ರಿಯಲ್ ಎಂಪ್ಲಾಯೀಸ್ ಬಿಲ್ಡಿಂಗ್ ಕೊ–ಸೊಸೈಟಿ– 18 ಗುಂಟೆ.

ದಕ್ಷಿಣ ವಲಯ

ಕೆಂಪಾಂಬುಧಿ ಕೆರೆ: ಕಾಲಬೈರವೇಶ್ವರ ದೇವಸ್ಥಾನ– 2 ಎಕರೆ; ಗಂಗಮ್ಮ ದೇವಸ್ಥಾನ– 4.5 ಗುಂಟೆ

ದಾಸರಹಳ್ಳಿ ವಲಯ

ನೆಲಗೆದರೇನಹಳ್ಳಿ ಕೆರೆ: ಮಾಲ್ವಿನ್ ಹೆಲ್ತ್ ಸೆಂಟರ್– 17 ಗುಂಟೆ

4 ವಲಯ: 29 ಒತ್ತುವರಿ ತೆರವು

ಒಂದನೇ ಪುಟದಿಂದ

ಬೊಮ್ಮನಹಳ್ಳಿ ವಲಯದ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಕೋಣನಕುಂಟೆ ವ್ಯಾಪ್ತಿಯ ಸರ್ವೆ ಸಂಖ್ಯೆ 29ರಲ್ಲಿ ವಾಣಿಜ್ಯ ಕಟ್ಟಡ, ಎಂಟು ಶೆಡ್ ಹಾಗೂ ಎರಡು ಜಿಂಕ್ ಶೀಟ್ ಶೆಡ್ ತೆರವು ಮಾಡಿ 15 ಅಡಿ ಅಗಲ ಹಾಗೂ 330 ಅಡಿ ಉದ್ದದಷ್ಟು ರಾಜಕಾಲುವೆಯನ್ನು ಒತ್ತುವರಿ ತೆರವು ಮಾಡಲಾಗಿದೆ. ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ಹೊಂಗಸಂದ್ರದಲ್ಲಿ 7.5 ಮೀಟರ್ ಜಾಗದಲ್ಲಿ 160 ಚ.ಅಡಿಯಷ್ಟು ಒಂದು ಕಟ್ಟಡ, 10 ಅಡಿ ಗೋಡೆ ಹಾಗೂ ಶೆಡ್ ಅನ್ನು ಬಿಬಿಎಂಪಿ ಸಿಬ್ಬಂದಿ ತೆರವು ಮಾಡಿದ್ದಾರೆ.

ಮಹದೇವಪುರ ವಲಯ ಯಮಲೂರು ಬಳಿಯ ಎಪ್ಸಿಲಾನ್ ಹಿಂಭಾಗ ಬಳಿಯಿರುವ ಮುನೇಶ್ವರ ದೇವಸ್ಥಾನದ ಬಳಿ ಚರಂಡಿಯ ಮೇಲಿನ ಸ್ಲ್ಯಾಬ್, ಮುನ್ನೇಕೊಳಾಲು ಶಾಂತಿನಿಕೇತನ ಲೇಔಟ್‌ನಲ್ಲಿ ರಾಜಕಾಲುವೆ ಸ್ಥಳದಲ್ಲಿ ನಿರ್ಮಿಸಿದ್ದ ಎರಡು ಶೆಡ್‌ಗಳನ್ನು ತೆರವುಗೊಳಿಸಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.



ಯಲಹಂಕದ ಸಿಂಗಾಪುರ ಕೆರೆ ಹಿಂಭಾಗದಲ್ಲಿರುವ ಲ್ಯಾಂಡ್ ಮಾರ್ಕ್ ಅಪಾರ್ಟ್‌ಮೆಂಟ್‌ನಲ್ಲಿ ಕಾಲುವೆ ಒತ್ತುವರಿ ತೆರವು ಮಾಡಲಾಯಿತು

ಸರ್ವೆ ಕಾರ್ಯ ಚುರುಕು

ಮಹದೇವಪುರ ವಲಯ ವ್ಯಾಪ್ತಿಯ ವಾಗ್ದೇವಿ ಲೇಔಟ್, ಮುನ್ನೇಕೊಳಾಲು, ಕಸವನಹಳ್ಳಿ, ಎಬಿಕೆ ಗ್ರಾಮ, ಪ್ರೆಸ್ಟೀಜ್ ಟೆಕ್ ಪಾರ್ಕ್, ವಿಪ್ರೊ, ಸನ್ನಿ ಬ್ರೂಕ್ಸ್ ದೊಡ್ಡಕನ್ನಹಳ್ಳಿ, ಬೆಳ್ಳತ್ತೂರು ಗ್ರಾಮ, ಸದ್ರಮಂಗಲ ಗ್ರಾಮ, ಬೊಳ್ಳೆನಿನಿ ಸಾಸಾ ಅಪಾರ್ಟ್‌ಮೆಂಟ್ ಒಳಭಾಗ ಹಾಗೂ ಸಾಯಿಗಾರ್ಡನ್ ಲೇಔಟ್‌ನಲ್ಲಿ ಬಿಬಿಎಂಪಿ ಅಧಿಕಾರಿಗಳು, ಭೂಮಾಪಕ ಇಲಾಖೆಯ ಅಧಿಕಾರಿಗಳು ಗುರುವಾರ ಸರ್ವೆ ಕಾರ್ಯ ನಡೆಸಿದರು.

ರೈತರಿಗೆ ಅಭಿವೃದ್ಧಿಪಡಿಸಿದ ನಿವೇಶನ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಪ್ರಭು ಕೆಂಪೇಗೌಡ ಬಡಾವಣೆ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು. ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ರೂಪದಲ್ಲಿ ಸರ್ವೆ ನಂ. 63ರಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಸೂಲಿಕೆರೆ ಗ್ರಾಮದ ಸರ್ವೆ ನಂ.8ರಲ್ಲಿ ರಚಿಸಿರುವ ನಿವೇಶನಗಳ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ. ವ್ಯಾಜ್ಯಗಳಿರುವುದರಿಂದ ಇಲ್ಲಿನ ನಿವೇಶನ ನೀಡುವುದಿಲ್ಲ' ಎಂದು ತಿಳಿಸಿದರು.

'ಎಲ್ಲ ರೈತರಿಗೂ ಅಭಿವೃದ್ಧಿಪಡಿಸಿದ ನಿವೇಶನ ನೀಡಲು ಸಿದ್ಧ' ಎಂದು ಸ್ಪಷ್ಟಪಡಿಸಿದರು.

ವಿಮ್ಸ್ ದುರ್ಘಟನೆ: ತಲಾ ₹ 5 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿಯ ವಿಜಯ ನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ವಿಮ್ಸ್) ಸಂಭವಿಸಿದ ದುರ್ಘಟನೆಯಿಂದ ಮೃತರಾದ ಮೂವರ ಕುಟುಂಬಗಳಿಗೆ ತಲಾ ₹ 5 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪ್ರಕರಣದ ಕುರಿತು ತನಿಖೆ ನಡೆಸಲು ಬೆಂಗಳೂರು ವೈದ್ಯಕೀಯ ಕಾಲೇಜಿನ ಪ್ಲಾಸ್ಟಿಕ್ ಸರ್ಜರಿ ವಿಭಾಗದ ಪ್ರಾಧ್ಯಾಪಕಿ ಡಾ. ಸ್ಮಿತಾ ಅಧ್ಯಕ್ಷತೆಯಲ್ಲಿ ಐವರು ಸದಸ್ಯರ ಸಮಿತಿ ರಚಿಸಲಾಗಿದೆ. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಜಂಟಿ ನಿರ್ದೇಶಕ ಡಾ.ಸಿದ್ದಿಕಿ ಅಹಮ್ಮದ್, ಬಿಎಂಸಿಆರ್‌ಐ ಜನರಲ್ ಮೆಡಿಸಿನ್ ವಿಭಾಗದ ಪ್ರಾಧ್ಯಾಪಕ ಡಾ. ದಿವಾಕರ್, ಆರೋಗ್ಯ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್ ಯೋಗೇಶ್, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮುಖ್ಯ ಆಡಳಿತಾಧಿಕಾರಿ ಉಮಾ ಕೆ.ಎ. ಸಮಿತಿಯಲ್ಲಿದ್ದಾರೆ.

'ಬ್ರ್ಯಾಂಡ್ ಬೆಂಗಳೂರಿಗೆ ಪ್ರವಾಹದ ಕಪ್ಪು ಚುಕ್ಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರ ಒತ್ತುವರಿಗಳನ್ನು ತೆರವು ಮಾಡದೇ ಅದಕ್ಕಾಗಿ ಇಟ್ಟಿದ್ದ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಿದ್ದು ಬೆಂಗಳೂರು ನಗರದಲ್ಲಿ ಪ್ರವಾಹ ಉಂಟಾಗಲು ಕಾರಣ. ಇದರಿಂದಾಗಿ ನಗರದ ಬ್ರ್ಯಾಂಡ್‌ಗೇ ಕಪ್ಪು ಚುಕ್ಕೆ ಇಟ್ಟಂತಾಗಿದೆ ಎಂದು ವಿಧಾನ ಸಭೆಯಲ್ಲಿ ಕಾಂಗ್ರೆಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಮಳೆ ಮತ್ತು ಪ್ರವಾಹದ ಕುರಿತು ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ರಾಮಲಿಂಗಾರೆಡ್ಡಿ, '2016–18ರಲ್ಲಿ ಸಿದ್ದರಾಮಯ್ಯ ಸರ್ಕಾರ ಪ್ರವಾಹಕ್ಕೆ ಕಾರಣಗಳನ್ನು ತಿಳಿದುಕೊಳ್ಳಲು ಸರ್ವೆ ಮಾಡಿಸಿತು. 1953 ಒತ್ತುವರಿಗಳು ಇದ್ದದ್ದು ಪತ್ತೆ ಆಯಿತು. ಇದರಲ್ಲಿ 1,300 ಒತ್ತುವರಿಗಳನ್ನು ತೆರವು ಮಾಡಲಾಯಿತು. 657 ಒತ್ತುವರಿಗಳು ಹಾಗೆಯೇ ಉಳಿದಿವೆ' ಎಂದು ಹೇಳಿದರು.

'ಬಿಜೆಪಿ ಸರ್ಕಾರ ಆ ಕೆಲಸವನ್ನು ಮುಂದುವರೆಸಲಿಲ್ಲ. ಈ ಕಾರ್ಯಕ್ಕಾಗಿ ಇಟ್ಟಿದ್ದ ಹಣವನ್ನು ರಸ್ತೆ ಕೆಲಸಕ್ಕಾಗಿ ಬಳಸಿದ್ದರಿಂದ ಒತ್ತುವರಿ ತೆರವು ಕಾರ್ಯ ನಿಂತುಹೋಯಿತು. ಒಟ್ಟು 400 ಕಿ.ಮೀ.ನಷ್ಟು ರಾಜಕಾಲುವೆ ಸರಿಪಡಿಸುವ ಕಾರ್ಯ ನಡೆದಿದ್ದು, ಇನ್ನೂ 452 ಕಿ.ಮೀ.ನಷ್ಟು ರಾಜಕಾಲುವೆ ಸರಿಪಡಿಸುವ ಕೆಲಸ ಆಗಬೇಕಾಗಿದೆ' ಎಂದು ಅವರು ತಿಳಿಸಿದರು.

'ಈ ಕುರಿತು ಧ್ವನಿ ಎತ್ತಿದ್ದ ಐಟಿ–ಬಿಟಿ ಉದ್ಯಮಿಗಳ ವಿರುದ್ಧ ಸಚಿವರು ಮಾತನಾಡಿದ್ದು ಸರಿಯಲ್ಲ. ಈ ವಲಯದಿಂದ ರಾಜ್ಯ ಮತ್ತು ದೇಶಕ್ಕೆ ಅತಿ ಹೆಚ್ಚು ತೆರಿಗೆ ಪಾವತಿ ಆಗುತ್ತಿದೆ. ಈ ಉದ್ಯಮಗಳಿಂದಾಗಿಯೇ ಜಾಗತಿಕವಾಗಿ ಬೆಂಗಳೂರು ಖ್ಯಾತಿ ಪಡೆದಿದೆ. ಉತ್ತಮ ಮೂಲಸೌಕರ್ಯಕ್ಕಾಗಿ ಬೇಡಿಕೆ ಸಲ್ಲಿಸುವ ಹಕ್ಕು ಅವರಿಗೆ ಇದೆ' ಎಂದು ರಾಮಲಿಂಗಾರೆಡ್ಡಿ ಪ್ರತಿಪಾದಿಸಿದರು.

ಕಾಂಗ್ರೆಸ್‌ನ ಕೃಷ್ಣಬೈರೇಗೌಡ ಮಾತನಾಡಿ, 'ಈ ಸರ್ಕಾರ ಬಂದಮೇಲೆ ಕೇವಲ 63 ಕಿ.ಮೀ.ಗಳಷ್ಟು ರಾಜಕಾಲುವೆ ಕೆಲಸ ನಡೆದಿದೆ. ಇದರಲ್ಲಿ 33.14 ಕಿ.ಮೀ. ಬಾಕ್ಸ್ ಮಾದರಿಯ ಮತ್ತು 30 ಕಿ.ಮೀ. 'ಯು' ಆಕೃತಿಯ ಕಾಮಗಾರಿ ನಡೆದಿದೆ. ಇನ್ನೂ ಸುಮಾರು 400 ಕಿ.ಮೀಗಳಷ್ಟು ರಾಜಕಾಲುವೆ ಒತ್ತುವರಿ ತೆರವುಗೊಳಿಸುವ ಕೆಲಸ ಆಗಬೇಕಿದೆ. ಈ ಕಾರ್ಯಕ್ಕಾಗಿ ಮೀಸಲಿಟ್ಟಿದ್ದ ₹1,200 ಕೋಟಿ ರಸ್ತೆ ಕಾರ್ಯಕ್ಕೆ ಬಳಸಿದ್ದು ಸರಿಯಲ್ಲ' ಎಂದರು.

ಕಾಂಗ್ರೆಸ್‌ನ ಆರ್.ವಿ.ದೇಶಪಾಂಡೆ, ಕೆ.ಜೆ.ಜಾರ್ಜ್, ರಿಜ್ವಾನ್ ಅರ್ಷದ್, ಎನ್.ಎ.ಹ್ಯಾರಿಸ್, ಬಿಜೆಪಿಯ ಸತೀಶ್ ರೆಡ್ಡಿ ಮತ್ತಿತರರು ಮಾತನಾಡಿದರು.

> **ಜಾಗತಿಕ ತಾಪಮಾನದಿಂದ ಬೆಂಗಳೂರಿನ ಮೇಲೆ ಆಗುವ ಪರಿಣಾಮಗಳು, ಅದಕ್ಕಾಗಿ ರೂಪಿಸಬೇಕಾದ ನೀತಿ ಮತ್ತು ದೀರ್ಘಾವಧಿ ಯೋಜನೆ ರೂಪಿಸುವ ಬಗ್ಗೆ ಗಮನಹರಿಸಬೇಕು**
> **ಸೌಮ್ಯ ರೆಡ್ಡಿ,** ಕಾಂಗ್ರೆಸ್ ಶಾಸಕಿ

> **ಪ್ರಕೃತಿ ಮತ್ತು ಮಾನವನ ಜುಗಲ್‌ಬಂದಿಯಲ್ಲಿ ಮಾನವ ಸೋತಿದ್ದಾನೆ. ಆದರೆ ಪಾಠ ಕಲಿತು ಮುನ್ನಡೆಯುವ ಸ್ಥಿತಿಯಲ್ಲಿ ಇಲ್ಲ ಎಂಬುದು ದುರ್ದೈವ**
> **ಎ. ಮಂಜನಾಥ್,** ಮಾಗಡಿ ಶಾಸಕ, ಜೆಡಿಎಸ್

₹125 ಕೋಟಿ ಮೌಲ್ಯದ ಭೂಮಿ ಖಾಸಗಿಯವರ ವಶ

ಸರ್ಕಾರಿ ಶಾಲೆಯ ಜಮೀನು ಈಗ ಬಡಾವಣೆ!

● ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಟ್ಟ ಹಲಸೂರಿನ ಸರ್ಕಾರಿ ಶಾಲೆಗೆ ಸೇರಿರುವ ₹125 ಕೋಟಿ ಮೌಲ್ಯದ ಭೂಮಿಯಲ್ಲಿ ಖಾಸಗಿ ವ್ಯಕ್ತಿಗಳು ಬಡಾವಣೆ ನಿರ್ಮಿಸಿದ್ದಾರೆ. ಈ ಭೂಮಿ ಶಾಲೆಗೆ ಸೇರಿದ್ದೆಂದು ಒಂಬತ್ತು ವರ್ಷದ ಹಿಂದೆಯೇ ಹೈಕೋರ್ಟ್ ಆದೇಶಿಸಿದ್ದರೂ ಶಿಕ್ಷಣ ಇಲಾಖೆ ಅದನ್ನು ಮರಳಿ ವಶಕ್ಕೆ ಪಡೆಯುವ ಗೋಜಿಗೆ ಹೋಗಿಲ್ಲ.

ಚಿಕ್ಕಜಾಲ ಹೋಬಳಿ ವ್ಯಾಪ್ತಿಯ ಪಾಪನಹಳ್ಳಿ ಸರ್ವೆ ನಂಬರ್ 26ರಲ್ಲಿ 4 ಎಕರೆ 26 ಗುಂಟೆ ಮತ್ತು ಸರ್ವೆ ನಂಬರ್ 46ರಲ್ಲಿ 5 ಎಕರೆ 14 ಗುಂಟೆ ಜಾಗವನ್ನು ಜೋಡಿದಾರ್ ಚಂದ್ರಶೇಖರಯ್ಯ ಎಂಬುವರು 1963ರಲ್ಲಿ ಬೆಟ್ಟಹಲಸೂರು ಸರ್ಕಾರಿ ಶಾಲೆಗೆ ದಾನವಾಗಿ ನೀಡಿದ್ದರು. ಅವರ ನಿಧನದ ಬಳಿಕ ಪುತ್ರಿ ಬಿ.ಸಿ. ನಿರ್ಮಲಕುಮಾರಿ ಅವರು ಜಾಗದ ಹಕ್ಕು ಮಂಡಿಸಿ ಬೆಂಗಳೂರು ಉತ್ತರ ತಾಲ್ಲೂಕಿನ ಭೂನ್ಯಾಯ ಮಂಡಳಿ ಮುಂದೆ ಅರ್ಜಿ ಸಲ್ಲಿಸಿದ್ದರು. ನ್ಯಾಯ ಮಂಡಳಿಯು ನಿರ್ಮಲ ಕುಮಾರಿ ಅವರ ಪರವಾಗಿ ಆದೇಶ ನೀಡಿತ್ತು.

ಈ ಆದೇಶ ಪ್ರಶ್ನಿಸಿ ಬೆಟ್ಟಹಲಸೂರು ಗ್ರಾಮಸ್ಥರು ಹೈಕೋರ್ಟ್ ಮೆಟ್ಟಿಲೇರಿದರು. ಭೂನ್ಯಾಯ ಮಂಡಳಿ ಆದೇಶವನ್ನು ತಳ್ಳಿ ಹಾಕಿದ ಹೈಕೋರ್ಟ್, ಈ ಜಾಗ ಶಾಲೆಗೆ ಸೇರಬೇಕು ಎಂದು ತೀರ್ಪು ನೀಡಿದೆ. ಈ ನಡುವೆ 4 ಎಕರೆ 26 ಗುಂಟೆ ಜಾಗವನ್ನು ಉಮ್ಮಾರೆಡ್ಡಿ ವೀರೇಂದ್ರಕುಮಾರ್ ಎಂಬುವರಿಗೂ, 5 ಎಕರೆ 14 ಗುಂಟೆ ಜಾಗವನ್ನು ಟೆಲಿಕಾಂ ಎಂಪ್ಲಾಯೀಸ್ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿಗೂ ಮಾರಾಟ ಮಾಡಲಾಗಿತ್ತು.

'ಈ ಜಾಗವನ್ನೂ ಸೇರಿಸಿಕೊಂಡು ಬಡಾವಣೆ ನಿರ್ಮಿಸಿದ್ದ ಸೊಸೈಟಿಯು ನಿವೇಶನ ಅಭಿವೃದ್ಧಿಪಡಿಸಿದೆ. ಹೈಕೋರ್ಟ್ ಆದೇಶದ ಅನ್ವಯ ಪಹಣಿಯಲ್ಲಿ ಸರ್ಕಾರಿ ಶಾಲೆ ಎಂದೇ ನಮೂದಾಗುತ್ತಿದೆ. ಆದ್ದರಿಂದ ಬಡಾವಣೆಯ ಒಳಭಾಗದಲ್ಲೇ ಇರುವ ಜಾಗಕ್ಕೆ ನಾವು ತಂತಿ ಬೇಲಿ ಮತ್ತು ಫಲಕ ಹಾಕಿಸಿದ್ದೆವು. ಈ ಭೂಮಿ ರಕ್ಷಣೆಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಗ್ರಾಮಸ್ಥರು ದೂರುತ್ತಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಲೋಹಿತಾಶ್ವ ರೆಡ್ಡಿ, 'ಈ ಜಾಗದ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿ ಅವರಿಂದ ಮಾಹಿತಿ ಪಡೆದುಕೊಳ್ಳುತ್ತೇನೆ' ಎಂದು ಹೇಳಿದರು.



ಸರ್ಕಾರಿ ಶಾಲೆ ಜಾಗದಲ್ಲೇ ಬಡಾವಣೆ ನಿರ್ಮಾಣವಾಗಿರುವುದು

–ಪ್ರಜಾವಾಣಿ ಚಿತ್ರ

'ಶಾಲೆ ಜಾಗ ರಕ್ಷಣೆಯಲ್ಲಿ ವಿಫಲ'

'ಒಟ್ಟಾರೆ ₹250 ಕೋಟಿಗೂ ಹೆಚ್ಚು ಬೆಲೆ ಬಾಳುವ ಜಾಗವನ್ನು ಭೂಮಾಫಿಯಾ ಕಬಳಿಸಿದೆ. ಜಾಗ ಇಂದಿಗೂ ಖಾಸಗಿಯವರ ವಶದಲ್ಲೇ ಇದೆ, ವಾಪಸ್ ಪಡೆಯುವ ಯಾವುದೇ ಪ್ರಯತ್ನ ನಡೆದಿಲ್ಲ' ಎಂದು ಬಿಜೆಪಿ ಮುಖಂಡ ಕೆ.ಎನ್. ಚಕ್ರಪಾಣಿ ದೂರಿದರು.

'ಉಮ್ಮಾರೆಡ್ಡಿ ವೀರೇಂದ್ರಕುಮಾರ್ ಎಂಬುವವರು 4 ಎಕರೆ 24 ಗುಂಟೆ ಖರೀದಿಸಿದ್ದರು. ಇವರು ಆಂಧ್ರಪ್ರದೇಶದ ರಾಜಕಾರಣಿ ಉಮ್ಮಾರೆಡ್ಡಿ ವೆಂಕಟೇಶ್ವರಲು ಅವರ ಮಗ. ಈ ಜಾಗ ಈಗಲೂ ಅವರ ಸ್ವಾಧೀನದಲ್ಲೇ ಇದೆ. 5 ಎಕರೆ 14 ಗುಂಟೆ ಜಾಗ ಟೆಲಿಕಾಂ ಹೌಸಿಂಗ್ ಸೊಸೈಟಿ ವಶದಲ್ಲೇ ಇದೆ' ಎಂದು ಹೇಳಿದರು. 'ಶಾಲೆ ಜಾಗ ಕಬಳಿಸಿದವರ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿಲ್ಲ' ಎಂದರು.



ಶಾಂಘೈ ಸಹಕಾರ ಸಂಘಟನೆಯ ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಗುರುವಾರ ಉಜ್ಬೇಕಿಸ್ತಾನದ ಸಮರ್‌ಕಂಡ್‌ಗೆ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿಮಾನನಿಲ್ದಾಣದಲ್ಲಿ ಸ್ವಾಗತ ಕೋರಲಾಯಿತು –ಪಿಟಿಐ ಚಿತ್ರ

ಬ್ಯಾಂಕ್ ಆಫ್ ಬರೋಡ ಎಂಎಸ್‌ಎಂಇ ಶಾಖೆ

ಬೆಂಗಳೂರು: ನಗರದ ಬೊಮ್ಮಸಂದ್ರದಲ್ಲಿ ಬ್ಯಾಂಕ್ ಆಫ್ ಬರೋಡ ತನ್ನ ಎಂಎಸ್‌ಎಂಇ ಶಾಖೆಯನ್ನು ಆರಂಭಿಸಿದ್ದು, ಇದನ್ನು ಆದಾಯ ತೆರಿಗೆ ಆಯುಕ್ತ ಸಂತಸರಣ್ ಮಂತ್ರಿ ಅವರು ಉದ್ಘಾಟಿಸಿದರು.

ಬ್ಯಾಂಕಿನ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕ ಸುಧಾಕರ ಡಿ. ನಾಯಕ್ ಮತ್ತು ಬ್ಯಾಂಕ್‌ನ ಇತರ ಅಧಿಕಾರಿಗಳು ಉದ್ಘಾಟನಾ ಕಾರ್ಯಕ್ರಮದಲ್ಲಿ ಇದ್ದರು ಎಂದು ಪ್ರಕಟಣೆ ತಿಳಿಸಿದೆ. ಈ ಶಾಖೆಯು ವಿದೇಶಿ ವಿನಿಮಯ ವಹಿವಾಟು ಸೇವೆಗಳನ್ನು ಕೂಡ ಒದಗಿಸುತ್ತದೆ.

ಒತ್ತುವರಿ ತೆರವು ಕಾರ್ಯಾಚರಣೆ: ಹೈಕೋರ್ಟ್ ಪ್ರಶ್ನೆ

ಪರ್ಯಾಯ ಪ್ರಾಧಿಕಾರ ತನಿಖೆ ನಡೆಸುತ್ತಿದೆಯೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಾಜಕಾಲುವೆ ಒತ್ತುವರಿಗೆ ಸಂಬಂಧಿದಂತೆ ಬೇರೆ ಯಾವುದಾದರೂ ಪ್ರಾಧಿಕಾರ ಪರ್ಯಾಯ ತನಿಖೆ ನಡೆಸುತ್ತಿದೆಯೇ' ಎಂದು ಹೈಕೋರ್ಟ್ ಬಿಬಿಎಂಪಿಯನ್ನು ಪ್ರಶ್ನಿಸಿದೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿ ಮುಚ್ಚುವುದಕ್ಕೆ ಸಂಬಂಧಿಸಿದಂತೆ ವಿಜಯನ್ ಮೆನನ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, 'ರಾಜಕಾಲುವೆ ಒತ್ತುವರಿ ಪತ್ತೆ ಮತ್ತು ತೆರವು ಕಾರ್ಯಾಚರಣೆ ಪ್ರಗತಿಯಲ್ಲಿದೆ. ಮಳೆ ನೀರು ಹರಿದುಹೋಗಲು ಅಗತ್ಯವಾದ ಎಲ್ಲಾ ವ್ಯವಸ್ಥೆ ಮಾಡಲಾಗುತ್ತಿದೆ' ಎಂದರು.

ಇದಕ್ಕೆ ನ್ಯಾಯಪೀಠ, 'ಒತ್ತುವರಿ ತೆರವಿಗೆ ಸಂಬಂಧಿಸಿದ ಪ್ರಕ್ರಿಯೆ ಸ್ಥಗಿತವಾಗಿದೆಯೇ' ಎಂದು ಪ್ರಶ್ನಿಸಿತಲ್ಲದೆ, 'ರಾಜಕಾಲುವೆ ಒತ್ತುವರಿಗೆ ಸಂಬಂಧಿಸಿದಂತೆ ಸಿಎಜಿ ವರದಿಯಲ್ಲಿ ಉಲ್ಲೇಖಿಸಲಾಗಿರುವ ಅಂಶಗಳ ಕುರಿತಂತೆ ಮಾಹಿತಿ ನೀಡಿ' ಎಂದು ನಿರ್ದೇಶಿಸಿತು.

'ರಸ್ತೆ ಗುಂಡಿಗಳನ್ನು ಮುಚ್ಚಲು ಯಂತ್ರವನ್ನು ಬಳಸುತ್ತಿರುವ ದೇಶದ ಮೊದಲ ಪಾಲಿಕೆ ಎಂದು ಬೀಗುತ್ತಿರುವ ಬಿಬಿಎಂಪಿ, ಇಟ್ಟಿಗೆ ಚೂರು, ಸಿಮೆಂಟ್ ಬ್ಲಾಕ್‌ಗಳ ಚೂರುಗಳಿಂದ ಗುಂಡಿ ಮುಚ್ಚುತ್ತಿರುವ ಮಾದರಿ ದುರದೃಷ್ಟಕರ' ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ. 'ಗುತ್ತಿಗೆದಾರರು ಸಾರ್ವಜನಿಕರ ಸೇವೆ ಮಾಡುತ್ತಿಲ್ಲ. ಬದಲಿಗೆ ಹಣ ಮಾಡುತ್ತಿದ್ದು, ಬಿಬಿಎಂಪಿ ಅವರನ್ನು ನಿಯಂತ್ರಿಸಬೇಕು' ಎಂದು ಮೌಖಿಕ ಎಚ್ಚರಿಕೆ ನೀಡಿ ವಿಚಾರಣೆ ಮುಂದೂಡಿದೆ.

ದೈಹಿಕ ಶಿಕ್ಷಣ ಶಿಕ್ಷಕರ ನೇಮಕಾತಿಗಾಗಿ ಪ್ರತಿಭಟನೆ

ಬೆಂಗಳೂರು: 'ಶಾಲಾ ಹಂತದಿಂದ ವಿಶ್ವವಿದ್ಯಾಲಯ ಹಂತದವರೆಗೆ ನಿಗದಿತ ಸಂಖ್ಯೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಬೇಕು' ಎಂದು ಒತ್ತಾಯಿಸಿ ಅಭ್ಯರ್ಥಿಗಳು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

'ಖೇಲ್ ಕರ್ನಾಟಕ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಸಂಘ'ದ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳ ಅಭ್ಯರ್ಥಿಗಳು ಪಾಲ್ಗೊಂಡಿದ್ದರು.

'ಫಿಟ್ ಇಂಡಿಯಾ, ಅಂತರರಾಷ್ಟ್ರೀಯ ಯೋಗ ದಿನ ಹಾಗೂ ಖೇಲೊ ಇಂಡಿಯಾದಂಥ ಹಲವು ಯೋಜನೆಗಳನ್ನು ರೂಪಿಸಿರುವ ಸರ್ಕಾರ, ಆರೋಗ್ಯಯುತ ಭಾರತ ನಿರ್ಮಾಣಕ್ಕೆ ಪಣ ತೊಟ್ಟಿದೆ. ಆದರೆ, ದೈಹಿಕ ಶಿಕ್ಷಣದ ಶಿಕ್ಷಕರ ನೇಮಕಾತಿಗೆ ಮಾತ್ರ ಹಿಂದೇಟು ಹಾಕುತ್ತಿದೆ' ಎಂದು ಪ್ರತಿಭಟನಕಾರರು ದೂರಿದರು.

'ದೈಹಿಕ ಶಿಕ್ಷಣದಲ್ಲಿ ವ್ಯಾಸಂಗ ಮಾಡಿರುವ ಸಾವಿರಾರು ಮಂದಿ ನೇಮಕಾತಿಗಾಗಿ ಕಾಯುತ್ತಿದ್ದಾರೆ. ವಯಸ್ಸು ಮೀರುವ ಆತಂಕವೂ ಅವರಲ್ಲಿದೆ. ಹೀಗಾಗಿ ದೈಹಿಕ ಶಿಕ್ಷಣದ ಶಿಕ್ಷಕರು, ಉಪನ್ಯಾಸಕರು, ನಿರ್ದೇಶಕರು, ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ತ್ವರಿತವಾಗಿ ನೇಮಕ ಮಾಡಿಕೊಳ್ಳಬೇಕು' ಎಂದು ಆಗ್ರಹಿಸಿದರು.



ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಸಿದ್ದರಾಮಯ್ಯ ಭೇಟಿ ನೀಡಿ ಮನವಿ ಆಲಿಸಿದರು. ಸತೀಶ್ ಜಾರಕಿಹೊಳಿ, ಮಾವಳ್ಳಿ ಶಂಕರ್, ಷಡಾಕ್ಷರಿಮುನಿ ಸ್ವಾಮೀಜಿ, ಹೆಣ್ಣೂರು ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯ ಗೋವಿಂದರಾಜು ಇದ್ದರು

ಪಿಟಿಸಿಎಲ್ ಕಾಯ್ದೆ: ಸಿದ್ದರಾಮಯ್ಯ ಭರವಸೆ

'ಅಧಿಕಾರಕ್ಕೆ ಬಂದರೆ ತಿದ್ದುಪಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಯನ್ನು (ಪಿಟಿಸಿಎಲ್) ದಲಿತರಿಗೆ ಅನುಕೂಲ ಆಗುವಂತೆ ತಿದ್ದುಪಡಿ ಮಾಡಲಾಗುವುದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಭರವಸೆ ನೀಡಿದರು.

ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಮೂರು ದಿನಗಳಿಂದ ನಡೆಯುತ್ತಿರುವ ಅಹೋರಾತ್ರಿ ಧರಣಿ ಸ್ಥಳಕ್ಕೆ ಭೇಟಿ ನೀಡಿದ ಬಳಿಕ ಮಾತನಾಡಿದ ಅವರು ಹೀಗೆ ಹೇಳಿದರು. 'ಭೂಮಿ ಕಳೆದುಕೊಂಡ ನಿಮ್ಮ ಹೋರಾಟ ನ್ಯಾಯಬದ್ಧವಾಗಿದೆ. ನಿಮ್ಮ ಹೋರಾಟಕ್ಕೆ ನಮ್ಮ ಬೆಂಬಲ ಇದೆ' ಎಂದು ಹೇಳಿದರು.


ಮುಖ್ಯಾಂಶಗಳು

- ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದಿಂದ ತಿದ್ದುಪಡಿಗೆ ಆಗ್ರಹ
- ಮೂರು ದಿನಗಳಿಂದ ನಡೆಯುತ್ತಿರುವ ಅಹೋರಾತ್ರಿ ಧರಣಿ

'ತುಂಡು ಭೂಮಿ ಹೊಂದಿರುವ ದಲಿತರ ಪರವಾಗಿ ಯಾರೂ ನ್ಯಾಯ ನೀಡುತ್ತಿಲ್ಲ. ದಲಿತರಿಗೆ ಅನ್ಯಾಯವಾದಾಗ ಅವರ ಪರ ಎಲ್ಲರೂ ಧ್ವನಿ ಎತ್ತಬೇಕು' ಎಂದರು.

ಹಿರಿಯೂರಿನ ಆದಿಜಾಂಬವ ಕೋಡಿಹಳ್ಳಿ ಮಠದ ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, 'ಭೂಮಿ ಕಳೆದುಕೊಂಡ ದಲಿತರಿಗೆ ವಾಪಸ್ ಕೊಡಿಸುವ ಸಂಬಂಧ ಪಿಟಿಸಿಎಲ್ ಕಾಯ್ದೆಗೆ ಸಮಗ್ರ ತಿದ್ದುಪಡಿ ತರಲೇಬೇಕು. ದಲಿತರು ಸ್ವಾಭಿಮಾನದಿಂದ ಮತ್ತು ಸಶಕ್ತರಾಗಿ ಬದುಕುವಂತಾಗಬೇಕು. ಈಗ ಆಗುತ್ತಿರುವ ಅನ್ಯಾಯ ಕೊನೆಗಾಣಿಸಲು ದಲಿತರು ಒಂದಾಗಿ ಹೋರಾಟ ನಡೆಸುವ ಅಗತ್ಯವಿದೆ' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಪ್ರಜಾ ಪರಿವರ್ತನ ವೇದಿಕೆ ರಾಜ್ಯಾಧ್ಯಕ್ಷ ಬಿ. ಗೋಪಾಲ್, ಹೆಣ್ಣೂರು ಶ್ರೀನಿವಾಸ್ ಇದ್ದರು.



ಸಂಕ್ಷಿಪ್ತ ಸುದ್ದಿ

ಮಂತ್ರಿ ವಿರುದ್ಧದ ತನಿಖೆಗೆ ತಡೆ

ಬೆಂಗಳೂರು: ಕಡಿಮೆ ಬೆಲೆಗೆ ಫ್ಲ್ಯಾಟ್ ವಿತರಿಸುವುದಾಗಿ ತಿಳಿಸಿ ಸಾರ್ವಜನಿಕರಿಂದ ಹಣ ಪಡೆದು ವಂಚಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಮಂತ್ರಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಸುಶೀಲ್ ಪಾಂಡುರಂಗ ಮಂತ್ರಿ ಮತ್ತು ಅವರ ಪುತ್ರ ಪ್ರತೀಕ್ ಮಂತ್ರಿ ವಿರುದ್ಧ ಅಪರಾಧ ತನಿಖಾ ದಳ (ಸಿಐಡಿ) ಕೈಗೊಂಡಿರುವ ಎಲ್ಲಾ ಪ್ರಕ್ರಿಯೆಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಸುಶೀಲ್ ಪಾಂಡುರಂಗ ಮಂತ್ರಿ ಮತ್ತು ಪ್ರತೀಕ್ ಮಂತ್ರಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಇದೇ ಮಾದರಿಯ ಆರೋಪಗಳಿಗೆ ಸಂಬಂಧಿಸಿದ ಇತರ 14 ಪ್ರಕರಣಗಳಲ್ಲಿ, ಮಂತ್ರಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಕಂಪನಿಯ ನಿರ್ದೇಶಕರಾದ ಸುಶೀಲ್ ಪಾಂಡುರಂಗ ಮಂತ್ರಿ ಮತ್ತು ಮಾಜಿ ನಿರ್ದೇಶಕ ಪ್ರತೀಕ್ ಮಂತ್ರಿ ವಿರುದ್ಧದ ಕಾನೂನು ಪ್ರಕ್ರಿಯೆಗಳಿಗೆ ಈಗಾಗಲೇ ಹೈಕೋರ್ಟ್ ತಡೆ ನೀಡಿರುವುದನ್ನು ಪರಿಗಣಿಸಿ ನ್ಯಾಯಪೀಠ ಈ ತಡೆ ಆದೇಶ ನೀಡಿದೆ.

₹ 35 ಲಕ್ಷ ಮೌಲ್ಯದ ಕೊಕೇನ್ ಜಪ್ತಿ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದಲ್ಲಿ ತೊಡಗಿದ್ದ ಮೂವರು ಆರೋಪಿಗಳನ್ನು ಪೂರ್ವ ವಿಭಾಗದ ಪೊಲೀಸರು ಬಂಧಿಸಿದ್ದು, ₹ 35 ಲಕ್ಷ ಮೌಲ್ಯದ ಕೊಕೇನ್ ಜಪ್ತಿ ಮಾಡಿದ್ದಾರೆ.

'ಹೆಣ್ಣೂರು ಠಾಣೆಯ ಪ್ರಕೃತಿ ಲೇಔಟ್‌ನ ಮನೆಯಲ್ಲಿ ಡ್ರಗ್ಸ್ ಬಚ್ಚಿಟ್ಟುಕೊಂಡು ಮಾರುತ್ತಿದ್ದ ಆಫ್ರಿಕಾ ಪ್ರಜೆಗಳಾದ ಕೋನಡೆ ಮೈಕ್ ಹಾಗೂ ಟೌರೆ ಸ್ಯಾಮ್ಯುಯಲ್ ಎಂಬುವರನ್ನು ಬಂಧಿಸಲಾಗಿದೆ. ಇವರಿಂದ ₹ 20 ಲಕ್ಷ ಮೌಲ್ಯದ 100 ಗ್ರಾಂ ಕೊಕೇನ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ಸತ್ಯ (28) ಎಂಬಾತನನ್ನು ಬಂಧಿಸಲಾಗಿದ್ದು, ಈತನ ಬಳಿ ₹ 15 ಲಕ್ಷ ಮೌಲ್ಯದ ಕೊಕೇನ್ ಪತ್ತೆ ಆಗಿದೆ. ಆಫ್ರಿಕಾ ಪ್ರಜೆಗಳಿಂದ ಡ್ರಗ್ಸ್ ಖರೀದಿಸುತ್ತಿದ್ದ ಈತ, ಪರಿಚಯಸ್ಥ ಗ್ರಾಹಕರಿಗೆ ಮಾರುತ್ತಿದ್ದ. ವಿಜಿನಾಪುರದಲ್ಲಿ ಡ್ರಗ್ಸ್ ಮಾರುತ್ತಿದ್ದ ವೇಳೆಯಲ್ಲಿ ಸಿಕ್ಕಿಬಿದ್ದ' ಎಂದು ತಿಳಿಸಿದರು.

'ಬಿಟ್ ಕಾಯಿನ್: ಕರ್ನಾಟಕದ ಪಾತ್ರ ಇಲ್ಲ'

ಬೆಂಗಳೂರು: 'ಬಿಟ್ ಕಾಯಿನ್ ಪ್ರಕರಣದಲ್ಲಿ ಕರ್ನಾಟಕ ಅಥವಾ ಭಾರತದ ಜತೆ ಸಂಬಂಧ ಇದೆ ಎಂದು ಅಮೆರಿಕ ಸರ್ಕಾರ ಹೇಳಿಲ್ಲ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಟಿ.ಎ. ಶರವಣ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಬಿಟ್ ಕಾಯಿನ್‌ಗೆ ಸಂಬಂಧಿಸಿದಂತೆ ಅಮೆರಿಕದಲ್ಲೂ ತನಿಖೆಗಳು ನಡೆದಿವೆ. ಇಲ್ಲಿನ ಪ್ರಕರಣದ ಆರೋಪಿ ಶ್ರೀಕಿ ಹ್ಯಾಕಿಂಗ್ ಮಾಡಿ ಹಲವರಿಗೆ ವಂಚನೆ ಮಾಡಿರುವುದು ಗೊತ್ತಾಗಿದೆ' ಎಂದು ತಿಳಿಸಿದರು.

ಟಿ.ಎ. ಶರವಣ ಮಾತನಾಡಿ, 'ಈ ಪ್ರಕರಣದ ತನಿಖೆ ಮಾಡುವ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಆರೋಪಿಗಳು ಅಂತರರಾಷ್ಟ್ರೀಯ ಕ್ರಿಮಿನಲ್‌ಗಳು. ಈ ಬಗ್ಗೆ ಸಮಗ್ರ ತನಿಖೆ ಮಾಡಬೇಕಾಗಿದೆ' ಎಂದು ಆಗ್ರಹಿಸಿದರು.

ಸಿಂಧುತ್ವ ಪ್ರಮಾಣಪತ್ರಕ್ಕೆ ಲಂಚ: ಲೋಕಾಯುಕ್ತ ಪೊಲೀಸರ ದಾಳಿ

ಉಪ ತಹಶೀಲ್ದಾರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನಿನ ಒಡೆತನಕ್ಕೆ ಸಂಬಂಧಿಸಿದ ಸಿಂಧುತ್ವ ಪ್ರಮಾಣ ಪತ್ರ ನೀಡಲು ₹ 45,000 ಲಂಚ ಪಡೆಯುತ್ತಿದ್ದ ಬೆಂಗಳೂರು ಉತ್ತರ ತಾಲ್ಲೂಕು ಕಚೇರಿಯ ಉಪ ತಹಶೀಲ್ದಾರ್ ಪಿ.ಎಂ. ಶ್ರೀಕಾಂತ್ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ರಘುಶಂಕರ್ ಎಂಬುವವರು ಯಶವಂತಪುರ ಹೋಬಳಿ ಕೊಡಿಗೆಹಳ್ಳಿಯಲ್ಲಿ ಹೊಂದಿರುವ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ವಾಧೀನಪಡಿಸಿಕೊಂಡಿತ್ತು. ಈ ಜಮೀನಿನ ಬಾಬ್ತು ಪರಿಹಾರದ ಮೊತ್ತ ಪಡೆಯಲು ಜಮೀನು ಮಾಲೀಕರು ಸಿಂಧುತ್ವ ಪ್ರಮಾಣಪತ್ರ ಸಲ್ಲಿಸಬೇಕಿತ್ತು. ಇದಕ್ಕಾಗಿ ಸಿಂಧುತ್ವ ಪ್ರಮಾಣಪತ್ರ ಕೋರಿ ಅರ್ಜಿ ಸಲ್ಲಿಸಿದ್ದರು.

ಶ್ರೀಕಾಂತ್ ಅವರನ್ನು ಭೇಟಿಮಾಡಿದ್ದ ರಘುಶಂಕರ್, ಸಿಂಧುತ್ವ ಪ್ರಮಾಣಪತ್ರ ನೀಡುವಂತೆ ಮನವಿ ಮಾಡಿದ್ದರು. ₹ 13 ಲಕ್ಷ ಲಂಚ ನೀಡುವಂತೆ ಅಧಿಕಾರಿ ಆರಂಭದಲ್ಲಿ ಬೇಡಿಕೆ ಇಟ್ಟಿದ್ದರು. ನಂತರ ಇಬ್ಬರ ನಡುವೆ ಮಾತುಕತೆ ನಡೆದಿದ್ದು, ₹ 45,000 ನೀಡಿದರೆ ಪ್ರಕ್ರಿಯೆ ಪೂರ್ಣಗೊಳಿಸುವುದಾಗಿ ಆರೋಪಿ ಅಧಿಕಾರಿ ಹೇಳಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ಸಲ್ಲಿಸಿದ್ದರು.

ಆರೋಪಿಯ ಸೂಚನೆಯಂತೆ ಉಪ ತಹಶೀಲ್ದಾರ್ ಕಚೇರಿಗೆ ಗುರುವಾರ ತೆರಳಿದ ದೂರುದಾರರು ಲಂಚದ ಹಣ ತಲುಪಿಸಿದರು. ತಕ್ಷಣ ದಾಳಿ ಮಾಡಿದ ಲೋಕಾಯುಕ್ತ ಪೊಲೀಸರು ಶ್ರೀಕಾಂತ್ ಅವರನ್ನು ಬಂಧಿಸಿದರು.

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಸೂಚನೆಯಂತೆ ಸಂಸ್ಥೆಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ಮತ್ತು ಬೆಂಗಳೂರು ನಗರ ಎಸ್‌ಪಿ ಅಶೋಕ್ ಕೆ.ವಿ. ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಶಂಕರ ನಾರಾಯಣ ನೇತೃತ್ವದ ತಂಡ ಈ ಕಾರ್ಯಾಚರಣೆ ನಡೆಸಿದೆ. ಪ್ರಾಥಮಿಕ ತನಿಖೆ ಬಳಿಕ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಲೋಕಾಯುಕ್ತಕ್ಕೆ ಎಸಿಬಿ ಅಧಿಕಾರಿಗಳ ಮುಂದುವರಿಕೆ: ನ್ಯಾ. ಹೆಗ್ಡೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ದಲ್ಲಿದ್ದ ಅಧಿಕಾರಿಗಳನ್ನು ಕರ್ನಾಟಕ ಲೋಕಾಯುಕ್ತದಲ್ಲಿ ಮುಂದುವರಿಸುವಂತೆ ಪ್ರಸ್ತಾವ ಸಲ್ಲಿಸಿರುವುದಕ್ಕೆ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗ್ಡೆ ಆಕ್ಷೇಪ ವ್ಯಕ್ತಪಡಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಲೋಕಾಯುಕ್ತಕ್ಕೆ ಯಾವುದೇ ಅಧಿಕಾರಿಗಳನ್ನು ನೇಮಿಸಿಕೊಳ್ಳುವ ಮುಂಚೆ ಲೋಕಾಯುಕ್ತ ನ್ಯಾಯಮೂರ್ತಿಯವರು ಪೂರ್ವಾಪರ ತಿಳಿದು ಮುಂದುವರಿಯಬೇಕು. ಸರ್ಕಾರ ಯಾವುದೇ ಅಧಿಕಾರಿಗಳನ್ನು ತನ್ನ ಇಷ್ಟಕ್ಕೆ ಅನುಗುಣವಾಗಿ ನೇಮಿಸಿಕೊಳ್ಳದೆ ಲೋಕಾಯುಕ್ತ ನ್ಯಾಯಮೂರ್ತಿಯವರ ಅನುಮತಿ ಪಡೆದೇ ನಿಯೋಜಿಸಬೇಕು' ಎಂದರು.

'ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ನೀಡಬೇಕು. ಸರ್ಕಾರಿ ನೌಕರರ ವಿರುದ್ಧ ಭ್ರಷ್ಟಾಚಾರ ಆರೋಪ ಕೇಳಿಬಂದಾಗ ಅವರ ವಿರುದ್ಧ ಎಫ್‌ಐಆರ್ ದಾಖಲಿಸುವುದಕ್ಕೆ ಮುಂಚೆ ಮೇಲಧಿಕಾರಿಗಳಿಂದ ಅನುಮತಿ ಪಡೆಯುವ ಬ್ರಿಟಿಷರ ಕಾಲದ ನಿಯಮವನ್ನೂ ರದ್ದುಗೊಳಿಸಬೇಕು. ಖಾಸಗಿಯವರಂತೆ ಸರ್ಕಾರಿ ನೌಕರರೂ ಭ್ರಷ್ಟಾಚಾರದಲ್ಲಿ ಭಾಗಿಯಾಗುತ್ತಾರೆ. ಖಾಸಗಿಯವರಿಗೆ ಅನ್ವಯವಾಗದ ನಿಯಮ ಸರ್ಕಾರಿ ನೌಕರರಿಗೆ ಮಾತ್ರ ಅನ್ವಯಿಸುವುದು ಏಕೆ' ಎಂದು ಅವರು ಪ್ರಶ್ನಿಸಿದರು.

ಗೋವಾದಿಂದ ಬಂದು ಕಳ್ಳತನ

ಬೆಂಗಳೂರು: ಅಪರಾಧ ಪ್ರಕರಣದಲ್ಲಿ ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರಬಂದು ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪಿ ರಾಜು ಸೆಲ್ವರಾಜ್ ಅಲಿಯಾಸ್ ತಂಗ (36) ಎಂಬುವರನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

'ಶಿವಮೊಗ್ಗ ಜಿಲ್ಲೆಯ ಸಾಗರ್ ತಾಲ್ಲೂಕಿನ ಕಾರ್ಗಲ್‌ನ ಸೆಲ್ವರಾಜ್, ಗೋವಾದ ಮಾಪ್ಸಾದಲ್ಲಿ ನೆಲೆಸಿದ್ದ. ಆಗಾಗ ರಾಜ್ಯಕ್ಕೆ ಬಂದು ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದ. ಈತನಿಂದ ₹ 3.50 ಲಕ್ಷ ಮೌಲ್ಯದ 74 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾಣಸವಾಡಿ ಠಾಣೆ ವ್ಯಾಪ್ತಿಯ ಮನೆಯೊಂದರ ಬೀಗ ಮುರಿದು ಕಳ್ಳತನ ಮಾಡಲಾಗಿತ್ತು. ಈ ಸಂಬಂಧ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿ ಸೆಲ್ವರಾಜ್ ಸಿಕ್ಕಿಬಿದ್ದ. ಖಾನಾಪೂರ, ಯಲ್ಲಾಪುರ, ಬೆಳಗಾವಿ ಹಾಗೂ ಗದಗ ಠಾಣೆಗಳ ವ್ಯಾಪ್ತಿಯಲ್ಲೂ ಈತ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ.'

'ಗೋವಾದ ಹಲವು ಮನೆಗಳಲ್ಲೂ ಆರೋಪಿ ಕಳ್ಳತನ ಮಾಡಿದ್ದು, ಅಲ್ಲಿಯ ಪೊಲೀಸರು ಸಹ ಈತನನ್ನು ಹುಡುಕುತ್ತಿದ್ದರು' ಎಂದು ತಿಳಿಸಿವೆ.

ಗೋವಿಂದಪುರ ಠಾಣೆ ವ್ಯಾಪ್ತಿಯಲ್ಲಿ ಘಟನೆ

'ಮಗಳ ಆರೋಗ್ಯ ಮುಖ್ಯ. ನಮಗೆ ನಾಯಿ ಬೇಡ. ಯಾರಿಗಾದರೂ ಕೊಡಿ' ಎಂದಿದ್ದ ದಿವ್ಯಾ. ಅಷ್ಟಕ್ಕೇ ಕೋಪಗೊಂಡು ಗಲಾಟೆ ಮಾಡಿದ್ದ ಶ್ರೀನಿವಾಸ್.

'ನಾಯಿ' ಜಗಳ: ಮಗಳ ಕೊಂದು ತಾಯಿ ಆತ್ಮಹತ್ಯೆ

ಬೆಂಗಳೂರು: ಗೋವಿಂದಪುರ ಠಾಣೆ ವ್ಯಾಪ್ತಿಯಲ್ಲಿ ದಿವ್ಯಾ (36) ಹಾಗೂ ಅವರ ಮಗಳು ರಿದ್ಯಾ (13) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಅವರ ಮೃತದೇಹಗಳು ಮನೆಯಲ್ಲಿ ಪತ್ತೆಯಾಗಿವೆ.

'ನಾಯಿ ಸಾಕುವ ವಿಚಾರವಾಗಿ ಮನೆಯಲ್ಲಿ ನಡೆದ ಗಲಾಟೆಯಿಂದ ನೊಂದಿದ್ದರು ಎನ್ನಲಾದ ದಿವ್ಯಾ, ಮಗಳು ರಿದ್ಯಾಳನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ದಿವ್ಯಾ ಅವರ ಪತಿ ಶ್ರೀನಿವಾಸ್ ಅವರನ್ನು ವಶಕ್ಕೆ ಪಡೆದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳ ಹೇಳಿವೆ.

'ಖಾಸಗಿ ಕಂಪನಿ ಉದ್ಯೋಗಿ ಶ್ರೀನಿವಾಸ್ ಹಾಗೂ ಪತ್ನಿ ದಿವ್ಯಾ, ಮಗಳು ರಿದ್ಯಾ ಜೊತೆ ವಾಸವಿದ್ದರು. ಮನೆಯಲ್ಲಿ ನಾಯಿಯೊಂದನ್ನು ಸಾಕಿದ್ದರು. ಮಗಳಿಗೆ ಇತ್ತೀಚೆಗೆ ಉಸಿರಾಟದ ಸಮಸ್ಯೆ ಉಂಟಾಗಿತ್ತು. ಚಿಕಿತ್ಸೆಗೆಂದು ವೈದ್ಯರ ಬಳಿ ಕರೆದೊಯ್ಯಲಾಗಿತ್ತು. ತಪಾಸಣೆ ನಡೆಸಿದ್ದ ವೈದ್ಯರು, 'ಮನೆಯಲ್ಲಿರುವ ನಾಯಿಯಿಂದ ಮಗಳಿಗೆ ಉಸಿರಾಟ ಸಮಸ್ಯೆಯಾಗುತ್ತಿದೆ. ನಾಯಿಯನ್ನು ಮನೆಯಲ್ಲಿ ಇರಿಸಿಕೊಳ್ಳಬೇಡಿ' ಎಂದಿದ್ದರು.

'ನಾಯಿ ಕೊಡುವುದಿಲ್ಲ' ಎಂದು ಗಲಾಟೆ ಮಾಡಿದ್ದ ಶ್ರೀನಿವಾಸ್, ಪತ್ನಿ ಹಾಗೂ ಮಗಳಿಗೂ ನಿಂದಿಸಿದ್ದರೆಂದು ಗೊತ್ತಾಗಿದೆ. ಗಲಾಟೆಯಿಂದ ನೊಂದ ದಿವ್ಯಾ, ಸೆ. 11ರಂದು ರಾತ್ರಿ ಮಗಳನ್ನು ಕೊಂದು, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಜಿಲ್ಲಾ ರಂಗಮಂದಿರ: ಅನುದಾನಕ್ಕೆ 3 ಕೋಟಿ ರೂಪಾಯಿ ಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ರಂಗಮಂದಿರಗಳ ನಿರ್ಮಾಣಕ್ಕೆ ತಲಾ ₹ 3 ಕೋಟಿ ಮತ್ತು ತಾಲ್ಲೂಕು ರಂಗಮಂದಿರಗಳ ನಿರ್ಮಾಣಕ್ಕೆ ತಲಾ ₹ 1 ಕೋಟಿ ಅನುದಾನವನ್ನು ಮಾತ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೀಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯ ಎಸ್.ಎ. ರವೀಂದ್ರನಾಥ್ ಪ್ರಶ್ನೆಗೆ ಗುರುವಾರ ಉತ್ತರ ನೀಡಿದ ಅವರು, 'ಜಿಲ್ಲಾ ರಂಗಮಂದಿರ ಮತ್ತು ತಾಲ್ಲೂಕು ರಂಗಮಂದಿರ ನಿರ್ಮಾಣಕ್ಕೆ ಆರಂಭದ ಅಂದಾಜುಪಟ್ಟಿಯ ಹಲವು ಪಟ್ಟು ಅನುದಾನ ಪಡೆಯುತ್ತಿರುವ ಉದಾಹರಣೆಗಳಿವೆ. ಮುಂದಿನ ದಿನಗಳಲ್ಲಿ ಅನುಕ್ರಮವಾಗಿ ₹ 3 ಕೋಟಿ ಮತ್ತು ₹ 1 ಕೋಟಿಯನ್ನು ಮಾತ್ರ ಇಲಾಖೆಯಿಂದ ನೀಡಲಾಗುವುದು. ಹೆಚ್ಚಿನ ಹಣ ಬೇಕಿದ್ದರೆ ಇತರ ಮೂಲಗಳಿಂದ ಭರಿಸಬೇಕು' ಎಂದರು.

'2010ರಲ್ಲಿ ₹ 3.5 ಕೋಟಿ ವೆಚ್ಚದಲ್ಲಿ ದಾವಣಗೆರೆ ಜಿಲ್ಲಾ ರಂಗಮಂದಿರ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ನಂತರ ಅಂದಾಜು ಪಟ್ಟಿಯನ್ನು ₹ 4.5 ಕೋಟಿಗೆ ಹೆಚ್ಚಿಸಲಾಗಿತ್ತು. ಈಗ ಇಲಾಖೆಯ ಪೂರ್ವಾನುಮತಿ ಇಲ್ಲದೆ ₹ 8.5 ಕೋಟಿ ವೆಚ್ಚದ ಪ್ರಸ್ತಾವ ಸಲ್ಲಿಕೆಯಾಗಿದೆ. ಹೀಗೆ ವೆಚ್ಚ ಏರಿಕೆಯಾಗುತ್ತಾ ಹೋದರೆ ಹಣ ಎಲ್ಲಿಂದ ತರುವುದು' ಎಂದು ಕೇಳಿದರು.

ಮಧ್ಯ ಪ್ರವೇಶಿಸಿದ ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್, 'ನನ್ನ ಕ್ಷೇತ್ರದಲ್ಲಿ ರಾಣಿ ಅಬ್ಬಕ್ಕ ಭವನ ನಿರ್ಮಾಣಕ್ಕೆ ಮೊದಲು ₹ 4 ಕೋಟಿ ವೆಚ್ಚದ ಅಂದಾಜು ಪಟ್ಟಿ ಇತ್ತು. ನಂತರ ₹ 8 ಕೋಟಿಗೆ ಹೆಚ್ಚಿಸಲಾಗಿತ್ತು. ಈಗ ₹ 12 ಕೋಟಿಗೆ ಬೇಡಿಕೆ ಸಲ್ಲಿಸಲಾಗಿದೆ' ಎಂದರು.

ಬಿಜೆಪಿಯ ಸಿ.ಟಿ. ರವಿ ಮಾತನಾಡಿ, 'ದಾವಣಗೆರೆ ಜಿಲ್ಲಾ ರಂಗಮಂದಿರದ ವಿನ್ಯಾಸವೇ ಸರಿ ಇಲ್ಲ. ನಾನು ಸಚಿವನಾಗಿದ್ದ ಅವಧಿಯಲ್ಲಿ ಖುದ್ದಾಗಿ ವೀಕ್ಷಿಸಿದ್ದೇನೆ. ಉಗ್ರಾಣದ ರೀತಿಯಲ್ಲಿ ರಂಗಮಂದಿರ ಕಟ್ಟಡ ನಿರ್ಮಿಸಲಾಗಿದೆ. ಅದಕ್ಕೆ ಇನ್ನೂ ಅನುದಾನ ನೀಡಬೇಕೆ ಪರಿಶೀಲಿಸಿ' ಎಂದರು.

ಕಾರ್ಯಾಂಗದ ವಿರುದ್ಧ ಅಸಮಾಧಾನ

'ಸರ್ಕಾರದ ಕೆಲಸಗಳ ವಿಚಾರದಲ್ಲಿ ಎಲ್ಲದಕ್ಕೂ ಶಾಸಕರಷ್ಟೇ ಹೊಣೆ ಎಂಬ ಭಾವನೆ ಎಲ್ಲ ಕಡೆಯೂ ಇದೆ. ಕಾರ್ಯಾಂಗದವರು ಯಾವುದಕ್ಕೂ ಹೊಣೆಗಾರರಲ್ಲ ಎಂಬ ಭಾವನೆ ಬೆಳೆದಿದೆ. ಮಾಧ್ಯಮಗಳು, ಜನರು ಎಲ್ಲರೂ ಇದೇ ರೀತಿ ನೋಡುತ್ತಿದ್ದಾರೆ' ಎಂದು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಸಮಾಧಾನ ವ್ಯಕ್ತಪಡಿಸಿದರು.

ರಂಗಮಂದಿರಗಳ ವೆಚ್ಚ ಏರಿಕೆ ಕುರಿತು ಪ್ರಶ್ನೋತ್ತರ ವೇಳೆಯಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, 'ನಮ್ಮನ್ನೇ ಮೊದಲ ಆರೋಪಿ ಎನ್ನಲಿ. ಆದರೆ, ಎರಡನೇ ಅಥವಾ ಮೂರನೇ ಆರೋಪಿಗಳು ಕಾರ್ಯಾಂಗದವರು ಆಗಬೇಕಲ್ಲವೆ? ಅವರೆಲ್ಲರೂ ಸುರಕ್ಷಿತವಾಗಿ ಅವಧಿ ಮುಗಿಸಿ ನಿವೃತ್ತರಾಗುತ್ತಾರೆ' ಎಂದರು.



ಬಹುಮಾನ ವಿತರಣೆ... ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ವತಿಯಿಂದ ಎಂಜಿನಿಯರ್ಸ್ ದಿನದ ಪ್ರಯುಕ್ತ ಹಮ್ಮಿಕೊಂಡಿದ್ದ 'ಸ್ಮಾರ್ಟ್ ಎಂಜಿನಿಯರ್ ಫಾರ್ ಎ ಬೆಟರ್ ವರ್ಲ್ಡ್' ಸ್ಪರ್ಧೆಯಲ್ಲಿ ದಯಾನಂದ ಸಾಗರ್ ಕಾಲೇಜಿನ ವಿದ್ಯಾರ್ಥಿ ಪೃಥ್ವಿ ಎನ್. ಪ್ರಭು ಪ್ರಥಮ ಸ್ಥಾನ ಪಡೆದರು. ಸಚಿವ ಮುರುಗೇಶ್ ನಿರಾಣಿ ಪ್ರಶಸ್ತಿಪತ್ರ ಮತ್ತು ನಗದು ಬಹುಮಾನ ವಿತರಣೆ ಮಾಡಿದರು.

ಸಾಫ್ಟ್‌ವೇರ್ ಎಂಜಿನಿಯರ್ ಸುಲಿಗೆ: ಅಪರಾಧಿಗೆ 7 ವರ್ಷ ಜೈಲು ಶಿಕ್ಷೆ

ಬೆಂಗಳೂರು: ಮಾತನಾಡಲು ಮೊಬೈಲ್ ಕೊಡಲಿಲ್ಲವೆಂಬ ಕಾರಣಕ್ಕೆ ಚಾಕು ತೋರಿಸಿ ಕೊಲೆ ಬೆದರಿಕೆಯೊಡ್ಡಿ ಚಿನ್ನದ ಸರ ಸುಲಿಗೆ ಮಾಡಿದ್ದ ಅಪರಾಧಿ ದೀನದಯಾಳ್ ಅಲಿಯಾಸ್ ದೀನ್ ಎಂಬಾತನಿಗೆ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿ ನಗರದ ನ್ಯಾಯಾಲಯ ಆದೇಶ ಹೊರಡಿಸಿದೆ.

ಅಶೋಕನಗರ ಠಾಣೆಯಲ್ಲಿ 2019ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಮೊಹಮ್ಮದ್ ಮುಜೀರುಲ್ಲಾ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಜಿ.ಎನ್. ಅರುಣ್ ವಾದಿಸಿದ್ದರು.

'ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಶಿವಕುಮಾರ್ ಔರಾದ್ ಎಂಬುವವರು 2019ರ ಜುಲೈ 28ರಂದು ರಾತ್ರಿ ಅಶೋಕನಗರ ಠಾಣೆ ವ್ಯಾಪ್ತಿಯ ಹೋಟೆಲೊಂದಕ್ಕೆ ಊಟಕ್ಕೆಂದು ಹೋಗಿದ್ದರು. ತಡರಾತ್ರಿ ಊಟ ಮುಗಿಸಿ ವಾಪಸು ಮನೆಗೆ ಹೋಗಲು ಕ್ಯಾಬ್ ಕಾಯ್ದಿರಿಸಿ, ಹೋಟೆಲ್ ಎದುರು ಕಾಯುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ವಿವೇಕನಗರದ ಹೊನ್ನಾರಪೇಟೆ ನಿವಾಸಿ ದೀನ್, ಸ್ಥಳಕ್ಕೆ ಬಂದಿದ್ದ. 'ನನ್ನ ಸ್ನೇಹಿತನ ಜೊತೆ ಮಾತನಾಡಬೇಕಿದೆ. ನಿನ್ನ ಮೊಬೈಲ್ ಕೊಡು' ಎಂದು ಶಿವಕುಮಾರ್ ಅವರನ್ನು ಕೇಳಿದ್ದ. ಆದರೆ, ಅವರು ಮೊಬೈಲ್ ಕೊಟ್ಟಿರಲಿಲ್ಲ. ಇದರಿಂದ ಸಿಟ್ಟಾದ ಆರೋಪಿ, ಚಾಕು ತೋರಿಸಿ ಬೆದರಿಸಿ ವಜ್ರದ ಪೆಂಡೆಂಟ್ ಇದ್ದ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದ' ಎಂದು ತಿಳಿಸಿದರು.

'ಘಟನೆ ಬಗ್ಗೆ ಶಿವಕುಮಾರ್ ಠಾಣೆಗೆ ದೂರು ನೀಡಿದ್ದರು. ಆರೋಪಿಯನ್ನು ಬಂಧಿಸಿದ್ದ ಅಂದಿನ ಇನ್‌ಸ್ಪೆಕ್ಟರ್ ಶಶಿಧರ್, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು' ಎಂದೂ ಪೊಲೀಸರು ಹೇಳಿದರು.

₹2,000 ಮೊಬೈಲ್‌ಗಾಗಿ ಕುತ್ತಿಗೆಗೆ ಇರಿತ

ಬೆಂಗಳೂರು: ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ರಂಜಿತ್ ಎಂಬುವವರ ಕುತ್ತಿಗೆಗೆ ಚಾಕುವಿನಿಂದ ಇರಿದಿರುವ ದುಷ್ಕರ್ಮಿಗಳು, ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ.

'ಥಣಿಸಂದ್ರದ ನಿವಾಸಿ ರಂಜಿತ್, ಬಾರ್ ಬೆಂಡರ್ ಆಗಿದ್ದರು. ಘಟನೆಯಲ್ಲಿ ತೀವ್ರ ಗಾಯಗೊಂಡಿರುವ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಂಜಿತ್ ಅವರು ಸಂಪಿಗೆಹಳ್ಳಿಯ ರೈಲ್ವೆ ಪ್ಯಾರಲಲ್ (ಆರ್.ಪಿ) ರಸ್ತೆಯಲ್ಲಿ ಬುಧವಾರ ರಾತ್ರಿ ನಡೆದುಕೊಂಡು ಹೊರಟಿದ್ದರು. ಅವರನ್ನು ಅಡ್ಡಗಟ್ಟಿದ್ದ ಇಬ್ಬರು ಆರೋಪಿಗಳು, ಮೊಬೈಲ್ ಹಾಗೂ ನಗದು ನೀಡುವಂತೆ ಒತ್ತಾಯಿಸಿದ್ದರು. ಅದನ್ನು ರಂಜಿತ್ ವಿರೋಧಿಸಿದ್ದರು. ಸಿಟ್ಟಾದ ಆರೋಪಿಗಳು, ಕುತ್ತಿಗೆಗೆ ಚಾಕುವಿನಿಂದ ಇರಿದಿದ್ದರು. ನಂತರ, ₹ 2,000 ಮೌಲ್ಯದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ' ಎಂದು ತಿಳಿಸಿವೆ.

ಮಕ್ಕಳ ಕಳ್ಳರೆಂದು ಸುಳ್ಳು ಮಾಹಿತಿ 'ಕಾನೂನು ಕೈಗೆತ್ತಿಕೊಂಡರೆ ಕ್ರಮ'

ಬೆಂಗಳೂರು: 'ಮಕ್ಕಳು ಕಳ್ಳರು ಬಂದಿದ್ದಾರೆ' ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹರಿಬಿಡಲಾಗುತ್ತಿದ್ದು, ಇದನ್ನು ನಂಬಿ ಯಾರಾದರೂ ಅಮಾಯಕ ವ್ಯಕ್ತಿಗಳ ಮೇಲೆ ಹಲ್ಲೆ ಮಾಡಿದರೆ ಅಥವಾ ಕಾನೂನು ಕೈಗೆತ್ತಿಕೊಂಡರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, 'ಅನುಮಾನಾಸ್ಪದ ವ್ಯಕ್ತಿಗಳು ಅಥವಾ ಅಪರಿಚಿತರು ಕಂಡುಬಂದರೆ ಪೊಲೀಸ್ ನಿಯಂತ್ರಣ ಕೊಠಡಿ 112ಕ್ಕೆ ಕರೆ ಮಾಡಿ ವಿಷಯ ತಿಳಿಸಬೇಕು. ಸಂಬಂಧಪಟ್ಟ ಪೊಲೀಸರು ಸ್ಥಳಕ್ಕೆ ಬಂದು ವಿಚಾರಣೆ ನಡೆಸುತ್ತಾರೆ' ಎಂದಿದ್ದಾರೆ.

'ಸುಳ್ಳು ಮಾಹಿತಿಯಿಂದಾಗಿ ಜನರು ಆತಂಕಗೊಂಡಿದ್ದಾರೆ. ಅಪರಿಚಿತ, ಅಮಾಯಕ ಜನರನ್ನು ಅಡ್ಡಗಟ್ಟಿ ಥಳಿಸುತ್ತಿದ್ದಾರೆ. ಇಂಥ ಘಟನೆಗಳಿಗೆ ಜಿಲ್ಲೆಯಲ್ಲಿ ಅವಕಾಶವಿಲ್ಲ. ಅಮಾಯಕ ವ್ಯಕ್ತಿಗಳನ್ನು ಸುಖಾಸುಮ್ಮನೇ ಅಡ್ಡಗಟ್ಟಿ, ಹಲ್ಲೆ ಮಾಡುವುದು ಕಂಡುಬಂದರೆ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಸುಳ್ಳು ಮಾಹಿತಿ ಹರಡಿಸುವವರ ವಿರುದ್ಧವೂ ಪ್ರಕರಣ ದಾಖಲಿಸಲಾಗುವುದು' ಎಂದು ಎಚ್ಚರಿಸಿದ್ದಾರೆ.

ಶಾಲಾ ಬಸ್ ಗುದ್ದಿ ಬಾಲಕ ಸಾವು: ಚಾಲಕ ಬಂಧನ

ಬೆಂಗಳೂರು: 'ರಸ್ತೆಬದಿ ನಡೆದುಕೊಂಡು ಹೊರಟಿದ್ದ ವೇಳೆ ಶಾಲಾ ಬಸ್ ಗುದ್ದಿ ಏಳು ವರ್ಷದ ನಿತೀಶ್ ಕುಮಾರ್ ಎಂಬಾತ ಮೃತಪಟ್ಟಿದ್ದು, ಬಸ್ ಚಾಲಕ ವಿಠ್ಠಲ್ ಎಂಬುವವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಬಾಲಕ ನಿತೀಶ್, ಮುನ್ನೇಕೊಳಾಲು ಸರ್ಕಾರಿ ಶಾಲೆಯಲ್ಲಿ 1ನೇ ತರಗತಿಯಲ್ಲಿ ಓದುತ್ತಿದ್ದ. ಬುಧವಾರ ಬೆಳಿಗ್ಗೆ ಮನೆಯಿಂದ ಶಾಲೆಗೆ ಹೊರಟಿದ್ದಾಗ ಅವಘಡ ಸಂಭವಿಸಿದೆ. ರಾಯನ್ ಶಾಲೆ ಬಸ್ ಚಾಲಕನನ್ನು ಬಂಧಿಸಲಾಗಿದೆ' ಎಂದಿದ್ದಾರೆ.

ಕಾಡಿನ ಮಧ್ಯೆ ಏರಿಬಂದ ಪುಂಡಾನೆ

ಬಸ್ ಅಡ್ಡಗಟ್ಟಿದ ಒಂಟಿ ಸಲಗ

ಪ್ರಜಾವಾಣಿ ವಾರ್ತೆ

ಕನಕಪುರ: ಇಲ್ಲಿಗೆ ಸಮೀಪದ ಕಾಡು ಶಿವನಹಳ್ಳಿಯಿಂದ ಗುರುವಾರ ಕನಕಪುರಕ್ಕೆ ಬರುತ್ತಿದ್ದ ಸಾರಿಗೆ ಬಸ್ ಅಡ್ಡಗಟ್ಟಿದ್ದ ಒಂಟಿ ಸಲಗವೊಂದು ಕೆಲಹೊತ್ತು ಪ್ರಯಾಣಿಕರಲ್ಲಿ ಆತಂಕ ಹುಟ್ಟಿಸಿತ್ತು.

ರಸ್ತೆ ಮಧ್ಯೆ ಬಸ್ ಎದುರಾಗಿ ಘೀಳಿಡುತ್ತ ನಿಂತ ಗಂಡು ಪುಂಡಾನೆ ಕಂಡ ಪ್ರಯಾಣಿಕರು ಪ್ರಾಣಭಯದಿಂದ ಕಿರುಚಾಡ ತೊಡಗಿದರು. ಆನೆಯನ್ನು ಓಡಿಸಲು ಚಾಲಕ ಜೋರಾಗಿ ಹಾರ್ನ್ ಮಾಡಿದ. ಆದರೆ, ಇದಕ್ಕೆ ಜಗ್ಗದ ಸಲಗ ಮತ್ತಷ್ಟು ರೋಷದಿಂದ ಬಸ್ ಮೇಲೆ ಏರಿ ಬಂತು.

'ಬಸ್ ಮೇಲೆ ದಾಳಿಗೆ ಸಿದ್ಧವಾದಂತೆ ರಸ್ತೆ ಮಧ್ಯೆ ಕದಲದಂತೆ ನಿಂತ ಆನೆ ಹಾರ್ನ್‌ನಿಂದ ಕೆರಳಿ ಬಸ್ ಬೆನ್ನಟ್ಟಿಕೊಂಡು ಬಂತು. ಎಚ್ಚೆತ್ತುಕೊಂಡ ಚಾಲಕನ ಹಿಮ್ಮುಖವಾಗಿ ಬಸ್ ಓಡಿಸಿಕೊಂಡು ಬಂದರು. ಬಹಳ ಹೊತ್ತು ಆನೆ ರಸ್ತೆಯಿಂದ ಕದಲಿಲ್ಲ. ಬಸ್‌ಗೆ ಅಡ್ಡಲಾಗಿ ನಿಂತಿತ್ತು. ಅನುಭವಿ ಚಾಲಕನ ಸಮಯ ಪ್ರಜ್ಞೆಯಿಂದ ಬದುಕುಳಿದೆವು' ಎಂದು ಪ್ರಯಾಣಿಕರು 'ಪ್ರಜಾವಾಣಿ' ಜತೆ ಅನುಭವ ಹಂಚಿಕೊಂಡರು.

ಸುದ್ದಿ ತಿಳಿದು ಸ್ಥಳಕ್ಕೆ ದೌಡಾಯಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಆನೆಯನ್ನು ಓಡಿಸಿದರು. ಜೀವಭಯದಿಂದ ಬಸ್‌ನಲ್ಲಿ ಉಸಿರು ಬಿಗಿ ಹಿಡಿದು ಕುಳಿತಿದ್ದ ಪ್ರಯಾಣಿಕರು ನಿಟ್ಟುಸಿರು ಬಿಟ್ಟರು.

ಆನೆಗಳ ಹಿಂಡಿನಿಂದ ಬೇರ್ಪಟ್ಟಿರುವ ಈ ಒಂಟಿ ಸಲಗ ಸುಮಾರು ದಿನಗಳಿಂದ ಪುಟ್ಟದಾಸದೊಡ್ಡಿ, ಬಿಜ್ಜಳ್ಳಿ ಮತ್ತು ಮರಳವಾಡಿ ಮಾರ್ಗವಾಗಿ ಹೋಗಿ ಬರುವ ವಾಹನಗಳನ್ನು ಅಡ್ಡಗಟ್ಟಿ ದಾಂದಲೆ ನಡೆಸುತ್ತಿದೆ. ತಿಂಗಳ ಹಿಂದಯಷ್ಟೇ ವಾಹನ ಸವಾರರೊಬ್ಬರ ಮೇಲೆ ದಾಳಿ ಮಾಡಿ ಕೊಂದು ಹಾಕಿದೆ.

ಬನ್ನೇರುಘಟ್ಟ ವನ್ಯಜೀವಿ ಧಾಮಕ್ಕೆ ಸೇರಿದ ಅರಣ್ಯ ಪ್ರದೇಶವು ಕಾಡು ಶಿವನಹಳ್ಳಿ, ಅರಗಡಕಲು, ಬಿಜ್ಜಳ್ಳಿ, ಗಟ್ಟಿಗುಂದ, ಕೊಳಗೊಂಡನಹಳ್ಳಿ, ಪುಟ್ಟದಾಸದೊಡ್ಡಿ ಮುಗ್ಗೂರು, ಹುಣಸನಹಳ್ಳಿ, ಬನ್ನಿಮುಕ್ಕೋಡ್ಲು, ಅರಕೆರೆ, ಹಲಸೂರು ಮೊದಲಾದ ಗ್ರಾಮಗಳನ್ನು ಒಳಗೊಂಡಿದೆ. ಈ ಗ್ರಾಮಗಳ ಜನರು ಪ್ರಯಾಣಕ್ಕೆ ಅರಣ್ಯದೊಳಗಿನ ಈ ರಸ್ತೆಯನ್ನೇ ಅವಲಂಬಿಸಿದ್ದಾರೆ. ಹಾಗಾಗಿ ವನ್ಯ ಪ್ರಾಣಿಗಳ ದಾಳಿಗೆ ತುತ್ತಾಗುತ್ತಿದ್ದಾರೆ.



ಕನಕಪುರ ಬಳಿಯ ಕಾಡು ಶಿವನಹಳ್ಳಿ ಬಳಿ ಅರಣ್ಯ ಪ್ರದೇಶದಲ್ಲಿ ಬಸ್ ಅಡ್ಡಗಟ್ಟಿ ನಿಂತಿರುವ ಒಂಟಿ ಸಲಗ

ಮುಖ್ಯಾಂಶಗಳು

- ರಸ್ತೆ ಮಧ್ಯೆ ಬಸ್‌ಗೆ ಎದುರಾಗಿ ಘೀಳಿಡುತ್ತ ನಿಂತ ಪುಂಡಾನೆ
- ಪ್ರಾಣಭಯದಿಂದ ಕಿರುಚಾಡಿದ ಪ್ರಯಾಣಿಕರು
- ಹಿಮ್ಮುಖವಾಗಿ ಬಸ್ ಚಲಾಯಿಸಿದ ಚಾಲಕ

ಪುಂಡಾನೆ ಸೆರೆಗೆ ಗ್ರಾಮಸ್ಥರ ಒತ್ತಾಯ

ಈ ಒಂಟಿ ಸಲಗವು ಒಂದೂವರೆ ತಿಂಗಳಿನಿಂದ ಈ ರಸ್ತೆಯಲ್ಲಿ ಕಾಣಿಸಿಕೊಂಡಿದ್ದು, ರಸ್ತೆ ಮೂಲಕ ಹಾದು ಹೋಗುವ ಪ್ರಯಾಣಿಕರಿಗೆ ತೊಂದರೆ ಕೊಡುತ್ತಿದೆ. ಹೀಗಾಗಿ ಜನರು ಈ ರಸ್ತೆಯಲ್ಲಿ ಓಡಾಡಲು ಭಯಭೀತರಾಗಿದ್ದಾರೆ.

ಈ ಭಾಗದ ಗ್ರಾಮಸ್ಥರು ಅನ್ಯ ಸ್ಥಳಗಳಿಗೆ ಹೋಗಲು ಇದೊಂದೇ ಮಾರ್ಗ ಅವಲಂಬಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸುವ ಮೂಲಕ ಈ ಪುಂಡಾನೆಯನ್ನು ಸೆರೆ ಹಿಡಿಯಬೇಕು. ಮುಂದಿನ ದಿನಗಳಲ್ಲಿ ಆಗುವ ಅನಾಹುತ ತಡೆಯಬೇಕು ಎಂದು ಜನರು ಅರಣ್ಯ ಇಲಾಖೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

₹ 4.32 ಕೋಟಿ ಮೌಲ್ಯದ ಕೈ ಗಡಿಯಾರ ಜಪ್ತಿ



ಬೆಂಗಳೂರು: ಪ್ರತಿಷ್ಠಿತ ಕಂಪನಿಗಳ ಕೈ ಗಡಿಯಾರಗಳನ್ನು ಬಿಲ್ ರಶೀದಿ ಇಲ್ಲದೇ ಅಕ್ರಮವಾಗಿ ಮಾರುತ್ತಿದ್ದ ಆರೋಪದಡಿ ಸೈಯದ್ ಮೊಹಮ್ಮದ್ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಸೈಯದ್, ಶಿವಾಜಿನಗರದ ಎಚ್.ಕೆ.ಪಿ ರಸ್ತೆಯಲ್ಲಿ ಕೈ ಗಡಿಯಾರ ಮಾರುತ್ತಿದ್ದ. ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. 83 ಕೈ ಗಡಿಯಾರಗಳನ್ನು ಜಪ್ತಿ ಮಾಡಲಾಗಿದ್ದು, ಇವುಗಳ ಮೌಲ್ಯ ₹ 4.32 ಕೋಟಿ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ರೋಲೆಕ್ಸ್, ಹ್ಯಾಬ್ಲೋಟ್, ರ್‍ಯಾಡೊ, ಟಿಸ್ಸಾಟ್, ಫಾಸಿಲ್, ಪೊಲೀಸ್ ಸೇರಿ ಹಲವು ಕಂಪನಿಗಳ ಹೆಸರಿದ್ದ ಕೈ ಗಡಿಯಾರಗಳು ಆರೋಪಿ ಬಳಿ ಇದ್ದವು. ಯಾವುದೇ ಬಿಲ್ ರಶೀದಿ ಇಲ್ಲದೇ ಕಡಿಮೆ ಬೆಲೆಗೆ ಗಡಿಯಾರಗಳನ್ನು ಮಾರುತ್ತಿದ್ದ.'

'ಗಡಿಯಾರಗಳನ್ನು ಜಪ್ತಿ ಮಾಡಿ ಪರಿಶೀಲಿಸಲಾಗಿದೆ. ಬಹುತೇಕ ಗಡಿಯಾರಗಳು ನಕಲಿ ಎನ್ನುವುದು ಮೇಲ್ನೋಟಕ್ಕೆ ಗೊತ್ತಾಗಿದ್ದು, ಹೆಚ್ಚಿನ ಪರೀಕ್ಷೆ ನಡೆಸಬೇಕಿದೆ. ಆರೋಪಿ ಯಾರಿಂದ ಗಡಿಯಾರ ತರುತ್ತಿದ್ದನೆಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿವೆ.

ಕೃಷ್ಣಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಳ

ಬೆಳಗಾವಿ: ನಗರ ಸೇರಿ ಜಿಲ್ಲೆಯಾದ್ಯಂತ ಗುರುವಾರ ಮಳೆ ಬಿಡುವು ಕೊಟ್ಟಿತ್ತು. ಆದರೆ, ಮಹಾರಾಷ್ಟ್ರದಲ್ಲಿ ಮಳೆ ಹೆಚ್ಚಿದ್ದರಿಂದ ಕೃಷ್ಣಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಳವಾಗಿದೆ.

ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ 76 ಸಾವಿರ ಕ್ಯುಸೆಕ್, ದೂಧಗಂಗಾ ನದಿಯಿಂದ 22,880 ಕ್ಯುಸೆಕ್ ಸೇರಿ 98,880 ಕ್ಯುಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ ಸೇರುತ್ತಿದೆ. ಹಲವು ಸೇತುವೆಗಳು ಇನ್ನೂ ಮುಳುಗಡೆ ಸ್ಥಿತಿಯಲ್ಲೇ ಇವೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿ 10 ಬ್ಯಾರೇಜುಗಳು ಹಾಗೂ ಎರಡು ಸೇತುವೆಗಳು ಮುಳುಗಿವೆ. ಉಕ್ಕಿದಂತೆ ಘಟಪ್ರಭಾ ನದಿ ಪ್ರವಾಹದಲ್ಲಿ ಯಥಾಸ್ಥಿತಿ ಮುಂದುವರಿದಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.28	21,517	17,505
ಹಾರಂಗಿ	2,859	2,858.02	1,800	1,800
ಕಬಿನಿ	2,284	2,283.10	5,550	5,000
ಹೇಮಾವತಿ	2,922	2,921.75	9,901	10,400
ಲಿಂಗನಮಕ್ಕಿ	1,819	1,816	12,519	4,884
ಸೂಪಾ (ಮೀ)	564	553.02	13,253	-
ಮಾಣಿ	594	589	1,878	-
ತುಂಗಭದ್ರಾ	1,633	1,632.70	58,109	46,581
ಮಲಪ್ರಭಾ	2,079.50	2,079.50	8,794	8,794
ಘಟಪ್ರಭಾ	2,175	2,173.61	19,691	28,199
ಭದ್ರಾ	186	184	8,981	12,592
ಆಲಮಟ್ಟಿ (ಮೀ)	519.6	519.35	1,30,891	1,50,000
ನಾರಾಯಣಪುರ (ಮೀ)	492.25	491.35	1,70,000	1,78,740

*ನೆಲಮಟ್ಟದಿಂದ

ಸಿಪಿಎಂ ರಾಜ್ಯ ಸಮಾವೇಶ 18ಕ್ಕೆ

ಹೊಸಪೇಟೆ (ವಿಜಯನಗರ): 'ಸಿಪಿಎಂ ರಾಜ್ಯಮಟ್ಟದ ರಾಜಕೀಯ ಸಮಾವೇಶ ಸೆ.18ರಂದು ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿಯಲ್ಲಿ ನಡೆಯಲಿದ್ದು, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಉದ್ಘಾಟಿಸುವರು' ಎಂದು ಪಕ್ಷದ ರಾಜ್ಯ ಘಟಕದ ಕಾರ್ಯದರ್ಶಿ ಯು.ಬಸವರಾಜ ತಿಳಿಸಿದರು.

ಸಿಪಿಎಂ ಪಾಲಿಟ್ ಬ್ಯೂರೊ ಸದಸ್ಯರಾದ ಬಿ.ವಿ.ರಾಘವಲು, ಎಂ.ಎ.ಬೇಬಿ ಸೇರಿ ಹಲವು ಮುಖಂಡರು ಪಾಲ್ಗೊಳ್ಳುವರು. ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳು ಚುನಾವಣೆಗೆ ಸಿದ್ಧತೆ ನಡೆಸಿದ್ದು, ಜಲ್ಲಂತ ಸಮಸ್ಯೆಗಳನ್ನು ಜನರಿಂದ ಮರೆಮಾಚುತ್ತಿವೆ. ಇವುಗಳ ಹುನ್ನಾರವನ್ನು ಜನರಿಗೆ ತಿಳಿಸಲು ಸಮಾವೇಶವನ್ನು ಸಂಘಟಿಸಲಾಗಿದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪೋಕ್ಸೊ ಪ್ರಕರಣ: ವಿದ್ಯಾರ್ಥಿನಿಯರ ಪರ ವಕೀಲ ಡಿ.ಸಿ. ಶ್ರೀನಿವಾಸ ಆರೋಪ

‘ನಿಮ್ಹಾನ್ಸ್‌ಗೆ ಸೇರಿಸಲು ಹುನ್ನಾರ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಲೈಂಗಿಕ ಕಿರುಕುಳದಿಂದ ನಲುಗಿರುವ ಪ್ರೌಢಶಾಲಾ ವಿದ್ಯಾರ್ಥಿನಿಯರನ್ನು ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಗೆ (ನಿಮ್ಹಾನ್ಸ್) ದಾಖಲಿಸುವ ಪ್ರಯತ್ನ ನಡೆಯುತ್ತಿದೆ. ಅವರ ಮಾನಸಿಕ ಸ್ಥಿತಿ ಸರಿ ಇಲ್ಲವೆಂಬಂತೆ ಬಿಂಬಿಸುವ ಹುನ್ನಾರ ಇದಾಗಿದೆ' ಎಂದು ಸಂತ್ರಸ್ತರ ಪರ ವಕೀಲ ಡಿ.ಸಿ.ಶ್ರೀನಿವಾಸ ಆರೋಪಿಸಿದರು.

ಸಂತ್ರಸ್ತ ವಿದ್ಯಾರ್ಥಿನಿಯರ ಭೇಟಿಗೆ ಗುರುವಾರ ಬಾಲಕಿಯರ ಸರ್ಕಾರಿ ಬಾಲಮಂದಿರಕ್ಕೆ ಬಂದಿದ್ದ ಅವರು, ಒಂದೂವರೆ ಗಂಟೆ ಕಾದು ಮಕ್ಕಳ ಕಲ್ಯಾಣ ಸಮಿತಿ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

'ನ್ಯಾಯಾಲಯದ ಅನುಮತಿ ಪಡೆದು ಸೆ.13ರಂದು ಸಂತ್ರಸ್ತ ವಿದ್ಯಾರ್ಥಿನಿಯರ ಹೇಳಿಕೆ ದಾಖಲು ಮಾಡಿಕೊಂಡಿದ್ದೇನೆ. ಅವರ ಮಾನಸಿಕ ಸ್ಥಿತಿ ಚೆನ್ನಾಗಿದ್ದು, ಸದಾಚಾರಿಗಳಂತೆ ಸಂದಿಸಿದ್ದಾರೆ. ವಕೀಲರು ಹಾಗೂ ಕುಟುಂಬದ ಸದಸ್ಯರನ್ನು ಭೇಟಿಯಾಗಲು ಉತ್ಸುಕರಾಗಿರುವುದು ಗಮನಕ್ಕೆ ಬಂದಿದೆ. ವಿದ್ಯಾರ್ಥಿನಿಯರನ್ನು ಭೇಟಿ ಮಾಡಲು ಪಾಲಕರಿಗೆ ಅವಕಾಶ ನೀಡುತ್ತಿಲ್ಲ' ಎಂದು ದೂರಿದರು.

'ಸಂತ್ರಸ್ತ ವಿದ್ಯಾರ್ಥಿನಿಯರನ್ನು ಮಕ್ಕಳ ಕಲ್ಯಾಣ ಸಮಿತಿ ಅಪ್ಪ ಸಮಾಲೋಚನೆಗೆ ಒಳಪಡಿಸಿದೆ. ಒಬ್ಬ ಬಾಲಕಿಗೆ ಕೋಪ ಹೆಚ್ಚಾಗಿದ್ದು, ಮಾನಸಿಕ ಸ್ಥಿತಿ ಸರಿ ಇಲ್ಲ ಎಂದು ಸಮಿತಿ ಹೇಳುತ್ತಿದೆ. ಇಡೀ ಪ್ರಕರಣದ ದಿಕ್ಕು ತಪ್ಪಿಸುವ ಷಡ್ಯಂತ್ರ' ಎಂದು ದೂರಿದರು.

'ವಿದ್ಯಾರ್ಥಿನಿಯರಿಗೆ ಊಟದ ವ್ಯವಸ್ಥೆ ಸರಿ ಇಲ್ಲ. ಒಂದೊಂದು ತುತ್ತು ಹಿಂಸೆಯಿಂದ ಸೇವಿಸುವಂತಹ ವಾತಾವರಣ ಸೃಷ್ಟಿಸಲಾಗಿದೆ. ವಿದ್ಯಾರ್ಥಿನಿಯರ ಹಿತಾಸಕ್ತಿ ಕಡೆಗಣಿಸಲಾಗಿದೆ. ಮಕ್ಕಳ ಕಲ್ಯಾಣ ಸಮಿತಿ ವಿರುದ್ಧ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ದೂರು ನೀಡಲಾಗುವುದು. ನ್ಯಾಯಾಲಯದ ಗಮನಕ್ಕೂ ತರಲಾಗುವುದು' ಎಂದು ಅವರು ಹೇಳಿದರು.

'ಇಬ್ಬರು ಬಾಲಕರು ಕಾಣೆ: ಮುರುಘಾ ಮಠದ ವಿದ್ಯಾರ್ಥಿನಿಲಯದಿಂದ 11 ಹಾಗೂ 13 ವರ್ಷದ ಇಬ್ಬರು ವಿದ್ಯಾರ್ಥಿಗಳು ಕಾಣೆಯಾಗಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

'ಇಬ್ಬರು ಸೆ.8ರಂದು ಬೆಳಿಗ್ಗೆ 8.30ಕ್ಕೆ ಶಾಲೆಗೆ ಹೋಗಿದ್ದರು. ಸಂಜೆ ಹಾಸ್ಟೆಲ್‌ಗೆ ವಾಪಸು ಬಂದಿಲ್ಲ. ಅನುಮಾನಗೊಂಡು ಶಾಲೆಯನ್ನು ಸಂಪರ್ಕಿಸಿದ್ದು, 'ಇಬ್ಬರು ತರಗತಿಗೆ ಗೈರಾಗಿರುವ ಮಾಹಿತಿ ತಿಳಿಯಿತು. ಮೂರು ದಿನಗಳ ಹುಡುಕಾಟ ನಡೆಸಿದರೂ ಅವರ ಪತ್ತೆಯಾಗಿಲ್ಲ' ಎಂದು ಹಾಸ್ಟೆಲ್ ಸಿಬ್ಬಂದಿ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಪೋಕ್ಸೊ ಪ್ರಕರಣದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ 17 ವರ್ಷದ ಬಾಲಕನ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಾಲಯ ಗುರುವಾರ ವಜಾ ಮಾಡಿತು.

ನಿರೀಕ್ಷಣಾ ಜಾಮೀನು ಕೋರಿ ಬಾಲಕ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಆಗಸ್ಟ್ 30ರಂದು ಅರ್ಜಿ ಸಲ್ಲಿಸಿದ್ದ. ವಿಚಾರಣೆ ನಡೆಸಿದ ನ್ಯಾಯಾಧೀಶ ಬಿ.ಕೆ.ಕೋಮಲಾ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದರು.

'ಇನ್ನಿಬ್ಬರು ಆರೋಪಿಗಳಾದ ಪರಮಶಿವಯ್ಯ ಹಾಗೂ ಗಂಗಾಧರಯ್ಯ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಗೆ ಸಂಬಂಧಿಸಿ ವಾದ ಮಂಡಿಸಿದ ಹೈಕೋರ್ಟ್ ವಕೀಲ ಸಿ.ಎಚ್. ಹನುಮಂತರಾಯ, ಸಿಆರ್‌ಪಿಸಿ 91ರ ಅಡಿಯಲ್ಲಿ ಅರ್ಜಿ ಸಲ್ಲಿಸಿ ಕಾಟನ್‌ಪೇಟೆ ಹಾಗೂ ನಜರಬಾದ್ ಠಾಣೆಯಲ್ಲಿ ದಾಖಲಾದ ಪ್ರಕರಣಗಳಿಗೆ ಸಂಬಂಧ ಮಾಹಿತಿ ಕೋರಿದರು. ತರಕಾರು ಸಲ್ಲಿಸಲು ಸರ್ಕಾರಿ ವಕೀಲರಿಗೆ ಕಾಲಾವಕಾಶ ನೀಡಿ, ವಿಚಾರಣೆಯನ್ನು ಸೆ.17ಕ್ಕೆ ಮುಂದೂಡಲಾಯಿತು.

ಶೌಚಾಲಯದಲ್ಲಿ ಮಗು ಬಿಟ್ಟು ಅಂಗನವಾಡಿಗೆ ಬೀಗ

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ (ಕೋಲಾರ): ತಾಲ್ಲೂಕಿನ ಹಾರೋಹಳ್ಳಿ ಅಂಗನವಾಡಿ ಕೇಂದ್ರದಲ್ಲಿ ಬುಧವಾರ ಸಂಜೆ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಮೂರು ವರ್ಷದ ಮಗುವೊಂದನ್ನು ಶೌಚಾಲಯದಲ್ಲಿಯೇ ಬಿಟ್ಟು ಬಾಗಿಲು ಹಾಕಿಕೊಂಡು ಹೋಗಿದ್ದಾರೆ.

ಮಗು ಸಮಯಕ್ಕೆ ಸರಿಯಾಗಿ ಮನೆಗೆ ಬಾರದಿದ್ದರಿಂದ ಗಾಬರಿಗೊಂಡ ಪೋಷಕರು ಹುಡುಕಾಟ ನಡೆಸಿದ್ದು, ಸುಳಿವು ಸಿಕ್ಕಿಲ್ಲ. ಅಂಗನವಾಡಿ ಕೇಂದ್ರದಲ್ಲಿ ಒಮ್ಮೆ ಪರಿಶೀಲಿಸಲು ತೆರಳಿದಾಗ ಮಗು ಶೌಚಾಲಯದಲ್ಲಿ ಇರುವುದು ಕಂಡುಬಂದಿದೆ.

ಅಂಗನವಾಡಿ ಬಿಡುವಾಗ ಮಗು ಶೌಚಾಲಯಕ್ಕೆ ತೆರಳಿತ್ತು. ಅಲ್ಲಿಯೇ ಸುಮಾರು 40 ನಿಮಿಷ ನಿದ್ದೆ ಮಾಡಿದೆ. ಅಮ್ಮನ ಕೂಗಿಗೆ ಎಚ್ಚರಗೊಂಡು ಸ್ಪಂದಿಸಿದ್ದರಿಂದ ಮಗು ಅಲ್ಲಿರುವುದು ಖಾತರಿಯಾಯಿತು. ಮಗುವಿಗೆ ಯಾವುದೇ ತೊಂದರೆಯಾಗಿಲ್ಲ ಎಂದು ಸಿಡಿಪಿಒ ಮುನಿರಾಜು ತಿಳಿಸಿದರು.

ಹಾರೋಹಳ್ಳಿ ಅಂಗನವಾಡಿ ಕೇಂದ್ರದಲ್ಲಿ 8 ಮಕ್ಕಳಿದ್ದು, ಸಂಜೆ 4 ಗಂಟೆಗೆ ಮಕ್ಕಳನ್ನು ಮನೆಗೆ ಕಳುಹಿಸುವ ವೇಳೆ ಲೋಪ ನಡೆದಿದೆ. ಎಲ್ಲ ಮಕ್ಕಳು ಶಾಲೆ ಅಕ್ಕಪಕ್ಕದ ಮನೆಯವರಾಗಿದ್ದು, ಈ ಮಗುವು ತೆರಳಿದೆ ಎಂದು ತಿಳಿದ ಅಂಗನವಾಡಿ ಸಹಾಯಕಿ ಬೀಗ ಹಾಕಿ ಹೋಗಿದ್ದಾರೆ.

ವಿಷಯ ತಿಳಿದು ಸಂಜೆ ಸ್ಥಳಕ್ಕೆ ಭೇಟಿ ನೀಡಿದ ಸಿಡಿಪಿಒ, ಕಚೇರಿಯ ಹಿರಿಯ ಮೇಲ್ವಿಚಾರಕಿ ಜ್ಯೋತಿ, ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಕ್ಷಮಾಪಣೆ ಪಡೆದಿದ್ದಾರೆ. ಸಂಘದ ತಾಲ್ಲೂಕು ಅಧ್ಯಕ್ಷೆ ಶೋಭಾರಾಣಿ ಘಟನೆ ಬಗ್ಗೆ ಮಾಹಿತಿ ಪಡೆದರು.

'ಹಾರೋಹಳ್ಳಿ ಘಟನೆ ಬಗ್ಗೆ ಪರಿಶೀಲಿಸಿದ್ದು, ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿ ಕರ್ತವ್ಯಲೋಪ ಎಸಗಿರುವುದು ಕಂಡುಬಂದಿದೆ. ಅವರನ್ನು ಸೇವೆಯಿಂದ ವಜಾಗೊಳಿಸಲು ಉಪ ನಿರ್ದೇಶಕರಿಗೆ ಶಿಫಾರಸು ಮಾಡಲಾಗಿದೆ' ಎಂದು ಸಿಡಿಪಿಒ ತಿಳಿಸಿದರು.

ಯುವಿಸಿಇಗೆ ಐಐಟಿ ಮಾದರಿ ಸ್ವಾಯತ್ತ ವಿಶ್ವವಿದ್ಯಾಲಯದ ಸ್ಥಾನ

‘ಲಾಸ್ಟ್ ಬೆಂಚ್ ಸ್ಟೂಡೆಂಡ್’ಗೆ ಸಿ.ಎಂ ಪಾಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿ ಜೀವನದಲ್ಲಿ ಕ್ರಿಯಾಶೀಲತೆ, ಖುಷಿ ಸಿಗುವುದು ತರಗತಿಗಳಲ್ಲಿ ‘ಲಾಸ್ಟ್ ಬೆಂಚ್’ನಲ್ಲಿ ಕುಳಿತಾಗ, ಹಾಗಂತ ಜೀವನದಲ್ಲೂ ಕೊನೆಯಲ್ಲೇ ಉಳಿಯಬಾರದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಿವಿಮಾತು ಹೇಳಿದರು.

ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು (ಯುವಿಸಿಇ) ಆವರಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಐಐಟಿ ಮಾದರಿಯ ಸ್ವಾಯತ್ತ ವಿಶ್ವವಿದ್ಯಾಲಯ ಘೋಷಣೆ, ಎಂಜಿನಿಯರ್‌ಗಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮಾರಂಭದಲ್ಲಿ ಹಿಂದೆ ಕುಳಿತು ಗಲಾಟೆ ಮಾಡುತ್ತಿದ್ದ ವಿದ್ಯಾರ್ಥಿಗಳನ್ನು ಹೊಗಳುತ್ತಲೇ, ಚಾಟಿ ಬೀಸಿದರು.

‘ನಾನೂ ವಿದ್ಯಾರ್ಥಿಯಾಗಿದ್ದಾಗ ತರಗತಿಗಳಲ್ಲಿ ಎಂದೂ ಮುಂದೆ ಕೂರಲಿಲ್ಲ. ಯುವಿಸಿಇಯಲ್ಲಿ ಓದಬೇಕೆಂಬ ಆಸೆ ಇತ್ತು. ಸೀಟು ಸಿಗದ ಕಾರಣ ನಮ್ಮೂರ ಎಂಜಿನಿಯರಿಂಗ್ ಕಾಲೇಜು ಸೇರಿದೆ. ಓದಿನ ಹೊರತಾದ ಅನುಭವಗಳಾಗಿದ್ದು ಹಿಂದಿನ ಬೆಂಚ್‌ನಿಂದಾಗಿ. ಹಾಗಂತ ಜೀವನ ಪಾಠ ಎದುರಾದಾಗ ಹಿಂದೆ ಉಳಿಯಲಿಲ್ಲ. ಹಣೆಬರಹ ಶಪಿಸುತ್ತಾ ಕೂರಲಿಲ್ಲ. ಹಣೆಬರಹ ಯಾರೂ ಬರೆಯುವುದಿಲ್ಲ. ಕೈಗೆರೆಗಳು ಸವೆಯಬೇಕು. ಅಂದರೆ, ಸತತ ಪರಿಶ್ರಮ, ಜ್ಞಾನದ ಮೂಲಕ ಉನ್ನತ ಸಾಧನೆ ಮಾಡಬೇಕು. ಅಂತಹ ಸಾಧಕರಲ್ಲಿ ವಿಶ್ವೇಶ್ವರಯ್ಯ ಮಾದರಿ’ ಎಂದರು. ‘ಹಿಂದೆ ಭೂಮಿ, ಬಂಡವಾಳ ಇದ್ದವರಿಗೆ ಸ್ಥಾನಮಾನ ಸಿಗುತ್ತಿತ್ತು. ಇಂದು ಜ್ಞಾನಕ್ಕೆ ಆ ಸ್ಥಾನವಿದೆ. ಅಂತಹ ಅವಕಾಶಗಳನ್ನು ವಿದ್ಯಾರ್ಥಿಗಳು ಬಳಸಿಕೊಳ್ಳಬೇಕು. ಗೂಗಲ್, ತಂತ್ರಜ್ಞಾನ ಎಷ್ಟೇ ಲಭ್ಯ ಇದ್ದರೂ, ಮೂಲ ಜ್ಞಾನವೂ ಅಷ್ಟೇ ಮುಖ್ಯ’ ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಯುವಿಸಿಇ ಅಧ್ಯಕ್ಷ ಮುತ್ತುರಾಮನ್ ಮಾತನಾಡಿದರು. ಉನ್ನತೀಕರಣ ಸಮಿತಿ ಅಧ್ಯಕ್ಷ ಎಸ್. ಸದಗೋಪನ್, ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಪ್ರಾಂಶುಪಾಲ ಎಚ್.ಎನ್.ರಮೇಶ್ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಕುಶಲೋಪರಿ ನಡೆಸಿದರು. ಎಸ್ ಸದಗೋಪನ್, ಬಿ. ಮುತ್ತುರಾಮನ್ ಇದ್ದಾರೆ —ಪ್ರಜಾವಾಣಿ ಚಿತ್ರ

ಐಐಟಿ ಕೇಂದ್ರವಾಗಿ ಯುವಿಸಿಇ ಅಭಿವೃದ್ಧಿ

ಬೆಂಗಳೂರಿನ ಕೆ.ಆರ್.ವೃತ್ತದಲ್ಲಿರುವ ಯುವಿಸಿಇಗೆ 105 ವರ್ಷಗಳ ಇತಿಹಾಸವಿದ್ದು, ಸರ್ಕಾರ ಸ್ವಾಯತ್ತ ವಿಶ್ವವಿದ್ಯಾಲಯದ ಸ್ಥಾನ ನೀಡಿದೆ.

‘ಕಣ್ಣಳತೆಯ ದೂರದಲ್ಲಿರುವ ಈ ಕಾಲೇಜಿನತ್ತ ವಿಧಾನಸೌಧದಲ್ಲಿ ಕುಳಿತವರು ಸ್ವಲ್ಪ ತಿರುಗಿ ನೋಡಿದ್ದರೆ ಇಂದು ರಾಜ್ಯದ ಪ್ರಮುಖ ಐಐಟಿ ಕೇಂದ್ರವಾಗುತ್ತಿತ್ತು. ಆಡಳಿತ ನಡೆಸಿದವರಿಗೆ ಇಚ್ಛಾ ಶಕ್ತಿ ಇರಲಿಲ್ಲ. ಆ ಕೊರತೆಯನ್ನು ನಮ್ಮ ಸರ್ಕಾರ ನೀಗಿಸಿದೆ. ಮೂರು ವರ್ಷಗಳಲ್ಲಿ ಐಐಟಿ ಮಟ್ಟಕ್ಕೆ ಅಭಿವೃದ್ಧಿ ಪಡಿಸಲು ಎಲ್ಲ ರೀತಿಯ ನೆರವು ನೀಡಲಾಗುವುದು’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ ನೀಡಿದರು.

ಯುವಿಸಿಇಗೆ ಸ್ವಾಯತ್ತ ವಿಶ್ವವಿದ್ಯಾಲಯದ ಸ್ಥಾನ ನೀಡುವ ಮಾತು ಎರಡು ದಶಕಗಳಿಂದ ಕೇಳಿಬರುತ್ತಿತ್ತು. ನಮ್ಮ ಸರ್ಕಾರ ಈ ವಿಚಾರದಲ್ಲಿ ಬದ್ಧತೆ ಪ್ರದರ್ಶಿಸಿದೆ.

ಡಾ.ಸಿ.ಎನ್.ಅಶ್ವತ್ಥನಾರಾಯಣ, ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಸಚಿವ

ಮಧು ಬಂಗಾರಪ್ಪ ನೇಮಕ



ನವದೆಹಲಿ: ಕೆಪಿಸಿಸಿ ಹಿಂದುಳಿದ ವಿಭಾಗದ ಕಾರ್ಯಾಧ್ಯಕ್ಷರನ್ನಾಗಿ ಮಾಜಿ ಶಾಸಕ ಮಧು ಬಂಗಾರಪ್ಪ ಅವರನ್ನು ನೇಮಿಸಿ ಎಐಸಿಸಿ ಒಬಿಸಿ ವಿಭಾಗದ ಅಧ್ಯಕ್ಷ ಕ್ಯಾಪ್ಟನ್ ಅಜಯ್ ಸಿಂಗ್ ಯಾದವ್ ಆದೇಶ ಹೊರಡಿಸಿದ್ದಾರೆ.

ಹಿಜಾಬ್ ನಿಷೇಧ: ವಕೀಲ ಕಪಿಲ್ ಸಿಬಲ್ ವಾದ

ವಿದ್ಯಾರ್ಥಿಗಳು ಶಾಲೆಯಿಂದ ಹೊರಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಶಾಲಾ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿದ ಬಳಿಕ ಉಡುಪಿ, ಮಂಗಳೂರು, ದಕ್ಷಿಣ ಕನ್ನಡದ ಹಲವು ಕಾಲೇಜುಗಳಲ್ಲಿ 900 ವಿದ್ಯಾರ್ಥಿಗಳ ಪೈಕಿ 145 ವಿದ್ಯಾರ್ಥಿಗಳು ವರ್ಗಾವಣೆ ಪ್ರಮಾಣಪತ್ರ ಪಡೆದಿದ್ದಾರೆ. ಇದು ಕಳವಳಕಾರಿ ಬೆಳವಣಿಗೆ ಎಂದು ವಕೀಲ ಕಪಿಲ್ ಸಿಬಲ್ ಹೇಳಿದರು.

ಕರ್ನಾಟಕದ ಪದವಿಪೂರ್ವ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ನ್ಯಾಯಪೀಠವು ಗುರುವಾರ ಮುಂದುವರಿಸಿತು.

ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠದ ಎದುರು ವಾದ ಮಂಡಿಸಿದ ಅವರು, ಡೆಕ್ಕನ್ ಹೆರಾಲ್ಡ್‌ನ ಮಂಗಳೂರಿನ ವರದಿಗಾರ ಹರ್ಷ ಅವರು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದು ಸಿದ್ಧಪಡಿಸಿದ ವರದಿಯನ್ನು ಉಲ್ಲೇಖಿಸಿದರು.

ಪದವಿಪೂರ್ವ ಕಾಲೇಜುಗಳಲ್ಲಿ ಶೇ 16ರಷ್ಟು ವಿದ್ಯಾರ್ಥಿಗಳು ಕಾಲೇಜಿನಿಂದ ಹೊರಕ್ಕೆ ಉಳಿಯಲು ಹಿಜಾಬ್ ನಿಷೇಧವೇ ಕಾರಣ ಎಂದು ಹೇಳಿದರು.

‘ನಮ್ಮ ದೇಶದಲ್ಲಿ ಸಾರ್ವಜನಿಕ ಪ್ರದೇಶದಲ್ಲಿ ಹಿಜಾಬ್ ಧರಿಸಬಹುದು. ಇದು ಯಾರು, ಏನು, ಎಲ್ಲಿಗೆ ಸಂಬಂಧಪಟ್ಟವರು ಎಂಬುದರ ಅಭಿವ್ಯಕ್ತಿಯಾಗಿದೆ. ಆದರೆ, ನಾನು ಶಾಲೆಗೆ ಪ್ರವೇಶ ಮಾಡುತ್ತಿದ್ದಂತೆ ನನ್ನ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುವುದೇಕೆ? ಹಿಜಾಬ್ ಧರಿಸುವುದು ವ್ಯಕ್ತಿತ್ವದ ಭಾಗ. ಅದು ಸಾಂಸ್ಕೃತಿಕ ಪರಂಪರೆಯ ಭಾಗವೂ ಹೌದು. ಇದು ಶಾಲೆಯ ದ್ವಾರದ ಬಳಿ ಅಂತ್ಯವಾಗುವುದೇಕೆ’ ಎಂದು ಅವರು ಪ್ರಶ್ನಿಸಿದರು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಪ್ರಶಾಂತ್ ಭೂಷಣ್, ‘ವಸ್ತ್ರಸಂಹಿತೆ ಜಾರಿಗೊಳಿಸಲು ಸರ್ಕಾರಕ್ಕೆ ಕಾನೂನು ಅನುಮತಿ ನೀಡುತ್ತದೆ. ಆದರೆ, ಅದಕ್ಕೆ ಸೂಕ್ತ ಕಾರಣ ಇರಬೇಕು. ಸಂವಿಧಾನದ 19 (2) ಪರಿಚ್ಛೇದದ ಅನುಸಾರ ತರ್ಕಬದ್ಧವಾಗಿರಬೇಕು. ಉಡುಪಿನ ಹಕ್ಕು ಅಭಿವ್ಯಕ್ತಿ ಸ್ವಾತಂತ್ರ್ಯದ ಅಡಿಯಲ್ಲಿ ಬರುತ್ತದೆ. ಅದರ ಮೇಲೆ ಹೇರುವ ಪ್ರತಿಯೊಂದು ನಿರ್ಬಂಧಗಳು ಕಾನೂನುಬದ್ಧ ಹಾಗೂ ತರ್ಕಬದ್ಧವಾಗಿರಬೇಕು. ಆದರೆ, ಕರ್ನಾಟಕದಲ್ಲಿ ಈ ರೀತಿ ಆಗಿಲ್ಲ. ವಿದ್ಯಾರ್ಥಿಗಳ ಸ್ವಾತಂತ್ರ್ಯದ ಹರಣವಾಗಿದೆ’ ಎಂದರು.

ಹಿಜಾಬ್ ಬಗ್ಗೆ ವಿಸ್ತೃತ ಚರ್ಚೆ ನಡೆಯಬೇಕಿದ್ದು, ಪ್ರಕರಣವನ್ನು ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸಬೇಕು ಎಂದು ಅವರು ಹೇಳಿದರು. ಹಿರಿಯ ವಕೀಲ ದುಷ್ಯಂತ್ ದವೆ ಸಹ ಪ್ರಕರಣವನ್ನು ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸಬೇಕು ಎಂದು ಸಲಹೆ ನೀಡಿದರು.

ಹಿರಿಯ ವಕೀಲೆ ಜಯ್ನಾ ಕೊಠಾರಿ ವಾದ ಮಂಡಿಸಿ, ‘ಈ ಆದೇಶದ ಮೂಲಕ ಕರ್ನಾಟಕ ಸರ್ಕಾರ ಧಾರ್ಮಿಕ ಹಾಗೂ ಲಿಂಗ ತಾರತಮ್ಯ ತೋರಿದೆ. ಇದರಲ್ಲಿ ತೊಂದರೆ ಆಗಿರುವುದು ಕೇವಲ ಮುಸ್ಲಿಂ ಮಹಿಳೆಯರಿಗೆ. ಸುಪ್ರೀಂ ಕೋರ್ಟ್ ಈ ಹಿಂದೆ ಕೂಡಾ ವಿಭಾಗವಾರು ತಾರತಮ್ಯವನ್ನು ತಪ್ಪು ಎಂದು ಗುರುತಿಸಿದೆ’ ಎಂದರು.

ಬಳಿಕ ವಿಚಾರಣೆಯನ್ನು ಸೋಮವಾರ ಮಧ್ಯಾಹ್ನ 2 ಗಂಟೆಗೆ ಮುಂದೂಡಲಾಯಿತು.

ಸಿ.ಎಂ ನಿವಾಸದ ಮುಂದೆ 20ಕ್ಕೆ ಪಂಚಮಸಾಲಿಗಳ ಧರಣಿ

ಬೆಂಗಳೂರು: ರಾಜ್ಯದ ಪಂಚಮಸಾಲಿ, ಮಲೆಗೌಡ, ಗೌಡ ಲಿಂಗಾಯತ, ದೀಕ್ಷಾ ಲಿಂಗಾಯತರಿಗೆ ಪ್ರವರ್ಗ ‘2ಎ’ ಮೀಸಲಾತಿ ನೀಡಲು ಆಗ್ರಹಿಸಿ ಸೆ.20ರಂದು ಹಾವೇರಿ ಜಿಲ್ಲೆ ಶಿಗ್ಗಾವಿಯಲ್ಲಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮನೆಯ ಮುಂದೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ.

ಮೀಸಲಾತಿಗೆ ಆಗ್ರಹಿಸಿ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಿರಂತರ ಹೋರಾಟ ನಡೆಸಿದರೂ, ಬೇಡಿಕೆ ಈಡೇರಿಲ್ಲ. ಸರ್ಕಾರ ನಾಲ್ಕು ಬಾರಿ ಕೊಟ್ಟ ಮಾತು ತಪ್ಪಿದೆ. ಹಾಗಾಗಿ, ಮುಖ್ಯಮಂತ್ರಿ ಮನೆಯ ಮುಂದೆ ಒಂದು ದಿನದ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್, ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಮಾಜಿ ಸಚಿವ ವಿನಯ ಕುಲಕರ್ಣಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅಂದು ಬೆಳಿಗ್ಗೆ 9ಕ್ಕೆ ಶಿಗ್ಗಾವಿಯ ಚನ್ನಮ್ಮ ವೃತ್ತದಲ್ಲಿ ಕೂಡಲಸಂಗಮ ಶ್ರೀಗಳು ಪೂಜೆ ಸಲ್ಲಿಸಿದ ನಂತರ ಮುಖ್ಯಮಂತ್ರಿ ಮನೆ ಮುಂದೆ ಧರಣಿ ಸತ್ಯಾಗ್ರಹ ಆರಂಭಿಸಲಾಗುವುದು. ಧಾರವಾಡ ಶಾಸಕ ಅರವಿಂದ ಬೆಲ್ಲದ, ಮಾಜಿ ಶಾಸಕ ಎಚ್.ಎಸ್.ಶಿವಶಂಕರ್, ಗೌಡ ಲಿಂಗಾಯತ ಸಮಾಜದ ರಾಜ್ಯ ಸಂಚಾಲಕ ಅಮ್ಮನಪುರ ಮಲ್ಲೇಶ್, ಮಲೆಗೌಡ ಲಿಂಗಾಯತ ಸಮಾಜದ ಸಂಚಾಲಕ ಮಲ್ಲಿಕಾರ್ಜುನ ಗೌಡ ಹಕ್ರೆ, ದೀಕ್ಷಾ ಲಿಂಗಾಯತ ಸಂಚಾಲಕ ಶರಣು ಪಪ್ಪ ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ಹಣ ಅಕ್ರಮ ವರ್ಗಾವಣೆ ಪ್ರಕರಣ

ಡಿ.ಕೆ.ಶಿವಕುಮಾರ್‌ಗೆ ಇ.ಡಿ. ಸಮನ್ಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ.) ಸಮನ್ಸ್ ಜಾರಿ ಮಾಡಿದೆ.

ಇದೇ 19ರಂದು ವಿಚಾರಣೆಗೆ ಹಾಜರಾಗುವಂತೆ ಇ.ಡಿ. ಸೂಚಿಸಿದೆ. ವಿಧಾನಮಂಡಲದ ಅಧಿವೇಶನ ನಡೆಯುತ್ತಿರುವುದರಿಂದ ಅಂದು ವಿಚಾರಣೆಗೆ ಹಾಜರಾಗಲು ಸಾಧ್ಯವಾಗುವುದಿಲ್ಲ. ಕಾಲಾವಕಾಶ ನೀಡಬೇಕು ಎಂದು ಪತ್ರ ಬರೆಯಲು ಶಿವಕುಮಾರ್ ತೀರ್ಮಾನಿಸಿದ್ದಾರೆ ಎಂದು ಆಪ್ತ ಮೂಲಗಳು ತಿಳಿಸಿವೆ.

‘ಭಾರತ್ ಜೋಡೊ ಯಾತ್ರೆ (ಭಾರತ ಒಗ್ಗೂಡಿಸಿ ಯಾತ್ರೆ) ಹಾಗೂ ವಿಧಾನಮಂಡಲ ಅಧಿವೇಶನ ನಡೆಯುತ್ತಿರುವ ವೇಳೆಯಲ್ಲೇ ಇ.ಡಿ. ನನಗೆ ಸಮನ್ಸ್ ನೀಡಿದೆ. ವಿಚಾರಣೆಗೆ ಸಹಕರಿಸಲು ನಾನು ಸಿದ್ಧನಿದ್ದೇನೆ. ಆದರೆ, ಸಮನ್ಸ್ ನೀಡಿರುವ ಸಮಯ ಹಾಗೂ ಕಿರುಕುಳದಿಂದ ನನ್ನ ಸಾಂವಿಧಾನಿಕ ಹಾಗೂ ರಾಜಕೀಯ ಕರ್ತವ್ಯಗಳನ್ನು ನಿಭಾಯಿಸಲು ಅಡ್ಡಿಯಾಗುತ್ತಿದೆ’ ಎಂದು ಶಿವಕುಮಾರ್ ಟ್ವೀಟ್ ಮಾಡಿದ್ದಾರೆ.

ಆಗಸ್ಟ್ 16ರಂದು ನಡೆದ ವಿಚಾರಣೆ ವೇಳೆ ಆರೋಪಿಗಳು, ಆರೋಪಪಟ್ಟಿಯ ಜತೆಗೆ ಇ.ಡಿ. ಅಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ಎಲ್ಲ ದಾಖಲೆಗಳನ್ನು ನೀಡುವಂತೆ ಮನವಿ ಮಾಡಿದ್ದರು. ಇ.ಡಿ. ಪರ ವಕೀಲರು, ‘ಈ ದಾಖಲೆಗಳನ್ನು ಕೂಡಲೇ ಸಲ್ಲಿಸಲು ಆಗುವುದಿಲ್ಲ. ನಾಲ್ಕೈದು ವಾರಗಳ ಕಾಲಾವಕಾಶ ಬೇಕು’ ಎಂದು ಹೇಳಿದ್ದರು. ಅವರ ವಾದವನ್ನು ಸಮ್ಮತಿಸಿದ ನ್ಯಾಯಾಲಯವು ವಿಚಾರಣೆಯನ್ನು ಸೆಪ್ಟೆಂಬರ್ 27ಕ್ಕೆ ಮುಂದೂಡಿತ್ತು.

ಯಾವ ತನಿಖೆಗೂ ಹೆದರಲ್ಲ: ಡಿಕೆಶಿ

ಮೈಸೂರು: ‘ಕಾಂಗ್ರೆಸ್ ಪಕ್ಷ ಮತ್ತು ನನ್ನನ್ನು ಹೆದರಿಸಲು ಬಿಜೆಪಿಯವರು ಮುಂದಾಗಿದ್ದಾರೆ. ನಾನು ಯಾವುದಕ್ಕೂ ಹೆದರುವವನಲ್ಲ. ಯಾವ ತನಿಖೆಯಾದರೂ ಮಾಡಿಕೊಳ್ಳಲಿ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಇ.ಡಿ ಮೂಲಕ ಸಮನ್ಸ್ ಕೊಡಿಸಿ ಕಿರುಕುಳ ನೀಡುತ್ತಿದ್ದಾರೆ. ನಮ್ಮ ಅವಧಿಯಲ್ಲಿನ ಯೋಜನೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಲು ಇಂಧನ ಇಲಾಖೆ ಅಧಿಕಾರಿಗಳ ಮೇಲೆ ಸರ್ಕಾರ ಒತ್ತಡ ಹೇರುತ್ತಿದೆ. ಎಲ್ಲ ದಾಖಲೆಗಳನ್ನೂ ಕೊಡಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ತಪ್ಪು ಸಾಬೀತಾದರೆ ನೇಣು ಹಾಕಲಿ’ ಎಂದರು. ‘ತನಿಖೆ ಆರಂಭಿಸಲು ಅವರಿಗೆ (ಬಿಜೆಪಿಯವರಿಗೆ) 3 ವರ್ಷ ಬೇಕಿತ್ತಾ?. ನಾವು ದಾಖಲೆ ಮುಚ್ಚಿಟ್ಟಿದ್ದೇವೆ ಎಂದು ಆರೋಪಿಸಿದ್ದಾರೆ. ಹಾರೆಯಿಂದಲೋ, ಜೆಸಿಬಿಯಿಂದಲೋ ಅಗೆದು ಹೊರ ತೆಗೆಯಲಿ ಬಿಡಿ’ ಎಂದು ಹೇಳಿದರು.

ಬದನವಾಳುವಿಗೆ ಡಿಕೆಶಿ ಭೇಟಿ: ಭಾರತ್ ಜೋಡೋ ಯಾತ್ರೆ ನಿಮಿತ್ತ ಅ.2ರಂದು ಸಂಸದ ರಾಹುಲ್ ಗಾಂಧಿ ಭೇಟಿ ನೀಡಲಿರುವ ನಂಜನಗೂಡು ತಾಲ್ಲೂಕಿನ ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಮಧ್ಯವರ್ತಿ ಚರಾಸ್ತಿ ಜಪ್ತಿ: ಹೆದರಿ ಶರಣಾದ ಆರೋಪಿ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿದ್ದ ಆರೋಪಿ ಸಿದ್ಧರಾಜು ಎಂಬುವವರ ಚರಾಸ್ತಿಯನ್ನು ಸಿಐಡಿ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದು, ಈ ಪ್ರಕ್ರಿಯೆಗೆ ಹೆದರಿ ಮತ್ತೊಬ್ಬ ಆರೋಪಿ ಎಚ್.ಬಿ. ಬೋರೇಗೌಡ ನ್ಯಾಯಾಲಯಕ್ಕೆ ಶರಣಾಗಿದ್ದಾರೆ.

‘ಪೊಲೀಸ್ ನೇಮಕಾತಿ ವಿಭಾಗದ ಸಿಬ್ಬಂದಿ ಹಾಗೂ ಅಭ್ಯರ್ಥಿಗಳ ಮಧ್ಯೆ ಮಧ್ಯವರ್ತಿಗಳಾಗಿದ್ದ ಸಿದ್ಧರಾಜು ಮತ್ತು ಬೋರೇಗೌಡ, ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದರು. ಎಷ್ಟೇ ಪ್ರಯತ್ನಿಸಿದರೂ ಆರೋಪಿಗಳ ಸುಳಿವು ಸಹ ಸಿಕ್ಕಿರಲಿಲ್ಲ. ಹೀಗಾಗಿ, ಇಬ್ಬರ ಚರಾಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ನ್ಯಾಯಾಲಯದಿಂದ ಅನುಮತಿ ಪಡೆಯಲಾಗಿತ್ತು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಸಿದ್ಧರಾಜುಗೆ ಸೇರಿದ್ದ ಲಗ್ಗೆರೆಯ ಮನೆಯಲ್ಲಿ ಗುರುವಾರ ಶೋಧ ನಡೆಸಲಾಯಿತು. ಟಿ.ವಿ, ದ್ವಿಚಕ್ರ ವಾಹನ ಹಾಗೂ ಆಸ್ತಿ ಸಂಪಾದನೆಗೆ ಸಂಬಂಧಪಟ್ಟ ದಾಖಲೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಆರೋಪಿ ಸಿದ್ಧರಾಜು ಸದ್ಯ ತಲೆಮರೆಸಿಕೊಂಡಿದ್ದಾನೆ’ ಎಂದು ತಿಳಿಸಿವೆ.

10 ದಿನ ಕಸ್ಟಡಿಗೆ: ‘ಆಸ್ತಿ ಜಪ್ತಿಗೆ ಹೆದರಿದ್ದ ಆರೋಪಿ ಬೋರೇಗೌಡ, ಗುರುವಾರ ನ್ಯಾಯಾಲಯದ ಎದುರು ಶರಣಾಗಿದ್ದಾನೆ. ಈತನನ್ನು ಹೆಚ್ಚಿನ ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ. ಈತ ನ್ಯಾಯಾಲಯದಲ್ಲಿ ಮನವಿ ಮಾಡಿದ್ದರಿಂದ, ಜಪ್ತಿ ಪ್ರಕ್ರಿಯೆ ಕೈಬಿಡಲಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.



‘ಬ್ಯುಸಿಯಾಗಿದ್ರೇನೇ ಖುಷಿ

ಶರತ್ ಹೆಗ್ಡೆ

ಒಂದಕ್ಕಿಂತ ಒಂದು ಸವಾಲಿನ ಪಾತ್ರಗಳನ್ನು ಮಾಡುತ್ತಲೇ ಗಮನ ಸೆಳೆದು ಬೆಳ್ಳಿತೆರೆಯಲ್ಲಿ ಮಿಂಚಿರುವ ಅಚ್ಯುತ್ ಕುಮಾರ್ ಹೊಸ ಗೆಟಪ್‌ನಲ್ಲಿ ‘ಮಾನ್ಸೂನ್ ರಾಗ’ ನುಡಿಸಲು ಹೊರಟಿದ್ದಾರೆ. ಹೊಸಬರ ತಂಡದ ಜೊತೆ ಹೊಸತನಕ್ಕೆ ಒಡ್ಡಿಕೊಂಡಿರುವ ಅಚ್ಯುತಣ್ಣ ಇಲ್ಲಿ ಯಾವ ‘ರಾಗ’ ಹಾಡಿದ್ದಾರೆ ಎಂದು ತಿಳಿಯುವ ಪ್ರಯತ್ನ ಇಲ್ಲಿದೆ.

- **‘ಮಾನ್ಸೂನ್ ರಾಗ’ದಲ್ಲಿ ನಿಮ್ಮ ‘ರಾಗ’ ಯಾವುದು?**

ಈಗಾಗಲೇ ದೃಶ್ಯಗಳಲ್ಲಿ ನೋಡಿದ್ದೀರಲ್ಲಾ. ಅದೇ ರಾಗ. ಒಳ್ಳೇ ಲವ್ವರ್ ಬಾಯ್ ತರಹ ಕಾಣಿಸಿದ್ದೇನೆ. ಒಳ್ಳೆಯ ತಂಡದ ಜೊತೆ ಅವಕಾಶ ಸಿಕ್ಕಿದೆ. ಸಿನಿಮಾ ಕಂಟೆಂಟ್ ಕೂಡಾ ಇಷ್ಟವಾಯಿತು. ಹಾಗಾಗಿ ತೊಡಗಿಸಿಕೊಂಡಿದ್ದೆ. ಒಳ್ಳೆಯ ಅನುಭವಿ ನಿರ್ದೇಶಕರೂ ಸಿಕ್ಕಿದ್ದಾರೆ. ಇಡೀ ತಂಡದ ಶ್ರಮ ಇದೆ. ಹಾಗಾಗಿ ಚಿತ್ರವೂ ಚೆನ್ನಾಗಿ ಮೂಡಿಬಂದಿದೆ. ನನ್ನ ‘ರಾಗ’ ವನ್ನು ಸಿನಿಮಾದಲ್ಲಿ ನೋಡಿ.

- **ಹೊಸಬರ ಜೊತೆಗಿನ ಕಾಂಬಿನೇಷನ್ ಹೇಗಿದೆ?**

ಹಾಗೆ ನೋಡಿದರೆ ನಾನು ಹೆಚ್ಚು ತೊಡಗಿಕೊಂಡಿರುವುದು ಹೊಸಬರ ಜೊತೆಗೇ. ಪ್ರತಿ ತಂಡವೂ ಹೊಸತನದಿಂದ ಕೂಡಿರುತ್ತದೆ. ಅದರಲ್ಲೂ ಕನ್ನಡದಲ್ಲಿ ಸಾಲು ಸಾಲಾಗಿ ಹೊಸಬರು ಬಂದಿದ್ದಾರೆ. ಅವರು ಕತೆ ಹೇಳುವ ರೀತಿ, ನಿರೂಪಣೆಯೇ ಭಿನ್ನವಾದದ್ದು. ಹೊಸ ಆಲೋಚನೆಗಳಿಂದ ಕೂಡಿರುತ್ತಾರೆ. ಹಾಗಾಗಿ ಅವರು ಹೇಳುವ ಪ್ರತಿ ಪಾತ್ರವೂ ಹೊಸದೇ ಆದ ಸವಾಲಿನಿಂದ ಕೂಡಿರುತ್ತದೆ. ಈ ಸವಾಲನ್ನು ನಾನು ಖುಷಿಯಿಂದ ಅನುಭವಿಸುತ್ತಾ ಎದುರಿಸುತ್ತೇನೆ. ನಮಗೂ ಒಂದು ಪರೀಕ್ಷೆಯಂತೆಯೇ ಇರುತ್ತದೆ. ಹಾಗೆಯೇ ಇರಬೇಕು ಅಲ್ವಾ.

- **‘ಮಾನ್ಸೂನ್ ರಾಗ’ದ ಅನುಭವ? ನಿಮಗಾಗಿಯೇ ಪಾತ್ರ ಸೃಷ್ಟಿ ಮಾಡಿದರೇ?**

ಅನುಭವ ಹೊಸದೇ ಆಗಿದೆ. ಗೋಕರ್ಣದಲ್ಲಿ ಚಿತ್ರೀಕರಣ ನಡೆದಿತ್ತು. ಗೋಕರ್ಣದ ಕಡಲ ತೀರ, ಆ ಊರು, ಓಣಿಗಳು, ಅಷ್ಟೇ ಏಕೆ ಜಯಂತ ಕಾಯ್ಕಿಣಿಯವರ ಮನೆಯಿರುವ ಓಣಿಯಲ್ಲೂ ಚಿತ್ರೀಕರಣ ನಡೆಸಿದ್ದೇವೆ. ತುಂಬಾ ಖುಷಿ ಕೊಟ್ಟಿದೆ. ಕಥೆಗೆ ಬೇಕಾದಂತೆ ಪಾತ್ರ ಸೃಷ್ಟಿ ಮಾಡಿದ್ದಾರೆ. ಅದಕ್ಕೆ ನಾನು ಹೊಂದುತ್ತೇನೆ ಎಂಬ ಕಾರಣಕ್ಕೆ ತೆಗೆದುಕೊಂಡಿದ್ದಾರೆ.

- **‘ಫ್ಲೋರ್ ವಾಲ್ಸ್’ನಿಂದಾಚೆ ಬಂದ ಅಚ್ಯುತಣ್ಣ ಹೇಗಿದ್ದಾರೆ?**

ಹೊಸ ಸವಾಲು, ಹೊಸ ನಿರೂಪಣೆಯ ಕಥೆಗಳು, ಪಾತ್ರಗಳು ಸಿಗುತ್ತಿವೆ. ಇವೇ ನಮ್ಮನ್ನು ಲವಲವಿಕೆಯಿಂದ ಇರಿಸುತ್ತವೆ. ಹಾಗಾಗಿ ಸಿದ್ಧ ಸೂತ್ರಗಳು ಅನಿಸಿಕೊಂಡಿರುವ ಪಾತ್ರಗಳು, ಟಿಪಿಕಲ್ ಲುಕ್ ಅಂತೀರಲ್ಲಾ, ಅಂಥ ಪಾತ್ರಗಳಿಂದ ಸ್ವಲ್ಪ ಹೊರಬಂದು ಹೊಸ ಬಗೆಯ ಪಾತ್ರಗಳನ್ನು ಮಾಡುತ್ತಿದ್ದೇನೆ.

- **ತುಂಬಾ ಬ್ಯುಸಿ ಆಗಿಬಿಟ್ಟಿರಾ ಹೇಗೆ?**

ಬ್ಯುಸಿ ಆಗೋದು ಅಂದ್ರೇನು? ಒಂದು ಕೆಲಸದ ನಂತರ ಇನ್ನೊಂದಕ್ಕೆ ಬದಲಾಗುತ್ತಲೇ ಇರಬೇಕು. ಹೀಗೆ ಅವಿರತವಾಗಿ ಇಟ್ಟಿರುವುದಕ್ಕೆ ಬರಹಗಾರರು, ಕಥೆಗಾರರು, ನಿರ್ದೇಶಕರಿಗೆ ಧನ್ಯವಾದ ಹೇಳಬೇಕು. ಈ ಕಥೆಗೆ ಈ ವ್ಯಕ್ತಿ ಸೂಕ್ತ ಎಂದು ಆರಿಸುತ್ತಾರಲ್ಲಾ ಅವರಿಗೆ ಥ್ಯಾಂಕ್ಸ್ ಹೇಳಬೇಕು. ನನಗೆ ಕೈತುಂಬಾ ಕೆಲಸ ಮಾಡಿಯೂ ಗೊತ್ತು. ಖಾಲಿ ಕುಳಿತೂ ಗೊತ್ತು. ಎರಡನ್ನೂ ಅನುಭವಿಸಿದ್ದೇನೆ. ಹಾಗಾಗಿ ಬ್ಯುಸಿ ಎಂದರೆ ಹೇಗೆ? ಖಾಲಿ ಕುಳಿತುಕೊಳ್ಳಬೇಕೇ? ಕೆಲಸವೇ ನನ್ನನ್ನು ಲವಲವಿಕೆಯಿಂದ ಇಡುವಂತೆ ಮಾಡಿದೆ. ಬ್ಯುಸಿ ಜೊತೆಗೆ ತುಂಬಾ ಖುಷಿಯಾಗಿಯೂ ಇದ್ದೇನೆ. ಬದುಕನ್ನು ಅನುಭವಿಸಿದ್ದೇನೆ.

- **ನಿರ್ದೇಶನದ ಸಾಧ್ಯತೆ ಇದೆಯೇ?**

ನನಗೆ ನಟನೆಯತ್ತ ಮಾತ್ರ ಗಮನ ಮತ್ತು ತಾಳ್ಮೆ. ನಿರ್ದೇಶಕನ ತಾಳ್ಮೆ ಇಲ್ಲ. ನಟನಿಗಿಂತ ನಿರ್ದೇಶಕನಿಗೆ ಹತ್ತು ಪಟ್ಟು ತಾಳ್ಮೆ ಬೇಕಾಗುತ್ತದೆ. ಹಾಗಾಗಿ ಸದ್ಯ ಆ ಆಸೆ ಇಟ್ಟುಕೊಂಡಿಲ್ಲ. ನಟನೆಯಲ್ಲೇ ಖುಷಿ ಇದೆ. ನಾಟಕಗಳನ್ನೇನೋ ನಿರ್ದೇಶನ ಮಾಡಿದ್ದೆ. ಆದರೆ, ಆ ಅನುಭವ ಇಲ್ಲಿಗೆ ಸಾಲದು. ಇಲ್ಲಿಗೆ ಬೇರೆಯೇ ಕಲಿಕೆ ಬೇಕಾಗುತ್ತದೆ. ಹಾಗಾಗಿ ನಿರ್ದೇಶನದತ್ತ ತಲೆ ಹಾಕಿಲ್ಲ.

ಹೊಸ ಯೋಜನೆಗಳು...

ನೀವೇ ನೋಡುತ್ತಿದ್ದೀರಲ್ಲಾ. ‘ಕಾಂತಾರ’, ‘ಕ್ರಾಂತಿ’ ಸಿದ್ಧವಾಗಿವೆ. ಅಲ್ಲೂ ಒಂದು ಹೊಸ ಲುಕ್ ಇದೆ. ‘ರಾಘವೇಂದ್ರ ಸ್ಟೋರ್ಸ್’ನಲ್ಲೂ ಇದ್ದೇನೆ. ಇನ್ನೊಂದಿಷ್ಟು ಚಿತ್ರಗಳು ಕೈಯಲ್ಲಿವೆ. ಇದುವರೆಗೆ ಸಿಕ್ಕಿದ್ದು ಎಲ್ಲವೂ ಒಳ್ಳೆಯ ಪಾತ್ರಗಳೇ. ಇನ್ನು ಹೊಸ ಚಿತ್ರಗಳ ಪಾತ್ರಗಳನ್ನು ಸಿನಿಮಾದಲ್ಲೇ ನೋಡಿ ಹೇಳಿ.

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ



ವೈಭವಿಗೆ ಬಹುಮುಖಿಯ ಕನಸು

ಮರಾಠಿ ಮಣ್ಣಿನ ಬೆಡಗಿ ಚಂದನವನಕ್ಕೆ ಎರಡನೇ ಬಾರಿ ಕಾಲಿಟ್ಟು ಹೆಸರು ಮಾಡಿದ್ದಾರೆ. ಇವರೇ ವೈಭವಿ ಶಾಂಡಿಲ್ಯ. ‘ಗಾಳಿಪಟ 2’ ಚಿತ್ರದಲ್ಲಿ ಶ್ವೇತಾ ಆಗಿ ಕಾಣಿಸಿಕೊಂಡವರು. ಕೆಲವು ವರ್ಷಗಳ ಹಿಂದೆ ‘ರಾಜ್-ವಿಷ್ಣು’ ಚಿತ್ರದ ಮೂಲಕ ಕನ್ನಡಕ್ಕೆ ಕಾಲಿಟ್ಟಿದ್ದರು. ಈಗ ‘ಗಾಳಿಪಟ-2’ ಚಿತ್ರದ ಮೂಲಕ ವಾಪಸಾಗಿದ್ದಾರೆ. ಅಷ್ಟೇ ಅಲ್ಲ, ತಮ್ಮ ಅಭಿನಯ ಮತ್ತು ಚೆಲುವಿನಿಂದ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚೊತ್ತಿದ್ದಾರೆ.

ಸದ್ಯ ಧ್ರುವ ಸರ್ಜಾ ಅಭಿನಯದ ‘ಮಾರ್ಟಿನ್’ ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸುತ್ತಿರುವ ವೈಭವಿ, ಆ ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ.

‘ಮಾರ್ಟಿನ್’ ನನ್ನ ಮೊದಲ ಪ್ಯಾನ್ ಇಂಡಿಯಾ ಸಿನಿಮಾ. ಅದು ಇನ್ನೊಂದು ಅದ್ಭುತವಾದ ಅನುಭವ. ಈ ಪಾತ್ರ ನನ್ನ ನಿಜಜೀವನಕ್ಕೆ ಬಹಳ ಹತ್ತಿರವಾದ ಪಾತ್ರ. ಬಬ್ಲಿ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಯಾರಿಗೂ ಹೆದರದ, ಜೀವನದಲ್ಲಿ ಏನಾದರೂ ಸಾಧಿಸುವ ಆಸೆ ಹೊತ್ತಿರುವ ಗಟ್ಟಿ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ’ ಎನ್ನುತ್ತಾರೆ ವೈಭವಿ.

ಒಬ್ಬ ನಟಿಯಾಗಿ ವಿಭಿನ್ನ ಪ್ರಯೋಗಗಳನ್ನು ಮಾಡುವುದಕ್ಕೆ ಇಷ್ಟ ಎನ್ನುವ ವೈಭವಿ, ‘ಯಾವುದೋ ಒಂದು ತರಹದ ಪಾತ್ರಕ್ಕೆ ನನಗೆ ಸೀಮಿತವಾಗುವುದಕ್ಕೆ ಇಷ್ಟವಿಲ್ಲ. ನನಗೆ ಡ್ರಗ್ ಅಡಿಕ್ಟ್ ಪಾತ್ರ, ಹಾರರ್ ಚಿತ್ರದಲ್ಲಿ ನಟನೆಯ ಆಸೆಯಿದೆ. ಮಹಿಳಾ ಪ್ರಧಾನ ಚಿತ್ರಗಳನ್ನು ಮಾಡಬೇಕು. ಸೂಕ್ಷ್ಮಸಂವೇದನೆಯ ಚಿತ್ರಗಳ ಜೊತೆಗೆ ರಾಜಮೌಳಿ ಅವರ ಶೈಲಿಯ ‘ಲಾರ್ಜರ್ ದೆನ್ ಲೈಫ್’ ಚಿತ್ರಗಳಲ್ಲೂ ನಟಿಸುವುದಕ್ಕೆ ಆಸೆ ಇದೆ. ಎಲ್ಲ ತರಹದ ಪಾತ್ರಗಳನ್ನು, ಎಲ್ಲ ಶೈಲಿಯ ನಿರ್ದೇಶಕರ ಜೊತೆಗೆ ಕೆಲಸ ಮಾಡುವುದಕ್ಕೆ ನಾನು ಎದುರು ನೋಡುತ್ತಿದ್ದೇನೆ’ ಎನ್ನುತ್ತಾರೆ. ಅವರು ಸದ್ಯಕ್ಕೆ ಯಾವುದೇ ಹೊಸ ಚಿತ್ರವನ್ನೂ ಒಪ್ಪಿಕೊಂಡಿಲ್ಲವಂತೆ. ನಾನೊಬ್ಬ ಬಹುಮುಖಿ ನಟಿ ಎಂದು ನಿರೂಪಿಸಬೇಕು. ಹಾಗಾಗಿ, ಅಂತಹ ಪಾತ್ರಗಳ ಆಯ್ಕೆ ಮತ್ತು ಹುಡುಕಾಟದಲ್ಲಿದ್ದೇನೆ. ಸದ್ಯದಲ್ಲೇ ಒಂದೊಳ್ಳೆಯ ಸುದ್ದಿ ಕೊಡುತ್ತೇನೆ’ ಎನ್ನುತ್ತಾರೆ ವೈಭವಿ.

‘ಬಾನ ದಾರಿ’ ಹುಡುಕುತ್ತಾ ಆಫ್ರಿಕಾದತ್ತ ಗಣಿ

‘ಮಳೆಯಲಿ ಜೊತೆಯಲಿ’, ‘ದಿಲ್ ರಂಗೀಲಾ’ ಹಾಗೂ ‘99’ ಸಿನಿಮಾ ಬಳಿಕ ನಿರ್ದೇಶಕ ಪ್ರೀತಂ ಗುಬ್ಬಿ ಹಾಗೂ ನಟ ಗಣೇಶ್ ಜೋಡಿಯ ಹೊಸ ಸಿನಿಮಾ ‘ಬಾನ ದಾರಿಯಲ್ಲಿ’ ಚಿತ್ರೀಕರಣ ಭರದಿಂದ ಸಾಗಿದ್ದು, ಶೀಘ್ರದಲ್ಲೇ ಚಿತ್ರತಂಡ ಆಫ್ರಿಕಾ ನೆಲದಲ್ಲಿ ಹೆಜ್ಜೆ ಇಡಲಿದೆ.

ಮಂಗಳೂರಿನಲ್ಲಿ ಚಿತ್ರದ ದ್ವಿತೀಯ ಹಂತದ ಚಿತ್ರೀಕರಣ ಮುಕ್ತಾಯವಾಗಿದೆ. ವಾಟರ್ ಗೇಮ್ಸ್ ಸೇರಿದಂತೆ ಕೆಲವು ಭಾಗದ ಚಿತ್ರೀಕರಣ ಮಂಗಳೂರಿನಲ್ಲಿ ನಡೆದಿದೆ. ಗೋಲ್ಡನ್ ಸ್ಟಾರ್ ಗಣೇಶ್ ಕ್ರಿಕೆಟಿಗನಾಗಿ ಈ ಚಿತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಕ್ರೀಡಾ ವಿಷಯದ ಕಥಾ ವಸ್ತುವನ್ನಿಟ್ಟುಕೊಂಡು ಚಿತ್ರ ಮೂಡಿಬರಲಿದೆ. ನಾಯಕಿ ರುಕ್ಮಿಣಿ ವಸಂತ್ ಇಲ್ಲಿ ಈಜುಗಾರ್ತಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

‘ಬೀರ್‌ಬಲ್’ ಬೆಡಗಿಯಾಗಿ ಚಂದನವನ ಪ್ರವೇಶಿಸಿದ್ದ ನಟಿ ರುಕ್ಮಿಣಿ ವಸಂತ್ ಇದೀಗ ‘ಲೀಲ’ ಎಂಬ ಪಾತ್ರದ ಮುಖೇನ ಗಣೇಶ್‌ಗೆ ಜೋಡಿಯಾಗಿ ಇಲ್ಲಿರಲಿದ್ದಾರೆ. ಈ ಚಿತ್ರದ ಕಥೆ ಪ್ರೀತಾ ಜಯರಾಂ ಅವರದು. ಮಾಸ್ತಿ ಅವರ ಸಂಭಾಷಣೆ, ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಅಭಿಲಾಷ್ ಕಲ್ಲತ್ತಿ ಛಾಯಾಗ್ರಹಣ ಹಾಗೂ ದೀಪು ಎಸ್. ಕುಮಾರ್ ಸಂಕಲನ ಈ ಚಿತ್ರಕ್ಕಿದೆ. ರೀಷ್ಮಾ ನಾಣಯ್ಯ, ರಂಗಾಯಣ ರಘು ತಾರಾಗಣದಲ್ಲಿದ್ದಾರೆ. ಶ್ರೀವಾರಿ ಟಾಕೀಸ್ ಲಾಂಛನದಲ್ಲಿ ಚಿತ್ರ ನಿರ್ಮಾಣವಾಗುತ್ತಿದೆ.



ಬಾನ ದಾರಿಯಲ್ಲಿ

ಗಣೇಶ್, ರುಕ್ಮಿಣಿ ವಸಂತ್

‘ಮತ್ತೆ ಮಾಯಾಮೃಗ’ದ ಬೆನ್ನತ್ತಿ

ಕಿರುತೆರೆ

‘ಮತ್ತೆ ಮಾಯಾಮೃಗ’ ಧಾರಾವಾಹಿ ಸೆಟ್ಟೇರಿದೆ. ಹಳೆಯದು ಹೊನ್ನು ಎಂಬ ಮಾತು ಧಾರಾವಾಹಿ ಕ್ಷೇತ್ರದಲ್ಲೂ ನಿಜವೆನಿಸಿದೆ. ಆ ಹೊನ್ನಿನ ಜಿಂಕೆಯ ಬೆನ್ನಟ್ಟಿ ಮೂವರು ‘ಬೇಟೆ’ಗಾರರು ಹೊರಟಿದ್ದಾರೆ. ಟಿ.ಎನ್. ಸೀತಾರಾಂ, ಪಿ. ಶೇಷಾದ್ರಿ, ನಾಗೇಂದ್ರ ಷಾ. ಹಳೆಯ ಕಥೆಯ ಮುಂದುವರಿದ ಭಾಗಕ್ಕೆ ಬೇಡಿಕೆ ಬಂದದ್ದು ಹೇಗೆ? ಇದರಲ್ಲಿ ಹೊಸ ತಲೆಮಾರಿಗೆ ಏನು ಹೇಳಲಾಗುತ್ತಿದೆ ಎಂಬ ಬಗ್ಗೆ ಮನಬಿಚ್ಚಿ ಮಾತನಾಡಿದ್ದಾರೆ ಟಿ.ಎನ್. ಸೀತಾರಾಂ. ಇದನ್ನು ಅವರ ಲಹರಿಯಲ್ಲೇ ಕೇಳೋಣ.

ವೀಕ್ಷಕರ ನಾಡಿ ಮಿಡಿತವನ್ನು ಗಮನಿಸಿದ್ದೇನೆ. ‘ಮಾಯಾಮೃಗ’ವನ್ನು ನಾವು ಯುಟ್ಯೂಬ್‌ನಲ್ಲಿ ಪ್ರಸಾರ ಮಾಡಿದಾಗ ಅದು ಅಪಾರ ವೀಕ್ಷಣೆಗೊಳಗಾಯಿತು ಮತ್ತು ಸಾಕಷ್ಟು ಅಭಿಪ್ರಾಯಗಳೂ ಬಂದವು. ಇದೇ ವೇಳೆ ಸಿರಿ ಕನ್ನಡ ವಾಹಿನಿಯವರು ಬಂದು ಒಂದು ಧಾರಾವಾಹಿ ಮಾಡಿಕೊಡುವಂತೆ ಕೇಳಿದರು. ನನ್ನಿಂದಾಗದು ಎಂದು ಹೇಳಿ ಕಳುಹಿಸಿದ್ದೆ. ಕೆಲ ಕಾಲ ಕಳೆದ ನಂತರ ಮತ್ತೆ ಬಂದರು. ಮಾಯಾಮೃಗವನ್ನೇ ಮತ್ತೆ ಮಾಡಬಹುದೇ ಎಂಬ ಚರ್ಚೆ ನಡೆಸಿದರು. ಕೊನೆಗೆ ನಿರ್ದೇಶಕ ಗೆಳೆಯರಾದ ಪಿ. ಶೇಷಾದ್ರಿ, ನಾಗೇಂದ್ರ ಷಾ ಜೊತೆಗೆ ಚರ್ಚಿಸಿದೆ. ನಾನಿದ್ದರೆ ಅವರೂ ಧೈರ್ಯ ಮಾಡುವುದಾಗಿ ಹೇಳಿದರು. ಹೀಗೆ ಪರಸ್ಪರರ ಮೇಲಿನ ಧೈರ್ಯದಿಂದ ಈ ಸಾಹಸಕ್ಕೆ ಮುಂದಾಗಿದ್ದೇವೆ. ಮೂವರೂ ಈ ಧಾರಾವಾಹಿಯನ್ನು ನಿರ್ವಹಿಸಿಕೊಂಡು ಹೋಗುತ್ತೇವೆ.

ಹೊಸ ತಲೆಮಾರಿಗೆ ಕಥೆ ಹೇಳಬೇಕಾದ ಸವಾಲು ಇದೆ. ನೋಡಿ, ಒಂದು ವರ್ಷದ ಬೆಳವಣಿಗೆಯಲ್ಲಿ ಸಮಾಜವು ತಂತ್ರಜ್ಞಾನದ ನೆಲೆಯಲ್ಲಿ ಮೂರು ವರ್ಷ ಮುಂದಕ್ಕೆ ಬೆಳೆದುಬಿಡುತ್ತದೆ. ಅದು ಬುದ್ಧಿಯ ವೇಗ. ಸಮಾಜದ ವೇಗವೂ ಅದಕ್ಕೆ ತಕ್ಕ ಹಾಗಿದೆ. ಆದರೆ, ಹೃದಯದ ವೇಗ ಇದೆಯಲ್ಲಾ ಅದು ಸ್ಥಿರವಾಗಿಯೇ ಇರುತ್ತದೆ. ಭಾವನೆಗೆ ತಕ್ಕಂತೆ ಸ್ಪಂದಿಸುತ್ತದೆ. ಇದು ಆಗಬೇಕಾದದ್ದು. ಶಿಥಿಲಗೊಳ್ಳುತ್ತಿರುವ ಸಂಬಂಧ, ತಾಂತ್ರಿಕ ಬೆಳವಣಿಗೆಯ ಕಾರಣಗಳಿಂದಾಗಿ ಸಂಬಂಧಗಳಲ್ಲಿ ಅಂತರ ಹೆಚ್ಚಿರುವುದು ಇತ್ಯಾದಿ ಅನೇಕ ಬದಲಾವಣೆಗಳನ್ನು ಕಾಣುತ್ತಲೇ ಇದ್ದೇವೆ. ಈ ಎಲ್ಲ ಧಾವಂತದ ನಡುವೆ ನಮ್ಮ ಬದುಕು ಸಹಜತೆಯಿಂದ ಹೇಗೆ ಕೂಡಿರಬೇಕು? ನೈತಿಕ ಪ್ರಜ್ಞೆ, ನೆಲೆಗಟ್ಟಿನಲ್ಲಿ ಬದುಕುವುದು ಹೇಗೆ ಇತ್ಯಾದಿಯನ್ನು ಹೊಸ ಆವೃತ್ತಿಯಲ್ಲಿ ಹೇಳಲು ಪ್ರಯತ್ನಿಸಿದ್ದೇವೆ.

ಹಳೆ ಮಾಯಾಮೃಗದ ಪಾತ್ರಗಳ ಮುಂದಿನ ತಲೆಮಾರು ಏನು ಮಾಡುತ್ತಿದೆ ಎಂಬುದನ್ನು ಇಲ್ಲಿ ತೋರಿಸಲು ಹೋಗಿದ್ದೇವೆ.

ನಮ್ಮ ಧಾರಾವಾಹಿಯಲ್ಲಿ ವೈಭವೀಕರಣ ಇಲ್ಲ. ಎಲ್ಲಿ ಹೇಗಿದೆಯೋ ಹಾಗೆಯೇ ತೋರಿಸುತ್ತೇವೆ. ಅದೂ ಸರಳವಾಗಿ. ಅದೇ ನಮ್ಮ ಧಾರಾವಾಹಿಯ ಪ್ಲಸ್ ಪಾಯಿಂಟ್. ಇಲ್ಲಿ ನಾನೂ ವಕೀಲನಾಗಿಯೇ ಇರುತ್ತೇನೆ. ಆದರೆ, ಬೇರೆ ಧಾರಾವಾಹಿಗಳಲ್ಲಿ ಕಾಣುವಂತೆ ಕೋರ್ಟು ಕೇಸುಗಳು ಅಷ್ಟಾಗಿ ಇರುವುದಿಲ್ಲ. ವಕೀಲನೊಬ್ಬನ ನೈತಿಕ ನೆಲೆಗಟ್ಟಿನ ಜವಾಬ್ದಾರಿಯನ್ನು ತೋರಿಸಿದ್ದೇನೆ.

ವೀಕ್ಷಕರ ಸ್ಪಂದನವನ್ನೂ ಗಮನಿಸುತ್ತೇನೆ. ಅದರ ಪ್ರಕಾರ ನಾನು ಮಾಡುತ್ತಿರುವುದು ಸರಿ ಇದೆಯೇ ಎಂದು ತರ್ಕಕ್ಕೆ ಒಳಪಡಿಸಿಕೊಳ್ಳುತ್ತೇನೆ. ಹೀಗೆ ವೀಕ್ಷಕರೊಂದಿಗೆ ಒಂದು ಅನುಸಂಧಾನ ಇದ್ದೇ ಇರುತ್ತದೆ ನೋಡಿ.

ವೀಕ್ಷಕರು ಅಂದು – ಇಂದು ಹಾಗೆಯೇ ಇದ್ದಾರೆ. ನಾವು ಒಂದು ಹೆಜ್ಜೆ ಇಡಬೇಕು ಅಷ್ಟೇ. ನಮ್ಮ ಹೆಜ್ಜೆಗಳು ಯಾವುದೇ ಮಾಧ್ಯಮದ ಮೂಲಕ ಅವರಿಗೆ ಸುಲಭವಾಗಿ ಸಿಗುವಂತಾಗಬೇಕು. ಏನು ಕೊಟ್ಟರೂ ಸ್ವೀಕರಿಸುತ್ತಾರೆ ಎಂಬ ಮನೋಭಾವವೇನೋ ಇರಬಹುದು. ಆದರೆ, ನಾವು ಕೊಡುವುದು ಒಳ್ಳೆಯದಷ್ಟೇ ಆಗಿರಬೇಕು ಎಂಬ ಖಚಿತತೆ ನಮ್ಮಲ್ಲಿರಬೇಕು. ಹಾಗಾಗಿ ಈ ಚೌಕಟ್ಟುಗಳನ್ನು ಹಾಕಿಕೊಂಡೇ ‘ಮತ್ತೆ ಮಾಯಾಮೃಗ’ ನಿಮ್ಮ ಮುಂದೆ ಬರುತ್ತಿದೆ.




ಟಿ.ಎನ್. ಸೀತಾರಾಂ

ಸೆ.24ರಿಂದ ಬಿಗ್‌ಬಾಸ್

ಕನ್ನಡ ಕಿರುತೆರೆಯ ಖ್ಯಾತ ರಿಯಾಲಿಟಿ ಶೋ ‘ಬಿಗ್‌ಬಾಸ್’ ಆರಂಭಕ್ಕೆ ಮುಹೂರ್ತ ನಿಗದಿಯಾಗಿದೆ. ಬಿಗ್‌ಬಾಸ್ ಒಟಿಟಿ ಆವೃತ್ತಿ ಕ್ಲೈಮ್ಯಾಕ್ಸ್ ಹಂತ ತಲುಪುತ್ತಿದ್ದಂತೆಯೇ ಬಿಗ್‌ಬಾಸ್ 9ನೇ ಆವೃತ್ತಿಯ ಘೋಷಣೆಯಾಗಿದೆ. ಸೆ.24ರಂದು ಸಂಜೆ 6 ಗಂಟೆಗೆ 9ನೇ ಆವೃತ್ತಿ ಆರಂಭವಾಗಲಿದೆ ಎಂದು ಕಲರ್ಸ್ ಕನ್ನಡ ತಿಳಿಸಿದೆ. ಈ ಘೋಷಣೆಯ ಜೊತೆಗೆ ‘ಪ್ರವೀಣರ ಜೊತೆ ನವೀನರು!’ ಎಂಬ ಅಡಿಬರಹವನ್ನು ನೀಡಿ ಕಲರ್ಸ್ ಕನ್ನಡ ಪ್ರೊಮೊವೊಂದನ್ನು ಬಿಡುಗಡೆ ಮಾಡಿದೆ. ಅಚ್ಚರಿಯ ವಿಷಯವೇನೆಂದರೆ ಈ ಹಿಂದೆ ಬಿಗ್‌ಬಾಸ್ ಮನೆ ಪ್ರವೇಶಿಸಿದ್ದ ಪ್ರಶಾಂತ್ ಸಂಬರಗಿ, ದೀಪಿಕಾ ದಾಸ್ ಹಾಗೂ ಅನುಪಮಾ ಗೌಡ ಮತ್ತೆ ಬಿಗ್‌ಬಾಸ್ ಮನೆ ಪ್ರವೇಶಿಸಲಿದ್ದಾರೆ. ಜೊತೆಗೆ ಒಟಿಟಿ ಆವೃತ್ತಿಯ ನಾಲ್ಕೈದು ಸ್ಪರ್ಧಿಗಳೂ ಸೇರಿದಂತೆ ಹೊಸ ಸ್ಪರ್ಧಿಗಳೂ ಬಿಗ್‌ಬಾಸ್ ಮನೆಯನ್ನು ಪ್ರವೇಶಿಸಲಿದ್ದಾರೆ.

ಮಾಯಾವಿಯ ಬೆನ್ನತ್ತಿದ ‘ಶಿವಾಜಿ’



ನಟ, ನಿರ್ದೇಶಕ ರಮೇಶ್ ಅರವಿಂದ್ ಅವರು ಸೆ. 10ರಂದು 58ನೇ ವರ್ಷಕ್ಕೆ ಕಾಲಿಟ್ಟಿದ್ದಾರೆ. ಇದೇ ವೇಳೆ ಅವರ ‘ಶಿವಾಜಿ ಸುರತ್ಕಲ್ 2 - ದಿ ಮಿಸ್ಟೀರಿಯಸ್ ಕೇಸ್ ಆಫ್ ಮಾಯಾವಿ’ ಸಿನಿಮಾದ ಟೀಸರ್ ಬಿಡುಗಡೆಯಾಗಿದೆ. 2020ರಲ್ಲಿ ಬಿಡುಗಡೆಯಾದ ‘ಶಿವಾಜಿ ಸುರತ್ಕಲ್’ ಸಿನಿಮಾದ ಎರಡನೇ ಭಾಗ ಇದು.

ಆಕಾಶ್ ಶ್ರೀವತ್ಸ ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿರುವ ‘ಶಿವಾಜಿ ಸುರತ್ಕಲ್’ ಎರಡನೇ ಭಾಗದಲ್ಲಿ, ಹೊಸ ಪ್ರಕರಣವೊಂದರ ಜೊತೆಗೆ ಶಿವಾಜಿಯಾಗಿ ರಮೇಶ್ ಅರವಿಂದ್ ಮತ್ತೆ ತೆರೆಯ ಮೇಲೆ ಬರುತ್ತಿದ್ದಾರೆ. ಈ ಭಾಗದಲ್ಲಿ ‘ದಿ ಮಿಸ್ಟೀರಿಯಸ್ ಕೇಸ್ ಆಫ್ ಮಾಯಾವಿ’ ಭೇದಿಸಲು ಸಜ್ಜಾಗಿದ್ದಾರೆ. ಪ್ರಕರಣವನ್ನು ಬೆನ್ನತ್ತಿದ ಶಿವಾಜಿ ತಾನೇ ಬಂಧನಕ್ಕೆ ಒಳಗಾಗುತ್ತಾನೆಯೇ ಎನ್ನುವ ಕುತೂಹಲವನ್ನು ಟೀಸರ್ ಹುಟ್ಟುಹಾಕಿದೆ. ಇದೇ ಮೊದಲ ಬಾರಿಗೆ ಪಾತ್ರವೊಂದನ್ನು ಎರಡು ಸಿನಿಮಾಗಳಲ್ಲಿ ರಮೇಶ್ ಅರವಿಂದ್ ನಿಭಾಯಿಸುತ್ತಿದ್ದಾರೆ. ಶಿವಾಜಿಯ ತಂದೆ ವಿಜೇಂದ್ರ ಸುರತ್ಕಲ್ ಪಾತ್ರದಲ್ಲಿ ಖ್ಯಾತ ನಟ ನಾಸರ್ ಕಾಣಿಸಿಕೊಂಡಿದ್ದಾರೆ.

ಸಿನಿ ಸಂಕ್ಷಿಪ್ತ

‘ರಾಣ’ನೆದುರಿಗೆ ‘ದಿಲ್‌ಪಸಂದ್’



ರಾಣ

ಶ್ರೇಯಸ್ ರೀಷ್ಮಾ ನಾಣಯ್ಯ

ಈ ಬಾರಿ ವರ್ಷಾಂತ್ಯಕ್ಕೆ ಕನ್ನಡದ ಪ್ರೇಕ್ಷಕರಿಗೆ ಸಿನಿಮಾ ಹಬ್ಬ. ಈಗಾಗಲೇ ಸಾಲು ಸಾಲು ಕನ್ನಡ ಚಿತ್ರಗಳು ವರ್ಷಾಂತ್ಯದ ಬಿಡುಗಡೆ ದಿನಾಂಕವನ್ನು ಘೋಷಿಸಿದ್ದು, ಈ ಸಾಲಿಗೆ ಇನ್ನೆರಡು ಚಿತ್ರಗಳು ಸೇರ್ಪಡೆಯಾಗಿವೆ. ಡಾರ್ಲಿಂಗ್ ಕೃಷ್ಣ ನಟನೆಯ ‘ದಿಲ್‌ಪಸಂದ್’ ಹಾಗೂ ಶ್ರೇಯಸ್ ಕೆ. ಮಂಜು ನಟನೆಯ ‘ರಾಣ’ ಸಿನಿಮಾ ನವೆಂಬರ್ 11ಕ್ಕೆ ಬಿಡುಗಡೆಯಾಗಲಿವೆ.

ಗುಜ್ಜಲ್ ಟಾಕೀಸ್ ಲಾಂಛನದಲ್ಲಿ ಗುಜ್ಜಲ್ ಪುರುಷೋತ್ತಮ್ ನಿರ್ಮಿಸಿರುವ, ನಂದಕಿಶೋರ್ ನಿರ್ದೇಶನದ ‘ರಾಣ’ ಸಿನಿಮಾ ಕೂಡಾ ಬಿಡುಗಡೆಗೆ ಸಜ್ಜಾಗಿದೆ. ಶ್ರೇಯಸ್ ಅವರಿಗೆ ಜೋಡಿಯಾಗಿ ಈ ಸಿನಿಮಾದಲ್ಲಿ ‘ಏಕ್ ಲವ್ ಯಾ’ ಖ್ಯಾತಿಯ ರೀಷ್ಮಾ ನಾಣಯ್ಯ ಬಣ್ಣಹಚ್ಚಿದ್ದಾರೆ.

ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರದ ಈ ಚಿತ್ರದಲ್ಲಿ ಐದು ಸಾಹಸ ಸನ್ನಿವೇಶಗಳಿವೆ. ರವಿವರ್ಮ, ಚೇತನ್ ಡಿಸೋಜ ಡಿಫರೆಂಟ್ ಡ್ಯಾನಿ ಹಾಗೂ ಗಣೇಶ್ ಈ ದೃಶ್ಯಗಳಿಗೆ ಸಾಹಸ ಸಂಯೋಜನೆ ಮಾಡಿದ್ದಾರೆ. ಚಿತ್ರಕ್ಕೆ ಚಂದನ್ ಶೆಟ್ಟಿ ಸಂಗೀತ ನಿರ್ದೇಶನವಿದೆ. ಶೇಖರ್ ಚಂದ್ರ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ಇಮ್ರಾನ್ ಸರ್ದಾರಿಯಾ ಅವರ ನೃತ್ಯ ನಿರ್ದೇಶನವಿರುವ ಈ ಚಿತ್ರಕ್ಕೆ ಪ್ರಶಾಂತ್ ರಾಜಪ್ಪ ಸಂಭಾಷಣೆ ಬರೆದಿದ್ದಾರೆ. ರಜನಿ ಭಾರದ್ವಾಜ್, ಅಶೋಕ್, ಗಿರಿ, ಕಾಮಿಡಿ ಕಿಲಾಡಿಗಳು ಖ್ಯಾತಿಯ ಪ್ರವೀಣ್ ಕುಮಾರ್, ನಯನ, ರಘು, ಮೋಹನ್ ತಾರಾಬಳಗದಲ್ಲಿದ್ದಾರೆ.

ರಶ್ಮಿ ಫಿಲಂಸ್ ಲಾಂಛನದಲ್ಲಿ ಸುಮಂತ್ ಕ್ರಾಂತಿ ಅವರು ನಿರ್ಮಿಸಿರುವ ‘ದಿಲ್‌ಪಸಂದ್’ ಚಿತ್ರವನ್ನು ಶಿವತೇಜಸ್ ನಿರ್ದೇಶಿಸಿದ್ದಾರೆ. ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣ ಅವರಿಗೆ ಜೋಡಿಯಾಗಿ ನಿಶ್ವಿಕಾ ನಾಯ್ಡು ಹಾಗೂ ಮೇಘ ಶೆಟ್ಟಿ ಬಣ್ಣಹಚ್ಚಿದ್ದಾರೆ. ಪ್ರೇಮಕಥೆಯೊಂದಿಗೆ, ಕೌಟುಂಬಿಕ ಕಥಾಹಂದರವನ್ನು ಈ ಚಿತ್ರ ಹೊಂದಿದೆ. ಬೆಂಗಳೂರಿನಲ್ಲಿ ಈ ಚಿತ್ರದ ಬಹುತೇಕ ಚಿತ್ರೀಕರಣ ನಡೆದಿದೆ. ಚಿತ್ರವು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಮಾಸಾಂತ್ಯಕ್ಕೆ ಟೀಸರ್ ಬಿಡುಗಡೆಯಾಗುವ ಸಾಧ್ಯತೆಯಿದೆ.

ಚಿತ್ರದಲ್ಲಿನ ನಾಲ್ಕು ಹಾಡುಗಳಿಗೆ ಅರ್ಜುನ್ ಜನ್ಯ ಅವರ ಸಂಗೀತ ನಿರ್ದೇಶನವಿದೆ. ಶೇಖರ್ ಚಂದ್ರ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ, ವಿನೋದ್ ಸಾಹಸ ನಿರ್ದೇಶನ ಹಾಗೂ ಮುರಳಿ ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಸಾಧು ಕೋಕಿಲ, ರಂಗಾಯಣ ರಘು, ತಬಲ ನಾಣಿ, ಗಿರಿ, ಅರುಣಾ ಬಾಲರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ.



ದಿಲ್‌ಪಸಂದ್

ಡಾರ್ಲಿಂಗ್ ಕೃಷ್ಣ ನಿಶ್ವಿಕಾ ನಾಯ್ಡು



ನಾಳೆ ‘ಕಬ್ಜ’ ಟೀಸರ್

ರಿಯಲ್ ಸ್ಟಾರ್ ಉಪೇಂದ್ರ ನಟನೆಯ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾ ‘ಕಬ್ಜ’ದ ಚಿತ್ರೀಕರಣ ಪೂರ್ಣವಾಗಿದೆ. ಉಪೇಂದ್ರ ಅವರ ಜನ್ಮದಿನದ(ಸೆ.18) ಪ್ರಯುಕ್ತ ಸೆ.17ರಂದು ಚಿತ್ರದ ಟೀಸರ್ ಬಿಡುಗಡೆಗೊಳಿಸುವುದಾಗಿ ನಿರ್ದೇಶಕ ಆರ್.ಚಂದ್ರು ತಿಳಿಸಿದ್ದಾರೆ.

2021ರ ಸೆ.18ರಂದು ಚಿತ್ರದ ಕಾನ್ಸೆಪ್ಟ್ ಪೋಸ್ಟರ್ ಬಿಡುಗಡೆ ಮಾಡಿದ್ದ ಚಿತ್ರತಂಡವು, ದೀಪಾವಳಿಗೆ ಟೀಸರ್ ಬಿಡುಗಡೆಗೊಳಿಸುವುದಾಗಿ ಘೋಷಿಸಿತ್ತು. ಆದರೆ ಚಿತ್ರೀಕರಣ ವಿಳಂಬವಾದ ಕಾರಣ ಟೀಸರ್ ಬಿಡುಗಡೆ ಮುಂದೂಡಲ್ಪಟ್ಟಿತ್ತು. ಸತತ ಎರಡು ವರ್ಷ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದ ಚಿತ್ರತಂಡವು ಇದೀಗ ಟೀಸರ್ ಬಿಡುಗಡೆಗೆ ಮುಹೂರ್ತ ನಿಗದಿಪಡಿಸಿದೆ. ಸೆ.17ರ ಸಂಜೆ 5 ಗಂಟೆಗೆ ಆನಂದ್ ಆಡಿಯೊ ಯುಟ್ಯೂಬ್ ಚಾನೆಲ್‌ನಲ್ಲಿ ಟೀಸರ್ ಬಿಡುಗಡೆಯಾಗಲಿದೆ. ಶೀಘ್ರದಲ್ಲೇ ಚಿತ್ರದ ಬಿಡುಗಡೆ ದಿನಾಂಕವನ್ನು ಘೋಷಣೆ ಮಾಡುತ್ತೇವೆ ಎಂದಿದ್ದಾರೆ ಚಂದ್ರು.

ಚಿತ್ರದಲ್ಲಿ ಕಿಚ್ಚ ಸುದೀಪ್ ಅವರು ‘ಭಾರ್ಗವ್ ಭಕ್ಷಿ’ ಎಂಬ ಬಹುಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ‘ಕಬ್ಜ’ ಕೋಟೆಯಲ್ಲಿ ‘ಮಧುಮತಿ’ಯಾಗಿ ಬಹುಭಾಷಾ ನಟಿ ಶ್ರಿಯಾ ಸರಣ್ ಬಣ್ಣಹಚ್ಚಿದ್ದಾರೆ. ಬಹುಭಾಷಾ ನಟರ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ.

ಶ್ರೀ ಸಿದ್ದೇಶ್ವರ ಎಂಟರ್ ಪ್ರೈಸಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ‘ಕಬ್ಜ’ ಚಿತ್ರಕ್ಕೆ ಕೆ.ಜಿ.ಎಫ್ ಖ್ಯಾತಿಯ ರವಿ ಬಸ್ರೂರು ಸಂಗೀತ ನಿರ್ದೇಶನವಿದೆ. ಎ.ಜೆ.ಶೆಟ್ಟಿ ಛಾಯಾಗ್ರಹಣ, ಮಹೇಶ್ ಸಂಕಲನ, ರಾಜು ಸುಂದರಂ, ಗಣೇಶ್, ಶೇಖರ್ ನೃತ್ಯ ನಿರ್ದೇಶನ ಹಾಗೂ ರವಿವರ್ಮ, ವಿಕ್ರಂಮೋರ್, ವಿಜಯ್, ಪೀಟರ್ ಹೆನ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ವಿಮ್ಸ್‌ನಲ್ಲಿ ಮೂವರು ರೋಗಿಗಳು ಮೃತಪಟ್ಟ ಪ್ರಕರಣ • ವಿಧಾನಸಭೆಯಲ್ಲಿ ಕಾಂಗ್ರೆಸ್ ಆಗ್ರಹ

‘ಸಾವಿನ ಹೊಣೆ ಸರ್ಕಾರವೇ ಹೊರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿಯ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ವಿಮ್ಸ್) ಚಿಕಿತ್ಸೆಗೆ ದಾಖಲಾಗಿದ್ದ ಮೂವರು ರೋಗಿಗಳು ವಿದ್ಯುತ್ ಪೂರೈಕೆಯಲ್ಲಿನ ವ್ಯತ್ಯಯದಿಂದ ವೆಂಟಿಲೇಟರ್ ಸ್ಥಗಿತಗೊಂಡು ಮೃತಪಟ್ಟಿರುವ ಪ್ರಕರಣ ವಿಧಾನಸಭೆಯಲ್ಲಿ ಗುರುವಾರ ಪ್ರತಿಧ್ವನಿಸಿತು. ರೋಗಿಗಳ ಸಾವಿನ ಹೊಣೆಯನ್ನು ಸರ್ಕಾರವೇ ಹೊತ್ತುಕೊಳ್ಳಬೇಕು ಎಂದು ಕಾಂಗ್ರೆಸ್ ಆಗ್ರಹಿಸಿತು.

ವಿಧಾನಸಭೆಯಲ್ಲಿ ಗುರುವಾರ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ವಿಮ್ಸ್‌ನಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದ್ದ ಅವಧಿಯಲ್ಲಿ ಜನರೇಟರ್ ಕೂಡ ಕಾರ್ಯನಿರ್ವಹಿಸಿಲ್ಲ. ಈ ಅವಧಿಯಲ್ಲಿ ಮೌಲಾ ಹುಸೇನ್ (35), ಚಿಟ್ಟೆಮ್ಮ (30) ಮತ್ತು ಚಂದ್ರಮ್ಮ (60) ಎಂಬುವವರು ಮೃತಪಟ್ಟಿದ್ದಾರೆ ಎಂಬ ವರದಿ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಸರ್ಕಾರದ ನಿರ್ಲಕ್ಷ್ಯವೇ ಈ ಸಾವುಗಳಿಗೆ ಕಾರಣ’ ಎಂದರು.

‘ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಆಗಿದ್ದರೂ ವಿಮ್ಸ್ ನಿರ್ದೇಶಕರು ದೂರವಾಣಿ ಕರೆಗಳನ್ನು ಸ್ವೀಕರಿಸಿರಲಿಲ್ಲ ಎಂಬ ಆರೋಪವಿದೆ. ಜಿಲ್ಲಾಧಿಕಾರಿ, ಕಾಲೇಜಿನ ನಿರ್ದೇಶಕರು, ಜಿಲ್ಲಾ ಆರೋಗ್ಯಾಧಿಕಾರಿ, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಆರೋಗ್ಯ ಸಚಿವರು ಈ ದುರ್ಘಟನೆಯ ಹೊಣೆ ಹೊತ್ತುಕೊಳ್ಳಬೇಕು’ ಎಂದು ಹೇಳಿದರು.

‘ಘಟನೆಗೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸಬೇಕು. ಮೃತರ ಕುಟುಂಬಗಳಿಗೆ ತಲಾ ₹ 25 ಲಕ್ಷ ಪರಿಹಾರ ನೀಡಬೇಕು’ ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

‘ವಿದ್ಯುತ್ ಪೂರೈಕೆ ಸ್ಥಗಿತವಾಗಿರಲಿಲ್ಲ’: ಉತ್ತರ ನೀಡಿದ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ. ಶ್ರೀರಾಮುಲು, ‘ಆ ಅವಧಿಯಲ್ಲಿ ಎರಡು ಸಾವುಗಳು ಮಾತ್ರ ಸಂಭವಿಸಿವೆ. ಮೂತ್ರಪಿಂಡಗಳ ವೈಫಲ್ಯದಿಂದ ಅಸ್ವಸ್ಥರಾಗಿದ್ದ ಮೌಲಾ ಹುಸೇನ್ ಭಾನುವಾರ ಬೆಳಿಗ್ಗೆ ಆಸ್ಪತ್ರೆಗೆ ದಾಖಲಾಗಿದ್ದರು. ಬುಧವಾರ ಮೃತಪಟ್ಟಿದ್ದಾರೆ. ಚಿಟ್ಟೆಮ್ಮ ಹಾವು ಕಡಿತದಿಂದ ತೀವ್ರವಾಗಿ ಅಸ್ವಸ್ಥಗೊಂಡಿದ್ದರು. ಇಬ್ಬರ ಸಾವಿಗೂ ವಿದ್ಯುತ್ ಪೂರೈಕೆಯಲ್ಲಿನ ವ್ಯತ್ಯಯ ಕಾರಣವಲ್ಲ’ ಎಂದರು.

‘ವಿಮ್ಸ್‌ನಲ್ಲಿ ವಿದ್ಯುತ್ ಕೊರತೆ ಆಗಿಯೇ ಇಲ್ಲ. ವಿದ್ಯುತ್ ಪೂರೈಕೆ ಸ್ಥಗಿತವಾದ ಬಳಿಕ ಯುಪಿಎಸ್ ಬಳಕೆಯಾಗಿದೆ. ನಂತರ ಜನರೇಟರ್ ಬಳಕೆಯಾಗಿದೆ. ನಾನು ವಿಮ್ಸ್ ನಿರ್ದೇಶಕರ ಜತೆ ಮಾತನಾಡಿದ್ದೇನೆ. ಯಾವುದೇ ಲೋಪವೂ ಆಗಿಲ್ಲ’ ಎಂದು ಹೇಳಿದರು.

ಗದ್ದಲಕ್ಕೆ ಕಾರಣವಾದ ಆರೋಪ

ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಸದಸ್ಯರು ನೀಡಿದ್ದ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸುವ ನೋಟಿಸ್‌ನಲ್ಲಿ ಉಲ್ಲೇಖಿಸಿದ್ದ ‘ಸರ್ಕಾರಿ ಪ್ರಾಯೋಜಿತ ಕೊಲೆ’ ಎಂಬ ವಾಕ್ಯ ವಿಧಾನಸಭೆಯಲ್ಲಿ ಕೆಲಕಾಲ ಗದ್ದಲಕ್ಕೆ ಕಾರಣವಾಯಿತು.

ವಿಷಯ ಪ್ರಸ್ತಾಪವಾದ ಬಳಿಕ ಈ ನೋಟಿಸ್ ಕುರಿತು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ನಿಮ್ಮಿಂದ ಇದನ್ನು ನಿರೀಕ್ಷಿಸಿರಲಿಲ್ಲ. ಇಂತಹ ಪ್ರಕರಣಗಳಿಗೆ ಸರ್ಕಾರ ಮಾಡಿದ ಕೊಲೆ ಎನ್ನಬಹುದೆ’ ಎಂದು ಕೇಳಿದರು.

ಸಚಿವ ಬಿ. ಶ್ರೀರಾಮುಲು ಸೇರಿದಂತೆ ಬಿಜೆಪಿಯ ಹಲವರು ಆಕ್ಷೇಪ ವ್ಯಕ್ತಪಡಿಸಿದರು. ಕಾಂಗ್ರೆಸ್ ಶಾಸಕರೂ ವಾಕ್ಸಮರಕ್ಕೆ ಇಳಿದರು. ಇದರಿಂದಾಗಿ ಸದನದಲ್ಲಿ ಯಾರು ಏನು ಹೇಳುತ್ತಿದ್ದಾರೆ ಎಂಬುದೇ ತಿಳಿಯದಂತಹ ಸ್ಥಿತಿ ನಿರ್ಮಾಣವಾಯಿತು.

ಸ್ಥಾನಿಕ ವೈದ್ಯ ಸೇರಿ ನಾಲ್ವರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಇಲ್ಲಿನ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ವಿಮ್ಸ್) ಬುಧವಾರ ವಿದ್ಯುತ್ ಕಡಿತ, ಜನರೇಟರ್ ಕೆಟ್ಟು, ವೆಂಟಿಲೇಟರ್‌ಗಳಿಗೆ ಬ್ಯಾಟರಿ ಬಲವಿಲ್ಲದೆ ಸಂಭವಿಸಿದೆ ಎನ್ನಲಾದ ಸಾವುಗಳಿಗೆ ವೈದ್ಯರ ನಿರ್ಲಕ್ಷ್ಯ ಕಾರಣವೆಂಬ ಶಂಕೆ ಇದ್ದು, ಕೆಲವರಿಗೆ ನೋಟಿಸ್ ಜಾರಿಯಾಗಿದೆ.

ದುರ್ಘಟನೆ ಕುರಿತು ವಿಚಾರಣೆ ನಡೆಸಲು ರಾಜ್ಯ ಸರ್ಕಾರ ಸಮಿತಿ ರಚಿಸಿರುವ ಬೆನ್ನಲ್ಲೇ, ಜಿಲ್ಲಾಧಿಕಾರಿ ಪವನಕುಮಾರ್ ಮಾಲಪಾಟಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಚ್.ಎಲ್. ಜನಾರ್ದನ್ ಅವರಿಂದ ವರದಿ ತರಿಸಿಕೊಂಡಿದ್ದಾರೆ.

ಈ ಮಧ್ಯೆ, ಐಸಿಯುನಲ್ಲಿ ಕರೆಂಟ್, ಜನರೇಟರ್ ಕೈಕೊಟ್ಟು ಮೃತಪಟ್ಟವರು ಮೂವರಲ್ಲ, ನಾಲ್ವರು. ಚೇಳು ಕಡಿದು ಆಸ್ಪತ್ರೆಗೆ ಸೇರಿದ್ದ 17 ವರ್ಷದ ಮನೋಜ್ ಬುಧವಾರ ಕೊನೆಯುಸಿರೆಳೆದಿದ್ದಾನೆ. ಈತ ಬಳ್ಳಾರಿ ತಾಲ್ಲೂಕಿನ ಜೋಳದರಾಶಿ ಗ್ರಾಮದವನು. ವೆಂಟಿಲೇಟರ್ ಮೇಲಿದ್ದ ಈತನಿಗೂ ಆಮ್ಲಜನಕ ಪೂರೈಕೆ ಆಗದ್ದರಿಂದ ಮೃತಪಟ್ಟಿದ್ದಾನೆ ಎಂದು ಕುಟುಂಬದ ಸದಸ್ಯರು ದೂರಿದ್ದಾರೆ.

ಸ್ಥಾನಿಕ ವೈದ್ಯಾಧಿಕಾರಿ, ವೈದ್ಯಕೀಯ ಸೂಪರಿಂಟೆಂಡೆಂಟ್, ತೀವ್ರ ನಿಗಾ ಘಟಕದಲ್ಲಿ ಕರ್ತವ್ಯನಿರತರಾಗಿದ್ದ ವೈದ್ಯರು ಮತ್ತು ನರ್ಸಿಂಗ್ ಸೂಪರಿಂಟೆಂಡೆಂಟ್‌ಗೆ ನೋಟಿಸ್ ಜಾರಿಗೊಳಿಸಲಾಗಿದ್ದು, ‘ಐಸಿಯುವಿನಲ್ಲಿ ವಿದ್ಯುತ್ ಸಂಪರ್ಕ, ಜನರೇಟರ್, ವೆಂಟಿಲೇಟರ್ ಬ್ಯಾಟರಿ ಕೈಕೊಟ್ಟರೂ ಮುಂಜಾಗ್ರತೆ ವಹಿಸದೆ ಕರ್ತವ್ಯಲೋಪ ಎಸಗಿದ ನಿಮ್ಮ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬಾರದೇಕೆ?’ ನೋಟಿಸ್‌ನಲ್ಲಿ ಕೇಳಲಾಗಿದೆ.

‘ಬುಧವಾರ ಬೆಳಿಗ್ಗೆ 6ಗಂಟೆಯಿಂದಲೇ ಕರೆಂಟ್ ಇರಲಿಲ್ಲ. ಜನರೇಟರ್ ಕೈಕೊಟ್ಟಿತ್ತು. ವೆಂಟಿಲೇಟರ್ ತುರ್ತು ಸೇವೆಯ ಬ್ಯಾಟರಿ ಬ್ಯಾಕಪ್ 1 ಗಂಟೆ ಬಳಕೆಯಾಗಿತ್ತು. ಪರಿಸ್ಥಿತಿ ಗಂಭೀರವಾದರೂ ವೈದ್ಯಾಧಿಕಾರಿಗಳು ಮುನ್ನೆಚ್ಚರಿಕೆ ವಹಿಸಲಿಲ್ಲ’ ಎಂದು ಮೃತರ ಸಂಬಂಧಿಕರು ಆರೋಪಿಸಿದ್ದಾರೆ.

ಬೆಳಿಗ್ಗೆ ಸಮಸ್ಯೆ ಆರಂಭವಾದಂತೆ, ಗಂಭೀರ ಸ್ಥಿತಿಯಲ್ಲಿದ್ದವರನ್ನು ಟ್ರಾಮಾ ಕೇರ್ ಮತ್ತು ಹೊಸ ಶಸ್ತ್ರಚಿಕಿತ್ಸಾ ವಿಭಾಗಗಳಿಗೆ ಸ್ಥಳಾಂತರಿಸಲು ಸಿದ್ಧತೆ ನಡೆಯಿತು. ಅಷ್ಟರೊಳಗೆ ಇಬ್ಬರು ಮೃತಪಟ್ಟರು. ಮೂರನೇ ರೋಗಿ 11.30ಕ್ಕೆ ಮೃತರಾದರು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಗುರುವಾರ ವಿಮ್ಸ್‌ಗೆ ಜಿಲ್ಲಾಧಿಕಾರಿ ಮಾಲಪಾಟಿ, ಡಿಎಚ್‌ಒ ಜನಾರ್ದನ್ ಭೇಟಿ ಕೊಟ್ಟಿದ್ದರು. ವಿಮ್ಸ್ ನಿರ್ದೇಶಕ ಡಾ. ಗಂಗಾಧರಗೌಡ ವೈದ್ಯರ ಜತೆ ಸರಣಿ ಸಭೆಗಳನ್ನು ನಡೆಸಿದರು. ರಾಜ್ಯ ಸರ್ಕಾರ ರಚಿಸಿರುವ ಸಮಿತಿ ಶುಕ್ರವಾರ ವಿಮ್ಸ್‌ಗೆ ಭೇಟಿ ನೀಡಲಿದೆ ಎಂದು ಮೂಲಗಳು ತಿಳಿಸಿವೆ.

ಕುರಾನ್ ವಾಕ್ಯಗಳು ಸಂವಿಧಾನದ ಆಶಯಕ್ಕೆ ವಿರುದ್ಧವಲ್ಲ- ಸಚಿವೆ ಜೊಲ್ಲೆ

ಬೆಂಗಳೂರು: ‘ಮುಸ್ಲಿಮರ ಧರ್ಮ ಗ್ರಂಥವಾದ ಕುರಾನ್‌ನಲ್ಲಿರುವ ವಾಕ್ಯಗಳು ದೇಶದ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿಲ್ಲ’ ಎಂದು ಮುಜರಾಯಿ ಹಾಗೂ ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ವಿಧಾನ ಪರಿಷತ್ ಬಿಜೆಪಿ ಸದಸ್ಯ ಎನ್. ರವಿಕುಮಾರ್ ಅವರು, ‘ಕುರಾನ್‌ನಲ್ಲಿರುವ ವಾಕ್ಯಗಳು ದೇಶದ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ ಎಂಬುವುದರ ಕುರಿತು ಸರ್ಕಾರದ ನಿಲುವು ಏನು’ ಎಂಬ ಪ್ರಶ್ನೆಗೆ ಸಚಿವರು ಈ ಲಿಖಿತ ಉತ್ತರ ನೀಡಿದ್ದಾರೆ.

‘ಕುರಾನ್‌ನಲ್ಲಿರುವ ಸುರ ಆಯತ್ 3:85, ಸುರ ವರ್ಸೆ 9:5, 8:12, 3:118, 3:28, 9:23, 66.9 ಈ ವಾಕ್ಯಗಳ ಅರ್ಥವೇನು ಎಂಬ ಪ್ರಶ್ನೆಗೆ, ‘ಈ ವಾಕ್ಯಗಳನ್ನು ಅವುಗಳ ಹಿನ್ನೆಲೆಯೊಂದಿಗೆ ಧಾರ್ಮಿಕ ವಿದ್ವಾಂಸರು ಮಾತ್ರ ಅರ್ಥೈಯಿಸಬಹುದಾಗಿದೆ. 3ರಿಂದ 10 ವರ್ಷ ಒಳಗಿನ ಮಕ್ಕಳಲ್ಲಿ ಸಮಾಜದ ಇತರ ಧರ್ಮಗಳ ವಿರುದ್ಧವಾದ ದ್ವೇಷ ಭಾವನೆಗಳನ್ನು ತುಂಬುವ ಇಂಥ ಪಾಠಗಳನ್ನು ಮದರಸಗಳಲ್ಲಿ ಮಾಡುವುದರಿಂದ ಶಾಂತಿ ಸುವ್ಯವಸ್ಥೆಗೆ ಭಂಗ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಯೇ’ ಎಂಬ ಪ್ರಶ್ನೆಗೆ ಸಚಿವರು, ‘ಈವರೆಗೆ ಅಂಥ ಯಾವುದೇ ವಿಷಯ ಗಮನಕ್ಕೆ ಬಂದಿಲ್ಲ. ಬಂದರೆ, ಕಾನೂನಿನ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು’ ಎಂದೂ ತಿಳಿಸಿದ್ದಾರೆ.

ಸದನದಲ್ಲಿ ಕೇಳಿದ್ದು

- ದೆಹಲಿಯಲ್ಲಿ ಅಂಬೇಡ್ಕರ್ ಅವರಿಗೆ ಸ್ಮಾರಕ ಮಾಡಲು ಕಾಂಗ್ರೆಸ್ ಜಾಗ ಕೊಡಲಿಲ್ಲ.
  ಆರಗ ಜ್ಞಾನೇಂದ್ರ, ಗೃಹ ಸಚಿವ
- ಸಂವಿಧಾನ ಬದಲಿಸಲು ಮುಂದಾಗಿರುವ ನಿಮಗೆ ನಾಚಿಕೆಯಾಗುವುದಿಲ್ಲವೇ?
  ಸಲೀಂ ಅಹಮದ್, ಕಾಂಗ್ರೆಸ್ ಸದಸ್ಯ
- ಧಾರ್ಮಿಕ ಸ್ವಾತಂತ್ರ್ಯವು ಸಂವಿಧಾನದಲ್ಲೇ ಇದೆ. ಹೀಗಾಗಿ, ಮತಾಂತರ ಕಾಯ್ದೆ ಅಗತ್ಯವಿದೆಯೇ ಎನ್ನುವುದು ಚರ್ಚೆಯಾಗಲಿ.
  ಎಸ್.ಎಲ್. ಭೋಜೇಗೌಡ ಜೆಡಿಎಸ್ ಸದಸ್ಯ
- ಕಾಂಗ್ರೆಸ್‌ನವರದ್ದು ಇಟಲಿ ಯೂನಿವರ್ಸಿಟಿ. ಅಲ್ಲಿಯ ವಿಚಾರಗಳನ್ನು ಹೇಳುತ್ತಿದ್ದೀರಿ.
  ಭಾರತಿ ಶೆಟ್ಟಿ, ಬಿಜೆಪಿ ಸದಸ್ಯೆ

ಪಿಎಸ್‌ಐ ನೇಮಕ ಅಕ್ರಮ: ಚರ್ಚೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಅಕ್ರಮದ ಕುರಿತು ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿ ಕಾಂಗ್ರೆಸ್ ಶಾಸಕರು ಸಲ್ಲಿಸಿದ್ದ ನೋಟಿಸ್ ಅನ್ನು ಪರಿವರ್ತಿಸಿದ ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕಲ್ಪಿಸುವುದಾಗಿ ಪ್ರಕಟಿಸಿದರು.

ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಪಿಎಸ್‌ಐ ನೇಮಕಾತಿ ಹಗರಣ ಬಹಳ ಸದ್ದು ಮಾಡುತ್ತಿದೆ. ಈಗ ನಾವು ಹೇಗೆ ಮೌನವಾಗಿರಲು ಸಾಧ್ಯ. ಜನರು ಏನು ಭಾವಿಸುತ್ತಾರೆ? ನಿಲುವಳಿ ಸೂಚನೆ ಮಂಡಿಸಿ, ಚರ್ಚಿಸಲು ಅವಕಾಶ ನೀಡಬೇಕು’ ಎಂದರು.

‘ಹಳೆಯ ಪ್ರಕರಣವಾಗಿರುವುದು ಮತ್ತು ಇದಕ್ಕೆ ಸಂಬಂಧಿಸಿದ ವಿಷಯಗಳು ನ್ಯಾಯಾಲಯಗಳ ಮುಂದಿರುವುದರಿಂದ ಚರ್ಚೆಗೆ ಅವಕಾಶ ನೀಡಲು ಸಾಧ್ಯವಿಲ್ಲ’ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದರು. ‘ಇಂತಹ ಪ್ರಕರಣಗಳ ಕುರಿತು ಹಿಂದೆ ಚರ್ಚೆಗೆ ಅವಕಾಶ ಕಲ್ಪಿಸಿದ ನಿದರ್ಶನಗಳಿವೆ’ ಎಂದು ಸಿದ್ದರಾಮಯ್ಯ ಪಟ್ಟು ಹಿಡಿದರು. ಕಾಂಗ್ರೆಸ್– ಬಿಜೆಪಿ ಸದಸ್ಯರ ನಡುವೆ ಕೆಲಕಾಲ ಮಾತಿನ ಸಮರ ನಡೆಯಿತು. ನಿಯಮ–69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕಲ್ಪಿಸುವುದಾಗಿ ಸ್ಪೀಕರ್ ಪ್ರಕಟಿಸಿದರು.


‘ಹಳೆಯ ಪ್ರಕರಣಗಳ ಬಗ್ಗೆಯೂ ಚರ್ಚೆಯಾಗಲಿ’ ಎಂದು ಮಾಧುಸ್ವಾಮಿ ಹೇಳಿದರು. ‘2006ರಿಂದ ಈವರೆಗಿನ ಎಲ್ಲ ನೇಮಕಾತಿಗಳ ಕುರಿತು ತನಿಖೆಗೆ ಆಯೋಗ ನೇಮಿಸಿ’ ಎಂದು ಸಿದ್ದರಾಮಯ್ಯ ಸವಾಲು ಹಾಕಿದರು.

ಮತಾಂತರ ನಿಷೇಧ ಕಾಯ್ದೆ: ವಾಗ್ಯುದ್ಧ

ಬೆಂಗಳೂರು: ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆಯನ್ನು (ಮತಾಂತರ ನಿಷೇಧ) ವಿಧಾನ ಪರಿಷತ್‌ನಲ್ಲಿ ಗುರುವಾರ ಮಂಡಿಸಿದ ಬಳಿಕ ನಡೆದ ಚರ್ಚೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಮಧ್ಯೆ ವಾಗ್ಯುದ್ಧವೇ ನಡೆಯಿತು. ಅಂಬೇಡ್ಕರ್, ಬಸವಣ್ಣ, ಆರ್‌ಎಸ್‌ಎಸ್ ಸಿದ್ಧಾಂತಗಳು, ದ್ವೇಷ ಮತ್ತು ಪ್ರೀತಿ ವಿಷಯಗಳು ಉಲ್ಲೇಖವಾದವು. ವಾಗ್ಯುದ್ಧ ಸಂಕ್ಷಿಪ್ತ ನೋಟ ಇಲ್ಲಿದೆ.

‘ಮೊಘಲರು, ಬ್ರಿಟಿಷರ ಆಡಳಿತದಲ್ಲಿ ಸಾಮೂಹಿಕ ಮತಾಂತರ ಏಕೆ ನಡೆಯಲಿಲ್ಲ’

- ವಿಧಿ 25ರ ಅನ್ವಯ ಯಾವುದೇ ಧರ್ಮ ಆಚರಿಸಬಹುದಾಗಿದೆ. ಒಂದು ವೇಳೆ, ಕರ್ನಾಟಕದಲ್ಲಿ ಬಲವಂತದ ಮತಾಂತರ ನಡೆಯುತ್ತಿದ್ದರೆ ಇದುವರೆಗೆ ಎಷ್ಟು ಪ್ರಕರಣಗಳನ್ನು ದಾಖಲು ಮಾಡಿದ್ದೀರಿ?
- ನೀವು ಲೋಹಿಯಾ ಬಗ್ಗೆ ಮಾತನಾಡುವುದಾದರೆ ಈ ಕಡೆ (ಕಾಂಗ್ರೆಸ್) ಬನ್ನಿ. ನೀವು ಅಲ್ಲಿ ಗೋಡ್ಸೆ, ಗೋಲ್ವಾಲ್ಕರ್ ಬಗ್ಗೆ ಮಾತ್ರ ಮಾತನಾಡಬೇಕು.
- ದ್ವೇಷವನ್ನು ಪ್ರಚೋದಿಸಲಾಗುತ್ತದೆ. ದ್ವೇಷದ ವಿಷ ಬೀಜ ಬಿತ್ತಲಾಗುತ್ತದೆ. ಅದು ಜನ್ಮತಃ ಇರುವುದಿಲ್ಲ.
- ಸುಮಾರು 700 ವರ್ಷ ಮೊಘಲರು ಮತ್ತು 200 ವರ್ಷ ಬ್ರಿಟಿಷರು ಆಳಿದರು. ಇವರ ಅವಧಿಯಲ್ಲಿ ಎಲ್ಲರನ್ನೂ ಮತಾಂತರ ಮಾಡಬಹುದಾಗಿತ್ತು. ಆದರೆ, ಈ ದೇಶಕ್ಕೆ ಎಲ್ಲರನ್ನೂ ಒಳಗೊಳ್ಳುವ ಒಂದು ಸಂಸ್ಕೃತಿ ಇದೆ.
- ಮತಾಂತರ ನಿಷೇಧ ಮಸೂದೆಯು ಬಸವರಾಜ ಬೊಮ್ಮಾಯಿ ಹೋರಾಟ. ಬಸವಣ್ಣನ ಹೋರಾಟವಲ್ಲ.




- ಅಂಬೇಡ್ಕರ್ ಅವರು ಮೊದಲ ಮಂತ್ರಿಮಂಡಲದಲ್ಲೇ ಇದ್ದರು. ಅಂಬೇಡ್ಕರ್ ಅವರ ಬಗ್ಗೆ ಬಿಜೆಪಿಯವರು ಮೊಸಳೆ ಕಣ್ಣೀರು ಹಾಕುವುದು ಬೇಡ. ಅಂಬೇಡ್ಕರ್ ಅವರ ಹತ್ತಿರದ ಸಂಬಂಧಿ, ಚಿಂತಕ ಆನಂದ್ ತೇಲ್ತುಂಬ್ಡೆ ಅವರನ್ನು ಮೂರು ವರ್ಷಗಳಿಂದ ಜೈಲಿನಲ್ಲಿರಿಸಲಾಗಿದೆ. ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಅನ್ಯಾಯ ಮಾಡಿಲ್ಲ.
- ದೇಶದ ಜನಸಂಖ್ಯೆಯಲ್ಲಿ ಶೇ 80ರಷ್ಟು ಹಿಂದೂಗಳೇ ಇರುವಾಗ ಮತಾಂತರದ ಭಯ ಏಕೆ? ಈ ಕಾಯ್ದೆ ಮೂಲಕ ಅಲ್ಪಸಂಖ್ಯಾತರನ್ನು ಎರಡನೇ ದರ್ಜೆಯ ನಾಗರಿಕರನ್ನಾಗಿ ಮಾಡಿ ಅಸಮಾನತೆ ಸೃಷ್ಟಿಸುವ ಹುನ್ನಾರ ಇದು.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

‘ಕಾಂಗ್ರೆಸ್‌ನಿಂದಲೇ ಶಾಂತಿ ಸುವ್ಯವಸ್ಥೆಗೆ ಧಕ್ಕೆ’

- ನಾವು ವಿಧಿ 25 ಉಲ್ಲಂಘಿಸಿಲ್ಲ. ಮತಾಂತರ ಮಾಡಬೇಡಿ ಎಂದು ಎಲ್ಲಿಯೂ ಹೇಳಿಲ್ಲ. ಆದರೆ, ಬಲವಂತದ ಮತಾಂತರಕ್ಕೆ ಅವಕಾಶ ಇಲ್ಲ. ಶಾಂತಿ, ಸುವ್ಯವಸ್ಥೆಗಾಗಿ ಈ ಕಾನೂನು.
- ಸೌಹಾರ್ದಯುತವಾಗಿ ಜನರು ಬದುಕುವ ವಾತಾವರಣ ಸೃಷ್ಟಿಸಲು ಚೌಕಟ್ಟು ನೀಡುವುದೇ ಧರ್ಮ. ಲೋಹಿಯಾ ಅವರು ಧರ್ಮವೆನ್ನುವುದು ದೀರ್ಘಾವಧಿಯ ರಾಜಕಾರಣ ಎಂದು ಹೇಳಿದ್ದರು.
- ದ್ವೇಷವೂ ಮನುಷ್ಯನಲ್ಲಿದೆ. ಪ್ರೀತಿಯ ಹಾಗೆ ದ್ವೇಷವೂ ಇದೆ. ಪ್ರೀತಿ ಮತ್ತು ದ್ವೇಷವೂ ಮನದಾಳದಿಂದ ಬರುತ್ತದೆ. ಪ್ರೀತಿಯು ವಿಶಾಲವಾದ ಹೃದಯದಿಂದ ಅರಳುತ್ತದೆ. ದ್ವೇಷವು ಪ್ರಚೋದನೆ ಎಂದು ಅನಿಸಿದರೆ ಅದು ನಿಮ್ಮ ದೌರ್ಬಲ್ಯ.
- ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಸಂಸತ್ ಪ್ರವೇಶಿಸಲು ಕಾಂಗ್ರೆಸ್ ಅವಕಾಶ ನೀಡಿರಲಿಲ್ಲ. ಅನಿವಾರ್ಯವಾಗಿ ಮಂತ್ರಿಮಂಡಲಕ್ಕೆ ಸೇರಿಸಿಕೊಂಡಿದ್ದರೇ ಹೊರತು ಪ್ರೀತಿ, ವಿಶ್ವಾಸದಿಂದ ಅಲ್ಲ. ಅಂಬೇಡ್ಕರ್ ವಿರುದ್ಧ ಎಸ್.ಕೆ. ಪಾಟೀಲ್ ಅವರನ್ನು ಕಣಕ್ಕಿಳಿಸಲಾಗಿತ್ತು. ಆಗ ಅಂಬೇಡ್ಕರ್ ಅವರಿಗೆ ಹಿಂದೂ ಮಹಾಸಭಾ ಮಾತ್ರ ಬೆಂಬಲ ನೀಡಿತ್ತು.
- ನಿಮ್ಮ ವಿಚಾರಧಾರೆಗಳು ಯಾವ ಶಾಲೆಯದ್ದೂ ಅಲ್ಲ. ನಿಮ್ಮ ಅಧ್ಯಕ್ಷರ ಪಡಸಾಲೆಯಿಂದ ಬಂದ ವಿಚಾರಗಳನ್ನು ಮಾತ್ರ ಮಂಡಿಸುತ್ತಿದ್ದೀರಿ. ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್ ಪ್ರಮುಖ ಪಾತ್ರವಹಿಸಿದೆ. ಆದರೆ, ಅಂದಿನ ಮತ್ತು ಇಂದಿನ ಕಾಂಗ್ರೆಸ್ ವಿಭಿನ್ನ. ಸ್ವಾತಂತ್ರ್ಯದ ಬಳಿಕ ಕಾಂಗ್ರೆಸ್ ವಿಸರ್ಜಿಸಿ ಎಂದ ಮಹಾತ್ಮ ಗಾಂಧಿ ಅವರನ್ನೇ ನೀವು ಕೈಬಿಟ್ಟಿದ್ದೀರಿ.
- ಶಾಂತಿ ಸುವ್ಯವಸ್ಥೆ ಹದಗೆಡಲು ನೀವೇ ಕಾರಣ. ಕಾನೂನಿನ ದುರುಪಯೋಗ ಮಾಡುವುದಿಲ್ಲ. ಎಲ್ಲರನ್ನೂ ಸಮಾನವಾಗಿ ಕಾಣುತ್ತೇವೆ.



ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಮತಾಂತರ ನಿಷೇಧಕ್ಕೆ ಮೇಲ್ಮನೆ ಅಸ್ತು

ಒಂದನೇ ಪುಟದಿಂದ

ಆಗ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಮುಖ್ಯ ಸಚೇತಕ ಪ್ರಕಾಶ್ ರಾಠೋಡ್, ಪಿ.ಆರ್. ರಮೇಶ್ ಮತ್ತಿತರರು, ‘ಸಂವಿಧಾನ ವಿರೋಧಿಯಾದ, ಗುಪ್ತ ಕಾರ್ಯಸೂಚಿ ಹೊಂದಿದ ಮಸೂದೆಯನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಮಸೂದೆಯಲ್ಲಿರುವ ಕೆಲವು ಅಂಶಗಳಿಗೆ ಸ್ಪಷ್ಟನೆ ನೀಡಬೇಕು’ ಎಂದು ಪಟ್ಟು ಹಿಡಿದರು. ಅಲ್ಲದೆ, ಕಾಯ್ದೆ ಜಾರಿಗೊಳಿಸಿ ಸುಗ್ರೀವಾಜ್ಞೆ ಹೊರಡಿಸಿದ ಬಳಿಕ ದಾಖಲಾದ ಪ್ರಕರಣಗಳ ಮಾಹಿತಿ ನೀಡುವಂತೆ ಆಗ್ರಹಿಸಿದರು.

ಆದರೆ, ಕಾಂಗ್ರೆಸ್ ಬೇಡಿಕೆಗೆ ಅವಕಾಶ ನೀಡದ ಸಭಾಪತಿ ರಘುನಾಥ ರಾವ್ ಮಲ್ಕಾಪುರೆ, ಮಸೂದೆಯನ್ನು ಧ್ವನಿಮತಕ್ಕೆ ಹಾಕಿದರು. ಸಭಾಪತಿಯ ನಡೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು, ಎದ್ದು ನಿಂತು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಮಸೂದೆಯ ಪ್ರತಿಗಳನ್ನು ಹರಿದು ಸಭಾಪತಿ ಪೀಠದ ಕಡೆಗೆ ಎಸೆದು ಸಭಾತ್ಯಾಗ ಮಾಡಿದರು. ಜೆಡಿಎಸ್ ಸದಸ್ಯರು ಕೂಡಾ ಕಾಂಗ್ರೆಸ್ ಸದಸ್ಯರನ್ನು ಹಿಂಬಾಲಿಸಿದರು.

> **ಧರ್ಮದ ಹೆಸರಿನಲ್ಲಿ ಭಯೋತ್ಪಾದನೆ ನಡೆಯುತ್ತಿದೆ. ಇದರಿಂದ, ಶಾಂತಿ, ಸೌಹಾರ್ದಕ್ಕೆ ಧಕ್ಕೆಯಾಗುತ್ತಿದೆ. ಮತಾಂತರವು ಕಾನೂನು ಪ್ರಕಾರ ನಡೆಯಬೇಕು ಎನ್ನುವ ಕಾರಣಕ್ಕೆ ಮಸೂದೆ ರೂಪಿಸಲಾಗಿದೆ**
> **ಬಸವರಾಜ ಬೊಮ್ಮಾಯಿ** ಮುಖ್ಯಮಂತ್ರಿ

ಮಸೂದೆ ಮಂಡಿಸಿ ಮಾತನಾಡಿದ ಆರಗ ಜ್ಞಾನೇಂದ್ರ, ‘ಇತ್ತೀಚೆಗೆ ಮತಾಂತರ ಪ್ರಕ್ರಿಯೆಗಳು ವ್ಯಾಪಕವಾಗಿ ನಡೆಯುತ್ತಿವೆ. ಈ ಮಸೂದೆಯು ಯಾವುದೇ ವ್ಯಕ್ತಿಯ ಧಾರ್ಮಿಕ ಸ್ವಾತಂತ್ರ್ಯ ಕಸಿಯುವುದಿಲ್ಲ. ಕಾಯ್ದೆ ಜಾರಿಯಾದ ಬಳಿಕವೂ ಮತಾಂತರವಾಗಲು ಸ್ವಾತಂತ್ರ್ಯವಿದೆ’ ಎಂದು ಪ್ರತಿಪಾದಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ‘ಈ ಮಸೂದೆಯೇ ಕಾನೂನುಬಾಹಿರ. ಮತಾಂತರ ವ್ಯಾಪಕವಾಗಿ ನಡೆಯುತ್ತಿದ್ದರೆ ಕ್ರೈಸರ ಸಂಖ್ಯೆ ಹೆಚ್ಚಾಗಬೇಕಾಗಿತ್ತು. ಆದರೆ, 2001ರಲ್ಲಿ ಶೇ 2.31ರಷ್ಟು ಇದ್ದ ಕ್ರೈಸ್ತರ ಜನಸಂಖ್ಯೆ, 2011ರಲ್ಲಿ ಶೇ 2.30ರಷ್ಟಿತ್ತು. ಮತಾಂತರ ನಿಷೇಧದ ಬಗ್ಗೆ ಶಾಸನ ರೂಪಿಸಲು ವಿಧಾನಸಭೆ ಮತ್ತು ವಿಧಾನ ಪರಿಷತ್‌ಗೆ ಅಧಿಕಾರ ಇಲ್ಲ. ಸಂಸತ್‌ಗೆ ಮಾತ್ರ ಅಧಿಕಾರ ಇದೆ. ಸಂವಿಧಾನದ ಮೂಲ ಆಶಯಗಳಿಗೆ ತಿದ್ದುಪಡಿ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ’ ಎಂದು ವಿವರಿಸಿದರು.

> **ಮತಾಂತರವು ಆಮಿಷ ಅಥವಾ ಬಲವಂತದಿಂದ ನಡೆಯಬಾರದು ಎನ್ನುವ ಉದ್ದೇಶದಿಂದ ಈ ಮಸೂದೆ ರೂಪಿಸಲಾಗಿದೆ. ಮತಾಂತರಗೊಂಡ ನಂತರ ಮೂಲ ಜಾತಿ ಅನ್ವಯ ವ್ಯಕ್ತಿಗೆ ದೊರೆಯುತ್ತಿದ್ದ ಹಕ್ಕಿನ ಸೌಲಭ್ಯಗಳು ದೊರೆಯುವುದಿಲ್ಲ**
> **ಆರಗ ಜ್ಞಾನೇಂದ್ರ,** ಗೃಹ ಸಚಿವ

₹10 ಲಕ್ಷಕ್ಕೆ ಶಿಕ್ಷಕ ಹುದ್ದೆ ಮಾರಾಟ

ಒಂದನೇ ಪುಟದಿಂದ

‘ ಈ ಜಿಲ್ಲೆಯಲ್ಲಿ ಅಕ್ರಮವಾಗಿ ಹುದ್ದೆಗೆ ಆಯ್ಕೆಯಾಗಲು ಸಹ ಶಿಕ್ಷಕರು, ತಲಾ ₹ 5 ಲಕ್ಷದಿಂದ ₹ 10 ಲಕ್ಷ ನೀಡಿರುವುದು ಪತ್ತೆಯಾಗಿದೆ. ಈ ಹಣವನ್ನು ಹಂತ ಹಂತವಾಗಿ ಪಾವತಿಸಲಾಗಿದೆ. ಈ ಬಗ್ಗೆ ಬಂಧಿತ ಸಹ ಶಿಕ್ಷಕರು ಹೇಳಿಕೆ ನೀಡಿದ್ದು, ಹಣದ ವಹಿವಾಟಿನ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಹೇಳಿವೆ.

ಮಂಡಳಿ ಜೊತೆಯೇ ಒಪ್ಪಂದ?: ‘ಬಹುತೇಕ ಅಭ್ಯರ್ಥಿಗಳು ಹುದ್ದೆಗೆ ಅರ್ಜಿ ಸಲ್ಲಿಸುತ್ತಿದ್ದಂತೆ ನೇಮಕಾತಿ ಮಂಡಳಿಯಲ್ಲಿ ಕೆಲಸ ಮಾಡುವವರನ್ನು ಸಂಪರ್ಕಿಸಿದ್ದರು. ಅಕ್ರಮವಾಗಿ ಆಯ್ಕೆಯಾಗಲು ಅವರ ಜೊತೆಯೇ ಹಣದ ಒಪ್ಪಂದ ಮಾಡಿಕೊಂಡಿದ್ದರು ಎಂಬ ಮಾಹಿತಿ ಲಭ್ಯವಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಮೂರು ಜಿಲ್ಲೆಗಳ ಉಪನಿರ್ದೇಶಕರ ಕಚೇರಿಯಲ್ಲಿರುವ ದಾಖಲೆಗಳು ಹಾಗೂ ಸಹ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಆರೋಪಿಗಳ ಬಳಿ ಇರುವ ದಾಖಲೆಗಳನ್ನು ಸಂಗ್ರಹಿಸಲಾಗಿದೆ. ಎರಡೂ ದಾಖಲೆಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಬಂಧಿತ ಆರೋಪಿಗಳೆಲ್ಲರೂ ಅಕ್ರಮವಾಗಿ ಆಯ್ಕೆಯಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ’ ಎಂದು ತಿಳಿಸಿವೆ.

ಪಟ್ಟಿ ಸಿದ್ಧಪಡಿಸುತ್ತಿದ್ದ ಎಫ್‌ಡಿಎ: ‘ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿರುವ ಆರೋಪದಡಿ ಶಿಕ್ಷಣ ಇಲಾಖೆಯ ಎಫ್‌ಡಿಎ ಕೆ.ಎಸ್. ಪ್ರಸಾದ್‌ನನ್ನು ಬಂಧಿಸಿ, ಕಸ್ಟಡಿಗೆ ಪಡೆಯಲಾಗಿದೆ. ಈತನ ಮೂಲಕವೇ ಅಕ್ರಮ ನಡೆದಿರುವ ಮಾಹಿತಿಯಿದ್ದು, ವಿಚಾರಣೆ ಮುಂದುವರಿದಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಸಹ ಶಿಕ್ಷಕರ ನೇಮಕಾತಿ ಮಂಡಳಿಯಲ್ಲಿ ಕೆಲಸ ಮಾಡುತ್ತಿದ್ದ ಪ್ರಸಾದ್, ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸುತ್ತಿದ್ದ. ಹಣ ನೀಡಿದ್ದ ಕೆಲವರ ಹೆಸರುಗಳನ್ನು ಹೆಚ್ಚುವರಿ ಪಟ್ಟಿಯಲ್ಲಿ ಸೇರಿಸಿದ್ದ. ಈ ಕೆಲಸಕ್ಕಾಗಿ ಲಕ್ಷ ಲಕ್ಷ ಪಡೆದಿದ್ದನೆಂದು ಗೊತ್ತಾಗಿದೆ. ಈತನ ಜೊತೆಯಲ್ಲಿ ಮತ್ತಷ್ಟು ಮಂದಿ ಅಕ್ರಮದಲ್ಲಿ ಭಾಗಿಯಾಗಿರುವ ಮಾಹಿತಿಯೂ ಇದ್ದು, ತನಿಖೆ ಮುಂದುವರಿಸಲಾಗಿದೆ’ ಎಂದೂ ತಿಳಿಸಿವೆ.

‘ಉಪನಿರ್ದೇಶಕರು, ಮಂಡಳಿ ಸದಸ್ಯರ ವಿಚಾರಣೆ’: ‘ಸದ್ಯ ಮೂರು ಜಿಲ್ಲೆಗಳ ನೇಮಕಾತಿ ಅಕ್ರಮ ಬಗ್ಗೆ ತನಿಖೆ ನಡೆಯುತ್ತಿದೆ. ಉಳಿದ ಜಿಲ್ಲೆಗಳ ನೇಮಕಾತಿ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ. ಉಪನಿರ್ದೇಶಕರು, ನೇಮಕಾತಿ ಮಂಡಳಿ ಸದಸ್ಯರು ಹಾಗೂ ಇತರರ ವಿಚಾರಣೆಯೂ ಮುಂದುವರಿದಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ತೋಟದ ಮನೆಗಳಿಗೆ ನಿರಂತರ ವಿದ್ಯುತ್’

ಬೆಂಗಳೂರು: ರಾಜ್ಯದಲ್ಲಿರುವ ತೋಟದ ಮನೆಗಳಿಗೆ ನಿರಂತರ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ಭರವಸೆ ನೀಡಿದರು.

ಕಾಂಗ್ರೆಸ್‌ನ ಮಹಾಂತೇಶ್ ಕೌಜಲಗಿ ಅವರ ಪ್ರಶ್ನೆಗೆ ವಿಧಾನಸಭೆಯಲ್ಲಿ ಗುರುವಾರ ಉತ್ತರಿಸಿದ ಸಚಿವರು, ‘ತೋಟದ ಮನೆಗಳಿಗೆ ಈಗ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಪ್ರತ್ಯೇಕ ಮಾರ್ಗದ ಮೂಲಕ ಸಿಂಗಲ್ ಫೇಸ್ ವಿದ್ಯುತ್ ಪೂರೈಕೆಗೆ ಯೋಜನೆ ರೂಪಿಸಲಾಗುತ್ತಿದೆ. ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸುವ ಮಾರ್ಗದಿಂದ ಪ್ರತ್ಯೇಕಿಸಿ ನಿರಂತರ ವಿದ್ಯುತ್ ಪೂರೈಸಬೇಕಿದೆ’ ಎಂದರು.

ಆರ್ಯ ಈಡಿಗರ ಸಮುದಾಯ ಭವನಕ್ಕೆ ₹ 5 ಕೋಟಿ ಅನುದಾನ- ಬೊಮ್ಮಾಯಿ

‘ಪುನೀತ್ ಜನ್ಮದಿನ ಸ್ಫೂರ್ತಿಯ ದಿನ’

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಬಸವರಾಜ ಬೊಮ್ಮಾಯಿ ಅವರು ನಾರಾಯಣ ಗುರುಗಳ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು. ಎಂ. ತಿಮ್ಮೇಗೌಡ, ಎಚ್. ಹಾಲಪ್ಪ, ವಿ. ಸುನೀಲ್ ಕುಮಾರ್ ಹಾಗೂ ವಿಖ್ಯಾತಾನಂದ ಸ್ವಾಮೀಜಿ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರ ಜನ್ಮದಿನವನ್ನು ಸ್ಫೂರ್ತಿಯ ದಿನವನ್ನಾಗಿ ಸರ್ಕಾರದ ವತಿಯಿಂದ ರಾಜ್ಯಾದ್ಯಂತ ಆಚರಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ ನಗರದಲ್ಲಿ ಗುರುವಾರ ಹಮ್ಮಿಕೊಂಡ ಬ್ರಹ್ಮಶ್ರೀ ನಾರಾಯಣಗುರುಗಳ ಜಯಂತಿ ಉದ್ಘಾಟಿಸಿದರು. ಆರ್ಯ ಈಡಿಗ ಸಮುದಾಯದ ಮುಖಂಡರು ಹಾಗೂ ಇಂಧನ ಸಚಿವ ವಿ. ಸುನೀಲ್ ಕುಮಾರ್ ಅವರ ಮನವಿಗೆ ಸ್ಪಂದಿಸಿದ ಅವರು, ‘ಆರ್ಯ ಈಡಿಗ ಸಮಾಜದ ದೊಡ್ಡ ಶಕ್ತಿ ಡಾ.ರಾಜ್ ಕುಮಾರ್. ಅವರ ಪುತ್ರ ಪುನೀತ್ ಅತ್ಯಂತ ಆಪ್ತರಾಗಿದ್ದರು. ಅವರಿಗೆ ನ.1ರಂದು ‘ಕರ್ನಾಟಕ ರತ್ನ’ ನೀಡಲಾಗುತ್ತದೆ. ಜನ್ಮದಿನವಾದ ಮಾರ್ಚ್ 17ರಂದು ಸ್ಫೂರ್ತಿಯ ದಿನವನ್ನಾಗಿ ಆಚರಿಸಲಾಗುವುದು’ ಎಂದರು.

‘ಆರ್ಯ ಈಡಿಗ ಕೇಂದ್ರ ಸಂಘದ ಸಮೀಪದಲ್ಲಿರುವ ಮಂತ್ರಿ ಸ್ಕ್ವೇರ್ ಮೆಟ್ರೊ ನಿಲ್ದಾಣಕ್ಕೆ ಬ್ರಹ್ಮಶ್ರೀ ನಾರಾಯಣ ಗುರುಗಳ ಹೆಸರಿಡಲು ಕ್ರಮವಹಿಸಲಾಗುವುದು. ಬೆಂಗಳೂರಿನ ವಿಶ್ವೇಶ್ವರಯ್ಯ ಲೇಔಟ್‌ನಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಎರಡು ಕಂತುಗಳಲ್ಲಿ ₹ 5 ಕೋಟಿ ಅನುದಾನ ಬಿಡುಗಡೆ ಮಾಡಲಾಗುವುದು. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿವಿಧ ತರಬೇತಿ ಕೇಂದ್ರಗಳ ನಿರ್ಮಾಣಕ್ಕೆ ಸೋಲೂರಿನಲ್ಲಿ ನಾರಾಯಣಗುರು ಮಠಕ್ಕೆ ಹೊಂದಿಕೊಂಡಿರುವ ಗೋಮಾಳ ಜಾಗದಲ್ಲಿ 10 ಎಕರೆ ಮಂಜೂರಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸಮುದಾಯಕ್ಕೆ ವಿಶೇಷ ಅನುದಾನ ನೀಡಲಾಗುವುದು’ ಎಂದು ಭರವಸೆ ನೀಡಿದರು.

> **ಆರ್ಯ ಈಡಿಗ ಸಮುದಾಯಕ್ಕೆ ನಿಗಮ ಸ್ಥಾಪಿಸಬೇಕು. ಇದು ಸಾಧ್ಯವಾಗದಿದ್ದರೆ ಪ್ರತ್ಯೇಕ ಅನುದಾನ ನೀಡಿ, ಬೇಡಿಕೆಗಳನ್ನು ಈಡೇರಿಸಬೇಕು.**
> **ವಿ. ಸುನೀಲ್ ಕುಮಾರ್,** ಇಂಧನ ಸಚಿವ

> **ಬಹುತೇಕ ಎಲ್ಲ ಸಮುದಾಯಗಳಿಗೆ ಪ್ರತ್ಯೇಕ ನಿಗಮ ಸ್ಥಾಪಿಸಲಾಗಿದೆ. ಅದೇ ರೀತಿ, ನಮ್ಮ ಸಮುದಾಯಕ್ಕೂ ನಿಗಮವನ್ನು ಘೋಷಿಸಬೇಕು**
> **ಎಚ್. ಹಾಲಪ್ಪ,** ಶಾಸಕ

ಶಾಲೆಗಳಿಗೆ ಹೆಸರಿಡಿ: ಸೋಲೂರಿನ ಆರ್ಯ ಈಡಿಗ ಸಂಸ್ಥಾನದ ಪೀಠಾಧಿಪತಿ ವಿಖ್ಯಾತಾನಂದ ಸ್ವಾಮೀಜಿ, ‘ನಾರಾಯಣ ಗುರುಗಳು ಸಮಾಜದ ಉನ್ನತಿಗೆ ಶ್ರಮಿಸಿದರು. ಅವರು ವ್ಯವಸ್ಥೆಯಲ್ಲಿನ ಲೋಪಗಳ ಬಗ್ಗೆ ಪ್ರತಿಭಟಿಸುವ ಬದಲು, ಮೌನ ವ್ರತದ ಮೂಲಕವೇ ಬದಲಾವಣೆ ಮಾಡಿದರು. ಎಲ್ಲ ಜಿಲ್ಲೆಗಳಲ್ಲಿ ಅವರ ಹೆಸರಿನಲ್ಲಿ ಶಾಲೆಗಳನ್ನು ಸ್ಥಾಪಿಸಬೇಕು. ನಮ್ಮ ಮಠಕ್ಕೆ ಕನಿಷ್ಠ ಒಂದು ಶಾಲೆಯ ನಿರ್ವಹಣೆಯ ಜವಾಬ್ದಾರಿ ನೀಡಿದರೂ ಮಾದರಿ ಶಾಲೆಯನ್ನಾಗಿ ರೂಪಿಸುತ್ತೇವೆ’ ಎಂದು ಹೇಳಿದರು.

ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ, ‘ನಾರಾಯಣ ಗುರುಗಳು ಬಿಟ್ಟುಹೋದ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು. ಆರ್ಯ ಈಡಿಗ ಸಮುದಾಯದ 26 ಪಂಗಡಗಳೂ ಒಂದಾಗಿ ಸಾಗಬೇಕು’ ಎಂದು ತಿಳಿಸಿ, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ನೀವು ಉಗ್ರರ ಪರ: ಸಿ.ಎಂ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಗುರುವಾರ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆ ಕುರಿತ ಚರ್ಚೆಯಲ್ಲಿ ಕಾಂಗ್ರೆಸ್‌ನ ನಜೀರ್ ಅಹಮ್ಮದ್ ನೀಡಿದ ಹೇಳಿಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕೆರಳಿಸಿತು.

‘ಎಲ್ಲರನ್ನೂ ಸಮಾನವಾಗಿ ಕಾಣುತ್ತಿಲ್ಲ. ಶಿವಮೊಗ್ಗದಲ್ಲಿ ಗಲಭೆಯಾದಾಗ ಆರೋಪಿಗಳ ವಿರುದ್ಧ ಐಪಿಸಿ 107 ಅಡಿಯಲ್ಲಿ ಕ್ರಮಕೈಗೊಳ್ಳಲಾಯಿತು. ಆದರೆ, ಹುಬ್ಬಳ್ಳಿಯಲ್ಲಿ ‘ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ’ಯ (ಯುಎಪಿಎ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಯಿತು. ಇದು ಸಮಾನತೆಯೇ’ ಎಂದು ನಜೀರ್ ಅಹಮ್ಮದ್ ಪ್ರಶ್ನಿಸಿದರು.

ಇದಕ್ಕೆ ಖಾರವಾಗಿ ಪ್ರತಿಕ್ರಿಯಿಸಿದ ಬೊಮ್ಮಾಯಿ ಅವರು, ‘ಕಾನೂನು ಪ್ರಕಾರ ಕ್ರಮಕೈಗೊಳ್ಳಲಾಗಿದೆ. ನಿಮ್ಮ ಉದ್ದೇಶ ಸರಿ ಇಲ್ಲ. ನೀವು ನ್ಯಾಯಾಧೀಶರಲ್ಲ. ನ್ಯಾಯಾಲಯ ತೀರ್ಮಾನಿಸುತ್ತದೆ. ಭಯೋತ್ಪಾದನೆ ಪರ ಮಾತುಗಳನ್ನಾಡಬೇಡಿ. ನೀವು ಭಯೋತ್ಪಾದಕರಿಗೆ ಬೆಂಬಲ ನೀಡುತ್ತಿದ್ದೀರಿ. ಭಯೋತ್ಪಾದಕರ ಪರ ಇದ್ದೀರಿ’ ಎಂದು ನೇರವಾಗಿ ಆರೋಪಿಸಿದರು.

‘ಬಿಜೆಪಿ ಶಾಸಕನಿಗೆ ಶಾಲೆಯ ನಿವೇಶನ’

ಒಂದನೇ ಪುಟದಿಂದ

‘ಚಂದ್ರಪ್ಪನವರಿಗೆ ಕುಮಾರಸ್ವಾಮಿ ಲೇಔಟ್‌ನಲ್ಲಿ ನಿವೇಶನ ನೀಡುವಂತೆ ಬಿಡಿಎ ಅಧಿಕಾರಿಗಳಿಗೆ ಯಡಿಯೂರಪ್ಪ ಅವರು ಮೌಖಿಕ ಸೂಚನೆ ನೀಡಿದ್ದರು. ಆದರೆ ಅಧಿಕಾರಿಗಳು ನಿವೇಶನವನ್ನು ಬೇರೆಯವರಿಗೆ ಹಂಚಿಕೆ ಮಾಡಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಚಂದ್ರಪ್ಪ, ‘ಆರಂಭಿಕ ಠೇವಣಿ ಪಾವತಿಸಿದ್ದೇನೆ. ಬಿಬಿಎಂಪಿ ಕನ್ನಡ ಶಾಲೆಗೆ ಹಂಚಿಕೆಯಾಗಿರುವ ಈ ನಿವೇಶನವನ್ನು ಚಿತ್ರದುರ್ಗದ ದೇವರಾಜ ಅರಸು ಶಿಕ್ಷಣ ಸಂಸ್ಥೆಗೆ ನೀಡಬೇಕು. ಅಲ್ಲಿ ಶಾಲೆ ಮತ್ತು ಸಮುದಾಯ ಭವನ ನಿರ್ಮಿಸಲಾಗುವುದು’ ಎಂದು 2010ರ ಜೂನ್ 7ರಂದು ಪತ್ರ ಬರೆದಿದ್ದರು. ಇದಕ್ಕೆ ಒಪ್ಪಿದ್ದ ಯಡಿಯೂರಪ್ಪ, ಈ ಸಂಬಂಧ ಬಿಡಿಎ ಅಧಿಕಾರಿಗಳಿಗೆ ಮತ್ತೆ ಮೌಖಿಕ ಸೂಚನೆ ನೀಡಿದ್ದರು’ ಎಂದು ವಿವರಿಸಿದರು.

‘ಬಿಬಿಎಂಪಿ ಕನ್ನಡ ಶಾಲೆಗೆ ಮಂಜೂರಾಗಿರುವ ಸಿ.ಎ ನಿವೇಶನವನ್ನು ಚಂದ್ರಪ್ಪನವರಿಗೆ ನೀಡಲು ಸಾಧ್ಯವಿಲ್ಲ’ ಎಂದು, 2010ರ ನವೆಂಬರ್ 20ರಂದು ನಡೆದ ಬಿಡಿಎ ಆಡಳಿತ ಮಂಡಳಿ ಸಭೆ ನಿರ್ಣಯ ಕೈಗೊಂಡಿತ್ತು. ಆದರೆ 2011ರ ಫೆಬ್ರುವರಿ 28ರಂದು ಬಿಬಿಎಂಪಿ ಕನ್ನಡ ಶಾಲೆಗೆ ಮಂಜೂರಾಗಿದ್ದ ನಿವೇಶನವನ್ನು ಯಡಿಯೂರಪ್ಪ ಅವರ ಒತ್ತಡದ ಕಾರಣಕ್ಕೆ, ಎರಡು ವರ್ಷಗಳಲ್ಲಿ ಶಾಲೆಯನ್ನು ನಿರ್ಮಿಸಬೇಕು ಎಂಬ ಷರತ್ತಿನ ಮೇಲೆ ದೇವರಾಜ ಅರಸು ಶಿಕ್ಷಣ ಸಂಸ್ಥೆಗೆ ಮಂಜೂರು ಮಾಡಿತ್ತು’ ಎಂದು ತಿಳಿಸಿದರು.



ಶಾಸಕ ಎಂ. ಚಂದ್ರಪ್ಪನವರಿಗೆ ಶಾಲೆ ನಿರ್ಮಿಸಲು ಹಂಚಿಕೆಯಾಗಿರುವ ನಿವೇಶನದಲ್ಲಿ ಜಲ್ಲಿ ಕಲ್ಲು ಶೇಖರಿಸಿರುವುದು

> **ಕಾನೂನುಬಾಹಿರವಾಗಿ ಹಂಚಿಕೆಯಾಗಿರುವ ಈ ನಿವೇಶನವನ್ನು ಸರ್ಕಾರ ಕೂಡಲೇ ಹಿಂಪಡೆದು, ಬಿಬಿಎಂಪಿ ಕನ್ನಡ ಶಾಲೆ ನಿರ್ಮಿಸಲು ನೀಡಬೇಕು**
> **ಬಿ.ಎಂ. ಶಿವಕುಮಾರ್,** ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ ಅಧ್ಯಕ್ಷ

ಒಮ್ಮೆ ನಿವೇಶನ ಹಂಚಿಕೆ ಮಾಡಿ, ವಿವಿಧ ಕಾರಣಗಳಿಗಾಗಿ ನೀಡಲು ಸಾಧ್ಯವಾಗದೇ ಇದ್ದರೆ ಬದಲಿ ನಿವೇಶನ ಹಂಚಿಕೆ ಮಾಡಲು ಬಿಡಿಎ ನಿಯಮದಲ್ಲಿ ಅವಕಾಶ ಇದೆ. ಚಂದ್ರಪ್ಪ ಅವರಿಗೆ ನಿವೇಶನ ಹಂಚಿಕೆಯೇ ಆಗದಿರುವಾಗ, ಬದಲಿ ರೂಪದಲ್ಲಿ ನಾಗರಿಕ ಸೌಲಭ್ಯದ ಉದ್ದೇಶಕ್ಕಾಗಿ ಮೀಸಲಾದ ನಿವೇಶನ ನೀಡಿದೆ ಎಂದು ದೂರಿದರು.

ವಾಣಿಜ್ಯ ಬಳಕೆ ಮಾಡಿಕೊಂಡಿಲ್ಲ

ಶಿಕ್ಷಣ ಸಂಸ್ಥೆ ನಿರ್ಮಿಸುವ ಉದ್ದೇಶದಿಂದ ನಿವೇಶನವನ್ನು ಪಡೆದಿದ್ದು, ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುವುದಿಲ್ಲ ಎಂದು ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ ಹೇಳಿದರು.

‘ನಿವೇಶನ ಹಂಚಿಕೆಗೆ ಬಿಡಿಎ ಅನುಮೋದನೆ ನೀಡಿದ್ದು, ಮಾರುಕಟ್ಟೆ ದರದ ಶೇಕಡಾ 10ರಷ್ಟು ಪಾವತಿಸಲಾಗಿದೆ’ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಬೇರೆಯವರಿಗೆ ನಾವು ಯಾವ ರೀತಿ ಕಾಣಿಸಿಕೊಳ್ಳುತ್ತೇವೆಯೋ ವಾಸ್ತವದಲ್ಲಿ ಹಾಗೆಯೇ ಇರುವವರು ನಮ್ಮಲ್ಲಿ ಕೆಲವು ಮಂದಿಯಷ್ಟೇ.

–ಅಗಾಥಾ ಕ್ರಿಸ್ಟಿ

ಗೋವಾ ವಿದ್ಯಮಾನ ಪ್ರಜಾಪ್ರಭುತ್ವದ ಅಣಕ

ಗೋವಾದಲ್ಲಿ ಅಲ್ಲಿನ ರಾಜಕೀಯ ಪರಂಪರೆಗೆ ಅನುಗುಣವಾಗಿ ಮತ್ತೊಮ್ಮೆ ಪಕ್ಷಾಂತರ ನಡೆದಿದೆ. ಎಂಟು ಮಂದಿ ಕಾಂಗ್ರೆಸ್ ಶಾಸಕರು ಬಿಜೆಪಿ ಸೇರಿದ್ದಾರೆ. ಶಾಸಕರು ಹೀಗೆ ಒಟ್ಟಾಗಿ ಪಕ್ಷಾಂತರ ಮಾಡಿರುವುದಕ್ಕೆ ಯಾವುದೇ ಒಂದು ಕಾರಣವನ್ನು ಗುರುತಿಸುವುದು ಕಷ್ಟ. ರಾಜ್ಯದಲ್ಲಿ ಹಲವಾರು ವರ್ಷಗಳಿಂದ ಬೇರುಬಿಟ್ಟಿರುವ ಶಿಸ್ತುರಹಿತ ರಾಜಕಾರಣ, ಕಾಂಗ್ರೆಸ್ ಪಕ್ಷದ ದೌರ್ಬಲ್ಯ, ಬಿಜೆಪಿಯ ಬೇಟೆಯಾಡುವ ಪ್ರವೃತ್ತಿ ಇವೆಲ್ಲವೂ ಶಾಸಕರ ಪಕ್ಷಾಂತರದ ನಿರ್ಧಾರದಲ್ಲಿ ಪಾತ್ರ ವಹಿಸಿವೆ. ಇಂತಹ ಸನ್ನಿವೇಶವನ್ನು ತಡೆಯಲು ಮುಂಜಾಗ್ರತಾ ಕ್ರಮವಾಗಿ ಕಾಂಗ್ರೆಸ್ ನಡೆಸಿದ್ದ ವಿನೂತನ ಪ್ರಯತ್ನ ಕೂಡ ಕೈಕೊಟ್ಟಿದೆ. ಚುನಾವಣೆಯಲ್ಲಿ ಗೆದ್ದ ಬಳಿಕ ಪಕ್ಷಾಂತರ ಮಾಡುವುದಿಲ್ಲ ಎಂದು ಪ್ರಮಾಣ ಮಾಡಿಸುವ ಸಲುವಾಗಿ ಪಕ್ಷವು ವಿಧಾನಸಭೆ ಚುನಾವಣೆಯಲ್ಲಿ ಕಣಕ್ಕೆ ಇಳಿದಿದ್ದ ತನ್ನ ಅಭ್ಯರ್ಥಿಗಳನ್ನು ದೇವಸ್ಥಾನ, ಚರ್ಚ್ ಮತ್ತು ದರ್ಗಾಕ್ಕೆ ಕರೆದೊಯ್ದಿತ್ತು. ಆದರೆ ಈ ಪ್ರಮಾಣವು ಯಾವುದೇ ಫಲ ನೀಡಿಲ್ಲ. ಒಬ್ಬ ಶಾಸಕರಂತೂ ಪಕ್ಷನಿಷ್ಠೆ ಬದಲಾಯಿಸಲು ತಾನು ದೇವರ ಅನುಮತಿ ಪಡೆದಿರುವುದಾಗಿ ಹೇಳಿಕೆ ಕೊಟ್ಟಿದ್ದಾರೆ. ಇಲ್ಲಿ ಪಕ್ಷಾಂತರ ತಡೆಯುವಲ್ಲಿ ನೈತಿಕತೆ ಸೋತಿದೆ. ಕಾನೂನು ಸೋತಿದೆ. ಕೊನೆಯಲ್ಲಿ ದೈವವೂ ಸೋಲು ಕಂಡಿದೆ.



ಇಲ್ಲಿ ಪಕ್ಷಾಂತರ ತಡೆಯುವಲ್ಲಿ ನೈತಿಕತೆ ಸೋತಿದೆ. ಕಾನೂನು ಸೋತಿದೆ. ಕೊನೆಯಲ್ಲಿ ದೈವವೂ ಸೋಲು ಕಂಡಿದೆ

ಫೆಬ್ರುವರಿಯಲ್ಲಿ ಚುನಾವಣೆ ನಡೆದ ನಂತರ 11 ಶಾಸಕರನ್ನು ಹೊಂದಿದ್ದ ಕಾಂಗ್ರೆಸ್ ಪಕ್ಷದಲ್ಲಿ ಈಗ ಈ ಸಂಖ್ಯೆ ಕೇವಲ ಮೂರಕ್ಕೆ ಕುಸಿದಿದೆ. ಮಾಜಿ ಮುಖ್ಯಮಂತ್ರಿ ದಿಗಂಬರ ಕಾಮತ್ ಹಾಗೂ ವಿರೋಧ ಪಕ್ಷದ ನಾಯಕ ಮೈಕೆಲ್ ಲೋಬೊ ಅವರಂತಹ ಕಾಂಗ್ರೆಸ್ ಪಕ್ಷದ ಕೆಲವು ಹಿರಿಯ ನಾಯಕರು ಪಕ್ಷಾಂತರ ಮಾಡಿದ ಮೇಲೆ ಆ ಪಕ್ಷದಲ್ಲಿ ನಾಯಕತ್ವವೇ ನಾಮಾವಶೇಷವಾಗಿದೆ. ಪಕ್ಷವು ನಾವಿಕನಿಲ್ಲದ ನೌಕೆಯಂತಾಗಿದೆ. ಇಂತಹ ವಲಸೆಯು ಬೇರೆ ರಾಜ್ಯಗಳಲ್ಲಿ ನಡೆದಿದ್ದ ನಿದರ್ಶನಗಳಿದ್ದರೂ ಅಂತಹ ವಿದ್ಯಮಾನವನ್ನು ತಡೆಯಲು ಸಾಧ್ಯವಾಗಿಲ್ಲ. ಅರುಣಾಚಲ ಪ್ರದೇಶದಲ್ಲಿ 2018ರಲ್ಲಿ, ಗುಜರಾತ್ ಮತ್ತು ಕರ್ನಾಟಕದಲ್ಲಿ 2019ರಲ್ಲಿ, ಮಧ್ಯಪ್ರದೇಶದಲ್ಲಿ 2020ರಲ್ಲಿ ಹಾಗೂ ಪಶ್ಚಿಮ ಬಂಗಾಳದಲ್ಲಿ 2021ರಲ್ಲಿ ಆ ಪಕ್ಷದ ಹಲವು ಶಾಸಕರು ಒಟ್ಟುಗೂಡಿ ವಲಸೆ ಹೋದ ಪ್ರಕರಣಗಳು ಘಟಿಸಿದವು. ಉಳಿದಂತೆ ಶಾಸಕರು ಬಿಡಿ ಬಿಡಿಯಾಗಿ ಪಕ್ಷಾಂತರ ಮಾಡುವುದು ಎಲ್ಲೆಡೆ ವರ್ಷದುದ್ದಕ್ಕೂ ನಡೆಯುತ್ತಲೇ ಇರುತ್ತದೆ. ಇದಕ್ಕೆ ಹಲವಾರು ಕಾರಣಗಳಿವೆ. ಪಕ್ಷದ ಕೇಂದ್ರ ನಾಯಕತ್ವದ ಬಗ್ಗೆ ಅನಿಶ್ಚಿತತೆ, ಸೈದ್ಧಾಂತಿಕ ಸ್ಪಷ್ಟತೆ ಇಲ್ಲದಿರುವುದು, ಸಂಘಟನೆ ದುರ್ಬಲವಾಗಿರುವುದು, ಹತಾಶೆ, ಕೆಳಹಂತದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಮಾರ್ಗದರ್ಶನದ ಕೊರತೆಯು ವಲಸೆಗೆ ಪ್ರಚೋದಿಸುವ ಕೆಲವು ಅಂಶಗಳಾಗಿವೆ. ಗೋವಾದಲ್ಲಿ ಕೆಲವು ವಾರಗಳಿಂದಲೇ ರಾಜಕೀಯ ಬೇಗುದಿ ಆರಂಭವಾಗಿತ್ತು. ಇದನ್ನು ತಡೆಯಲು ಪಕ್ಷವು ಪ್ರಯತ್ನವನ್ನೇ ನಡೆಸಲಿಲ್ಲ ಎಂದು ಹೇಳಲಾಗದು. ಆದರೆ ಪಕ್ಷದ ನಾಯಕತ್ವವು ಈ ಸಾಮೂಹಿಕ ವಲಸೆಯನ್ನು ತಡೆಯಲು ಸಫಲವಾಗಲಿಲ್ಲ.

ವಿರೋಧ ಪಕ್ಷದವರನ್ನು ಹೀಗೆ ತನ್ನ ತೆಕ್ಕೆಗೆ ಸೆಳೆದುಕೊಂಡು ಯಾವುದೇ ಎಗ್ಗಿಲ್ಲದೆ ಪಕ್ಷವನ್ನು ಬೆಳೆಸುವ ತಂತ್ರವನ್ನು ಬಿಜೆಪಿ ಕರಗತ ಮಾಡಿಕೊಂಡಿದೆ. ಈ ಮೂಲಕ ರಾಜಕೀಯ ಸ್ಪರ್ಧೆಯನ್ನೇ ನಿರ್ನಾಮ ಮಾಡುವ ಏಕಸ್ವಾಮ್ಯದ ಸ್ಥಿತಿಯನ್ನು ಅದು ಸೃಷ್ಟಿಸುತ್ತಿದೆ. ವಿವಿಧ ಪಕ್ಷಗಳ ನಡುವೆ ಸ್ಪರ್ಧೆ ಹಾಗೂ ಚುನಾವಣಾ ಹೋರಾಟಗಳು ಪ್ರಜಾಪ್ರಭುತ್ವದ ಅತ್ಯಗತ್ಯ ಲಕ್ಷಣಗಳು. ಶಾಸಕರನ್ನು ಖರೀದಿ ಮಾಡುವ ಮೂಲಕ ಚುನಾವಣಾ ಫಲಿತಾಂಶಗಳನ್ನು ಯಾವಾಗ ಅಪ್ರಸ್ತುತ ಮಾಡಲಾಗುತ್ತದೆಯೋ ಮತ್ತು ಸರ್ಕಾರಗಳನ್ನು ಬುಡಮೇಲು ಮಾಡಲಾಗುತ್ತದೆಯೋ ಹಾಗೂ ಪಕ್ಷಾಂತರಗಳ ನೆರವಿನಿಂದ ಬೇರೊಂದು ರೀತಿಯ ಬಹುಮತದ ಸ್ಥಿತಿಯನ್ನು ಸೃಷ್ಟಿಸಲಾಗುತ್ತದೆಯೋ ಆಗ ಪ್ರಜಾಪ್ರಭುತ್ವದ ಪ್ರಾಮುಖ್ಯ ಕುಸಿಯುತ್ತದೆ. ಇದು ವಿರೋಧ ಪಕ್ಷದ ಅಸ್ತಿತ್ವವೇ ಇಲ್ಲದಂತಹ ಸಂದರ್ಭಕ್ಕೆ ಎಡೆಮಾಡಿಕೊಡುತ್ತದೆ. ವಿರೋಧ ಪಕ್ಷದ ಶಾಸಕರು ಸ್ವತಃ ತಮ್ಮ ಪಕ್ಷವನ್ನು ತ್ಯಜಿಸುತ್ತಿದ್ದಾರೆ, ಆಡಳಿತ ಮತ್ತು ತತ್ವ–ಸಿದ್ಧಾಂತಕ್ಕೆ ಸಂಬಂಧಿಸಿದ ಕಾರಣಗಳಿಗಾಗಿ ಬಿಜೆಪಿಯತ್ತ ಬರುತ್ತಿದ್ದಾರೆ ಎಂಬ ವಾದವು ಸುಳ್ಳಿನಿಂದ ಹಾಗೂ ಸ್ವಹಿತಾಸಕ್ತಿಯಿಂದ ಕೂಡಿದ್ದಾಗಿದೆ. ಈ ಎಲ್ಲಾ ಪಕ್ಷಾಂತರಗಳಲ್ಲಿಯೂ ಬಿಜೆಪಿಯು ಸಕ್ರಿಯವಾಗಿ ಭಾಗಿಯಾಗಿದೆ ಎಂಬುದು ವಾಸ್ತವ. ಆದರೆ ಹೀಗೆ ಪಕ್ಷಾಂತರ ಮಾಡಿದವರು ಹೊಸ ಚಿಹ್ನೆಯಡಿ ಚುನಾವಣೆಗೆ ಸ್ಪರ್ಧಿಸಿದಾಗ ಅವರಲ್ಲಿ ಬಹುತೇಕರನ್ನು ಮತದಾರರು ಪುನರಾಯ್ಕೆ ಮಾಡುತ್ತಿರುವುದು ದುರದೃಷ್ಟಕರ.

ತಾಕತ್ತು ತೋರಿಸಲು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಇದೆ ಅವಕಾಶ

ಲೋಕಾಯುಕ್ತಕ್ಕೆ ವೈಭವ ಮರಳಲಿ



ಗತಿಬಿಂಬ

ವೈ.ಗ.ಜಗದೀಶ್

ಭ್ರಷ್ಟ ರಾಜಕಾರಣಿಗಳು, ಲಂಚಕೋರ ಅಧಿಕಾರಿಗಳನ್ನು ಹಿಡಿದು ಜೈಲಿಗೆ ತಳ್ಳಿ ಇತಿಹಾಸ ಸೃಷ್ಟಿಸಿದ್ದ ಕರ್ನಾಟಕ ಲೋಕಾಯುಕ್ತಕ್ಕೆ ಮತ್ತೆ ಹಳೆಯ ಶಕ್ತಿ ದಕ್ಕಿದೆ. ಅಕ್ರಮ ನಡೆಸಲು, ಲಂಚ ತೆಗೆದುಕೊಳ್ಳಲು ಅಧಿಕಾರಸ್ಥರು ಅಂಜುವ ಪರಿಸ್ಥಿತಿಯನ್ನು ದಶಕದ ಹಿಂದೆ ಲೋಕಾಯುಕ್ತರಾಗಿದ್ದ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಸೃಷ್ಟಿ ಮಾಡಿದ್ದರು. ಆ ಗತವೈಭವವನ್ನು ಮರಳಿ ತರುವ ಸವಾಲು ಈಗಿನ ಲೋಕಾಯುಕ್ತರಾದ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಹಾಗೂ ಅವರಿಗೆ ನೈತಿಕವಾಗಿ, ಆಡಳಿತಾತ್ಮಕವಾಗಿ ಬೆಂಬಲಕ್ಕೆ ನಿಲ್ಲಬೇಕಾದ ಬಸವರಾಜ ಬೊಮ್ಮಾಯಿ ಅವರ ಮೇಲಿದೆ.

ಕರ್ನಾಟಕದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ಸೇತರ ಸರ್ಕಾರದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಹಾಗೂ ಅವರ ಸಚಿವ ಸಂಪುಟದ ಸದಸ್ಯರ ದೂರದೃಷ್ಟಿಯ ಫಲವೇ ಕರ್ನಾಟಕ ಲೋಕಾಯುಕ್ತ. 1984ರಲ್ಲಿಯೇ ಲೋಕಾಯುಕ್ತ ರಚನೆಯಾದರೂ ನ್ಯಾಯಮೂರ್ತಿ ಎನ್.ವೆಂಕಟಾಚಲ ಅವರು ನೇತೃತ್ವ ವಹಿಸಿಕೊಳ್ಳುವವರೆಗೆ ಅದೊಂದು ಸರ್ಕಾರಿ ಸಂಸ್ಥೆಯಂತೆಯೇ ಕೆಲಸ ನಿರ್ವಹಿಸುತ್ತಿತ್ತು. ಸರ್ಕಾರಿ ಕಚೇರಿಗಳಲ್ಲಿನ ಲಂಚಗುಳಿತನದಿಂದ ಶ್ರೀಸಾಮಾನ್ಯರು ಪರಿತಪಿಸುತ್ತಿದ್ದರು. ವೆಂಕಟಾಚಲ ಅವರು ಇಂತಹ ಕಚೇರಿಗಳ ಮೇಲೆ ತಮ್ಮ ತಂಡದೊಂದಿಗೆ ದಾಳಿ ನಡೆಸಿ, ಲಂಚದ ರೂಪದಲ್ಲಿ ಪಡೆದಿದ್ದ ಕಂತೆ ಕಂತೆ ನೋಟುಗಳನ್ನು ಮೇಜುಗಳ ಮೇಲೆ ಸುರಿಸಿ ಅಧಿಕಾರಿ–ಸಿಬ್ಬಂದಿಯನ್ನು ಏರುಧ್ವನಿಯಲ್ಲಿ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಇದರಿಂದ ಲಂಚ ತೆಗೆದುಕೊಳ್ಳಲು ಅಧಿಕಾರಿಗಳು ಹೆದರುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದೊಂದು ರೀತಿ ಸಿನಿಮೀಯವಾದ ಜನಪ್ರಿಯ ಮಾದರಿ.

2006ರಲ್ಲಿ ಅಧಿಕಾರ ವಹಿಸಿಕೊಂಡ ಸಂತೋಷ್ ಹೆಗ್ಡೆ ಅವರದು ಮತ್ತೊಂದು ಬಗೆಯ ಶೈಲಿ. ನೇರವಾಗಿ ದಾಳಿಗೆ ಇಳಿಯುವ, ಜನರೆದುರು ನಿಂತು ಅಧಿಕಾರಿಗಳನ್ನು ಬೈಯ್ಯುವ ಮಾರ್ಗವನ್ನು ಅವರು ಬಳಸಲಿಲ್ಲ. ಕಚೇರಿಯಲ್ಲಿ ಕುಳಿತು, ಲೋಕಾಯುಕ್ತಕ್ಕೆ ಇದ್ದ ಪೊಲೀಸ್ ಬಲ ಬಳಸಿಯೇ ದೊಡ್ಡ ದೊಡ್ಡ ತಿಮಿಂಗಿಲಗಳನ್ನು ಹಿಡಿದು ಜೈಲಿಗೆ ತಳ್ಳಿದರು. ಲಂಚದ ಕಾಸು ತೆಗೆದುಕೊಳ್ಳುವ ಕೈ ನಡುಗುವಂತೆ ಮಾಡಿದ್ದು ಅವರ ಹೆಗ್ಗಳಿಕೆ. ವೆಂಕಟಾಚಲ ಅವರ ಕಾಲದಲ್ಲಿ ತಳಹಂತದ ಅಧಿಕಾರಿ, ಸಿಬ್ಬಂದಿಯಷ್ಟೇ ದಾಳಿಗೆ ಗುರಿಯಾಗುತ್ತಿದ್ದರು. ಐಎಎಸ್, ಐಪಿಎಸ್ ಅಧಿಕಾರಿಗಳು, ಸಚಿವರು–ಶಾಸಕರನ್ನು ಮುಟ್ಟುವ ಗೋಜಿಗೆ ಹೋಗಿರಲಿಲ್ಲ. ಯಾರನ್ನು ಮುಟ್ಟಲು ಸಾಧ್ಯವಿಲ್ಲ ಎಂದು ಜನ ಮತ್ತು ಅಧಿಕಾರಸ್ಥರು ಅಂದುಕೊಂಡಿದ್ದರೋ ಅಂತಹವರನ್ನೇ ಖೆಡ್ಡಾಕ್ಕೆ ಕೆಡವಿ ಜನರಲ್ಲಿ ಭರವಸೆ ಮೂಡಿಸಿದ್ದು ಸಂತೋಷ್ ಹೆಗ್ಡೆ ಅವರ ಸಾಧನೆ.

ಲೋಕಾಯುಕ್ತದ ಅಲ್ಲಿಯವರೆಗಿನ ಇತಿಹಾಸದಲ್ಲಿ ಶಾಸಕ ಅಥವಾ ಸಚಿವರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಿದ ನಿದರ್ಶನವೇ ಇರಲಿಲ್ಲ. ಕರ್ನಾಟಕದ ಗಣಿಯನ್ನೇ ಲೂಟಿ ಹೊಡೆದು, ಕೋಟ್ಯಂತರ ರೂಪಾಯಿ ಕಳ್ಳಧನ ಸಂಪಾದಿಸಿದ್ದವರ ವಿರುದ್ಧ ಲೋಕಾಯುಕ್ತ ತನಿಖೆ ನಡೆಸಿತ್ತು. ಈ ವರದಿಯಲ್ಲಿ ಹೆಸರಿದ್ದ ಕಾರಣಕ್ಕೆ, ಅಂದು ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ರಾಜೀನಾಮೆ ಕೊಡಬೇಕಾಯಿತು. ಕೊನೆಗೆ ಜೈಲನ್ನೂ ಕಾಣಬೇಕಾಯಿತು. ಈಗ ಸಚಿವರಾಗಿರುವ ಆನಂದ್ ಸಿಂಗ್, ಹಿಂದೆ ಸಚಿವರಾಗಿದ್ದ ಜನಾರ್ದನ ರೆಡ್ಡಿ, ಹಾಲಿ ಶಾಸಕ ಬಿ.ನಾಗೇಂದ್ರ, ಮಾಜಿ ಶಾಸಕ ಸುರೇಶ್ ಬಾಬು ಸಹಿತ ಹಲವರು ಜೈಲು ಕಂಡಿದ್ದರು.

ಭೂ ಅಕ್ರಮದ ಪ್ರಕರಣದಲ್ಲಿ ಬಿಜೆಪಿ ನೇತೃತ್ವದ ಅಂದಿನ ಸರ್ಕಾರದಲ್ಲಿ ಸಚಿವರಾಗಿದ್ದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಮಾಲೂರು ಕೃಷ್ಣಯ್ಯ ಶೆಟ್ಟಿ ಜೈಲು ಕಂಡಿದ್ದರು. ಈಗ ಸಚಿವರಾಗಿರುವ ಕೆಲವರು ಸೇರಿದಂತೆ 66 ಜನ ಶಾಸಕರು ವಿಚಾರಣೆಗೆ ಗುರಿಯಾಗಿದ್ದರು. ಕೆಜಿಎಫ್ ಕ್ಷೇತ್ರದ ಬಿಜೆಪಿ ಶಾಸಕರಾಗಿದ್ದ ವೈ.ಸಂಪಂಗಿ ಲಂಚಕ್ಕಾಗಿ ಬೇಡಿಕೆ ಇಟ್ಟ ಬಗ್ಗೆ ದೂರೊಂದು ಸಲ್ಲಿಕೆಯಾಗಿತ್ತು. ಅದರ ಬೆನ್ನು ಹತ್ತಿದ್ದ ಲೋಕಾಯುಕ್ತ ಪೊಲೀಸರು, ಶಾಸಕರ ಭವನಕ್ಕೆ ಲಗ್ಗೆ ಇಟ್ಟು, ಲಂಚ ಪಡೆಯುತ್ತಿದ್ದಾಗಲೇ ಅವರನ್ನು 'ರೆಡ್ ಹ್ಯಾಂಡೆಡ್' ಆಗಿ ಹಿಡಿದು ಚರಿತ್ರೆಯನ್ನೇ ನಿರ್ಮಿಸಿದ್ದರು. ಮುಖ್ಯಕಾರ್ಯದರ್ಶಿಯಾಗಿದ್ದವರೂ ಸೇರಿದಂತೆ 28 ಐಎಎಸ್, 8 ಜನ ಐಪಿಎಸ್ ಅಧಿಕಾರಿಗಳನ್ನೂ ಲೋಕಾಯುಕ್ತ ವಿಚಾರಣೆಗೆ ಸಿಲುಕಿಸಿತ್ತು.

ಆದರೆ ಇಂತಹದೊಂದು ಸಂಸ್ಥೆಯನ್ನೇ ಭ್ರಷ್ಟಾಚಾರದ ಮಹಾವೃಕ್ಷವಾಗಿಸಿದ ಕೆಟ್ಟ ಚರಿತ್ರೆಯನ್ನೂ ಕರ್ನಾಟಕ ಕಂಡಿತು. ಲೋಕಾಯುಕ್ತರಾಗಿದ್ದ ಭಾಸ್ಕರ ರಾವ್ ಅವರ ಪುತ್ರ ಅಶ್ವಿನ್ ರಾವ್ ಇದರಲ್ಲಿ ಶಾಮೀಲಾಗಿ, ಲೋಕಾಯುಕ್ತ ಕಚೇರಿಯನ್ನೇ ವ್ಯವಹಾರದ ಕೇಂದ್ರವಾಗಿಸಿದ್ದರು. ಯಾವ ವೈಭವವನ್ನು ಲೋಕಾಯುಕ್ತ ಕಂಡಿತ್ತೋ 2015ರಲ್ಲಿ ಅದು ಧಸಕ್ಕೆಂದು ಪಾತಾಳಕ್ಕೆ ಕುಸಿದುಬಿಟ್ಟಿತು. ಲೋಕಾಯುಕ್ತಕ್ಕೆ ಅಂಟಿದ ಕಳಂಕವೇ ರಾಜಕಾರಣಿಗಳಿಗೆ ವರವಾಯಿತು.

ಅದಕ್ಕೆ ನೆರವಾದವರು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ. ಲೋಕಾಯುಕ್ತದ ಭ್ರಷ್ಟಾಚಾರ ನಮ್ಮ ನ್ಯಾಯಿಕ ವ್ಯವಸ್ಥೆಗೆ ಕಪ್ಪುಚುಕ್ಕಿಯಾಗಿತ್ತು. ಲೋಕಾಯುಕ್ತರ ವಿರುದ್ಧ ಕ್ರಮ ಕೈಗೊಳ್ಳಬೇಕೆ? ಅವರನ್ನು ವಿಚಾರಣೆಗೆ ಗುರಿಪಡಿಸಬೇಕೆ ಎಂಬ ಜಿಜ್ಞಾಸೆ, ದಿನಕ್ಕೊಂದರಂತೆ ಬಯಲಿಗೆ ಬರುತ್ತಿದ್ದ ಹಗರಣಗಳು ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸಿದ್ದವು. ಲೋಕಾಯುಕ್ತ ಬಲಿಷ್ಠವಾಗಿಯೇ ಮುಂದುವರಿದರೆ ತಮ್ಮ ಬುಡವನ್ನೂ ಹಗರಣದ ತಾಪ ಸುಡಬಹುದೆಂಬ ಭಯ ಸರ್ಕಾರದಲ್ಲಿದ್ದವರ ಭಾವನೆಯಾಗಿತ್ತು. ಲೋಕಾಯುಕ್ತ ಸಮರ್ಥವಾಗಿದ್ದರೆ 2013ರಿಂದ 2018ರವರೆಗಿನ ಅನೇಕ ಹಗರಣಗಳಲ್ಲಿ ಕಾಂಗ್ರೆಸ್‌ನವರು ನಿಶ್ಚಿತವಾಗಿ ಆರೋಪಿ ಸ್ಥಾನದಲ್ಲಿ ಇರಬೇಕಾಗಿತ್ತು. ಅರ್ಕಾವತಿ 'ರೀಡೂ' ಪ್ರಕರಣದಲ್ಲಿ ಸ್ವತಃ ಸಿದ್ದರಾಮಯ್ಯನವರೇ ವಿಚಾರಣೆ ಎದುರಿಸಬೇಕಾದ ಸನ್ನಿವೇಶ ಸೃಷ್ಟಿಯಾಗಲಿತ್ತು.




ಅದನ್ನು ತಪ್ಪಿಸಿಕೊಂಡು, ತನಿಖಾ ಶಕ್ತಿಯನ್ನು ಸರ್ಕಾರದ ಬಳಿಯೇ ಇಟ್ಟುಕೊಳ್ಳುವ ಸಲುವಾಗಿ ಆಗಿನ ಸರ್ಕಾರವು ಅಡ್ಡದಾರಿಯೊಂದನ್ನು ಹುಡುಕಿತು. 1996ರಲ್ಲಿ ಸಿ.ರಂಗಸ್ವಾಮಯ್ಯ ವರ್ಸಸ್ ಲೋಕಾಯುಕ್ತ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನಲ್ಲಿ 'ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಕೆಲಸ ಮಾಡುವ ಸ್ವತಂತ್ರ ಅಧಿಕಾರವೊಂದು ಬೇಕಾಗುತ್ತದೆ' ಎಂದು ಹೇಳಿತ್ತು. 2016ರವರೆಗೂ ಇದರ ಬಗ್ಗೆ ಯಾವ ಸರ್ಕಾರವೂ ತಲೆಕೆಡಿಸಿಕೊಂಡಿರಲಿಲ್ಲ. ಸಿದ್ದರಾಮಯ್ಯ ನೇತೃತ್ವದ ಸರ್ಕಾರವು, ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ರಚಿಸಬಹುದು ಎಂದು ಅಂದಿನ ಪೊಲೀಸ್ ಮಹಾನಿರ್ದೇಶಕರಿಂದ ಪ್ರಸ್ತಾವವೊಂದನ್ನು ತರಿಸಿಕೊಂಡಿತು. ಲೋಕಾಯುಕ್ತಕ್ಕೆ ಇದ್ದ ಏಕೈಕ ಶಕ್ತಿಯಾಗಿದ್ದ ಪೊಲೀಸ್ ಬಲವನ್ನೇ ಕಿತ್ತುಕೊಂಡು, ಈ ಅಧಿಕಾರವನ್ನು ಎಸಿಬಿಗೆ ವರ್ಗಾಯಿಸಿತು. ಯಾವುದೇ ಹಗರಣ ಅಥವಾ ವ್ಯಕ್ತಿಯ ಮೇಲಿನ ಆಪಾದನೆಗಳ ತನಿಖೆ ನಡೆಯಬೇಕಾದರೆ ಮುಖ್ಯಕಾರ್ಯದರ್ಶಿ ನೇತೃತ್ವದ ಸಮಿತಿಯ ಅನುಮತಿ ಪಡೆಯಬೇಕು ಎಂದು ಎಸಿಬಿ ರಚನೆಯಲ್ಲಿನ ನಿಯಮದಲ್ಲಿ ಸೇರಿಸಿತು.

ಲೋಕಾಯುಕ್ತಕ್ಕೆ ದೂರು ದಾಖಲಾದರೆ ಅದು ಗೋಪ್ಯವಾಗಿದ್ದು, ನ್ಯಾಯಮೂರ್ತಿಗಳ ಸಮಕ್ಷಮದಲ್ಲಿ ತನಿಖೆ ಆರಂಭವಾಗುತ್ತದೆ. ಸಂಬಂಧಿಸಿದ ಪೊಲೀಸರಿಗಷ್ಟೇ ಇದರ ವಿಚಾರ ಗೊತ್ತಿರುತ್ತದೆ. ಎಸಿಬಿಯಲ್ಲಿ ದೂರು ದಾಖಲಾದರೆ ಸರ್ಕಾರಕ್ಕೆ ಅಂದರೆ ಮುಖ್ಯಮಂತ್ರಿಯಾಗಿದ್ದವರ ಗಮನಕ್ಕೂ ಹೋಗುತ್ತದೆ. ತನಿಖೆಯ ವಿವೇಚನಾಧಿಕಾರ ಕೊನೆಗೆ ಸರ್ಕಾರದ್ದಾಗಿರುತ್ತದೆ. ಹೀಗೆ ಮಾಡುವ ಮೂಲಕ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಲೋಕಾಯುಕ್ತವನ್ನು ಬಲಿ ಹಾಕಿ, ತನ್ನನ್ನು ಬಚಾವು ಮಾಡಿಕೊಂಡಿತು.

ಎಸಿಬಿಯನ್ನು ರದ್ದುಪಡಿಸಿರುವ ಹೈಕೋರ್ಟ್, ಪೂರ್ಣಾಧಿಕಾರವನ್ನು ಲೋಕಾಯುಕ್ತಕ್ಕೆ ಕೊಟ್ಟಿದೆ. ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು ಪೊಲೀಸ್ ವಿಭಾಗಕ್ಕೆ ಬೇಕಾದ ಸಿಬ್ಬಂದಿಯನ್ನು ನೀಡಬೇಕಿದೆ. ಸಮರ್ಥ– ಪ್ರಾಮಾಣಿಕ ಅಧಿಕಾರಿಗಳನ್ನು ಆಯ್ಕೆ ಮಾಡಿಕೊಳ್ಳುವ ಅಧಿಕಾರವನ್ನು ಲೋಕಾಯುಕ್ತರ ವಿವೇಚನೆಗೆ ಬಿಡಬೇಕಿದೆ. 'ದಮ್ಮಿದ್ದರೆ, ತಾಕತ್ತಿದ್ದರೆ' ಎಂದು ಕಾಂಗ್ರೆಸ್‌ಗೆ ಸವಾಲು ಒಡ್ಡುತ್ತಿರುವ ಬಿಜೆಪಿ ನಾಯಕರು, ಈ ವಿಷಯದಲ್ಲಿ ಧೈರ್ಯ ಪ್ರದರ್ಶಿಸಬೇಕಿದೆ. ಕಾಂಗ್ರೆಸ್ ಸರ್ಕಾರದ ಅವಧಿಯ ಹಗರಣಗಳ ಜತೆಗೆ ಕಳೆದ ಮೂರು ವರ್ಷಗಳಲ್ಲಿ ನಡೆದಿರುವ ಅಕ್ರಮಗಳ ತನಿಖೆಯನ್ನೂ ಲೋಕಾಯುಕ್ತಕ್ಕೆ ವಹಿಸಿ, ತಾವೂ ಅಗ್ನಿದಿವ್ಯಕ್ಕೆ ಒಡ್ಡಿಕೊಳ್ಳಬೇಕಾಗಿದೆ. 2023ರ ಚುನಾವಣೆ ಹೊತ್ತಿಗೆ, ಯಾರೆಷ್ಟು ಕಳಂಕಿತರು, ಯಾರೆಷ್ಟು ಸಚ್ಚಾರಿತ್ರ್ಯವಂತರು ಎಂಬುದು ಮತದಾರರಿಗೆ ಗೊತ್ತಾಗಬೇಕಿದೆ. ಈ ವಿಷಯದಲ್ಲಿ ಬೊಮ್ಮಾಯಿಯವರು ತಮ್ಮ ತಾಕತ್ತನ್ನು ತೋರಿಸಬೇಕಿದೆ.

ಚುರುಮುರಿ



ಗಂಡ-ಗುಂಡಿ

• ಮಣ್ಣೆರಾಜು

'ನಿಮ್ಮ ಮಗ ತುಂಬಾ ಕೆಟ್ಟಿದ್ದಾರೆ, ಇನ್‌ಟೈಂಗೆ ಮನೆಗೆ ಬರ್ತಿಲ್ಲ. ನನ್ನ ಜೊತೆ ಕಷ್ಟಸುಖ ಮಾತನಾಡ್ತಿಲ್ಲ, ಆಫೀಸಿಗೆ ಹೋಗ್ತೀನಿ ಅಂತ ದಿನಾ ಬೆಳಿಗ್ಗೆ ಬೇಗ ಹೋಗ್ತಾರೆ, ಸಂಜೆ ತೀರಾ ತಡವಾಗಿ ಬರ್ತಾರೆ. ಅದೆಲ್ಲಿಗೆ ಹೋಗ್ತಾರೋ ಕೇಳಿ...'

ಮಾವನಿಗೆ ಸೊಸೆ ಸುಮಿ ಕಂಪ್ಲೇಂಟ್ ಹೇಳಿ ಕಣ್ಣು ಒರೆಸಿಕೊಂಡಳು.

'ಹೌದೇನೋ ಶಂಕ್ರಿ? ಸಂಸಾರ ಕಟ್ಟಿಕೊಂಡು ಹೀಗೆ ದಾರಿ ತಪ್ಪೋದು ಸರಿಯೇನೋ?' ಮಲ್ಲಣ್ಣ ರೇಗಿದ.

'ಹೌದಪ್ಪ, ಆಫೀಸಿಗೆ ದಿನಾ ತಡವಾಗಿ ಹೋಗ್ತಿದ್ದೆ, ಅದ್ಕೆ ಬಾಸ್ ಬೆಳಿಗ್ಗೆ ಬೇಗ ಮನೆ ಬಿಡು, ಇಲ್ಲವಾದರೆ ಕೆಲಸ ಬಿಡು ಅಂತ ಹೇಳಿದ್ದಾರೆ. ಕೆಲ್ಸ ಬಿಡಬೇಕೋ, ಮನೆ ಬಿಡಬೇಕೋ ನೀವೇ ಹೇಳಿ' ಅಂದ ಶಂಕ್ರಿ.

'ನಿಮ್ಮ ಬಾಸ್‌ಗೆ ಮನೆಮಠ ಇಲ್ವಂತಾ?'

'ಇವರು ತಪ್ಪು ಮಾಡಿ ಬಾಸ್ ಮೇಲೆ ಹೇಳ್ತಿದ್ದಾರೆ. ನನಗೇನೋ ಇವರು ಅಡ್ಡದಾರಿ ಹಿಡಿದಿದ್ದಾರೆ ಅನಿಸಿಬಿಟ್ಟಿದೆ...' ಸುಮಿ ಗೊಳೋ ಅಂದಳು.

'ಅಡ್ಡದಾರಿ ಹಿಡಿದಿರೋದು ನಿಜವೇನೋ?'

'ನಿಜ. ಮೊದಲು ಮಲ್ಲಿಗೆ ರಸ್ತೆಯಲ್ಲಿ ಹೋಗ್ತಿದ್ದೆ, ಈಗ ಸಂಪಿಗೆ ರಸ್ತೆಯಲ್ಲಿ ಓಡಾಡ್ತಿದ್ದೇನೆ'.

'ಯಾಕೆ ದಾರಿ ತಪ್ಪಿದೆ?' ಮಲ್ಲಣ್ಣ ಕೇಳಿದ.

'ಮಲ್ಲಿಗೆ ರಸ್ತೆಯಲ್ಲಿ ಮೊಳಕಾಲುದ್ದದ ಗುಂಡಿಗಳು ಬಿದ್ದಿವೆ. ಬೈಕಿನಲ್ಲಿ ಗುಂಡಿ ಇಳಿದು-ಹತ್ತಿ ಹೋಗಲು ಯಮಯಾತನೆ. ಚಿಕ್ಕ ಗುಂಡಿಗಳಿರುವ ಸಂಪಿಗೆ ರಸ್ತೆ, ಸಣ್ಣ ರಸ್ತೆಗಳಲ್ಲಿ ಸುತ್ತಿಬಳಸಿ ಹೋಗಿಬರೋದರಿಂದ ತಡವಾಗುತ್ತೆ' ಅಂದ ಶಂಕ್ರಿ.

ಮಲ್ಲಣ್ಣನಿಗೆ ಶಂಕ್ರಿ ಪರಿಸ್ಥಿತಿ ಅರ್ಥವಾಯಿತು. 'ಸಾರ್ವಜನಿಕ ಸಮಸ್ಯೆಯಾಗಿರುವ ರಸ್ತೆಗುಂಡಿಗಳು ಸಾಂಸಾರಿಕ ಸಮಸ್ಯೆಯೂ ಆಗಿಬಿಟ್ಟವಲ್ಲಾ' ಅಂತ ಬೇಸರವೂ ಆಯಿತು.

'ಇದು ಗಂಡ-ಗುಂಡಿ ಸಮಸ್ಯೆ. ಗಂಡ ಕೆಟ್ಟಿಲ್ಲ, ರಸ್ತೆಗಳು ಕೆಟ್ಟಿವೆ... ಗುಂಡಿ ಮುಚ್ಚಿ ರಸ್ತೆಗಳು ರಿಪೇರಿ ಆದ್ಮೇಲೆ ಗಂಡನೂ ರಿಪೇರಿ ಆಗ್ತಾನೆ ಧೈರ್ಯವಾಗಿರು...' ಎಂದು ಮಲ್ಲಣ್ಣ ಸೊಸೆಗೆ ಸಮಾಧಾನ ಹೇಳಿದ.

ದಿನದ ಟ್ವೀಟ್

ಧ್ರುವೀಕರಣಕ್ಕೆ ಉತ್ತರ?



ಆರ್‌ಎಸ್‌ಎಸ್- ಬಿಜೆಪಿ ಸರ್ಕಾರವು ಧರ್ಮ ಮತ್ತು ಜಾತಿಯ ಆಧಾರದ ಮೇಲೆ ಸಮಾಜವನ್ನು ಧ್ರುವೀಕರಣಗೊಳಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ರಾಹುಲ್ ಗಾಂಧಿ ಅವರ ಭಾರತ್ ಜೋಡೊ ಅಭಿಯಾನವು ಈ ಧ್ರುವೀಕರಣಕ್ಕೆ ಉತ್ತರವೇ ಅಥವಾ ತಮಾಷೆ ಮಾತ್ರವೇ?

ಪ್ರಕಾಶ್ ಅಂಬೇಡ್ಕರ್, ಅಧ್ಯಕ್ಷ, ವಂಚಿತ್ ಬಹುಜನ್ ಆಘಾಡಿ ಪಕ್ಷ

ಕಿಡಿನುಡಿ



ಗೋವಾದಲ್ಲಿ ನಡೆದಿರುವ ಪಕ್ಷಾಂತರದಿಂದ ರೋಮಾಂಚಿತರಾಗಿರುವವರು ದಯಮಾಡಿ ಅರ್ಥಮಾಡಿಕೊಳ್ಳಿ, ಅವರು ಯಾವುದೇ ತತ್ವ-ಸಿದ್ಧಾಂತಕ್ಕಾಗಿ ಈ ಕೆಲಸ ಮಾಡುತ್ತಿಲ್ಲ... ಇದನ್ನು ಅವರು ಮಾಡುತ್ತಿರುವುದು ಹಣಕ್ಕಾಗಿ, ಜಾರಿ ನಿರ್ದೇಶನಾಲಯ, ಸಿಬಿಐ ಮತ್ತು ಇತರ ಕಾರಣಗಳಿಗಾಗಿ.

ವೀಣಾ ಬಕ್ಷಿ, ಚಲನಚಿತ್ರ ನಿರ್ದೇಶಕಿ

25 ವರ್ಷಗಳ ಹಿಂದೆ

ಮಂಗಳವಾರ, 16-9-1997

• ಬರ, ಮಳೆ ಹಾವಳಿ ಪರಿಹಾರಕ್ಕೆ ₹ 60 ಕೋಟಿ ಬಿಡುಗಡೆ

ಬೆಂಗಳೂರು, ಸೆ. 15– ರಾಜ್ಯದ ಅತಿವೃಷ್ಟಿ ಹಾಗೂ ಅನಾವೃಷ್ಟಿ ಪೀಡಿತ ಪ್ರದೇಶಗಳಲ್ಲಿ ತುರ್ತು ಪರಿಹಾರ ಕಾರ್ಯಗಳಿಗಾಗಿ ರಾಜ್ಯ ಸರ್ಕಾರ ₹ 60 ಕೋಟಿ ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಹಣಕಾಸು ನೆರವನ್ನು ಕೋರಿ ಮನವಿ ಸಲ್ಲಿಸಲು ಇಂದು ಇಲ್ಲಿ ರಾಜ್ಯ ಸರ್ಕಾರ ತೀರ್ಮಾನಿಸಿತು.

• ತೈಲಾಗಾರ: ಆರದ ಬೆಂಕಿ ಜ್ವಾಲೆ

ವಿಶಾಖಪಟ್ಟಣ, ಸೆ. 15 (ಪಿಟಿಐ)– ಇಲ್ಲಿನ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನಲ್ಲಿ ನಿನ್ನೆ ಸಂಭವಿಸಿದ ಭೀಕರ ಬೆಂಕಿ ದುರಂತದಲ್ಲಿ ಸತ್ತವರ ಸಂಖ್ಯೆ 38ಕ್ಕೆ ಏರಿದೆ. ಈ ಮಧ್ಯೆ ಅಗ್ನಿಶಾಮಕ ದಳ ಕಾರ್ಯಾಚರಣೆ ಮುಂದುವರಿಸಿದ್ದು, ಬೆಂಕಿ ಹತೋಟಿಗೆ ತರಲು ಸಮರೋಪಾದಿಯಲ್ಲಿ ಹೋರಾಡುತ್ತಿದೆ.

ಬೆಂಕಿ ದುರಂತದಿಂದ ಆಗಿರುವ ನಷ್ಟದ ಪ್ರಮಾಣವನ್ನು ಇನ್ನೂ ಅಂದಾಜು ಮಾಡಬೇಕಿದೆ ಎಂದು ಎಚ್‌ಪಿಸಿಎಲ್ ಅಧಿಕಾರಿಗಳು ಹೇಳಿದ್ದಾರೆ. ₹ 300 ಕೋಟಿಯಿಂದ ₹ 500 ಕೋಟಿ ನಷ್ಟ ಸಂಭವಿಸಿರಬಹುದು ಎಂದು ಪ್ರಾಥಮಿಕ ಅಂದಾಜಿನಿಂದ ತಿಳಿದುಬಂದಿದೆ.

• ರೈಲು ದುರಂತ: ಸತ್ತವರ ಸಂಖ್ಯೆ 81ಕ್ಕೆ ಏರಿಕೆ

ಭೋಪಾಲ್, ಸೆ. 15– ನಿನ್ನೆ ರೈಲು ದುರಂತ ಸಂಭವಿಸಿದ ಬಿಲಾಸ್‌ಪುರದ ಚಂಪಾದಲ್ಲಿ ಸಮರೋಪಾದಿಯಲ್ಲಿ ಪರಿಹಾರ ಕಾರ್ಯ ಮುಂದುವರಿದಿದೆ. ದುರಂತದಲ್ಲಿ ಸಾವಿಗೀಡಾದವರ ಮತ್ತಷ್ಟು ದೇಹಗಳು ಇಂದು ಪತ್ತೆಯಾಗಿದ್ದು, ಒಟ್ಟು 81 ಮೃತದೇಹಗಳು ದೊರಕಿವೆ.

ಕೇಂದ್ರ ರೈಲ್ವೆ ಸಚಿವ ರಾಂ ವಿಲಾಸ್ ಪಾಸ್ವಾನ್ ಹಾಗೂ ಮಧ್ಯಪ್ರದೇಶ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್ ಅವರು ಇಂದು ದುರಂತ ಸ್ಥಳಕ್ಕೆ ಭೇಟಿ ನೀಡಿ ಪರಿಹಾರ ಕಾರ್ಯ ವೀಕ್ಷಿಸಿದರು.

50 ವರ್ಷಗಳ ಹಿಂದೆ

ಶನಿವಾರ, 16-9-1972

• ಕಾಶ್ಮೀರ ಹತೋಟಿ ರೇಖೆ ಗುರುತಿಸುವಿಕೆ ಅಪೂರ್ಣ: ಭಾರತ–ಪಾಕಿಸ್ತಾನ ಸೈನ್ಯ ವಾಪಸಾತಿ ಮತ್ತೆ ಮುಂದಕ್ಕೆ

ನವದೆಹಲಿ, ಸೆ. 15– ಭಾರತ ಮತ್ತು ಪಾಕಿಸ್ತಾನ ಪಡೆಗಳು ಅಂತರರಾಷ್ಟ್ರೀಯ ಗಡಿಗೆ ತಮ್ಮ ಪಡೆಗಳನ್ನು ಇಂದು ವಾಪಸು ಕರೆಸಿಕೊಳ್ಳಬೇಕಾಗಿತ್ತಾದರೂ ಅದು ಇನ್ನೂ ಪ್ರಾರಂಭವೇ ಆಗಿಲ್ಲ.

ಜಮ್ಮು ಮತ್ತು ಕಾಶ್ಮೀರದಲ್ಲಿ ನಿಯಂತ್ರಣ ರೇಖೆ ಗುರುತಿಸುವಿಕೆ ಕೆಲಸವನ್ನು ಉಭಯ ರಾಷ್ಟ್ರಗಳ ಸೇನಾ ಪ್ರತಿನಿಧಿಗಳು ಮುಗಿಸಲು ಸಾಧ್ಯವಾಗದಿರುವುದರಿಂದ ತಮ್ಮ ತಮ್ಮ ಪಡೆಗಳನ್ನು ವಾಪಸು ಕರೆಸಿಕೊಳ್ಳುವ ದಿನವನ್ನು ಅವು ಮತ್ತೆ ಎರಡನೆಯ ಬಾರಿಗೆ ಮುಂದಕ್ಕೆ ಹಾಕಿವೆ.

ಸಿಮ್ಲಾ ಒಪ್ಪಂದವನ್ನು ಅನುಮೋದಿಸಿದ 30 ದಿನಗಳೊಳಗೆ ಪಡೆಗಳನ್ನು ವಾಪಸು ಕರೆಸಿಕೊಳ್ಳಬೇಕಾಗಿದ್ದು, ಆ ಗಡುವು ಸೆ. 4ರಂದು ಮುಗಿಯಿತು.

• ಜಲ ಸಂರಕ್ಷಣೆ, ಪ್ರವಾಹ ಹತೋಟಿ ಯೋಜನೆಗಳ ಮೂಲಕ ಜನರ ಬವಣೆ ತಪ್ಪಿಸಲು ಪಾಠಕ್ ಕರೆ

ಮೈಸೂರು, ಸೆ. 15– ರಾಷ್ಟ್ರದ ಒಂದಲ್ಲ ಒಂದು ಪ್ರದೇಶ ಬರ ಇಲ್ಲವೇ ಪ್ರವಾಹಕ್ಕೆ ತುತ್ತಾಗುತ್ತಿದ್ದು, ಜಲ ಸಂರಕ್ಷಣೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳ ಮೂಲಕ ಜನರ ಬವಣೆಯನ್ನು ತಪ್ಪಿಸಲು ಉಪರಾಷ್ಟ್ರಪತಿ ಶ್ರೀ ಜಿ.ಎಸ್. ಪಾಠಕ್ ಅವರು ಎಂಜಿನಿಯರುಗಳಿಗೆ ಇಂದು ಇಲ್ಲಿ ಕರೆ ನೀಡಿದರು.

ಸಂಗತ

ಇಳೆ ಒಂದೇ, ಓಜೋನ್ ಕೊಡೆಯೊಂದೇ

ನಿಸರ್ಗದ ಉಡುಗೊರೆಯಾದ ಓಜೋನ್ ಕೊಡೆಯನ್ನು ನಮ್ಮ ಉಳಿವಿಗಾಗಿ ನಾವು ಸಂರಕ್ಷಿಸಿಕೊಳ್ಳಲೇಬೇಕಾಗಿದೆ

• ಯೋಗಾನಂದ

'ಜೀವನ ಒಂದು ಈರುಳ್ಳಿಯಂತೆ. ಒಮ್ಮೆಗೆ ಒಂದು ಪದರ ಸುಲಿಯುತ್ತೇವೆ, ಕಣ್ಣೀರು ಹಾಕುತ್ತೇವೆ'- ಅಮೆರಿಕದ ಕವಿ ಕಾರ್ಲ್ ಸ್ಯಾಂಡ್‌ಬರ್ಗ್ ಅವರ ಈ ನುಡಿ ಭೂಮಿಯ ಓಜೋನ್ ಹೊದಿಕೆಗೆ ತಕ್ಕ ಉಪಮೆಯಾಗಿದೆ. ಓಜೋನ್ ಪದರವು ಸೂರ್ಯನ ಹಾನಿಕಾರಕ ಅತಿನೇರಳೆ ವಿಕಿರಣಗಳನ್ನು ತಡೆದು ಭೂಮಿಯ ಜೀವಿಗಳನ್ನು ಕೋಟ್ಯಂತರ ವರ್ಷಗಳಿಂದ ರಕ್ಷಿಸುತ್ತಿದೆ.


ಓಜೋನ್ ಕವಚ ಇಲ್ಲದ ಭೂಮಿ ಸೂರಿಲ್ಲದ ಮನೆಯಂತೆ. ಭಾರತೀಯ ಪರಂಪರೆಯಲ್ಲಿ ಭೂಮಿ, ನೀರು, ಗಾಳಿ, ಅಗ್ನಿ ಮತ್ತು ಆಕಾಶ- ಈ ಪಂಚಭೂತಗಳ ನಡುವೆ ಸಾಮರಸ್ಯವುಂಟು, ಅದನ್ನು ಕೆಡಿಸಬಾರದು ಎಂಬ ಎಚ್ಚರವಿದೆ. ಆಕಾಶ ಎಂದರೆ ಓಜೋನ್ ರಕ್ಷಾಕವಚವೆಂದು ಅರ್ಥೈಸಬಹುದು. ಓಜೋನ್ ಪದರ ನೆಲದಿಂದ 15- 50 ಕಿ.ಮೀ. ಎತ್ತರಕ್ಕೆ ವ್ಯಾಪಿಸಿರುವ ಸ್ತರಗೋಳದ (Stratosphere) ಅತ್ಯಲ್ಪ ಭಾಗ.

ವಾಯುಮಂಡಲದಲ್ಲಿರುವ ಓಜೋನ್ ಪ್ರಮಾಣ ಅತ್ಯಲ್ಪ. ಈ ವರಸದೃಶ ವಿಶಿಷ್ಟ ಪದರ ಕೃಶವಾದರೆ ಸಕಲ ಜೀವರಾಶಿಗಳ ಬದುಕು ಮತ್ತು ಆರೋಗ್ಯಕ್ಕೆ ಸಂಚಕಾರ ಕಟ್ಟಿಟ್ಟ ಬುತ್ತಿ. ಆಹಾರ ಜಾಲ, ಮಳೆ ಮಾರುತದ ವಿನ್ಯಾಸ, ಜಾಗತಿಕ ತಪನ, ಋತುಮಾನಗಳು ವ್ಯತ್ಯಯಗೊಳ್ಳುತ್ತವೆ. ಪರಿಸ್ಥಿತಿ ಅದೆಷ್ಟು ಬಿಗಡಾಯಿಸುವುದೆಂದರೆ ಸಮುದ್ರ, ನದಿ, ಕೊಳ, ಸರೋವರಗಳ ಪ್ಲಾಂಕ್‌ಟನ್ ಎಂಬ ಸೂಕ್ಷ್ಮಾಣು ತೇಲುಜೀವಿಗಳ ಸ್ವಾಸ್ಥ್ಯವೂ ಹದಗೆಟ್ಟು ಅವನ್ನು ಆಹಾರವಾಗಿ ಸೇವಿಸುವ ಜಲಚರಗಳೂ ನಶಿಸುತ್ತವೆ. ಓಜೋನ್ ಪದರದಲ್ಲಿ ರಂಧ್ರಗಳಾದಂತೆ ಪರಿಸರ, ಆರೋಗ್ಯ, ಅರ್ಥವ್ಯವಸ್ಥೆ ಕೆಡುತ್ತವೆ. ಸೂರ್ಯನ ಹಾನಿಕಾರಕ ಅತಿನೇರಳೆ ವಿಕಿರಣಗಳು ಚರ್ಮದ ಕ್ಯಾನ್ಸರ್, ರೋಗನಿರೋಧಕ ಶಕ್ತಿಯ ಹರಣಕ್ಕೆ ಕಾರಣವಾಗುತ್ತವೆ. ಪ್ರಾಣಿಗಳಿಗೆ ವಿಶೇಷವಾಗಿ ಕಣ್ಣಿನ ಕ್ಯಾನ್ಸರ್ ಬಾಧಿಸುತ್ತದೆ.

ಓಜೋನ್ ಪದರ ತೆಳುವಾಗುತ್ತಿದೆ ಎಂದು ಮೊದಲಿಗೆ ಗುರುತಿಸಿದ್ದು 1985ರಲ್ಲಿ. ಎರಡೇ ವರ್ಷಗಳ ನಂತರ ಅಂದರೆ 1987ರ ಸೆ. 16ರಂದು ವಿಶ್ವ ಮಟ್ಟದಲ್ಲಿ ವಿಜ್ಞಾನಿಗಳು, ನಾಯಕರು, ನೀತಿ ನಿರೂಪಕರೆಲ್ಲ ಸೇರಿ ಓಜೋನ್ ಪದರ ರಕ್ಷಣೆಗೆ 'ಮಾಂಟ್ರಿಯಲ್ ಪ್ರೊಟೊಕಾಲ್' ಎಂಬ ಒಪ್ಪಂದಕ್ಕೆ ಬಂದರು. ವಾತಾವರಣದಲ್ಲಿ ಓಜೋನ್ ಕ್ಷಯಕ್ಕೆ ಕಾರಣವಾಗುವ ವಸ್ತುಗಳ ಉತ್ಪಾದನೆ ಮತ್ತು ಆಮದನ್ನು ಸ್ಥಗಿತಗೊಳಿಸಲು ಒಕ್ಕೊರಲ ನಿರ್ಣಯಕ್ಕೆ ಬರಲಾಯಿತು.

1994ರಲ್ಲಿ ವಿಶ್ವಸಂಸ್ಥೆಯು ಪ್ರತಿವರ್ಷ ಸೆ. 16 ಅನ್ನು 'ವಿಶ್ವ ಓಜೋನ್ ದಿನ'ವಾಗಿ ಆಚರಿಸಬೇಕೆಂದು ಘೋಷಿಸಿತು. ಒಂದೊಂದು ವರ್ಷವೂ ಒಂದೊಂದು ಅರ್ಥಪೂರ್ಣ ಘೋಷಣಾ ನುಡಿಯಡಿಯಲ್ಲಿ ಉತ್ಸಾಹ ಗರಿಗೆದರುತ್ತದೆ. 2021ರಲ್ಲಿ 'ನಾವು ಹಾಗೂ ನಮ್ಮ ಆಹಾರ ಮತ್ತು ಲಸಿಕೆಗಳು ಸುರಕ್ಷಿತವಾಗಿರಲಿ', ಇದೀಗ 2022ರಲ್ಲಿ 'ಧರೆಯಲ್ಲಿ ಜೀವ ಸಂರಕ್ಷಣೆಗೆ ಜಾಗತಿಕ ಸಹಕಾರ' ಒಕ್ಕಣೆ.

ಮೂರು ಆಮ್ಲಜನಕದ ಪರಮಾಣುಗಳಿಂದ ರಚಿತವಾದ ಓಜೋನ್, ಆಮ್ಲಜನಕದ ಭಿನ್ನ ರೂಪ. ಪ್ರಕೃತಿಯ ವಿಸ್ಮಯವೆಂದರೆ, ಸೂರ್ಯನ ಅತಿನೇರಳೆ ಕಿರಣಗಳಿಂದಲೇ ಓಜೋನ್ ಹೊದಿಕೆಯ ನಿರ್ಮಿತಿ! ಅತಿನೇರಳೆ ವಿಕಿರಣಗಳು ಆಮ್ಲಜನಕದ ಅಣುಗಳನ್ನು ಸೀಳಿ, ಬಿಡಿ ಆಮ್ಲಜನಕ ಅಣುಗಳನ್ನಾಗಿಸುತ್ತವೆ. ಇವು ಆಮ್ಲಜನಕ ಅಣುವಿನೊಡನೆ ಸೇರಿ ಓಜೋನ್ ಆಗುವುದು. ರೆಫ್ರಿಜಿರೇಟರ್, ಏರ್‌ಕಂಡೀಷನರ್, ಏರೊಸಾಲ್ ಸ್ಪ್ರೇ ಅಥವಾ ಸಿಂಪರಣೆ ಧಾರಕಗಳಲ್ಲಿ ಮತ್ತು ಅಗ್ನಿಶಮನ ಪರಿಕರಗಳಲ್ಲಿ ಕ್ಲೋರೊಫ್ಲೂರೊ ಕಾರ್ಬನ್‌ಗಳು (ಸಿ.ಎಫ್.ಸಿ.) ಎಂಬ ಮನುಷ್ಯಕೃತ ಅನಿಲವನ್ನು ಇಂಧನಗಳನ್ನಾಗಿ ಬಳಸಲಾಗುತ್ತದೆ. ಇವು ಮಾಡುವ ಕಾರ್ಯ ಗೊತ್ತೇ? ಓಜೋನ್ ಪದರ ಹೊಕ್ಕು ಅಲ್ಲಿ ಓಜೋನ್ ಅಣುಗಳನ್ನು ಆಕ್ಸಿಜನ್ ಅಣುಗಳಾಗಿ ಪರಿವರ್ತಿಸುತ್ತವೆ. ಅಗೋ ರಕ್ಷಾಕವಚದಲ್ಲಿ ರಂಧ್ರಗಳು! ಸಿ.ಎಫ್.ಸಿ. ಜೊತೆಗೆ ಮೀಥೈಲ್ ಬ್ರೊಮೈಡ್, ಹ್ಯಾಲನ್, ಕಾರ್ಬನ್‌ಟೆಟ್ರಾಕ್ಲೋರೈಡ್ ಮುಂತಾದ ಅನಿಲಗಳು ಓಜೋನ್ ಪದರ ಕೃಶಗೊಳ್ಳಲು ಸಾಥ್ ನೀಡುತ್ತವೆ. ಅನಿಯಂತ್ರಿತ ರಾಕೆಟ್ ಉಡಾವಣೆಗಳಿಂದಲೂ ಓಜೋನ್ ಪದರಕ್ಕೆ ಅಪಾಯವಿದೆ. ಒಂದೇ ಒಂದು ಕ್ಲೋರಿನ್ ಅಥವಾ ಬ್ರೊಮೈನ್ ಪರಮಾಣು ಲಕ್ಷ ಓಜೋನ್ ಅಣುಗಳನ್ನು ನಾಶಪಡಿಸಲು ಸಾಕು!



ಓಜೋನ್ ಅಣು ಸೃಷ್ಟಿಯಾಗುವುದಕ್ಕಿಂತ ತ್ವರಿತವಾಗಿ ಅದರ ಧ್ವಂಸವಾಗುತ್ತದೆ. ಅದಕ್ಕೇ ಹೇಳುವುದು ನಿಸರ್ಗದ ಉಡುಗೊರೆಯಾದ ಓಜೋನ್ ಕೊಡೆಯನ್ನು ನಾವು ಸಂರಕ್ಷಿಸಿಕೊಳ್ಳಬೇಕೆಂದು. ಸೌರಕಲೆಗಳು, ಜ್ವಾಲಾಮುಖಿಗಳು ಓಜೋನ್ ಪದರದ ಹಾನಿಗೆ ನೈಸರ್ಗಿಕ ಕಾರಣಗಳಾದರೂ ಅವುಗಳ ಕೊಡುಗೆ ಶೇ 2ಕ್ಕಿಂತಲೂ ಕಡಿಮೆ.

ಓಜೋನ್ ಪದರದ ಸಂರಕ್ಷಣೆಗೆ ವ್ಯಕ್ತಿಗತವಾಗಿ ಮಾಡಬಹುದಾದ ಕ್ರಮಗಳು ಹಲವು. ಕಾರು, ಸ್ಕೂಟರ್, ವ್ಯಾನ್ ಹಸಿರುಮನೆ ಅನಿಲಗಳನ್ನು ಅತಿಯಾಗಿ ಹೊರಸೂಸಿ ಭೂಮಿಯ ಉಷ್ಣತೆ ಹೆಚ್ಚಿಸುತ್ತವೆ. ಆದಕಾರಣ ಅವುಗಳ ಬಳಕೆ ಕನಿಷ್ಠತಮಗೊಳಿಸುವುದು ದಿಟ್ಟ ಹೆಜ್ಜೆ. ಆಹಾರ ಪದಾರ್ಥಗಳನ್ನು ಹಲವು ದಿನಗಳವರೆಗೆ ಕೆಡದಂತಿಡಲು ಪರಂಪರಾಗತ ವಿಧಾನಗಳಿವೆ, ರೆಫ್ರಿಜರೇಟರ್ ಅನಿವಾರ್ಯವೇನಲ್ಲ. ಅಂತೆಯೇ ಕಿಟಕಿಗಳನ್ನು ಋತುಮಾನಗಳಿಗೆ ತಕ್ಕಂತೆ ತೆರೆದು ಗಾಳಿ, ಬೆಳಕು, ಹಿತೋಷ್ಣ ನಿರ್ವಹಣೆ ಮಾಡುವುದು ಅಸಾಧ್ಯವೇನಲ್ಲ.

ನಿಜವಾದ ಸಿರಿತನವು ಐಷಾರಾಮದ ಜೀವನದಲ್ಲಿಲ್ಲ, ಪರಿಸರಸ್ನೇಹದಲ್ಲಿದೆ. ಪರಿಸರಸ್ನೇಹಿ ಶುಚಿಕಾರಕಗಳ ಉಪಯೋಗ ನಮ್ಮ ದಿನಮಾನಗಳ ಶೈಲಿಯಾಗಬೇಕಿದೆ. ಸ್ಥಳೀಯ ಉತ್ಪನ್ನಗಳನ್ನೇ ಉಪಯೋಗಿಸುವುದರಿಂದ ಸಾಗಾಣಿಕೆ ಸಮಸ್ಯೆ ಇರದು, ಅಲ್ಲದೆ ತಾಜಾ ಪದಾರ್ಥಗಳೂ ಲಭಿಸುವಂತಾಗುತ್ತದೆ.

ವಾಚಕರ ವಾಣಿ

ರಾಜಕೀಯ ಮೌಲ್ಯಗಳ ಪತನ

ಗೋವಾದಲ್ಲಿ ಕಾಂಗ್ರೆಸ್ ಶಾಸಕರು ಬಿಜೆಪಿ ಸೇರಿ ಮತದಾರರಿಗೆ ಅಚ್ಚರಿ ಉಂಟುಮಾಡಿದ್ದಾರೆ. ಇದು ಬರೀ ಅಚ್ಚರಿಯಲ್ಲ, ರಾಜಕೀಯ ಮೌಲ್ಯಗಳ ಪತನದ ವಿಷಾದವೂ ಹೌದು. ಈ ರೀತಿಯ ಪಕ್ಷಾಂತರ ಚಟುವಟಿಕೆಗಳು ಅನೇಕ ರಾಜ್ಯಗಳಲ್ಲಿ ಯಾವ ನಾಚಿಕೆಯೂ ಇಲ್ಲದೆ ನಿರಂತರವಾಗಿ ನಡೆಯುತ್ತಲೇ ಇವೆ, ಇತ್ತೀಚಿನ ವರ್ಷಗಳಲ್ಲಿ ರೇಜಿಗೆ ಹುಟ್ಟಿಸುವ ಹಂತ ಮುಟ್ಟಿವೆ.

ಶಾಸಕರು ಗುಂಪು ಕಟ್ಟಿಕೊಂಡು ಪಕ್ಷಾಂತರ ಮಾಡಿದ್ದರಿಂದ ಕೆಲವು ರಾಜ್ಯಗಳಲ್ಲಿ ರಾಜಕೀಯವಾಗಿ ಅಲ್ಲೋಲ-ಕಲ್ಲೋಲ ಆಗಿದ್ದುಂಟು. ಪಕ್ಷಾಂತರಕ್ಕೆ ಸಂಬಂಧಿಸಿದ ಪ್ರಕರಣಗಳು ನ್ಯಾಯಾಲಯದ ಮೆಟ್ಟಿಲು ಹತ್ತಿದ್ದೂ ಉಂಟು. ಆದರೂ ಪಕ್ಷಾಂತರ ಪಿಡುಗಿಗೆ ಯಾವುದೇ ಬಾಧಕ ಆಗಿಲ್ಲ. ಮತದಾರ ಒಬ್ಬ ಅಭ್ಯರ್ಥಿಯ ವ್ಯಕ್ತಿತ್ವ ಮತ್ತು ಆತ ಪ್ರತಿನಿಧಿಸುವ ಪಕ್ಷದ ಒಲವು–ನಿಲುವುಗಳನ್ನು ಗಮನಿಸಿ ತನ್ನ ಮತ ಚಲಾಯಿಸಿರುತ್ತಾನೆ. ಒಂದು ಪಕ್ಷದ ಚಿಹ್ನೆಯ ಮೇಲೆ ಆರಿಸಿಬಂದ ಬಳಿಕ, ಅವಧಿ ಪೂರೈಸುವ ಮೊದಲೇ ಮತ್ತೊಂದು ಪಕ್ಷಕ್ಕೆ ಜಿಗಿಯುವುದು ಮತದಾರನಿಗೆ ಮಾಡುವ ಅವಮಾನ. ಮತದ ಮೌಲ್ಯಕ್ಕೆ ಬಗೆದ ದ್ರೋಹ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಯಾರ ತಪ್ಪಿಗೆ ಯಾರಿಗೆ ಶಿಕ್ಷೆ?

ರಾಜಕಾಲುವೆ ಮತ್ತು ಇತರೆ ಒತ್ತುವರಿ ತೆರವು ಕಾರ್ಯಾಚರಣೆಯು ಬೆಂಗಳೂರಿನಲ್ಲಿ ಭಾರಿ ಸದ್ದು ಮಾಡುತ್ತಿದೆ. ಇದರೊಂದಿಗೆ ಕೆಲವು ಪ್ರಶ್ನೆಗಳಿಗೂ ಕಾರಣವಾಗಿದೆ. ತೆರವಿಗೊಳಗಾದ ಪ್ರತಿಯೊಂದು ಮನೆ, ಅಪಾರ್ಟ್‌ಮೆಂಟ್ ಮತ್ತು ವಿಲ್ಲಾದವರು ಸಂಬಂಧಿಸಿದ ಸಂಸ್ಥೆಗಳಿಂದ ಎಲ್ಲಾ ರೀತಿಯ ಅನುಮತಿಗಳನ್ನು ಪಡೆದು ತಲೆ ಮೇಲೊಂದು ಸೂರನ್ನು ಮಾಡಿಕೊಂಡಿರಬಹುದು. ಕೆಲವರು ದಶಕಗಳ ಕಾಲ ಅಲ್ಲಿ ವಾಸ್ತವ್ಯ ಮಾಡಿದ್ದಾರೆ.

ನೀರು, ವಿದ್ಯುತ್, ಒಳಚರಂಡಿ ಸೌಲಭ್ಯ ನೀಡುವಾಗ ಗೋಚರವಾಗದ ನ್ಯೂನತೆ ಈಗ ಕಂಡಿದ್ದು ಹೇಗೆ? ನ್ಯೂನತೆಗಳಿದ್ದರೂ ಅನುಮತಿ ನೀಡಿದ್ದು ಯಾರ ತಪ್ಪು? ಮೊಗ್ಗಿನಲ್ಲಿಯೇ ಚಿವುಟಿದ್ದರೆ ಈ ಸಮಸ್ಯೆ ಉಂಟಾಗುತ್ತಿತ್ತೇ? ಯಾರ ತಪ್ಪಿಗೆ ಯಾರಿಗೆ ಶಿಕ್ಷೆ? ಲಕ್ಷಾಂತರ, ಕೋಟ್ಯಂತರ ರೂಪಾಯಿ ವ್ಯಯಿಸಿ ನಿರ್ಮಿಸಿದ ಮನೆ ಕಣ್ಣೆದುರೇ ಬುಲ್ಡೋಜರ್‌ಗೆ ಆಹುತಿಯಾಗುವ ಶಿಕ್ಷೆ ಸಹಿಸಲು ಕಷ್ಟಸಾಧ್ಯ. ಇದು, ಬುಲ್ಡೋಜರ್ ಅನ್ನು ಕಾರ್ಯಾಚರಣೆಗೆ ಇಳಿಸಿದವರಿಗೆ ಅರ್ಥವಾಗುವುದಿಲ್ಲ.

ರಮಾನಂದ ಶರ್ಮಾ, ಬೆಂಗಳೂರು

ಕನ್ನಡ ಬಳಕೆ ಹೆಚ್ಚಿಸೋಣ

ಕನ್ನಡ ಬಳಕೆಯನ್ನು ಕಡ್ಡಾಯಗೊಳಿಸುವುದಕ್ಕಾಗಿ ಮಸೂದೆಯೊಂದನ್ನು ಮಂಡಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಇದು, ಸ್ವಾಗತಾರ್ಹ ನಡೆ. ಭಾಷೆಯ ವಿಚಾರದಲ್ಲಿ ದಿಟ್ಟ ನಿಲುವು ತಳೆಯಬೇಕಾದುದು ಇಂದಿನ ಅಗತ್ಯ. ಚುನಾಯಿತ ಪ್ರತಿನಿಧಿಗಳ ಬಹುಮುಖ್ಯ ಜವಾಬ್ದಾರಿಯೂ ಹೌದು. ಪಕ್ಷಭೇದ ಮರೆತು ಎಲ್ಲರೂ ಇದಕ್ಕೆ ಬೆಂಬಲವಾಗಿ ನಿಲ್ಲಬೇಕು.

ಕನ್ನಡದ ಬಳಕೆಯು ಬದುಕಿನ ಎಲ್ಲ ವಲಯಗಳಲ್ಲೂ ಹೆಚ್ಚಾಗಬೇಕು. ಗಡಿನಾಡು ಕನ್ನಡಿಗರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಕೆಲಸವೂ ಆಗಬೇಕು. ನೇಮಕಾತಿಗಳಲ್ಲಿ ಕನ್ನಡ ಭಾಷಾ ಜ್ಞಾನ ಕಡ್ಡಾಯ ಮಾಡುವುದರಿಂದ ಕನ್ನಡ ಕಲಿಕೆಗೆ ಒತ್ತಾಸೆ ಸಿಗುತ್ತದೆ. ಈ ದಿಸೆಯಲ್ಲಿ ಸರ್ಕಾರ ದೃಢ ಹೆಜ್ಜೆ ಇಡಬೇಕು.

ಹುಸೇನಬಾಷಾ ತಳೇವಾಡ, ಹುಬ್ಬಳ್ಳಿ

ಆಡಿದ್ದೇ ಆಟ, ನಡೆದಿದ್ದೇ ದಾರಿ...

ಗೋವಾದಲ್ಲಿ ಕಾಂಗ್ರೆಸ್‌ನ ಎಂಟು ಶಾಸಕರು ಬಿಜೆಪಿ ಸೇರಿದ್ದಾರೆ. ಕಾಂಗ್ರೆಸ್‌ನಲ್ಲಿ ಮೂವರು ಶಾಸಕರಷ್ಟೇ ಉಳಿದಿದ್ದು ಅಧಿಕೃತ ವಿರೋಧ ಪಕ್ಷದ ಸ್ಥಾನಮಾನವನ್ನು ಕಳೆದುಕೊಳ್ಳಲಿದೆ ಎಂದು ವರದಿಯಾಗಿದೆ. ರಾಜ್ಯವೇ ಇರಲಿ ಅಥವಾ ಕೇಂದ್ರವೇ ಇರಲಿ ಅಲ್ಲೊಂದು ಸದೃಢ ವಿರೋಧ ಪಕ್ಷ ಇರಬೇಕು. ಅದು, ಆಡಳಿತ ಪಕ್ಷದ ನೆರಳಿನಂತೆ ಇರುತ್ತದೆ ಮತ್ತು ಆಡಳಿತ ಪಕ್ಷ ತಪ್ಪು ಹೆಜ್ಜೆ ಇಟ್ಟಾಗ ಸರಿದಾರಿಗೆ ತರಲು ಚಾಟಿ ಬೀಸುವ ಕೆಲಸ ಮಾಡುತ್ತದೆ. ಜೊತೆಗೆ ಜನರ ಅಭಿಪ್ರಾಯಗಳನ್ನು ಸರ್ಕಾರಕ್ಕೆ ತಿಳಿಸುತ್ತದೆ. ವಿರೋಧ ಪಕ್ಷ ಎಂಬುದೇ ಇಲ್ಲವಾದರೆ ಅದು ಪ್ರಜಾಪ್ರಭುತ್ವಕ್ಕೆ ಮಾರಕ.

ವಿರೋಧ ಪಕ್ಷವೇ ಇಲ್ಲದಿದ್ದರೆ ಆಡಳಿತ ಪಕ್ಷವು ಸರ್ವಾಧಿಕಾರಿ ಧೋರಣೆಯನ್ನು ಮೈಗೂಡಿಸಿಕೊಳ್ಳುವ ಅಪಾಯ ಇರುತ್ತದೆ. ತಾನು ಆಡಿದ್ದೇ ಆಟ, ನಡೆದಿದ್ದೇ ದಾರಿ ಎಂಬಂತೆ ವರ್ತಿಸಬಹುದು. ಯಾವುದೋ ಆಮಿಷಗಳಿಗೆ, ಹುನ್ನಾರಗಳಿಗೆ ಬಲಿಯಾಗಿ ವಿರೋಧ ಪಕ್ಷಗಳ ಸದಸ್ಯರು ಆಡಳಿತ ಪಕ್ಷಕ್ಕೆ ಸೇರುವ ನಡೆಯನ್ನು ನಿಯಂತ್ರಿಸುವ ಮಾರ್ಗೋಪಾಯಗಳ ಬಗೆಗೆ ಗಂಭೀರವಾಗಿ ಚರ್ಚಿಸಲು ಇದು ಸಕಾಲ. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಭಾರಿ ಸಂಕಷ್ಟ ಎದುರಾಗಬಹುದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಮನಸ್ಸು ಬೆಸೆಯುವ ಕೆಲಸಕ್ಕೆ ಕೈಜೋಡಿಸೋಣ

'ಕನ್ನಡ ಮನಸ್ಸುಗಳ ಜೋಡಣೆ ಯಾರ ಹೊಣೆ?' ಎಂಬ ಶೀರ್ಷಿಕೆಯ ರಘುನಾಥ ಚ.ಹ. ಅವರ ಲೇಖನ (ಪ್ರ.ವಾ., ಸೆ. 15) ಸಕಾಲಿಕ ಮತ್ತು ಚಿಂತನಾರ್ಹ. ಕನ್ನಡ ಸಾಹಿತ್ಯದ ಮುಖ್ಯ ಚರ್ಚೆಗಳೇ ಗೌಣವಾಗಿ, ಸಾಹಿತ್ಯದ ಸಂದರ್ಭಗಳು ಮೌಲ್ಯ ಕಳೆದುಕೊಳ್ಳುತ್ತಿರುವ ಈ ಹೊತ್ತಿನಲ್ಲಿ, ಕನ್ನಡ ಮನಸ್ಸುಗಳು ಈ ಕಡೆ ಹೊರಳಿ ಈ ದಿಸೆಯಲ್ಲಿ ಚಿಂತಿಸಬೇಕಾಗಿದೆ.

ಕನ್ನಡ ಮನಸ್ಸುಗಳನ್ನು ಬೆಸೆಯುವ ಕೆಲಸಕ್ಕೆ ಅಧ್ಯಾಪಕರು, ಓದುಗ ಸಮುದಾಯ, ಕನ್ನಡ ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಗಳು ಕೈಜೋಡಿಸಬೇಕು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಪ್ರೀತಿಸುವ ಎಲ್ಲರೂ ಈ ಕೆಲಸಕ್ಕೆ ಒತ್ತಾಸೆಯಾಗಿ ನಿಲ್ಲಬೇಕು.

ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಆ್ಯಂಡ್ರಾಯ್ಡ್ ಫೋನ್ ಬಳಕೆದಾರರೇ ಸೋವಾ ಒಳಹೊಕ್ಕೀತು ಎಚ್ಚರ

ಪ್ರಜಾವಾಣಿ ವಾರ್ತೆ

ವಿಶ್ವದ ಹಲವು ದೇಶಗಳಲ್ಲಿ ಈಗಾಗಲೇ ಸಾಕಷ್ಟು ವಂಚನೆ ನಡೆಸಿರುವ ಆ್ಯಂಡ್ರಾಯ್ಡ್ ಬ್ಯಾಂಕಿಂಗ್ ವೈರಸ್ 'ಸೋವಾ' ಈಗ ಭಾರತದಲ್ಲೂ ತನ್ನ ಕೈಚಳಕ ತೋರುತ್ತಿದೆ ಎಂದು ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್–ಸಿಇಆರ್‌ಟಿ ಹೇಳಿದೆ. ಸಿಇಆರ್‌ಟಿಯು, ಸೈಬರ್ ಅಪರಾಧ ವಿಶ್ಲೇಷಣೆ ಮತ್ತು ತಡೆ ಹೊಣೆಯನ್ನು ಹೊತ್ತಿರುವ ದೇಶದ ಅತ್ಯುನ್ನತ ಸಂಸ್ಥೆಯಾಗಿದೆ. ಸೋವಾ ವೈರಸ್ ನಮ್ಮ ಅಂಗೈನಲ್ಲಿರುವ ಆ್ಯಂಡ್ರಾಯ್ಡ್ ಫೋನ್ ಒಳಗೆ ಹೇಗೆ ನುಸುಳುತ್ತದೆ ಮತ್ತು ಅದನ್ನು ತಡೆಯುವುದು ಹೇಗೆ ಎಂಬುದನ್ನು ಸಿಇಆರ್‌ಟಿ ವಿವರಿಸಿದೆ.

2021ರ ಸೆಪ್ಟೆಂಬರ್‌ನಲ್ಲಿ ಅಮೆರಿಕ, ರಷ್ಯಾ, ಉಕ್ರೇನ್‌ನಲ್ಲಿ ಸೋವಾ ಹಾವಳಿ ಪತ್ತೆಯಾಗಿತ್ತು. ಆಗಲೇ ಸೋವಾ ನಿರ್ವಾಹಕರು ಭಾರತದಲ್ಲೂ ಕಾರ್ಯಾಚರಣೆ ನಡೆಸುತ್ತಿರುವ ಬಗ್ಗೆ ಕೆಲವು ಖಾಸಗಿ ಸೈಬರ್ ಭದ್ರತಾ ಸಂಸ್ಥೆಗಳು ಎಚ್ಚರಿಕೆ ನೀಡಿದ್ದವು. ನಂತರದ ದಿನಗಳಲ್ಲಿ ಸಿಇಆರ್‌ಟಿ ಸಹ ಸೋವಾ ಬಗ್ಗೆ ಮಾರ್ಗಸೂಚಿಯನ್ನು ಹೊರಡಿಸಿತ್ತು. ಆದರೆ, ಆಗ ಸೋವಾ ಹಾವಳಿ ತೀವ್ರವಾಗಿಲ್ಲ ಎಂದು ಹೇಳಿತ್ತು. 2021ರ ಸೆಪ್ಟೆಂಬರ್‌ನಲ್ಲಿ ಪತ್ತೆಯಾದ ಸೋವಾ, ಮೊದಲ ಆವೃತ್ತಿಯದ್ದು. ಈವರೆಗೆ ಹ್ಯಾಕರ್‌ಗಳು ಅದನ್ನು ಐದು ಬಾರಿ ಅಪ್‌ಗ್ರೇಡ್ ಮಾಡಿದ್ದಾರೆ. ಈಗ ಭಾರತದಲ್ಲಿ ಐದನೇ ಆವೃತ್ತಿಯ ಸೋವಾ ತೀವ್ರವಾಗಿ ಹರಡುತ್ತಿದೆ ಎಂದು ಸಿಇಆರ್‌ಟಿ ಎಚ್ಚರಿಕೆ ನೀಡಿದೆ.

ಸೋವಾ ನಮ್ಮ ಸ್ಮಾರ್ಟ್‌ಫೋನ್ ಒಳಗೆ ನುಸುಳಿ, ನಮ್ಮ ದತ್ತಾಂಶ ಮತ್ತು ಹಣವನ್ನು ಲೂಟಿ ಹೊಡೆಯುವ ಮುನ್ನ ಸಿಇಆರ್‌ಟಿಯ ಎಚ್ಚರಿಕೆಗಳನ್ನು ಪರಿಗಣಿಸುವುದು ಅತ್ಯಗತ್ಯ. ಸೋವಾ, ಬ್ಯಾಂಕಿಂಗ್ ಟ್ರೋಜನ್ ವರ್ಗಕ್ಕೆ ಸೇರುವ ವೈರಸ್. ಸೋವಾಗೆ ಸಂಬಂಧಿಸಿದಂತೆ ಸಿಇಆರ್‌ಟಿಯು ಸಾಕಷ್ಟು ತನಿಖೆ ನಡೆಸಿದೆ. ಸೋವಾದಿಂದ ವಂಚನೆಗೆ ಒಳಗಾದ ಪ್ರಕರಣಗಳ ವಿಶ್ಲೇಷಣೆಯಿಂದ ಹಲವು ಮಾಹಿತಿಗಳನ್ನು ಈ ಸಂಸ್ಥೆ ಕಲೆ ಹಾಕಿದೆ.



ಮುನ್ನೆಚ್ಚರಿಕೆಗಳು

- ಮೊಬೈಲ್ ಬ್ರೌಸರ್‌ಗಳ ಮೂಲಕ ವಿಶ್ವಾಸಾರ್ಹವಲ್ಲದ ಜಾಲತಾಣಗಳನ್ನು ಪರಿಶೀಲಿಸುವುದನ್ನು ನಿಲ್ಲಿಸಿ. ಅನಧಿಕೃತ ಮೂಲಗಳಿಂದ ಬಂದಿರುವ ಲಿಂಕ್‌ಗಳು, ಅನಧಿಕೃತ ಇ–ಮೇಲ್ ಮತ್ತು ಎಸ್‌ಎಂಎಸ್‌ನಿಂದ ಬಂದಿರುವ ಲಿಂಕ್‌ಗಳನ್ನು ಕ್ಲಿಕ್ ಮಾಡಬೇಡಿ
- ಸಾಮಾನ್ಯ ಮೊಬೈಲ್ ನಂಬರ್‌ನಂತೆ ಇರದೇ ಇರುವ ನಂಬರ್‌ನಿಂದ ಬಂದಿರುವ ಎಸ್‌ಎಂಎಸ್‌ಗಳನ್ನು ತೆರೆಯಬೇಡಿ. ಇ–ಮೇಲ್ ಟು ಎಸ್‌ಎಂಎಸ್ ತಂತ್ರಜ್ಞಾನದ ಮೂಲಕ ಸಂದೇಶ ಕಳುಹಿಸಿದಾಗ, ಈ ಸ್ವರೂಪದ ನಂಬರ್‌ಗಳು ಬರುತ್ತವೆ. ಹೀಗಾಗಿ ಸಾಮಾನ್ಯ ಫೋನ್ ನಂಬರ್ ಗೋಚರವಾಗುವುದಿಲ್ಲ. ಈ ಸ್ವರೂಪದ ಎಸ್‌ಎಂಎಸ್‌ಗಳು ಹ್ಯಾಕರ್‌ಗಳಿಂದ ಬಂದಿರುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ
- ಬ್ಯಾಂಕ್‌ಗಳಿಂದ ಈ ಸ್ವರೂಪದ ಎಸ್‌ಎಂಎಸ್ ಬಂದರೂ, ಎಸ್‌ಎಂಎಸ್ ಬಂದ ವಿಳಾಸದಲ್ಲಿ ಬ್ಯಾಂಕ್‌ನ ಹೆಸರು ಇದ್ದೇ ಇರುತ್ತದೆ. ಬ್ಯಾಂಕ್‌ನ ಹೆಸರು ಇಲ್ಲದೇ ಇರುವ ಎಸ್‌ಎಂಎಸ್‌ಗಳನ್ನು ತೆರೆಯಬಾರದು
- ಸಾಮಾನ್ಯ ಫೋನ್ ನಂಬರ್‌ನಿಂದ ಎಸ್‌ಎಂಎಸ್ ಬಂದಿದ್ದರೂ, ತಕ್ಷಣವೇ ಅಲ್ಲಿ ಕೇಳಲಾದ ಮಾಹಿತಿಯನ್ನು ನೀಡಬಾರದು. ಬದಲಿಗೆ ಫೋನ್ ನಂಬರ್‌ನ ಅಸಲಿಯತ್ತನ್ನು ದೃಢಪಡಿಸುವ ಜಾಲತಾಣಗಳಲ್ಲಿ, ಆ ನಂಬರ್ ಅನ್ನು ಪರಿಶೀಲಿಸಬೇಕು. ಅದು ಬ್ಯಾಂಕ್‌ನ ಅಧಿಕೃತ ನಂಬರ್ ಎಂದು ದೃಢಪಟ್ಟರಷ್ಟೇ ಮುಂದುವರಿಯಬೇಕು
- ಎಸ್‌ಎಂಎಸ್ ಮತ್ತು ಇ–ಮೇಲ್‌ನಲ್ಲಿ ಬಂದಿರುವ ಯುಆರ್‌ಎಲ್‌ಗಳ ಮೇಲೆ ನೇರವಾಗಿ ಕ್ಲಿಕ್ ಮಾಡಬಾರದು. ಯುಆರ್‌ಎಲ್‌ಗಳು ಶಾರ್ಟ್ ಸ್ವರೂಪದಲ್ಲಿದ್ದರೆ (ಶಾರ್ಟ್ ಯುಆರ್‌ಎಲ್– ಕಿರು ಯುಆರ್‌ಎಲ್‌ಗಳು), ಅದರ ಮೇಲೆ ಬೆರಳಾಡಿಸಬೇಕು. ಆದು ಅಧಿಕೃತ ಯುಆರ್‌ಎಲ್ ಆಗಿದ್ದರೆ, ಪೂರ್ಣ ಯುಆರ್‌ಎಲ್ ಗೋಚರಿಸುತ್ತದೆ. ಪೂರ್ಣ ಯುಆರ್‌ಎಲ್ ಇದ್ದರಷ್ಟೇ ಅವನ್ನು ಕ್ಲಿಕ್ ಮಾಡಬೇಕು. ಪೂರ್ಣ ಯುಆರ್‌ಎಲ್ ಗೋಚರವಾಗದೇ ಇದ್ದರೆ, ಅದು ಹ್ಯಾಕರ್‌ಗಳ ಜಾಲತಾಣದ್ದಾಗಿರುವ ಅಪಾಯಗಳು ಇರುತ್ತವೆ
- ಬ್ರೌಸರ್‌ಗಳಲ್ಲಿ ಸುರಕ್ಷತಾ ಮಟ್ಟವನ್ನು ಗರಿಷ್ಠ ಪ್ರಮಾಣದಲ್ಲಿ ಇರಿಸಬೇಕು. ಆ್ಯಂಟಿವೈರಸ್ ಅಪ್ಲಿಕೇಷನ್‌ಗಳಲ್ಲಿ ಗರಿಷ್ಠ ಸುರಕ್ಷತೆಯ ಮಟ್ಟವನ್ನು ಆಯ್ಕೆ ಮಾಡಿಕೊಳ್ಳಬೇಕು
- ಬಳಕೆದಾರರು ತಮ್ಮ ಬ್ಯಾಂಕ್ ಖಾತೆಯಲ್ಲಿ ಅನುಮಾನಾಸ್ಪದವಾಗಿ ಹಣ ತೆರವಾದರೆ, ತಕ್ಷಣವೇ ಬ್ಯಾಂಕ್‌ಗೆ ಮಾಹಿತಿ ನೀಡಬೇಕು. ಮುಂದಿನ ಕ್ರಮಕ್ಕೆ ಮನವಿ ಮಾಡಬೇಕು

ಫಿಶಿಂಗ್ ಗಾಳ

ಫಿಶಿಂಗ್ ಎಂಬುದು ಇಂಟರ್‌ನೆಟ್ ಮೂಲಕ ವಂಚನೆ ಎಸಗಲು ವ್ಯಾಪಕವಾಗಿ ಬಳಕೆಯಾಗುತ್ತಿರುವ ಮೋಸದ ವಿಧಾನವಾಗಿದೆ. ಮೀನಿಗೆ ಗಾಳ ಹಾಕಿದಂತೆಯೇ, ಮೋಸದಿಂದ ಮಾಹಿತಿಯನ್ನು ಕದಿಯುವ ಈ ಕುತಂತ್ರ ಎಲ್ಲ ದೇಶಗಳಲ್ಲೂ ಸಕ್ರಿಯವಾಗಿದೆ. ಫಿಶಿಂಗ್ ಮಾಡುವ ಖದೀಮರು ಪ್ರತಿಷ್ಠಿತ ಕಂಪನಿ, ಬ್ಯಾಂಕ್ ಅಥವಾ ಗೊತ್ತಿರುವ ಸಂಸ್ಥೆಯೊಂದರ ಹೆಸರಿನಲ್ಲಿ ಇ–ಮೇಲ್‌ಗಳನ್ನು ಕಳುಹಿಸುತ್ತಾರೆ. ಇ–ಮೇಲ್ ನಿಜವೆಂದು ನಂಬುವ ಬಳಕೆದಾರರು ತಮ್ಮ ಕ್ರೆಡಿಟ್ ಕಾರ್ಡ್, ಅದರ ಯೂಸರ್ ನೇಮ್ ಹಾಗೂ ಪಾಸ್‌ವರ್ಡ್ ಮಾಹಿತಿ ನೀಡುತ್ತಾರೆ. ಬ್ಯಾಂಕ್‌ನ ಡೇಟಾಬೇಸ್ ಅಪ್‌ಡೇಟ್ ಮಾಡಬೇಕಿದೆ, ಸರ್ವರ್‌ನಲ್ಲಿ ಸಮಸ್ಯೆಯಾಗಿದೆ, ಭದ್ರತಾ ಲೋಪ ಸರಿಪಡಿಸಬೇಕಿದೆ ಎಂಬಿತ್ಯಾದಿ ಕಾರಣಗಳನ್ನು ವಂಚಕರು ನೀಡುತ್ತಾರೆ. ಬ್ಯಾಂಕ್‌ನ ಖಾತೆ ಸಂಖ್ಯೆ, ಪಾಸ್‌ವರ್ಡ್, ಪಿನ್, ಡಿಎಲ್ ಸಂಖ್ಯೆ ಮೊದಲಾದ ಮಾಹಿತಿಯನ್ನು ಪಡೆಯುತ್ತಾರೆ. ಒಂದು ವೇಳೆ, ಈ ಮಾಹಿತಿಯನ್ನು ನೀಡಲು ವಿಫಲವಾದರೆ, ಬ್ಯಾಂಕ್ ಖಾತೆ ಸ್ಥಗಿತಗೊಳ್ಳಲಿದೆ ಎಂಬ ಎಚ್ಚರಿಕೆಯನ್ನೂ ಇ–ಮೇಲ್‌ನಲ್ಲಿ ನಮೂದಿಸಲಾಗಿರುತ್ತದೆ. ಇದರಿಂದ ಗಾಬರಿಗೊಳ್ಳುವ ಖಾತೆದಾರರು ಎಲ್ಲ ಮಾಹಿತಿಯನ್ನು ಕೊಟ್ಟು ಬೆಪ್ಪರಾಗುತ್ತಾರೆ.

ನೈಜತೆಯ ಸೋಗು ಹಾಕುವ ಬ್ಯಾಂಕರ್ ಟ್ರೋಜನ್

ವ್ಯಕ್ತಿಯೊಬ್ಬರಿಗೆ ಅವರ ಅರಿವಿಲ್ಲದೇ ಗೋಪ್ಯ ಮಾಹಿತಿಯನ್ನು ಕದಿಯುವ 'ಟ್ರೋಜನ್ ಹಾರ್ಸ್' ತಂತ್ರವು ಹಲವು ಕ್ಷೇತ್ರಗಳಲ್ಲಿ ಸಕ್ರಿಯವಾಗಿದೆ. ಆನ್‌ಲೈನ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇರುವ ಗೋಪ್ಯ ಮಾಹಿತಿಗಳನ್ನು ಹಾಗೂ ದಾಖಲೆಗಳನ್ನು ಕದಿಯುವ ಉದ್ದೇಶದಿಂದ ವಿನ್ಯಾಸ ಮಾಡಲಾದ ಪ್ರೋಗ್ರಾಮ್‌ಗಳನ್ನು 'ಬ್ಯಾಂಕರ್ ಟ್ರೋಜನ್' ಎಂದು ಕರೆಯಲಾಗುತ್ತದೆ. ಹಿಂಬಾಗಿಲ ಮೂಲಕ ಈ ಪ್ರೋಗ್ರಾಮ್ ಅನ್ನು ಬಳಕೆದಾರರ ಕಂಪ್ಯೂಟರ್ ಅಥವಾ ಮೊಬೈಲ್‌ಗೆ ಸೇರಿಸಲಾಗುತ್ತದೆ. ಬ್ಯಾಂಕ್ ಹಾಗೂ ಬ್ಯಾಂಕ್‌ನ ಆ್ಯಪ್ ಉಪಯೋಗಿಸುವ ಬಳಕೆದಾರರನ್ನು ಹೊರತುಪಡಿಸಿ, ಹೊರಗಿನ ಮೂರನೇ ವ್ಯಕ್ತಿ ಅಥವಾ ಕಂಪ್ಯೂಟರ್‌ಗೆ ಕದ್ದ ಮಾಹಿತಿ ರವಾನೆಯಾಗುತ್ತದೆ. ಈ ವಿಧಾನದಲ್ಲಿ, ಬ್ಯಾಂಕ್‌ನ ಆ್ಯಪ್ ಮೇಲೆ ಬಳಕೆದಾರರು ಹೊಂದಿರುವ ನಿಯಂತ್ರಣವನ್ನು ಮೂರನೇ ವ್ಯಕ್ತಿಗೂ ಸಿಗುವಂತೆ ಮಾಡಲಾಗುತ್ತದೆ.

ಒಳನುಸುಳುವಿಕೆ: ದುರುದ್ದೇಶದಿಂದ ತಯಾರಿಸಲಾದ ಆ್ಯಪ್‌ಗಳನ್ನು ಮೊಬೈಲ್‌ಗೆ ಇನ್‌ಸ್ಟಾಲ್ ಆಗುವಂತೆ ತಂತ್ರಗಾರಿಕೆ ಮಾಡಲಾಗುತ್ತದೆ. ಕಂಪ್ಯೂಟರ್ ಅಥವಾ ಮೊಬೈಲ್‌ಗೆ ಇನ್‌ಸ್ಟಾಲ್ ಆಗುವವರೆಗೂ, ಅದು ನೈಜತೆಯ ಮುಖವಾಡ ಧರಿಸಿರುತ್ತದೆ. ಉದಾಹರಣೆಗೆ, ಕ್ರೋಮ್, ಅಮೆಜಾನ್‌ನಂತಹ ಪ್ರಸಿದ್ಧ ಆ್ಯಪ್‌ಗಳ ಹೆಸರಿನಲ್ಲೇ ವಿನ್ಯಾಸ ಮಾಡಲಾದ ಈ ಆ್ಯಪ್‌ಗಳು, ಇನ್‌ಸ್ಟಾಲ್ ಮಾಡಲು ಬಯಸುವ ಬಳಕೆದಾರರಿಗೆ ಗೊಂದಲ ಮೂಡಿಸುತ್ತವೆ. ಸರಿಯಾಗಿ ಪರಿಶೀಲಿಸದಿದ್ದರೆ, ನೈಜ ಆ್ಯಪ್‌ನ ಸೋಗಿನಲ್ಲಿರುವ ದುರುದ್ದೇಶದ ಆ್ಯಪ್‌ಗಳು ಬಳಕೆದಾರರ ಎಲೆಕ್ಟ್ರಾನಿಕ್ ಸಾಧನದಲ್ಲಿ ಇನ್‌ಸ್ಟಾಲ್ ಆಗುತ್ತದೆ.

ಇನ್‌ಸ್ಟಾಲ್ ಆದ ಕೂಡಲೇ ಈ ಕುತಂತ್ರಾಂಶದ ಅಸಲಿ ಕೆಲಸ ಶುರುವಾಗುತ್ತದೆ. ಬಳಕೆದಾರರಿಗೆ ಗೊತ್ತಿಲ್ಲದಂತೆ, ಅವರು ಬಳಸುವ ಹಣಕಾಸಿಗೆ ಸಂಬಂಧಿಸಿದ ಆ್ಯಪ್‌ಗಳು ಹಾಗೂ ಬ್ಯಾಂಕಿಂಗ್ ವಹಿವಾಟಿನ ಮಾಹಿತಿಯನ್ನು ರಹಸ್ಯವಾಗಿ ಸಂಗ್ರಹಿಸಿ, ಮೂರನೇ ವ್ಯಕ್ತಿಗೆ ಅದೇ ಸಮಯದಲ್ಲಿ (ರಿಯಲ್ ಟೈಮ್) ರವಾನಿಸುತ್ತಿರುತ್ತದೆ. ಬ್ಯಾಂಕ್ ಆ್ಯಪ್‌ನ ಯೂಸರ್ ಐಡಿ, ಪಾಸ್‌ವರ್ಡ್, ಅಕೌಂಟ್ ನಂಬರ್, ಕ್ರೆಡಿಟ್ ಕಾರ್ಡ್‌ನ ಸಂಖ್ಯೆ ಹಾಗೂ ಪಾಸ್‌ವರ್ಡ್ ಮೊದಲಾದ ಮಾಹಿತಿಗಳು ಹಿಂಬಂದಿಯಿಂದ ಬೇರೆಯವರಿಗೆ ರವಾನೆಯಾಗುತ್ತಿರುತ್ತವೆ. ತಮ್ಮ ಖಾತೆಯಲ್ಲಿ ಹಣ ಖಾಲಿಯಾದ ಬಳಿಕವಷ್ಟೇ, ತಪ್ಪಾದ ಆ್ಯಪ್ ಇನ್‌ಸ್ಟಾಲ್ ಆಗಿರುವುದು ಅರಿವಾಗುತ್ತದೆ.



ಗ್ರೀಕ್ ಪುರಾಣದ ಮರದ ಕುದುರೆ: 'ಟ್ರೋಜನ್ ಹಾರ್ಸ್' ಎಂಬುದರ ಮೂಲ ಗ್ರೀಕ್ ಪುರಾಣ ಗಳಲ್ಲಿ ಸಿಗುತ್ತದೆ. ಗ್ರೀಕರು ಟರ್ಕಿಯ ಟ್ರಾಯ್ ನಗರವನ್ನು ವಶಪಡಿಸಿಕೊಳ್ಳಲು ಹತ್ತು ವರ್ಷಗಳಿಂದ ಯತ್ನಿಸಿ ವಿಫಲವಾಗಿದ್ದರು. ಆಗ, ಬೃಹತ್ ಮರದ ಕುದುರೆಯನ್ನು ತಯಾರಿಸಿ, ಅದನ್ನು 'ಉಡುಗೊರೆ' ಎಂಬುದಾಗಿ ನಂಬಿಸಿ ನಗರದ ಒಳಗೆ ಕಳುಹಿಸುವ ತಂತ್ರಗಾರಿಕೆ ರೂಪಿಸಿದ್ದರು. ಕುದುರೆಯ ಒಳಗಡೆ ಸೈನಿಕರು ಅಡಗಿ ಕುಳಿತಿದ್ದರು. ಒಳಗೆ ಹೋದ ಕುದುರೆಯ ಹಿಂದೆಯೇ ಸೇನಾಪಡೆಯೂ ನುಗ್ಗಿತು. ಈ ಟ್ರೋಜನ್ ಕದನದಲ್ಲಿ ಗ್ರೀಕರು ಜಯಶಾಲಿಯಾಗಿದ್ದರು. ಈ ರೀತಿ ಆಮಿಷ ತೋರಿಸಿ ವಂಚಿಸುವ ತಂತ್ರಗಾರಿಕೆಯನ್ನು ಟ್ರೋಜನ್ ಹಾರ್ಸ್ ಎಂದು ಕರೆಯಲಾಗುತ್ತದೆ.

ಫೈಲ್ ಹ್ಯಾಶಸ್ ಪತ್ತೆ

ಸೋವಾ ವೈರಸ್, ಬೇರೆ ಅಧಿಕೃತ ಅಪ್ಲಿಕೇಷನ್‌ಗಳ ವೇಷಗಳ ರೂಪದಲ್ಲಿ ಗೋಚರಿಸುತ್ತದೆ. ಫಿಶಿಂಗ್ ಮೂಲಕ ಸೋವಾ ಮೊಬೈಲ್‌ನೊಳಕ್ಕೆ ನುಸುಳುವಂತೆ ಮಾಡಲಾಗುತ್ತಿದೆ. ಬ್ಯಾಂಕ್ ಮತ್ತು ಪೇಮೆಂಟ್ ಪ್ಲಾಟ್‌ಫಾರ್ಮ್‌ಗಳ ಅಧಿಕೃತ ಸರ್ವರ್‌ನಿಂದ ಕಳುಹಿಸಲಾದ ಸಂದೇಶದಂತೆಯೇ ಭಾಸವಾಗುವ ಸಂದೇಶವನ್ನು ಸೋವಾ ಸರ್ವರ್‌ನಿಂದ ಕಳುಹಿಸಲಾಗುತ್ತದೆ. ಆ ಸಂದೇಶದಲ್ಲಿರುವ ಲಿಂಕ್ ಅಥವಾ ಯುಆರ್‌ಎಲ್ ಅನ್ನು ಕ್ಲಿಕ್ ಮಾಡುವ ಮೂಲಕ ಸೋವಾ ಅಪ್ಲಿಕೇಷನ್ ಡೌನ್‌ಲೋಡ್ ಆಗುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ ಎಂದು ತಜ್ಞರು ವಿವರಿಸಿದ್ದಾರೆ. ಸಿಇಆರ್‌ಟಿ ಸಹ ಇದನ್ನು ದೃಢಪಡಿಸಿದೆ.

ಫಿಶಿಂಗ್ ಮೂಲಕ ಎಪಿಕೆ ಕಡತಗಳನ್ನು ಡೌನ್‌ಲೋಡ್ ಮಾಡುವಂತೆ ಮಾಡಲಾಗುತ್ತದೆ. ಆ ಎಪಿಕೆ ಕಡತಗಳ ಮೂಲಕ, ನಕಲಿ ಆ್ಯಪ್ ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಇನ್‌ಸ್ಟಾಲ್ ಆಗುತ್ತದೆ. ಭಾರತದಲ್ಲಿ ವರದಿಯಾದ ಬಹುತೇಕ ಪ್ರಕರಣಗಳಲ್ಲಿ ಎಪಿಕೆ ಕಡತಗಳ ರೂಪದಲ್ಲೇ ಸೋವಾ ಅನ್ನು ಇನ್‌ಸ್ಟಾಲ್ ಮಾಡಲಾಗಿದೆ ಎಂದು ಸಿಇಆರ್‌ಟಿ ಹೇಳಿದೆ.

ಯಾವುದೇ ಅಪ್ಲಿಕೇಷನ್‌ಗಳ ಅಧಿಕೃತ ಮೂಲವನ್ನು 'ಫೈಲ್ ಹ್ಯಾಶಸ್' ಮೂಲಕ ಪತ್ತೆ ಮಾಡಬಹುದು. ಅಧಿಕೃತ ಮೂಲ ಮತ್ತು ಹ್ಯಾಕರ್‌ಗಳ ಮೂಲವನ್ನು ಪತ್ತೆ ಮಾಡುವಲ್ಲಿ ಫೈಲ್ ಹ್ಯಾಶಸ್‌ಗಳು ನೆರವಾಗುತ್ತವೆ. ಸಿಇಆರ್‌ಟಿ ಸಹ ಸೋವಾ ಆ್ಯಪ್‌ನ ಫೈಲ್ ಹ್ಯಾಶಸ್ ಅನ್ನು ಪತ್ತೆ ಮಾಡಿದೆ. ಸೋವಾ ವೈರಸ್‌ನ ಹಲವು ಅವತರಣಿಕೆಗಳಲ್ಲಿ ಮೂರು ಫೈಲ್ ಹ್ಯಾಶಸ್‌ಗಳು ಬಳಕೆಯಾಗಿರುವುದು ಪತ್ತೆಯಾಗಿದೆ. ಆ ಫೈಲ್ ಹ್ಯಾಶಸ್‌ಗಳ ವಿವರಗಳನ್ನೂ ಸಿಇಆರ್‌ಟಿ ಬಹಿರಂಗಪಡಿಸಿದೆ.

ಸೋವಾ ವೈರಸ್ ಅನ್ನು ನಿರ್ವಹಣೆ ಮಾಡುತ್ತಿರುವ ಸಿ2 (ಕಮಾಂಡ್ ಮತ್ತು ಕಂಟ್ರೋಲ್) ಸರ್ವರ್‌ಗಳನ್ನೂ ಸಿಇಆರ್‌ಟಿ ಪತ್ತೆ ಮಾಡಿದೆ. ನಾಲ್ಕು ಸಿ2 ಸರ್ವರ್‌ಗಳ ಮೂಲಕ ಸೋವಾವನ್ನು ನಿರ್ವಹಣೆ ಮಾಡಲಾಗುತ್ತಿದೆ ಎಂದು ಸಿಇಆರ್‌ಟಿ ಮಾಹಿತಿ ನೀಡಿದೆ.

ಸೋವಾ ಫೈಲ್ ಹ್ಯಾಶಸ್‌ಗಳು

0533968891354ac78b45c486600a7890
ca559118f4605b0316a13b8cfa321f65
74b8956dc35d8a5eb2f7a5d313e60ca

ಸೋವಾ ಸಿ2 ಸರ್ವರ್‌ಗಳು


socrersutagans[.]site
omainwpatnlfq[.]site
satandemantenimiento[.]com
wercvtbyutrcewwretyntrverfd[.]xyz

ಆಧಾರ: ಕೇಂದ್ರ ಸರ್ಕಾರದ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್‌ನ ಮಾರ್ಗಸೂಚಿಗಳು, ಕ್ಲೀಫೀಲ್ಯಾಬ್ ಸೋವಾ ವರದಿ, ಪಿಟಿಐ, ಎಎಫ್‌ಪಿ

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಗೋವಾದಲ್ಲಿ ಕಾಂಗ್ರೆಸ್ ಪಕ್ಷದ ಎಂಟು ಶಾಸಕರು, ಪಕ್ಷ ತ್ಯಜಿಸಿ ಬಿಜೆಪಿಗೆ ಸೇರ್ಪಡೆ ಆಗಿರುವುದು ಅತ್ಯಂತ ಹಳೆಯದಾದ ಕಾಂಗ್ರೆಸ್ ಪಕ್ಷಕ್ಕೆ ಎಚ್ಚರಿಕೆಯ ಗಂಟೆ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 226

ಅಪರ್ಣಳಾದ ಪಾರ್ವತಿ

ಕಠೋರವಾದ ತಪಸ್ಸಿಗೆ ಕುಳಿತ ಪಾರ್ವತಿ ತನಗಾದ ಅನೇಕ ವಿಧವಾದ ದುಃಖಗಳನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಕೇವಲ ಮನಸ್ಸನ್ನು ಶಿವನಲ್ಲಿರಿಸಿ ತಪವನ್ನ ಆಚರಿಸುತ್ತಿದ್ದಳು. ಮೊದಮೊದಲು ಫಲಾಹಾರವನ್ನು ಸೇವಿಸುತ್ತಿದ್ದಳು. ಆಮೇಲೆ, ಎಲೆ(ಪರ್ಣ)ಗಳನ್ನು ಮಾತ್ರ ಸೇವಿಸುತ್ತಿದ್ದಳು. ಹೀಗೆ ಅನೇಕ ವರ್ಷಗಳನ್ನು ಕಳೆದ ನಂತರ, ಪರ್ಣವನ್ನೂ ಆಹಾರವಾಗಿ ಸೇವಿಸದೆ ಘೋರ ತಪಸ್ಸು ಮಾಡಿದಳು. ಇದನ್ನು ಕಂಡ ದೇವತೆಗಳು ಗಿರಿಜೆಯನ್ನು 'ಅಪರ್ಣಾ' (ಎಲೆಯನ್ನೂ ಸೇವಿಸದವಳು) ಎಂದು ಕರೆದರು.

ಪಾರ್ವತಿಯು ಒಂಟಿ ಕಾಲಿನಿಂದ ನಿಂತು ಶಿವನನ್ನು ಸ್ಮರಿಸುತ್ತಾ, ಪಂಚಾಕ್ಷರಮಂತ್ರವನ್ನು ಜಪಿಸುತ್ತಾ ಮಹಾತಪವನ್ನಾಚರಿಸಿದಳು. ನಾರುಬಟ್ಟೆಯನ್ನುಟ್ಟು, ಜಟೆಯನ್ನು ಬಿಟ್ಟು, ತಪವನ್ನ ಆಚರಿಸುವುದರಲ್ಲಿ ಮುನಿಗಳನ್ನೂ ಮೀರಿಸಿದಳು. ಹೀಗೆ ಮೂರು ಸಾವಿರ ವರ್ಷಗಳು ಕಳೆದುಹೋದವು. ಈ ಹಿಂದೆ ಅದೇ ಸ್ಥಾನದಲ್ಲಿ ಕುಳಿತು, ಶಿವ ಅರವತ್ತು ಸಾವಿರ ವರ್ಷಗಳವರೆಗೆ ತಪಸ್ಸು ಮಾಡಿದ್ದ ನಿದರ್ಶನವಿತ್ತು.

ಇಂತಹ ಸ್ಥಳದಲ್ಲಿ ನಿಂತು ಗಿರಿಜೆಯು ಸ್ವಲ್ಪ ಹೊತ್ತು ಯೋಚಿಸಿದಳು, 'ನಾನು ತಪವನ್ನಾಚರಿಸುತ್ತಿರುವ ವಿಚಾರ ಮಹಾದೇವನಿಗೆ ತಿಳಿದಿಲ್ಲವೇ? ತಿಳಿದಿದ್ದರೆ, ಇಷ್ಟು ವರ್ಷಗಳಾದರೂ ಏಕೆ ಪ್ರತ್ಯಕ್ಷನಾಗಲಿಲ್ಲ? ಶಂಕರನು ಸರ್ವಜ್ಞನು, ಸರ್ವರೂಪನು, ಎಲ್ಲೆಡೆಯಲ್ಲಿಯೂ ದೃಷ್ಟಿಯುಳ್ಳವನು, ಸಕಲೈಶ್ವರ್ಯಗಳನ್ನು ಕೊಡುವವನು. ಎಲ್ಲರ ಮನಸ್ಸನ್ನೂ ಪ್ರೇರಿಸುವವನು. ಸಕಲ ದುಃಖಗಳನ್ನೂ ಹೋಗಲಾಡಿಸುವವನು. ಹೀಗಿದ್ದರೂ ತನಗೇಕೆ ಶಿವ ಒಲಿಯಲಿಲ್ಲ' ಎಂದು ಯೋಚಿಸಿದ ಪಾರ್ವತಿ ಒಂದು ಕಠಿಣ ನಿರ್ಧಾರಕ್ಕೆ ಬಂದಳು.

ನಾನು ಎಲ್ಲ ಫಲೇಚ್ಛೆಗಳನ್ನೂ ಬಿಟ್ಟು ನಿಜವಾಗಿ ಅನುರಕ್ತಳಾಗಿದ್ದರೆ ಶಿವನು ನನಗೆ ಪ್ರಸನ್ನನಾಗಲಿ. ನಾರದ ಉಪದೇಶಿಸಿದ ಶಿವಪಂಚಾಕ್ಷರಮಂತ್ರವನ್ನು ನಾನು ಭಕ್ತಿಯಿಂದ ಜಪಿಸಿ ತಪವನ್ನಾಚರಿಸುತ್ತಿರುವುದು ನಿಜವಾದರೆ ಶಿವನು ಪ್ರಸನ್ನನಾಗಲಿ. ಯಾವ ವಿಕಾರವೂ ಇಲ್ಲದೇ ನಾನು ಶಿವನನ್ನು ಭಕ್ತಿಯಿಂದ ಆರಾಧಿಸಿರುವುದು ನಿಜವಾದರೆ ಶಿವನು ಪ್ರಸನ್ನನಾಗಲಿ ಎಂದು ಗಿರಿಜೆ, ವಿಕಾರರಹಿತಳಾಗಿ ತಲೆಕೆಳಗಾಗಿ ಬಹಳಕಾಲ ತಪವನ್ನಾಚರಿಸಿದಳು.


ಮಹಾಮುನಿಗಳಿಗೂ ಅಸಾಧ್ಯವಾದಂತಹ ಘೋರತಪವನ್ನು ಮಾಡುತ್ತಿರುವ ಪಾರ್ವತಿಯನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಗುತ್ತಿತ್ತು. ಅವಳ ತಪಸ್ಸಿನ ದರ್ಶನಮಾಡಿ ಜನರು ಧನ್ಯರಾದೆವು ಎಂದುಕೊಳ್ಳುತ್ತಿದ್ದರು. 'ಪಾರ್ವತಿ ತಪಸ್ಸು ಮಾಡುವ ರೀತಿ ಕೇಳಿದರೆ ಅಥವಾ ನೋಡಿದರೆ, ಇತರೆ ತಪಸ್ವಿಗಳು ನಾಚಿಕೆಯಿಂದ ಮುಂದೆ ತಪವನ್ನೇ ಮಾಡಲಾರರು' ಎಂದು ಕೆಲವರು ಹೇಳಿದರೆ, 'ಪಾರ್ವತಿ ಮಾಡುತ್ತಿರುವ ತಪಸ್ಸಿಗಿಂತಲೂ ಉತ್ತಮವಾದುದು ಹಿಂದೆ ನಡೆದಿಲ್ಲ, ಮುಂದೆಯೂ ನಡೆಯಲಾರದು' ಅಂತ ಹೊಗಳುತ್ತಿದ್ದರು. ಸಾಮಾನ್ಯ ಜನರಿರಲಿ, ಮಹಾಸಮರ್ಥರೂ ಅವಳ ತಪಸ್ಸನ್ನು ಮೆಚ್ಚುತ್ತಿದ್ದರು.

ಅಸೂಯಾಪರರಾಗಿ ಯೋಚಿಸುವ ಸಣ್ಣ ಮನಸ್ಸಿನವರೂ ಪಾರ್ವತಿಯ ತಪಸ್ಸನ್ನು ಕಂಡು ಆಶ್ಚರ್ಯಪಟ್ಟರು. ತಮ್ಮ ಎಂದಿನ ದುರಭಿಮಾನವನ್ನು ಬಿಟ್ಟು, ಸಾಧಕರನ್ನು ಔದಾರ್ಯದಿಂದ ಆದರಿಸುವ ಸದ್ಗುಣ ಕಲಿತುಕೊಂಡರು. ಯಾವಾಗಲೂ ಸಹಜ ವೈರದಿಂದಿರುವ ಕ್ರೂರಪ್ರಾಣಿಗಳು ಗಿರಿಜೆಯ ತಪಸ್ಸಿನ ಮಹಿಮೆಯಿಂದ ತಮ್ಮ ಸ್ವಭಾವವನ್ನು ಬಿಟ್ಟು ಶಾಂತಿಯಿಂದ ಸುಖವಾಗಿದ್ದವು. ಆ ತಪೋವನದಲ್ಲಿ ಮರಗಳೆಲ್ಲ ಯಾವಾಗಲೂ ಫಲಭರಿತವಾಗಿರುತ್ತಿದ್ದವು. ಅನೇಕ ಬಗೆಯ ಹೂವುಗಳು ಅರಳಿ ಕಂಗೊಳಿಸುತ್ತಿದ್ದವು. ಕೈಲಾಸದಂತೆ ಸರ್ವಾನುಕೂಲಗಳಿಂದ ಕೂಡಿದ ಆ ವನವೇ ಕೊನೆಗೆ ಪಾರ್ವತಿಗೆ ಇಷ್ಟಸಿದ್ಧಿ ಸ್ಥಾನವಾಯಿತು. ಇಲ್ಲಿಗೆ ಪಾರ್ವತೀಖಂಡದ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಕನ್ಯಾಕುಮಾರಿಯಿಂದ** ಕಾಶ್ಮೀರದವರೆಗೆ ಕಾಂಗ್ರೆಸ್ ಹಮ್ಮಿಕೊಂಡಿರುವ 'ಭಾರತವನ್ನು ಒಗ್ಗೂಡಿಸಿ' ಪಾದಯಾತ್ರೆ ವಿರುದ್ಧ ಬಿಜೆಪಿ ಟೀಕೆ ಮಾಡಿದೆ. 'ಸೆ.7ರಂದು ಕನ್ಯಾಕುಮಾರಿಯಲ್ಲಿ ಯಾತ್ರೆ ಆರಂಭವಾಯಿತು. ಆದರೆ ರಾಹುಲ್ ಗಾಂಧಿ ಅವರು ಅಲ್ಲಿನ ಸ್ವಾಮಿ ವಿವೇಕಾನಂದ ಸ್ಮಾರಕಕ್ಕೆ ಭೇಟಿ ನೀಡಿಲ್ಲ. ಏಕೆಂದರೆ ವಿವೇಕಾನಂದ ಅವರು ನೆಹರೂ ಕುಟುಂಬಕ್ಕೆ ಸೇರಿಲ್ಲ' ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ದೊಡ್ಡಬಳ್ಳಾಪುರದಲ್ಲಿ ಇತ್ತೀಚೆಗೆ ನಡೆದ ಬಿಜೆಪಿ ಸಮಾವೇಶದಲ್ಲಿ ಆರೋಪ ಮಾಡಿದ್ದರು. ಈ ವಿಡಿಯೊ ವೈರಲ್ ಆಗಿತ್ತು.



✓ **ಸ್ಮೃತಿ ಇರಾನಿ** ಅವರ ಆರೋಪದಲ್ಲಿ ಹುರುಳಿಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಯಾತ್ರೆ ಆರಂಭವಾದ ದಿನ ರಾಹುಲ್ ಗಾಂಧಿ ಅವರು ಕನ್ಯಾಕುಮಾರಿಯಲ್ಲಿ ವಿವೇಕಾನಂದ ಸ್ಮಾರಕಕ್ಕೆ ನಮಿಸಿದ್ದಾರೆ ಎಂದು ತಿಳಿಸಿದೆ. ಸ್ಮೃತಿ ಇರಾನಿ ಆರೋಪಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್, ರಾಹುಲ್ ಗಾಂಧಿ ಅವರು ಸ್ಮಾರಕಕ್ಕೆ ಭೇಟಿ ನೀಡಿರುವ ವಿಡಿಯೊವನ್ನು ಟ್ವಿಟರ್‌ನಲ್ಲಿ ಪ್ರಕಟಿಸಿದೆ. ಹಲವು ಕಾಂಗ್ರೆಸ್ ಮುಖಂಡರು ಈ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ಸುಳ್ಳು ಸುದ್ದಿ ಹರಡುತ್ತಿರುವ ಬಿಜೆಪಿ ವಿರುದ್ಧ ಮುಖಂಡರು ಕಿಡಿಕಾರಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಶವವಾಹಕರ ನಿರ್ಲಿಪ್ತತೆ

ಮೃತನ ಸಂಸಾರಕಥೆ ಶವವಾಹಕರಿಗೇಕೆ? |
ಸತಿಯು ಗೋಳಿಡಲಿ, ಸಾಲಿಗನು ಬೊಬ್ಬಿಡಲಿ ||
ಜಿತಮನದಿ ಚಿತಿಗಟ್ಟಿ ಕೊಂಡೊಯ್ಯುತಿಹರವರು |
ಧೃತಿಯ ತಳೆ ನೀನಂತು – ಮಂಕುತಿಮ್ಮ || 716 ||

ಪದ-ಅರ್ಥ: ಶವವಾಹಕರಿಗೇಕೆ = ಶವವಾಹಕರಿಗೆ(ಹೆಣ ಹೊರುವವರಿಗೆ) + ಏಕೆ, ಸಾಲಿಗನು = ಸಾಲಕೊಟ್ಟವನು, ಜಿತಮನದಿ = ಧೃಡವಾದ ಮನಸ್ಸಿನಿಂದ, ಧೃತಿಯ = ಧೈರ್ಯವ, ತಳೆ = ತಾಳು, ನೀನಂತು = ನೀನು + ಅಂತು.

ವಾಚ್ಯಾರ್ಥ: ಹೆಣ ಹೊತ್ತೊಯ್ಯುವವರಿಗೆ ಸತ್ತವನ ಸಂಸಾರದ ಚಿಂತೆ ಏಕೆ? ಹೆಂಡತಿ ದುಃಖಿಸಲಿ, ಸಾಲ ಕೊಟ್ಟವನು ಹಾರಾಡಲಿ, ಅವರು ಗಟ್ಟಿಮನಸ್ಸಿನಿಂದ ಹೆಣವನ್ನು ಚಿತೆಗೆ ಕಟ್ಟಿ ಎತ್ತಿಕೊಂಡು ಹೋಗುತ್ತಾರೆ. ಆ ತರಹದ ಧೈರ್ಯವನ್ನು ನೀನು ಹೊಂದು.

ವಿವರಣೆ: ಡಿ.ವಿ.ಜಿ ಯವರ ಜೀವನಾನುಭವ ಕಗ್ಗದಲ್ಲಿ ಮಡುಗಟ್ಟಿ ನಿಂತಿದೆ. ಅವರು ಕಂಡ ಯಾವುದೋ ಘಟನೆ ಜೀವಪೋಷಕವಾಗಿ ಕಂಡಿದೆ. ಅದೊಂದು ಅನ್ಯಾದೃಶವಾದ ಉದಾಹರಣೆಯಾಗಿ ಹೊಮ್ಮಿದೆ. ಕಗ್ಗ, ನಮ್ಮ ಕಣ್ಣ ಮುಂದೆ ಚಿತ್ರವೊಂದನ್ನು ಸೃಷ್ಟಿಸುತ್ತದೆ. ಯಾರೋ ಒಬ್ಬರು ನಿಧನರಾಗಿದ್ದಾರೆ. ಸಹಜವಾಗಿ ಮನೆಯಲ್ಲಿ ದುಃಖ ತುಂಬಿದೆ. ಹೆಂಡತಿ, ಅಗಲಿಕೆ ತಡೆಯಲಾರದವಳಾಗಿ ಭೋರೆಂದು ಅಳುತ್ತಿದ್ದಾಳೆ. ಸುತ್ತ ಜನ ನೆರೆದಿದ್ದಾರೆ.ಅದರಲ್ಲೊಬ್ಬ ತೀರಿ ಹೋದವನಿಗೆ ಸಾಲ ಕೊಟ್ಟವನು. ಈತ ಹೋದ ದುಃಖ ಅವನಿಗಿಲ್ಲ, ಅವನಿಗೆ ತನ್ನ ಹಣ ಮರಳಿ ಬರುತ್ತದೆಯೋ ಎಂಬ ಚಿಂತೆ. ಅದಕ್ಕಾಗಿ ಆತ ಬೊಬ್ಬಿಡುತ್ತಾನೆ. ಈಗ ಶವವನ್ನು ಅಂತ್ಯಕ್ರಿಯೆಗೆ ಒಯ್ಯಲು ಹೆಣ ಹೊರುವವರು ಬಂದಿದ್ದಾರೆ. ಅವರಿಗೆ ನಿತ್ಯ ಅದೇ ಕೆಲಸ. ಇಂಥ ಸಂದರ್ಭಗಳನ್ನು ಕಂಡು, ಕಂಡು ಅವರ ಮನಸ್ಸು ಮರಗಟ್ಟಿದೆ. ಅವರಿಗೆ ಅದೊಂದು ಕರ್ತವ್ಯ. ಎಷ್ಟು ಬೇಗ ಮುಗಿಸಿ ಹೋದರೆ ಅಷ್ಟು ಒಳ್ಳೆಯದು. ಅವರು ದುಃಖಿಸುತ್ತ ಕುಳಿತರೆ, ಸಾಲಿಗನೊಡನೆ ಚರ್ಚೆ ಮಾಡಿದರೆತಮ್ಮ ಕಾರ್ಯವಾದೀತೇ? ಅವರು ಮನೆಯ ವಾತಾವರಣಕ್ಕೆ ಮನ ಕೆಡಿಸಿಕೊಳ್ಳದೆ, ಯಾವ ಭಾವನೆಗಳಿಲ್ಲದೆ ಹೆಣವನ್ನು ಚಿತೆಗೆ ಕಟ್ಟಿ ಹೊತ್ತುಕೊಂಡು ಹೋಗುತ್ತಾರೆ. ನೀನು ಆ ತರಹದ ಧೈರ್ಯವನ್ನು, ಮನಸ್ಥಿತಿಯನ್ನು ಹೊಂದು ಎನ್ನುತ್ತದೆ ಈ ಕಗ್ಗ. ಈ ಬಗೆಯ ನಿರ್ಲಿಪ್ತತೆ ಸಾಧ್ಯವೆ? ಒಂದೇ ಬಾರಿಗೆ ಸಾಧ್ಯವಿಲ್ಲ. ಆದರೆ ಸತತವಾದ ಪ್ರಯತ್ನದಿಂದ ಮನಸ್ಸನ್ನು ಸಾಕ್ಷೀಭಾವಕ್ಕೆ ಒಗ್ಗಿಸಬೇಕು. ವಿದ್ಯಾರಣ್ಯರ 'ಪಂಚದಶೀ' ಯಲ್ಲಿ ಒಂದು ಶ್ಲೋಕ ಹೀಗಿದೆ. ಅಹಂಕಾರ: ಪ್ರಭು: ಸಭ್ಯಾ ವಿಷಯಾ ನರ್ತಕೀ ಮತಿ: | ತಾಲಾದಿಧಾರಿಣ್ಯಕ್ಷಾಣಿ ದೀಪ: ಸಾಕ್ಷ್ಯಯಭಾಸಕ: || (10.14)

"ರಾಜನಾದ ಅಹಂಕಾರನು ಸಿಂಹಾಸನದ ಮೇಲೆ ಕುಳಿತಿದ್ದಾನೆ.ವಿಷಯಗಳೆಂಬ ಸಭಾಸದರು ನೆರೆದಿದ್ದಾರೆ. ಮನಸ್ಸೆಂಬ ನರ್ತಕಿ ನರ್ತಿಸುತ್ತಿದ್ದಾಳೆ. ಚಕ್ಷಂ ಮೊದಲಾದ ಇಂದ್ರಿಯಗಳು ತಾಳ, ಮೃದಂಗಗಳನ್ನು ನುಡಿಸುತ್ತಿವೆ. ಇವೆಲ್ಲವುಗಳನ್ನು ಬೆಳಗುವ ದೀಪವೇ ಸಾಕ್ಷಿ".

ಇಲ್ಲಿ ದೀಪ ಎಲ್ಲ ಕ್ರಿಯೆಗಳನ್ನು ಬೆಳಗಿಸಿದರೂ ತಾನು ಯಾವ ಕ್ರಿಯೆಯಲ್ಲಿಯೂ ತೊಡಗದಂತೆ ಕೇವಲ ಸಾಕ್ಷಿಯಾಗಿದೆ. ಅದರಂತೆ ನಾವೂ ನಮ್ಮೆಲ್ಲ ಸುಖ, ದುಃಖದಕ್ರಿಯೆಗಳನ್ನು ಕೇವಲ ಸಾಕ್ಷಿಯಂತೆ ನೋಡಬೇಕು.'ನೋಡು' ಎನ್ನುವ ಕ್ರಿಯಾಪದವನ್ನು ಬಳಸಿದ್ದರೂ ಅದು ಕ್ರಿಯೆಯಲ್ಲ-ಶುದ್ಧ ಅರಿವು. ಆ ಸಾಕ್ಷೀಭಾವವನ್ನು ಸಾಧಿಸಲು ಜೀವನ ಪೂರ್ತಿ ಹೆಣಗಬೇಕು. ಸಾಧಿಸಿದರೆ ಬದುಕು ಧನ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಸೆಪ್ಟೆಂಬರ್ 16, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣಷಷ್ಠಿ ಗಂ. 12-20 ನಕ್ಷತ್ರ: ಕೃತ್ತಿಕಾ ಗಂ. 09-55 ಯೋಗ: ವಜ್ರ ಅಹೋರಾತ್ರ ಕರಣ: ವಣಿಜ ಗಂ. 12-20, ಸಿಂಹ ಮಾಸದ 30 ನೇ ದಿನ. ರಾಹುಕಾಲ : ಬೆಳಿಗ್ಗೆ 10:30 – 12:00
ಸೂರ್ಯೋದಯ : 06-23 ಸೂರ್ಯಾಸ್ತ : 06-28
ಮುಸ್ಲಿಂ ದಿನಾಂಕ : 19 ಸಫರ್
ಅದೃಷ್ಟ ಸಂಖ್ಯೆ : 1, 8

ಮೇಷ: ಹೊಸ ವ್ಯಾಪಾರವನ್ನು ಅಥವಾ ಏಜೆನ್ಸಿಯೊಂದನ್ನು ಪ್ರಾರಂಭಿಸುವ ಯೋಚನೆ ಇರುವವರಿಗೆ ಪೂರ್ವ ತಯಾರಿ ನಡೆಸಲು ಸೂಕ್ತ ವ್ಯಕ್ತಿಗಳ ಮಾರ್ಗದರ್ಶನ ಸಿಗುವುದು. ರೈತಾಪಿ ವರ್ಗದವರಿಗೆ ಬಿಡುವಿಲ್ಲ ಚಟುವಟಿಕೆ.

ವೃಷಭ: ಮನೆಯಲ್ಲಿ ಶಾಂತ ವಾತಾವರಣವಿರುವುದು. ನಿಮ್ಮ ಉದ್ಯೋಗದಲ್ಲಿ ನಿಧಾನ ಗತಿಯ ಕೆಲಸ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಸಿವಿಲ್ ಎಂಜಿನಿಯರ್‌ಗೆ ಉತ್ತಮ ಅವಕಾಶ ಸಿಗುವುದು.

ಮಿಥುನ: ಕೆಲಸದಲ್ಲಿ ಸಹಚರರನ್ನು ಜೊತೆಗೂಡಿಸಿಕೊಂಡು ಗುಂಪಾಗಿ ಕೆಲಸ ನಿರ್ವಹಿಸುವುದರಿಂದ ಯಶಸ್ಸನ್ನು ಸಾಧಿಸುವಿರಿ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಪರಿಶ್ರಮ ಅಗತ್ಯ. ಬಂಧುಮಿತ್ರರು ಮನೆಗೆ ಬರಲಿದ್ದಾರೆ.

ಕರ್ಕಾಟಕ: ನೀವು ಇಂದು ಆಡಿದ ಮಾತುಗಳು ನಿಮಗೆ ಮುಳ್ಳಾಗುವ ದಿನ. ಆದ್ದರಿಂದ ಮಾತಿನಲ್ಲಿ ಹಿಡಿತವಿರಲಿ. ಕರ್ತವ್ಯದ ರೀತಿಯಲ್ಲಿ ಪ್ರತಿ ವರ್ಷದಲ್ಲಿ ಮಾಡಿಕೊಂಡುಬಂದ ಧಾರ್ಮಿಕ ಕೆಲಸವನ್ನು ಮಾಡುವ ಬಗ್ಗೆ ತೀರ್ಮಾನಿಸಿ.

ಸಿಂಹ: ನಿಮ್ಮ ದುಃಖಿತವಾದ ಮನಸ್ಸಿಗೆ ನಾಲ್ಕಾರು ದಿನಗಳ ವಾಸಸ್ಥಾನ ಬದಲಾವಣೆಯಿಂದ ನೆಮ್ಮದಿಯ ವಾತಾವರಣ ಸೃಷ್ಟಿಯಾಗುವುದು. ನಿರುದ್ಯೋಗದ ಸಮಸ್ಯೆ ಸ್ನೇಹಿತನ ಪ್ರಯತ್ನ ಬಲದಿಂದ ದೂರವಾಗಲಿದೆ.

ಕನ್ಯಾ: ಪ್ರಳಯಾಂತಕ ಜನರ ಸಹವಾಸದಿಂದ ಅಪವಾದವನ್ನು ಕೇಳಬೇಕಾಗಬಹುದು. ನಿಮಗಿರುವ ವ್ಯಾವಹಾರಿಕ ಸಂಬಂಧಗಳು ವಿಸ್ತಾರಗೊಳ್ಳುವ ಸಮಯ ಇದಾಗಿದೆ ಬೆಲೆ ಬಾಳುವ ವಸ್ತು ಕಾಣೆಯಾಗುವ ಸಂಭವವಿದೆ.

ತುಲಾ: ದೈಹಿಕವಾಗಿ ಬಲಾಢ್ಯರಾಗಿರುವ ನಿಮಗೆ ಮಾನಸಿಕವಾಗಿ ಬಹಳ ದೊಡ್ಡ ಹೊಡೆತ ಬೀಳುವ ಸಂಭವವಿದೆ. ಪೆಟ್ರೋಲಿಯಂ ವಸ್ತುಗಳ ವ್ಯಾಪಾರ ವ್ಯವಹಾರಗಳಲ್ಲಿ ತೃಪ್ತಿಕರ ಆದಾಯವಿದೆ. ಬಂಧುಗಳಿಂದ ದ್ರವ್ಯಲಾಭವಾಗುವುದು.

ವೃಶ್ಚಿಕ: ಇಂದಿನ ಕೆಲಸಗಳಿಗೆ ಆತ್ಮಸ್ಥೈರ್ಯ ಬಹಳ ಅಗತ್ಯವಾಗುವುದು. ವಾಣಿಜ್ಯ ಅಥವಾ ಆರ್ಥಿಕ ಒಪ್ಪಂದಗಳು ಈ ದಿನ ನಡೆಸುವುದೇ ಅನಿವಾರ್ಯವಾದರೆ, ಮಹಾಗಣಪತಿಯ ಸೇವೆಯ ನಂತರದಲ್ಲಿ ಕೈಗೊಳ್ಳುವುದು ಉತ್ತಮ.

ಧನು: ನಿಮ್ಮ ಜೀವನ ಶೈಲಿಯನ್ನು ಸುಸಂಸ್ಕೃತವಾಗಿ ಬದಲಾಯಿಸಿಕೊಳ್ಳಲು ಈ ದಿನದಿಂದ ಪ್ರಾರಂಭಿಸಿ. ಆಫೀಸಿನ ಕೆಲಸಗಳನ್ನು ಮಾಡಿ ಮುಗಿಸುವಲ್ಲಿ ತೋರಿದ ಆತುರದಿಂದಾಗಿ ಸೋಲನ್ನು ಎದುರು ನೋಡಬೇಕಾಗಬಹುದು.

ಮಕರ: ಸಾಲದ ಹಣವನ್ನು ಹಿಂದುರುಗಿಸುವ ಬಗ್ಗೆ ಗಮನವಿರಲಿ. ವಾಹನ ಮಾರಾಟದ ಯೋಚನೆಯಲ್ಲಿರುವವರು ಆ ಯೋಚನೆಯನ್ನು ಸದ್ಯದ ಮಟ್ಟಿಗೆ ಕೈ ಬಿಡುವುದೇ ಸರಿಯಾದ ಮಾರ್ಗ. ಮಕ್ಕಳಿಂದ ಸಂತೋಷ ನೆಮ್ಮದಿ.


ಕುಂಭ: ಶ್ರೇಯಸ್ಸು ಹುಡುಕಿಕೊಂಡು ಬರುವುದರಿಂದ ಸಂತಸ ಸಿಗಲಿದೆ. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನಕ್ಕೇರಲು ಸಕಾಲವಾಗಿದೆ. ನಡವಳಿಕೆಯನ್ನು ಕೊಂಚ ಹಿಡಿತದಲ್ಲಿಟ್ಟುಕೊಂಡರೆ ಸಂದಿಗ್ಧ ಪರಿಸ್ಥಿತಿಗೆ ಸಿಲುಕುವುದು ತಪ್ಪುವುದು.

ಮೀನ: ಜಮೀನು ಖರೀದಿ ಅಥವಾ ನಿವೇಶನಗಳ ಖರೀದಿಯಿಂದ ಹೆಚ್ಚಿನ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಬದುಕನ್ನು ವಿಲಾಸಿಯಾಗಿ ಕಳೆಯುವ ಹೊರತಾಗಿ ಅನೇಕ ಜವಾಬ್ದಾರಿಗಳಿವೆ ಎಂಬುದನ್ನು ಮರೆಯದಿರಿ.

ಪದಬಂಧ 5081 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆ ಮೋದಕ ನೋಡಿದ್ದಕ್ಕೇ ಈಸಂತೋಷ! (3)
6.ಗಡಿಯ ಕೊನೆಯಲ್ಲಿ ಹೂಡಿದ ವಂಚನೆ! (5)
7.ಸರಕ್ಕನೆ ಕಾಣಿಸಿಕೊಂಡಿರುವ ಅಸುರ (3)
10.ಮನಸ್ಸು ಬದಲಾಗುವಿಕೆ (5)
15.ಮನ್ಮಥನಿಂದ ಪ್ರಾರಂಭವಾದ ಅಸೆ (3)
16.ಯಾರಿಗೂ ಕಾಣದಂತೆ ಪ್ರವಹಿಸುವುದು (5)
17.ದ್ರವ ಒಸರುವ ನರನ ಜಿಹ್ವೆ (3)

ಮೇಲಿಂದ ಕೆಳಕ್ಕೆ
1.ಆ ಭರಣಿಯ ಹತ್ತಿರವಿರುವ ನಗ (4)
2.ಆ ದಿವಸ ತಂದಿರುವ ಕಾಳುಕಡಿ (3)
3.ತಾಪದ ಹೊತ್ತಿನಲ್ಲಿ ತೋರಿದ ಪರಾಕ್ರಮ (3)
4.ಚಂದಾ ಹಣವಿದು (3)
5.ಎಡಬಿಡದಿರುವ ಹನಿಯ ಮಳೆ (4)
8.ಪ್ರಶ್ನೆಗೆ ಪೂರಕವಾಗಿ ಹೇಳುವ ಜವಾಬು (3)
9.ಕೀಳು ಮನುಷ್ಯ ಇಲ್ಲಿದ್ದಾನೆ (3)
11.ಅವನ ಕೆಟ್ಟಗುಣವಿದು (4)
12.ಮನದೊಳಗಿರುವ ಕುಲ (4)
13.ಸಂಗತಿ ಹಂಚಿಕೊಳ್ಳುವ ಜೊತೆಗಾತಿ (3)
14.ಮಾವನಿದುರು ನಿಂತಿರುವ ಹೆಂಗಸು (3)
15.ಆತುರ ಈ ತರ ಬಂದಿದೆಯಲ್ಲಾ? (3)



5080ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಣಯಕಲಹ 2.ರಸಸಮಯ 5 ವಾಚಕ 7.ಸ್ಥಾವರ 10.ಉಬ್ಧಕ 12 ವಲ್ಲರಿ 13 ಬಾಲರವಿ 15.ಪ್ರತ್ಯಕ್ಷಪ್ರಮಾಣ

ಮೇಲಿಂದ ಕೆಳಕ್ಕೆ:
1. ಪ್ರತಿವಾದಿ 2 ಹರ 3 ಆಯುಷ್ಕರ್ಮ 6. ಕಮಂಡಲು 7.ಸ್ಥಾಪಕ 8.ರಕ್ತಸ್ರಾವ 9. ಪುಷ್ಪಬಾಣ 11.ಹರಿವಾಣ 14.ವಿಪ್ರ

ಸುಡೊಕು 5467

	7	9			3		8	
	4			8			5	9
8			2	6		7		4
	8			2		1		5
		2	8		5		6	
5				3			2	
9		7	5					6
						9	4	
4	3		6		1		7	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5466 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9




ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ
₹16000-20000

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,003
ಇಂದಿನ ಅಂತ್ಯ	17,877
▼	126
ದಿನದ ಕನಿಷ್ಠ	17,861

ವಿನಿಮಯ ದರ

$ ಡಾಲರ್	79.71
£ ಪೌಂಡ್	91.78
€ ಯುರೊ	79.64
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1680 (1680)
ಸೋಯಾ (ರಿಫೈನ್ಡ್)	₹1175 (1190)
ಸೂರ್ಯಕಾಂತಿ (ರಿಫೈನ್ಡ್)	₹1350 (1360)
ಪಾಮೋಲಿನ್	₹935 (945)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹132

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹300-692
ದ್ವಿತಳಿ (ಬಿ.ವಿ)	₹277-836

10 ಸಾವಿರಕ್ಕೂ ಹೆಚ್ಚು ಚಾರ್ಜಿಂಗ್ ಕೇಂದ್ರ ಸ್ಥಾಪಿಸಲಿರುವ ಶೆಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೆಲ್ ಎನರ್ಜಿ ಇಂಡಿಯಾ ಕಂಪನಿಯು ಬೆಂಗಳೂರಿನಲ್ಲಿ ಚಾರ್ಜಿಂಗ್ ಕೇಂದ್ರಗಳನ್ನು ಗುರುವಾರ ಆರಂಭಿಸಿದ್ದು ಈ ಮೂಲಕ ಭಾರತದ ವಿದ್ಯುತ್ ಚಾಲಿತ ವಾಹನ (ಇ.ವಿ.) ಚಾರ್ಜಿಂಗ್ ಮಾರುಕಟ್ಟೆ ಪ್ರವೇಶಿಸಿದೆ. 2030ರೊಳಗೆ ದೇಶದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸುವ ಗುರಿಯನ್ನು ಕಂಪನಿಯು ಹೊಂದಿದೆ.

'ಇಂಗಾಲದ ಹೊರಸೂಸುವಿಕೆಯನ್ನು ನಿವ್ವಳ-ಶೂನ್ಯಕ್ಕೆ ತಗ್ಗಿಸುವ ನಮ್ಮ ಉದ್ದೇಶದ ಭಾಗವಾಗಿ ಈ ಕೇಂದ್ರಗಳನ್ನು ಆರಂಭಿಸುತ್ತಿದ್ದೇವೆ. ಅದರಲ್ಲೂ, ದ್ವಿಚಕ್ರ ವಾಹನಗಳಿಗೆ ನಾವು ಚಾರ್ಜಿಂಗ್ ಸೌಲಭ್ಯವನ್ನು ಮೊದಲಿಗೆ ಒದಗಿಸುತ್ತಿರುವುದು ಭಾರತದಲ್ಲಿ' ಎಂದು ಕಂಪನಿಯ ಏಷ್ಯಾ ವಿಭಾಗದ ಹಿರಿಯ ಉಪಾಧ್ಯಕ್ಷ ಆಮ್ರ್ ಆದೆಲ್ 'ಪ್ರಜಾವಾಣಿ'ಗೆ ತಿಳಿಸಿದರು.

ಕಂಪನಿಯು ಎಂಟು ರಾಜ್ಯಗಳಲ್ಲಿ ಈಗ ಒಟ್ಟು 300ಕ್ಕೂ ಹೆಚ್ಚು ಪೆಟ್ರೋಲ್ ಬಂಕ್‌ಗಳನ್ನು ಹೊಂದಿದೆ.

'ಈ ರಾಜ್ಯಗಳ ಮಾರುಕಟ್ಟೆಗಳು ಮಾತ್ರವೇ ಅಲ್ಲದೆ ನಾವು ಇ.ವಿ. ಚಾರ್ಜಿಂಗ್ ಕೇಂದ್ರಗಳ ಮೂಲಕ ಇತರ ರಾಜ್ಯಗಳ ಮಾರುಕಟ್ಟೆಗಳನ್ನೂ ಪ್ರವೇಶಿಸುವ ಉದ್ದೇಶ ಹೊಂದಿದ್ದೇವೆ. ನಮ್ಮ ಚಾರ್ಜಿಂಗ್ ಕೇಂದ್ರಗಳಲ್ಲಿ ಲಭ್ಯವಾಗುವ ವಿದ್ಯುತ್ ಸಂಪೂರ್ಣವಾಗಿ ನವೀಕರಿಸಬಹುದಾದ ಇಂಧನ ಮೂಲಗಳಿಂದಲೇ ಪಡೆದಿದ್ದಾಗಿರುತ್ತದೆ' ಎಂದು ಕಂಪನಿಯ ಭಾರತದ ನಿರ್ದೇಶಕ ಸಂಜಯ್ ವರ್ಕೆ ಹೇಳಿದರು.

ಶೆಲ್ ಪೆಟ್ರೋಲ್ ಬಂಕ್, ಜನರು ಹೆಚ್ಚಾಗಿ ಭೇಟಿ ನೀಡುವ ಸ್ಥಳಗಳು, ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್‌ಗಾಗಿಯೇ ಸ್ಥಾಪಿಸಲಾಗಿರುವ ಹಬ್‌ಗಳು, ಮನೆಗಳು, ಹೋಟೆಲ್ ಅಥವಾ ರೆಸ್ಟಾರೆಂಟ್‌ನಂತಹ ಸ್ಥಳಗಳಲ್ಲಿ ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಬದಲಾವಣೆ ಮಾಡಲಾಗಿರುವ ಚಾರ್ಜಿಂಗ್ ಸೌಲಭ್ಯವನ್ನು ಕಂಪನಿಯು ಒದಗಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎನ್‌ಎಂಡಿಸಿಗೆ 'ರಾಜಭಾಷಾ ಕೀರ್ತಿ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಗೃಹ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುವ ಅಧಿಕೃತ ಭಾಷೆಗಳ ಇಲಾಖೆಯು ಹಿಂದಿ ದಿವಸ ಆಚರಣೆಯ ಸಮಾರೋಪದಲ್ಲಿ ನೀಡುವ 'ರಾಜಭಾಷಾ ಕೀರ್ತಿ' ಪ್ರಶಸ್ತಿಯು 2021-22ನೇ ಸಾಲಿನಲ್ಲಿ ಎನ್‌ಎಂಡಿಸಿ ಕಂಪನಿಗೆ ದೊರೆತಿದೆ.

ಗುಜರಾತಿನ ಸೂರತ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾರ್ಯಕ್ರಮದಲ್ಲಿ ಇದ್ದರು ಎಂದು ಪ್ರಕಟಣೆ ತಿಳಿಸಿದೆ. ಎನ್‌ಎಂಡಿಸಿ ಸಿಎಂಡಿ ಸುಮಿತ್ ದೇಬ್ ಪ್ರಶಸ್ತಿಯನ್ನು ಸ್ವೀಕರಿಸಿದರು.

'ಹಿಂದಿ ಮತ್ತು ಭಾರತದ ಭಾಷೆಗಳನ್ನು ವೈಭವದ ಸ್ಥಿತಿಗೆ ಒಯ್ಯಲು ನಾವೆಲ್ಲ ಕೊಡುಗೆ ನೀಡುವ ಶಪಥ ಮಾಡೋಣ' ಎಂದು ದೇಬ್ ಹೇಳಿದರು.

ಐದು ವರ್ಷಗಳ ಕಾರ್ಯಯೋಜನೆ ರೂಪಿಸಿದ ಟಾಟಾ ಒಡೆತನದ ಕಂಪನಿ

'ಮಾರುಕಟ್ಟೆ: ಶೇ 30 ಪಾಲಿನ ಗುರಿ'

ನವದೆಹಲಿ (ಪಿಟಿಐ): ಟಾಟಾ ಸಮೂಹದ ಒಡೆತನದಲ್ಲಿರುವ ಏರ್ ಇಂಡಿಯಾ ವಿಮಾನಯಾನ ಕಂಪನಿಯು ಮುಂದಿನ ಐದು ವರ್ಷಗಳಲ್ಲಿ ದೇಶಿ ಮಾರುಕಟ್ಟೆಯಲ್ಲಿ ಶೇಕಡ 30ರಷ್ಟು ಪಾಲು ಹೊಂದುವ ಗುರಿ ಇಟ್ಟುಕೊಂಡಿದೆ.

ತನ್ನ ಸಿಬ್ಬಂದಿಯಿಂದ ಪ್ರತಿಕ್ರಿಯೆಗಳನ್ನು ಪಡೆದ ಬಳಿಕ ಕಂಪನಿಯು 'ವಿಹಾನ್.ಎಐ' (Vihaan.AI) ಎನ್ನುವ ಐದು ವರ್ಷಗಳ ಕಾರ್ಯಯೋಜನೆಯನ್ನು ಗುರುವಾರ ಘೋಷಿಸಿದೆ. ಅದರಂತೆ, ಅಂತರರಾಷ್ಟ್ರೀಯ ಕಾರ್ಯಾಚರಣೆಯನ್ನು ಇನ್ನಷ್ಟು ಬಲಪಡಿಸಲು ಸಹ ಗಮನ ಹರಿಸಲಿದೆ.

ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯದ (ಡಿಜಿಸಿಎ) ಈಚಿನ ವರದಿಯ ಪ್ರಕಾರ, ಜುಲೈನಲ್ಲಿ ಏರ್ ಇಂಡಿಯಾದ ದೇಶಿ ಮಾರುಕಟ್ಟೆ ಪಾಲು ಶೇ 8.4ರಷ್ಟು ಇತ್ತು.

ವಿಶ್ವಾಸಾರ್ಹತೆ ಕಾಯ್ದುಕೊಳ್ಳುವುದು, ಸಮಯಕ್ಕೆ ಸರಿಯಾಗಿ ವಿಮಾನಗಳ ಕಾರ್ಯಾಚರಣೆ ಇರುವಂತೆ ಮಾಡುವುದು, ತಂತ್ರಜ್ಞಾನ, ನಾವೀನ್ಯದಲ್ಲಿ ನಾಯಕತ್ವದ ಸ್ಥಾನ ಹೊಂದುವುದು, ಉದ್ಯಮದ ಉತ್ತಮ ಪ್ರತಿಭೆಗಳ ಮೇಲೆ ಹೆಚ್ಚಿನ ಹೂಡಿಕೆ ಮಾಡುವುದು ಸೇರಿದಂತೆ ಹಲವು ಅಂಶಗಳ ಬಗ್ಗೆ ಗಮನ ಹರಿಸಲು ಯೋಜನೆ ರೂಪಿಸಲಾಗಿದೆ ಎಂದು ಅದು ತಿಳಿಸಿದೆ.



ಕ್ಯಾಬಿನ್‌ಗಳ ನವೀಕರಣ, ವಿಮಾನದಲ್ಲಿ ಮನರಂಜನಾ ವ್ಯವಸ್ಥೆ ಅಳವಡಿಕೆ... ಹೀಗೆ ಕೆಲವು ಕೆಲಸಗಳನ್ನು ಈಗಾಗಲೇ ಆರಂಭಿಸಲಾಗಿದೆ ಎಂದು ಏರ್ ಇಂಡಿಯಾ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಕ್ಯಾಂಪ್‌ಬೆಲ್ ವಿಲ್ಸನ್ ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

15–9-2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	11000-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1690)
ಒಂದು ವಾರದ ಡೆಲಿವರಿ	1685 (1685)
ಸೋಯಾ ಕಚ್ಚಾ	1125 (1127)
ಪಾಮ್ ವಾರದ ಡೆಲಿವರಿ	933 (943)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1280)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,650 (50,050)
ಬೆಳ್ಳಿ ಕೆ.ಜಿ 56,300 (56,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಭಾರತಕ್ಕೆ ಕಚ್ಚಾ ತೈಲ ಪೂರೈಕೆ: ಮತ್ತೆ ಎರಡನೇ ಸ್ಥಾನಕ್ಕೆ ಸೌದಿ

ನವದೆಹಲಿ (ರಾಯಿಟರ್ಸ್): ಭಾರತಕ್ಕೆ ಅತಿ ಹೆಚ್ಚು ಕಚ್ಚಾ ತೈಲ ಪೂರೈಕೆ ಮಾಡುವ ದೇಶಗಳ ಸಾಲಿನಲ್ಲಿ ಸೌದಿ ಅರೇಬಿಯಾವು ಆಗಸ್ಟ್‌ನಲ್ಲಿ ಮತ್ತೆ ಎರಡನೇ ಸ್ಥಾನಕ್ಕೆ ಏರಿದೆ. ಇದರಿಂದಾಗಿ ರಷ್ಯಾ ಮೂರನೇ ಸ್ಥಾನಕ್ಕೆ ಇಳಿದಿದೆ.

ಉದ್ಯಮ ಮತ್ತು ವರ್ತಕರ ಮೂಲಗಳು ನೀಡಿರುವ ಮಾಹಿತಿಯ ಪ್ರಕಾರ, ಇರಾಕ್ ಮೊದಲ ಸ್ಥಾನವನ್ನೇ ಕಾಯ್ದುಕೊಂಡಿದೆ. ಮೇ ತಿಂಗಳಿನಲ್ಲಿ ರಷ್ಯಾ ದೇಶವು ಸೌದಿ ಅರೇಬಿಯಾವನ್ನು ಹಿಂದಕ್ಕಿ ಎರಡನೇ ಸ್ಥಾನ ಪಡೆದುಕೊಂಡಿತ್ತು.

ಭಾರತವು ಆಗಸ್ಟ್‌ನಲ್ಲಿ ಸೌದಿ ಅರೇಬಿಯಾದಿಂದ ದಿನಕ್ಕೆ 8.63 ಲಕ್ಷ ಬ್ಯಾರಲ್ ಕಚ್ಚಾ ತೈಲ ಆಮದು ಮಾಡಿಕೊಂಡಿದೆ. ಜುಲೈಗೆ ಹೋಲಿಸಿದರೆ ಶೇ 4.8ರಷ್ಟು ಹೆಚ್ಚು ಆಮದಾಗಿದೆ. ರಷ್ಯಾದಿಂದ ದಿನಕ್ಕೆ 8.55 ಲಕ್ಷ ಬ್ಯಾರಲ್ ತೈಲ ಆಮದಾಗಿದೆ. ಜುಲೈಗೆ ಹೋಲಿಸಿದರೆ ಶೇ 2.4ರಷ್ಟು ಇಳಿಕೆ ಆಗಿದೆ.

ಆದರೆ, ಒಪೆಕ್‌ನಿಂದ ಭಾರತವು ಆಮದು ಮಾಡಿಕೊಂಡಿರುವ ತೈಲದ ಪ್ರಮಾಣವು ಶೇ 59.8ರಷ್ಟು ಇಳಿಕೆ ಕಂಡಿದ್ದು, 16 ವರ್ಷಗಳ ಕನಿಷ್ಠ ಮಟ್ಟವಾಗಿದೆ.

ಜೂನ್‌ನಲ್ಲಿ ಭಾರತವು ರಷ್ಯಾದಿಂದ ದಾಖಲೆ ಪ್ರಮಾಣದಲ್ಲಿ ತೈಲ ಖರೀದಿಸಿತ್ತು. ಆ ಬಳಿಕ ರಷ್ಯಾ ದೇಶವು ರಿಯಾಯಿತಿ ಪ್ರಮಾಣವನ್ನು ಕಡಿಮೆ ಮಾಡಿರುವುದರಿಂದ ತಿಂಗಳಿನಿಂದ ತಿಂಗಳಿಗೆ ತೈಲ ಆಮದು ಇಳಿಮುಖವಾಗಿದೆ.

ಭಾರತದ ಜಿಡಿಪಿ ಅಂದಾಜು ತಗ್ಗಿಸಿದ ಫಿಚ್

ನವದೆಹಲಿ (ಪಿಟಿಐ): ಫಿಚ್ ರೇಟಿಂಗ್ಸ್ ಸಂಸ್ಥೆಯು ಪ್ರಸಕ್ತ ಹಣಕಾಸು ವರ್ಷಕ್ಕೆ ಭಾರತದ ಜಿಡಿಪಿ ಬೆಳವಣಿಗೆಯ ಅಂದಾಜನ್ನು ಶೇಕಡ 7ಕ್ಕೆ ತಗ್ಗಿಸಿದೆ.

ಈ ಮೊದಲು, ಜಿಡಿಪಿಯು ಶೇ7.8ರಷ್ಟು ಬೆಳವಣಿಗೆ ಕಾಣಲಿದೆ ಎಂದು ಅದು ಜೂನ್‌ನಲ್ಲಿ ಅಂದಾಜು ಮಾಡಿತ್ತು. ಹಣದುಬ್ಬರ ಏರಿಕೆ ಆಗಿರುವುದು ಹಾಗೂ ಬಡ್ಡಿದರವು ಗರಿಷ್ಠ ಮಟ್ಟದಲ್ಲಿ ಇರುವ ಕಾರಣಗಳನ್ನು ನೀಡಿ ಬೆಳವಣಿಗೆ ಅಂದಾಜನ್ನು ತಗ್ಗಿಸಿದೆ.

2023-24ನೇ ಹಣಕಾಸು ವರ್ಷಕ್ಕೆ ಸಹ ಜಿಡಿಪಿ ಬೆಳವಣಿಗೆಯು ಶೇ 7.4ಕ್ಕೆ ಬದಲಾಗಿ ಶೇ 6.7ರಷ್ಟು ಆಗಲಿದೆ ಎಂದು ಪರಿಷ್ಕೃತ ಅಂದಾಜಿನಲ್ಲಿ ತಿಳಿಸಿದೆ.

ಕಾರು ಅಪಘಾತ: ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಪಾರು

ಕೀವ್ (ಎಪಿ): ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಪ್ರಯಾಣಿಸುತ್ತಿದ್ದ ಕಾರಿಗೆ ಗುರುವಾರ ನಸುಕಿನಲ್ಲಿ ಪ್ರಯಾಣಿಕ ವಾಹನ ಡಿಕ್ಕಿ ಹೊಡೆದು, ಅಪಘಾತ ಸಂಭವಿಸಿದೆ. ಝೆಲೆನ್‌ಸ್ಕಿ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಝೆಲೆನ್‌ಸ್ಕಿ ಅವರು ತಮ್ಮ ಸೇನಾಪಡೆಯು ಮರು ವಶಪಡಿಸಿಕೊಂಡಿರುವ ಇಝಿಯುಮ್ ನಗರಕ್ಕೆ ಭೇಟಿ ನೀಡಿ, ಹಾರ್ಕಿವ್ ಪ್ರದೇಶದಿಂದ ಕೀವ್‌ಗೆ ವಾಪಸಾಗುತ್ತಿದ್ದರು. ಆಗ ಈ ಘಟನೆ ಸಂಭವಿಸಿದೆ ಎಂದು ಉಕ್ರೇನ್ ಅಧ್ಯಕ್ಷರ ವಕ್ತಾರ ಸೆರ್ಗಿ ನಿಕಿಫೊರೊವ್ ತಿಳಿಸಿದ್ದಾರೆ.

ವೈದ್ಯಕೀಯ ತಂಡವು ಝೆಲೆನ್‌ಸ್ಕಿ ಅವರಿಗೆ ಪ್ರಥಮ ಚಿಕಿತ್ಸೆ ನೀಡಿತು. ಬಳಿಕ ಝೆಲೆನ್‌ಸ್ಕಿ ಅವರನ್ನು ಆಂಬುಲೆನ್ಸ್‌ನಲ್ಲಿ ಕರೆದೊಯ್ಯಲಾಯಿತು. ಅವರಿಗೆ ಗಂಭೀರ ಗಾಯಗಳಾಗಿಲ್ಲ. ಅಪಘಾತದ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

'400 ಹಳ್ಳಿಗಳು ಉಕ್ರೇನ್ ಹಿಡಿತಕ್ಕೆ': ಕಳೆದ ಒಂದು ವಾರದ ಹೋರಾಟದಲ್ಲಿ ಉಕ್ರೇನ್ ಸೈನಿಕರು ಸುಮಾರು 400 ಹಳ್ಳಿಗಳನ್ನು ರಷ್ಯಾ ಪಡೆಗಳ ಹಿಡಿತದಿಂದ ಮುಕ್ತಗೊಳಿಸಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಹೇಳಿದ್ದಾರೆ.

ಕಳೆದ 24 ತಾಸುಗಳಲ್ಲಿ ರಷ್ಯಾ ಪಡೆಗಳು ಉಕ್ರೇನಿನ ಏಳು ಪ್ರದೇಶಗಳ ಮೇಲೆ ಶೆಲ್ ದಾಳಿ ನಡೆಸಿದ್ದು, ಕನಿಷ್ಠ ಇಬ್ಬರು ನಾಗರಿಕರು ಮೃತಪಟ್ಟು, 14 ಮಂದಿ ಗಾಯಗೊಂಡಿದ್ದಾರೆ ಎಂದು ಅಧ್ಯಕ್ಷೀಯ ಕಚೇರಿ ಹೇಳಿದೆ.

ಝೆಲೆನ್‌ಸ್ಕಿಯವರ ಹುಟ್ಟೂರು ಕ್ರಿವಿ ರಿಹ್ ಸಮೀಪದ ಜಲಾಶಯವನ್ನು ಗುರಿಯಾಗಿಸಿ ರಷ್ಯಾ ಏಳು ಕ್ಷಿಪಣಿಗಳನ್ನು ಉಡಾಯಿಸಿದೆ. ಜಲಾಶಯ ಒಡೆದು ಉಂಟಾದ ಪ್ರವಾಹದಿಂದ 100ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಸಂತ್ರಸ್ತರ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ ಎಂದು ಅಧ್ಯಕ್ಷೀಯ ಕಚೇರಿ ಹೇಳಿದೆ.

ನಮೀಬಿಯಾ: ಭಾರತಕ್ಕೆ 8 ಚೀತಾ ಕರೆದೊಯ್ಯಲು ವಿಶೇಷ ವಿಮಾನ

ವಿಂಡ್‌ಹೋಕ್, ನಮೀಬಿಯಾ (ಪಿಟಿಐ): ಎಂಟು ಚೀತಾಗಳನ್ನು ಭಾರತಕ್ಕೆ ಕರೆದೊಯ್ಯುವ ಸಲುವಾಗಿ ವಿಶೇಷ ವಿಮಾನ 'ಬೋಯಿಂಗ್ 747' ನಮೀಬಿಯಾ ರಾಜಧಾನಿ ವಿಂಡ್‌ಹೋಕ್‌ಗೆ ಬಂದಿಳಿದಿದೆ.

'ಹುಲಿಗಳ ನಾಡಿಗೆ ಸೌಹಾರ್ದದ ರಾಯಭಾರಿಗಳನ್ನು ಕರೆದೊಯ್ಯಲು ವಿಶೇಷ ವಿಮಾನವೊಂದು ಶೌರ್ಯದ ನಾಡಿನಲ್ಲಿ ಬಂದಿಳಿದಿದೆ' ಎಂದು ವಿಂಡ್‌ಹೋಕ್‌ನಲ್ಲಿರುವ ಭಾರತದ ಹೈಕಮಿಷನ್ ಕಚೇರಿ ಟ್ವೀಟ್ ಮಾಡಿದೆ.

ಈ ವಿಶೇಷ ವಿಮಾನದ ಮೂಲಕ ಐದು ಹೆಣ್ಣು ಹಾಗೂ ಮೂರು ಗಂಡು ಚೀತಾಗಳನ್ನು ಸೆ. 17ರಂದು ರಾಜಸ್ಥಾನದ ಜೈಪುರಕ್ಕೆ ತರಲಾಗುವುದು. ನಂತರ, ಈ ವನ್ಯಮೃಗಗಳನ್ನು ಹೆಲಿಕಾಪ್ಟರ್ ಮೂಲಕ ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಕರೆದೊಯ್ಯಲಾಗುತ್ತದೆ.



ನಮೀಬಿಯಾದಿಂದ ಚೀತಾಗಳನ್ನು ಭಾರತಕ್ಕೆ ಕರೆತರುವ ವಿಶೇಷ ವಿಮಾನ –ಪಿಟಿಐ ಚಿತ್ರ

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಜನ್ಮದಿನವಾದ ಸೆಪ್ಟೆಂಬರ್ 17ರಂದು ಈ ಚೀತಾಗಳನ್ನು ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಹಸ್ತಾಂತರಿಸುವರು.

ಹಿಂದೂ ದೇಗುಲದ ಮೇಲೆ ಭಾರತ ವಿರೋಧಿ ಬರಹ: ವ್ಯಾಪಕ ಖಂಡನೆ

ಟೊರಾಂಟೊ (ಪಿಟಿಐ): ಕೆನಡಾದ ಟೊರಾಂಟೊದಲ್ಲಿರುವ ಬಿಎಪಿಎಸ್ (ಬೋಚಸನ್ವಾಸಿ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆ) ಸ್ವಾಮಿನಾರಾಯಣ ದೇವಾಲಯದ ಗೋಡೆಗಳ ಮೇಲೆ ಭಾರತ ವಿರೋಧಿ ಘೋಷಣೆಗಳನ್ನು ಬರೆದು ವಿರೂಪಗೊಳಿಸಲಾಗಿದೆ.

ಘಟನೆಯನ್ನು ಖಂಡಿಸಿರುವ ಭಾರತೀಯ ಹೈಕಮಿಷನ್, ತಪ್ಪಿತಸ್ಥರ ವಿರುದ್ಧ ತ್ವರಿತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿದೆ.

ಬಿಎಪಿಎಸ್ ಸ್ವಾಮಿನಾರಾಯಣ ದೇವಾಲಯ ವಿರೂಪ ಘಟನೆಯು ಯಾವಾಗ ಸಂಭವಿಸಿದೆ ಎಂಬುದರ ಬಗ್ಗೆ ನಿಖರ ಮಾಹಿತಿ ಲಭ್ಯವಾಗಿಲ್ಲ.

'ಟೊರಾಂಟೊದಲ್ಲಿರುವ ಬಿಎಪಿಎಸ್ ಸ್ವಾಮಿನಾರಾಯಣ ಮಂದಿರವನ್ನು ಭಾರತ ವಿರೋಧಿ ಬರಹದ ಮೂಲಕ ವಿರೂಪಗೊಳಿಸಿರುವುದನ್ನು ನಾವು ಬಲವಾಗಿ ಖಂಡಿಸುತ್ತೇವೆ. ಘಟನೆಯ ಬಗ್ಗೆ ತನಿಖೆ ನಡೆಸಲು ಮತ್ತು ಅಪರಾಧಿಗಳ ವಿರುದ್ಧ ತ್ವರಿತ ಕ್ರಮ ಕೈಗೊಳ್ಳಲು ಕೆನಡಾದ ಅಧಿಕಾರಿಗಳಿಗೆ ಆಗ್ರಹಿಸುತ್ತೇವೆ' ಎಂದು ಭಾರತೀಯ ಹೈಕಮಿಷನ್ ಟ್ವೀಟ್ ಮಾಡಿದೆ.

'ಕೆನಡಾದಲ್ಲಿರುವ ಖಾಲಿಸ್ತಾನಿ ಉಗ್ರರು ಟೊರಾಂಟೊದ ಬಿಎಪಿಎಸ್ ಸ್ವಾಮಿನಾರಾಯಣ ಮಂದಿರವನ್ನು ವಿರೂಪಗೊಳಿಸಿರುವುದನ್ನು ಎಲ್ಲರೂ ಖಂಡಿಸಬೇಕು. ಇದು ಕೇವಲ ಒಂದು ಘಟನೆಯಷ್ಟೇ ಅಲ್ಲ, ಕೆನಡಾದ ಹಿಂದೂ ದೇವಾಲಯಗಳು ಇತ್ತೀಚಿನ ದಿನಗಳಲ್ಲಿ ಈ ರೀತಿಯ ದ್ವೇಷದ ದಾಳಿಗೆ ಗುರಿಯಾಗುತ್ತಿವೆ. ಹಿಂದೂ ಕೆನಡಿಯನ್ನರು ಈ ಬಗ್ಗೆ ಆತಂಕ ಹೊಂದಿದ್ದಾರೆ' ಎಂದು ಕೆನಡಾದ ಸಂಸತ್ ಸದಸ್ಯ ಚಂದ್ರ ಆರ್ಯ ಟ್ವೀಟ್ ಮಾಡಿದ್ದಾರೆ.

ಬ್ರಾಂಪ್ಟನ್ ಸೌತ್‌ನ ಸಂಸದೆ ಸೋನಿಯಾ ಸಿಧು ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿದ್ದಾರೆ. 'ಟೊರೊಂಟೊದ ಸ್ವಾಮಿನಾರಾಯಣ ಮಂದಿರದಲ್ಲಿ ನಡೆದ ವಿಧ್ವಂಸಕ ಕೃತ್ಯದಿಂದ ನಾನು ವಿಚಲಿತಳಾಗಿದ್ದೇನೆ' ಎಂದು ಟ್ವೀಟ್ ಮಾಡಿದ್ದಾರೆ.

ಸ್ವೀಡನ್ ಪ್ರಧಾನಿ ರಾಜೀನಾಮೆ

ಕೋಪನ್ ಹೆಗನ್ (ಎಪಿ): ಸ್ವೀಡನ್‌ನ ಸಂಸತ್ ಚುನಾವಣೆಯಲ್ಲಿ ರಾಷ್ಟ್ರೀಯವಾದಿ ಹಾಗೂ ವಲಸೆ ವಿರೋಧಿ ಪಕ್ಷಗಳನ್ನೊಳಗೊಂಡ ಬಲಪಂಥೀಯ ಬಣವು ಬಹುಮತ ಗಳಿಸಿದ ಬೆನ್ನಲ್ಲೇ, ಪ್ರಧಾನಿ ಮ್ಯಾಗ್ಡಲೀನಾ ಆಂಡರ್ಸನ್ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಸ್ವೀಡನ್ ಸದನದ ಸ್ಪೀಕರ್ ಆಂಡ್ರಿಯಾಸ್ ನಾರ್ಲೆನ್ ಅವರನ್ನು ಭೇಟಿಯಾಗಿ ಆಂಡರ್ಸನ್ ರಾಜೀನಾಮೆ ಪತ್ರ ನೀಡಿದರು. ಹೊಸ ಸರ್ಕಾರ ರಚನೆಯಾಗುವವರೆಗೆ ಅವರು ಹಂಗಾಮಿ ಪ್ರಧಾನಿಯಾಗಿ ಮುಂದುವರಿಯಲಿದ್ದಾರೆ. ಭಾನುವಾರ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಬಲಪಂಥೀಯ ಪಕ್ಷಗಳನ್ನೊಳಗೊಂಡ ಬಣ 176 ಸ್ಥಾನ ಪಡೆದರೆ, ಎಡಪಂಥೀಯ ಪಕ್ಷಗಳಿರುವ ಒಕ್ಕೂಟ 173 ಸ್ಥಾನ ಪಡೆದಿದೆ.

ಸಂಕ್ಷಿಪ್ತ ಸುದ್ದಿ

ನೆದರ್ಲೆಂಡ್ಸ್‌ಗೆ ರಾಯಭಾರಿ ಶೆಫಾಲಿ

ವಾಷಿಂಗ್ಟನ್ (ಪಿಟಿಐ): ಭಾರತೀಯ–ಅಮೆರಿಕನ್, ರಾಜಕೀಯ ಕಾರ್ಯಕರ್ತೆ ಶೆಫಾಲಿ ರಾಜ್ದಾನ್ ದುಗ್ಗಲ್ ಅವರನ್ನು ನೆದರ್ಲೆಂಡ್ಸ್‌ಗೆ ತನ್ನ ರಾಯಭಾರಿಯಾಗಿ ಅಮೆರಿಕ ನಿಯೋಜಿಸಿದೆ.


50 ವರ್ಷದ ದುಗ್ಗಲ್ ಅವರ ಈ ನೇಮಕಕ್ಕೆ ಅಮೆರಿಕದ ಸೆನೆಟ್‌ನಲ್ಲಿ ಬುಧವಾರ ಧ್ವನಿ ಮತದ ಅಂಗೀಕಾರ ದೊರೆಯಿತು.

ಕಾಶ್ಮೀರಿ ಪಂಡಿತ ಸಮುದಾಯದವರಾದ ಶೆಫಾಲಿ ದುಗ್ಗಲ್ ಅವರು ಹರಿದ್ವಾರದಲ್ಲಿ ಜನಿಸಿದರು. ಅವರು ಎರಡು ವರ್ಷದವರಿದ್ದಾಗ ಪಾಲಕರು ಅಮೆರಿಕದ ಪೆನ್ಸಿಲ್ವೇನಿಯಾದ ಪಿಟ್ಸ್‌ಬರ್ಗ್‌ಗೆ ತೆರಳಿದ್ದರು. ನಂತರ, ಐದು ವರ್ಷದವರಾಗಿದ್ದಾಗ ಓಹಿಯೋದ ಸಿನ್ಸಿನಾಟಿಗೆ ತೆರಳಿ, ಅಲ್ಲಿಯೇ ನೆಲೆಸಿದರು. ಶೆಫಾಲಿ ಅವರು ಮಿಯಾಮಿ ವಿಶ್ವವಿದ್ಯಾಲಯದಿಂದ ಪದವಿ ಹಾಗೂ ನ್ಯೂಯಾರ್ಕ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಅವರು ಮಹಿಳಾ ಹಕ್ಕುಗಳ ವಕೀಲೆ ಮತ್ತು ಮಾನವ ಹಕ್ಕುಗಳ ಪ್ರತಿಪಾದಕಿ. ಅಮೆರಿಕದ 'ಹೋಲೋಕಾಸ್ಟ್ ಮೆಮೋರಿಯಲ್ ಮ್ಯೂಸಿಯಂ ಕೌನ್ಸಿಲ್'ನ ಅಧ್ಯಕ್ಷೆಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

19ರಂದು ರಾಣಿ 2ನೇ ಎಲಿಜಬೆತ್ ಅಂತ್ಯಸಂಸ್ಕಾರ

ಲಂಡನ್ (ಎಪಿ): ವೆಸ್ಟ್‌ಮಿನ್‌ಸ್ಟರ್ ಅಬೆನಲ್ಲಿ ಸೋಮವಾರ ನಡೆಯಲಿರುವ ಬ್ರಿಟನ್ ರಾಣಿ 2ನೇ ಎಲಿಜಬೆತ್ ಅವರ ಅಂತ್ಯಸಂಸ್ಕಾರದ ವೇಳೆ ಬ್ರಿಟನ್‌ನಾದ್ಯಂತ ಎರಡು ನಿಮಿಷಗಳ ಕಾಲ ಮೌನ ಆಚರಿಸಲಾಗುವುದು ಎಂದು ಬಕ್ಕಿಂಗ್‌ಹ್ಯಾಂ ಅರಮನೆ ಮೂಲಗಳು ಗುರುವಾರ ತಿಳಿಸಿವೆ.



ಎಲಿಜಬೆತ್

ವಿಂಡ್ಸರ್‌ನಲ್ಲಿರುವ ಪತಿ ಪ್ರಿನ್ಸ್ ಫಿಲಿಪ್ ಅವರ ಸಮಾಧಿ ಪಕ್ಕವೇ ಎಲಿಜಬೆತ್ ಅವರನ್ನೂ ಸಮಾಧಿ ಮಾಡಲಾಗುವುದು ಎಂದೂ ತಿಳಿಸಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಚಿತ್ರದುರ್ಗ	
ಅಪಿ	51839-52269
ಬೆಟ್ಟೆ	39919-40389
ಕೆಂಪುಗೋಟು	30509-30910
ರಾಶಿ	51329-51779
ಕುಮಟ	
ಚಿಪ್ಪು	24199-35699
ಕೋಕ	29109-34500
ಹಳೆಚಾಲಿ	47299-47299
ಹೊಸಚಾಲಿ	37269-43631
ಪುತ್ತೂರು	
ಹೊಸತು	34500-47500
ಸಾಗರ	
ಬಿಳಿಗೋಟು	20786-34099
ಚಾಲಿ	33569-41719
ಕೋಕ	16505-36549
ಕೆಂಪುಗೋಟು	34499-39059
ರಾಶಿ	45219-52109
ಸಿಪ್ಪೆಗೋಟು	18155-23909
ಶಿವಮೊಗ್ಗ	
ಬೆಟ್ಟೆ	50089-54786
ಗೊಬರಲು	32599-39099
ರಾಶಿ	47609-52109
ಸರಕು	61619-79100
ಸಿದ್ದಾಪುರ	
ಬಿಳಿಗೋಟು	26699-33999
ಚಾಲಿ	38199-43599
ಕೋಕ	25189-33900
ಕೆಂಪುಗೋಟು	32219-34609
ರಾಶಿ	51319-51709
ತಟ್ಟಿಬೆಟ್ಟೆ	43169-49839
ಶಿರಸಿ	
ಬೆಟ್ಟೆ	34699-48218
ಬಿಳಿಗೋಟು	26399-37500
ಚಾಲಿ	40019-44711
ಕೆಂಪುಗೋಟು	30297-42899
ರಾಶಿ	47999-52839
ಯಲ್ಲಾಪುರ	
ಬಿಳಿಗೋಟು	27699-36418
ಚಾಲಿ	37011-43899
ಕೋಕ	26099-30899
ಕೆಂಪುಗೋಟು	26899-37111
ರಾಶಿ	49720-56008
ತಟ್ಟಿಬೆಟ್ಟೆ	38969-47480

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16250	15800	16100	220.70 ಸೆಂಟ್ಸ್
ಎಸಿ	9100	8400	8825	
ಆರ್‌ಪಿ	9900	9800	9800	ಲಂಡನ್
ಆರ್‌ಸಿ	4800	4500	4725	2239 ಡಾಲರ್ಸ್

ಹೊರಗೆ ಹೋಗುವಾಗ ಮುಖಗವಸು ಧರಿಸಿ







ಯೋಗಿ ಸರ್ಕಾರದ ವಿರುದ್ಧ ವಿಪಕ್ಷಗಳ ಆಕ್ರೋಶ : ಆರು ಆರೋಪಿಗಳ ಬಂಧನ

ಬಾಲಕಿಯರ ಮೇಲೆ ಅತ್ಯಾಚಾರ, ಹತ್ಯೆ

ಪ್ರಜಾವಾಣಿ ವಾರ್ತೆ

ಲಖಿಂಪುರ ಖೇರಿ (ಉತ್ತರ ಪ್ರದೇಶ): ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ಪರಿಶಿಷ್ಟ ಜಾತಿಯ ಸೋದರಿಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಕೊಲೆ ಮಾಡಲಾಗಿದೆ. ಅತ್ಯಾಚಾರ ಎಸಗಿದ ನಂತರ ಆರೋಪಿಗಳು ಬಾಲಕಿಯರನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದಾರೆ. ನಂತರ ಅವರ ಶವಗಳನ್ನು ಮರಕ್ಕೆ ನೇತುಹಾಕಿದ್ದಾರೆ. ಈ ಕೃತ್ಯಕ್ಕೆ ದೇಶದಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ನಿಘಸನ್ ಸಮೀಪದ ಗ್ರಾಮವೊಂದರ ಹೊರವಲಯದಲ್ಲಿ ಬುಧವಾರ ತಡರಾತ್ರಿ ಇಬ್ಬರು ಸೋದರಿಯರ ಶವಗಳು ಕಬ್ಬಿನ ಗದ್ದೆಯಲ್ಲಿ ಮರಕ್ಕೆ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದವು. 15 ಮತ್ತು 17 ವರ್ಷದ ತಮ್ಮ ಮಕ್ಕಳನ್ನು, ಮೋಟರ್‌ಬೈಕ್‌ನಲ್ಲಿ ಬಂದಿದ್ದವರು ಅಪಹರಿಸಿದ್ದರು ಎಂದು ಸಂತ್ರಸ್ತ ಬಾಲಕಿಯರ ತಾಯಿ ದೂರು ನೀಡಿದ್ದರು. ಬಾಲಕಿಯರ ಮೇಲೆ ಅತ್ಯಾಚಾರ ನಡೆಸಲಾಗಿದೆ ಎಂದೂ ಅವರು ದೂರಿದ್ದರು.

ಬಾಲಕಿಯರ ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿತ್ತು. ಮರಣೋತ್ತರ ಪರೀಕ್ಷೆಯನ್ನು ವಿಡಿಯೊ ಚಿತ್ರೀಕರಣ ಮಾಡಲಾಗಿದೆ ಎಂದು ಲಖಿಂಪುರ ಖೇರಿಯ ಪೊಲೀಸ್ ವರಿಷ್ಠಾಧಿಕಾರಿ ಸಂಜೀವ್ ಸುಮನ್ ತಿಳಿಸಿದ್ದಾರೆ. 'ಬಾಲಕಿಯರ ಮೇಲೆ ಅತ್ಯಾಚಾರ ನಡೆಸಲಾಗಿದೆ ನಂತರ ಉಸಿರುಕಟ್ಟಿಸಿ ಕೊಲ್ಲಲಾಗಿದೆ ಎಂಬುದು ಮರಣೋತ್ತರ ಪರೀಕ್ಷೆಯಲ್ಲಿ ಪತ್ತೆಯಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಬಾಲಕಿಯರನ್ನು ಅಪಹರಿಸಲಾಗಿದೆ ಎಂಬ ಆರೋಪವನ್ನು ಅವರು ನಿರಾಕರಿಸಿದ್ದಾರೆ. 'ಸಹೋದರಿಯರು ಆರೋಪಿಗಳಲ್ಲಿ ಇಬ್ಬರಾದ ಜುನೈದ್ ಮತ್ತು ಸೊಹೈಲ್ ಎಂಬುವರ ಜೊತೆ ಸ್ವಯಂಪ್ರೇರಿತರಾಗಿ ಬುಧವಾರ ಮನೆಯಿಂದ ಹೊರ ಹೋಗಿದ್ದರು. ಕಬ್ಬಿನ ಗದ್ದೆಗೆ ಹೋದ ನಂತರ ಆರೋಪಿಗಳಿಬ್ಬರು, ಬಾಲಕಿಯರ ಮೇಲೆ ಅತ್ಯಾಚಾರ ನಡೆಸಿದ್ದಾರೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ತಮ್ಮನ್ನು ಮದುವೆಯಾಗುವಂತೆ ಬಾಲಕಿಯರು ಒತ್ತಾಯಿಸಿದ್ದಾರೆ. ಆಗ ಆರೋಪಿಗಳು ದುಪ್ಪಟ್ಟಾದಿಂದ ಕತ್ತುಬಿಗಿದು, ಕೊಲೆ ಮಾಡಿದ್ದಾರೆ. ಬಳಿಕ ತಮ್ಮ ಸ್ನೇಹಿತರಾದ ಹಫೀಜುರ್ ರೆಹಮಾನ್, ಕರಿಮುದ್ದೀನ್, ಆರಿಫ್, ಚೋಟು ಎಂಬುವರನ್ನು ಸ್ಥಳಕ್ಕೆ ಕರೆಸಿಕೊಂಡಿದ್ದಾರೆ. ಬಾಲಕಿಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬಿಂಬಿಸಲು ಅವರ ಶವಗಳನ್ನು ಮರಕ್ಕೆ ನೇಣುಹಾಕಿದ್ದಾರೆ. ಉಳಿದ ನಾಲ್ವರು ಆರೋಪಿಗಳು ನೇತುಹಾಕುವಲ್ಲಿ ನೆರವಾಗಿದ್ದಾರೆ. ಕೃತ್ಯ ಎಸಗಿರುವುದಾಗಿ ಇಬ್ಬರೂ ಒಪ್ಪಿಕೊಂಡಿದ್ದಾರೆ' ಎಂದು ಸಂಜೀವ್ ಸುಮನ್ ತಿಳಿಸಿದ್ದಾರೆ.

ಪ್ರತಿಭಟನೆ ಮಧ್ಯೆ ಅಂತ್ಯಸಂಸ್ಕಾರ: ಅತ್ಯಾಚಾರವನ್ನು ಖಂಡಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದ್ದಾರೆ. 'ಆರೋಪಿಗಳಿಗೆ ಗುಂಡಿಕ್ಕಿ ಕೊಲ್ಲಬೇಕು ಮತ್ತು ₹ 1ಕೋಟಿ ಪರಿಹಾರ ನೀಡಬೇಕು' ಎಂದು ಸಂತ್ರಸ್ತ ಬಾಲಕಿಯರ ಕುಟುಂಬದವರು ಪ್ರತಿಭಟನೆ ನಡೆಸಿದರು. ಅಂತ್ಯಸಂಸ್ಕಾರ ನಡೆಸುವುದಿಲ್ಲ ಎಂದು ಪಟ್ಟು ಹಿಡಿದರು.

ಆನಂತರ ಪೊಲೀಸರು ಅವರ ಮನವೊಲಿಸಿದರು. ಪ್ರತಿಭಟನೆ, ಬಿಗಿಭದ್ರತೆಯ ಮಧ್ಯೆಯೇ ಅಂತ್ಯಸಂಸ್ಕಾರ ನಡೆಯಿತು.



ಲಖಿಂಪುರ ಖೇರಿಯಲ್ಲಿ ನಡೆದ ಪರಿಶಿಷ್ಟ ಸಮುದಾಯದ ಇಬ್ಬರು ಬಾಲಕಿಯರ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ವಿರೋಧಿಸಿ ಪ್ರಯಾಗರಾಜ್‌ನಲ್ಲಿ ಗುರುವಾರ ಕಾಂಗ್ರೆಸ್ ಕಾರ್ಯಕರ್ತರು ಮೊಂಬತ್ತಿ ಬೆಳಗಿಸಿ ಪ್ರತಿಭಟನಾ ರ್‍ಯಾಲಿ ನಡೆಸಿದರು – ಪಿಟಿಐ ಚಿತ್ರ

> ರಾಜ್ಯದಲ್ಲಿ ಕ್ರಿಮಿನಲ್‌ಗಳಿಗೆ ಭಯವೇ ಇಲ್ಲವಾಗಿದೆ. ಸರ್ಕಾರದ ಆದ್ಯತೆಗಳು ತಪ್ಪಾಗಿರುವುದೇ ಇಂತಹ ಸ್ಥಿತಿಗೆ ಕಾರಣ
> **ಮಾಯಾವತಿ,** ಬಿಎಸ್‌ಪಿ ಮುಖ್ಯಸ್ಥೆ

> ಸುಳ್ಳು ಜಾಹೀರಾತುಗಳನ್ನು ನೀಡುವುದರಿಂದ ಕಾನೂನು ಸ್ಥಿತಿ ಸುಧಾರಿಸದು. ಉತ್ತರಪ್ರದೇಶದಲ್ಲಿ ಘೋರ ಅಪರಾಧಗಳು ಏಕೆ ಹೆಚ್ಚುತ್ತಿವೆ
> **ಪ್ರಿಯಾಂಕಾ ಗಾಂಧಿ ವಾದ್ರಾ**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> ಇದು ಹೃದಯ ವಿದ್ರಾವಕ ಕೃತ್ಯ. ಅತ್ಯಾಚಾರಿಗಳ ಬಿಡುಗಡೆಗೆ ನೆರವಾಗುವವರಿಂದ ಮಹಿಳೆಯರ ಭದ್ರತೆ ನಿರೀಕ್ಷಿಸುವುದು ಅಸಾಧ್ಯ
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಆರೋಪಿ ಕಾಲಿಗೆ ಗುಂಡು

ಅತ್ಯಾಚಾರ ಪ್ರಕರಣದ ಆರೂ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬಂಧನದ ವೇಳೆ ತಪ್ಪಿಸಿಕೊಳ್ಳಲು ಮುಂದಾದ ಜುನೈದ್‌ನ ಕಾಲಿಗೆ ಪೊಲೀಸರು ಗುಂಡು ಹಾರಿಸಿದ್ದಾರೆ.

ಬಂಧಿತರ ವಿರುದ್ಧ ಐಪಿಸಿ 302 (ಕೊಲೆ), 323 (ಹಲ್ಲೆ), 452 (ಮನೆಗೆ ಅತಿಕ್ರಮ ಪ್ರವೇಶ), 376 (ಅತ್ಯಾಚಾರ) ಅಡಿ ಹಾಗೂ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಕೃತ್ಯಕ್ಕೆ ಬಳಸಲಾಗಿದ್ದ ಮೋಟರ್‌ಸೈಕಲ್ ಮತ್ತು ಪಿಸ್ತೂಲ್ ಅನ್ನು ಜುನೈದ್‌ನಿಂದ ಜಪ್ತಿ ಮಾಡಲಾಗಿದೆ ಎಂದು ಲಖಿಂಪುರ ಖೇರಿಯ ಪೊಲೀಸ್ ವರಿಷ್ಠಾಧಿಕಾರಿ ಸಂಜೀವ್ ಸುಮನ್ ತಿಳಿಸಿದ್ದಾರೆ.

ಬಾಲಕಿ ಮೇಲೆ ಇಬ್ಬರು ಯುವಕರಿಂದ ಅತ್ಯಾಚಾರ


ಹೈದರಾಬಾದ್ (ಪಿಟಿಐ): 14 ವರ್ಷದ ಬಾಲಕಿಯ ಮೇಲೆ ಆಕೆಗೆ ಪರಿಚಯವಿದ್ದ ಇಬ್ಬರು ಯುವಕರೇ ಅತ್ಯಾಚಾರ ಎಸಗಿರುವ ಕೃತ್ಯ ಇಲ್ಲಿ ನಡೆದಿದೆ. ಆರೋಪಿಗಳು ಬಾಲಕಿಯನ್ನು ಲಾಡ್ಜ್‌ಗೆ ಕರೆದೊಯ್ದು ಕೃತ್ಯ ಎಸಗಿದ್ದಾರೆ.

ಪೋಷಕರ ದೂರು ಆಧರಿಸಿ ಬಾಲಕಿಯು ಸೆ.13ರಂದು ನಾಪತ್ತೆಯಾಗಿದ್ದಾಳೆ ಎಂದು ಪ್ರಕರಣ ದಾಖಲಿಸಲಾಗಿತ್ತು. ಈಗ ದೂರಿನಲ್ಲಿ ಅತ್ಯಾಚಾರ ಎಂದು ಪರಿಷ್ಕರಿಸಲಾಗಿದೆ. ವೈದ್ಯಕೀಯ ಪರೀಕ್ಷೆ ಬಳಿಕ ಬಾಲಕಿಯನ್ನು ಸಾಂತ್ವನ ಕೇಂದ್ರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಾಪ್ ಪವಾರ್ ಎಬಿಸಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಿಟ್ ಬ್ಯೂರೊ ಆಫ್ ಸರ್ಕ್ಯುಲೇಶನ್ (ಎಬಿಸಿ) ಸಂಸ್ಥೆಯ 2022–23ನೇ ಸಾಲಿನ ಅಧ್ಯಕ್ಷರಾಗಿ ಸಕಾಳ್ ಮೀಡಿಯಾ ಪ್ರೈ. ಲಿಮಿಟೆಡ್‌ನ ಮುಖ್ಯಸ್ಥರಾದ ಪ್ರತಾಪ್ ಪವಾರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಸಕಾಳ್ ಮೀಡಿಯಾ ಪ್ರೈ. ಲಿಮಿಟೆಡ್ ಮರಾಠಿ ದಿನಪತ್ರಿಕೆ ಸಕಾಳ್‌ನ ಪ್ರಕಾಶನ ಸಂಸ್ಥೆಯಾಗಿದೆ. ಪ್ರತಾಪ್ ಪವಾರ್ ಅವರು ಪುಣೆಯ ಎಂಸಿಸಿಐಎ ಅಧ್ಯಕ್ಷರಾಗಿ, ರಾಷ್ಟ್ರಮಟ್ಟದ ಮತ್ತು ಅಂತರರಾಷ್ಟ್ರೀಯ ಮಟ್ಟದ ಹಲವು ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪವಾರ್ ಅವರು ಪದ್ಮಶ್ರೀ ಗೌರವಕ್ಕೆ ಪಾತ್ರರಾಗಿದ್ದಾರೆ.

ಜಾಹೀರಾತು ಸಂಸ್ಥೆ ಆರ್‌ಕೆ ಸ್ವಾಮಿ ಪ್ರೈ.ಲಿಮಿಟೆಡ್‌ನ ಮುಖ್ಯಸ್ಥ ಮತ್ತು ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸನ್ ಕೆ. ಸ್ವಾಮಿ ಅವರು ಎಬಿಸಿಯ ಉಪಾಧ್ಯಕ್ಷರಾಗಿ, ಹೊರ್ಮುಜ್ದ್ ಮಸಾನಿ ಪ್ರಧಾನ ಕಾರ್ಯದರ್ಶಿಯಾಗಿ, ಮಲಯಾಳ ಮನೋರಮಾ ಕಂಪನಿ ಲಿಮಿಟೆಡ್‌ನ ರಿಯಾದ್ ಮ್ಯಾಥ್ಯೂ ಗೌರವ ಕಾರ್ಯದರ್ಶಿಯಾಗಿ ಮತ್ತು ಮ್ಯಾಡಿಸನ್ ಕಮ್ಯುನಿಕೇಷನ್ಸ್ ಪ್ರೈ. ಲಿಮಿಟೆಡ್‌ನ ವಿಕ್ರಂ ಸಖುಜಾ ಅವರು ಗೌರವ ಖಜಾಂಚಿಯಾಗಿ ಆಯ್ಕೆ ಆಗಿದ್ದಾರೆ.

ಎಬಿಸಿಯ ಆಡಳಿತ ಮಂಡಳಿ ಸದಸ್ಯರ ವಿವರ ಇಂತಿದೆ: ಪ್ರಕಾಶಕರ ಪ್ರತಿನಿಧಿಗಳಾಗಿ ದಿ ಬಾಂಬೆ ಸಮಾಚಾರ್ ಪ್ರೈ. ಲಿಮಿಟೆಡ್‌ನ ಹೊರ್ಮುಸ್‌ಜಿ ಎನ್.ಕಾಮಾ, ಜಾಗರಣ್ ಪ್ರಕಾಶನ್ ಲಿಮಿಟೆಡ್‌ನ ಶೈಲೇಶ್ ಗುಪ್ತಾ, ಎಚ್‌ಟಿ ಮೀಡಿಯಾ ಲಿಮಿಟೆಡ್‌ನ ಪ್ರವೀಣ್ ಸೋಮೇಶ್ವರ್, ಬೆನ್ನೆಟ್ ಕೋಲ್ಮನ್ ಅಂಡ್ ಕಂಪನಿ ಲಿಮಿಟೆಡ್‌ನ ಮೋಹಿತ್ ಜೈನ್, ಎಬಿಪಿ ಪ್ರೈ.ಲಿಮಿಟೆಡ್‌ನ ಧ್ರುವ ಮುಖರ್ಜಿ, ಲೋಕಮತ್ ಮೀಡಿಯಾ ಲಿಮಿಟೆಡ್‌ನ ಕರಣ್ ದಾರ್ಡ ಆಯ್ಕೆಯಾಗಿದ್ದಾರೆ.

ಜಾಹೀರಾತು ಸಂಸ್ಥೆಗಳ ಪ್ರತಿನಿಧಿಗಳಾಗಿ ಐಪಿಜಿ ಮೀಡಿಯಾ ಬ್ರ್ಯಾಂಡ್ಸ್–ಮೀಡಿಯಾ ಬ್ರ್ಯಾಂಡ್ಸ್ ಪ್ರೈ.ಲಿಮಿಟೆಡ್‌ನ ಶಶಿಧರ್ ಸಿನ್ಹಾ, ಗ್ರೂಪ್ ಎಂ ಮೀಡಿಯಾ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಪ್ರಶಾಂತ್ ಕುಮಾರ್ ಆಯ್ಕೆಯಾಗಿದ್ದಾರೆ. ಜಾಹೀರಾತುದಾರರ ಪ್ರತಿನಿಧಿಗಳಾಗಿ ಯುನೈಟೆಡ್ ಬ್ರೆವರೀಸ್ ಲಿಮಿಟೆಡ್‌ನ ದೇವವ್ರತ ಮುಖರ್ಜಿ, ಐಟಿಸಿ ಲಿಮಿಟೆಡ್‌ನ ಕರುಣೇಶ್ ಬಜಾಜ್, ಟಿವಿಎಸ್ ಮೋಟರ್ ಕಂಪನಿ ಲಿಮಿಟೆಡ್‌ನ ಅನಿರುದ್ಧ ಹಲ್ದಾರ್, ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್‌ನ ಶಶಾಂಕ್ ಶ್ರೀವಾಸ್ತವ ಆಯ್ಕೆಯಾಗಿದ್ದಾರೆ.



ವಿಶ್ವಕರ್ಮ ಪೂಜೆ

ಪಶ್ಚಿಮ ಬಂಗಾಳದ ನಾಡಿಯಾ ಜಿಲ್ಲೆಯಲ್ಲಿ ವಿಶ್ವಕರ್ಮ ಪೂಜೆಗೆ ನಡೆಯುತ್ತಿರುವ ಅಂತಿಮ ಹಂತದ ಸಿದ್ಧತೆ –ಪಿಟಿಐ ಚಿತ್ರ

ಅಸ್ಸಾಂ: ಬಾಲಕಿ ಮೇಲೆ ಅತ್ಯಾಚಾರ

ನಾಗಾನ್ (ಅಸ್ಸಾಂ) (ಪಿಟಿಐ): 16 ವರ್ಷದ ಬಾಲಕಿಯನ್ನು ಅಪಹರಿಸಿ ಎರಡು ದಿನಗಳವರೆಗೆ ಆರು ಜನರು ಸಾಮೂಹಿಕ ಅತ್ಯಾಚಾರ ಎಸಗಿರುವ ಪ್ರಕರಣ ನಾಗಾನ್ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ನಾಗಾನ್‌ನ ಬಿಪಿ ಸಿವಿಲ್ ಆಸ್ಪತ್ರೆಯಲ್ಲಿ ಬಾಲಕಿ ದಾಖಲಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ಈ ಕುರಿತು ನಾಗಾನ್ ಸಿವಿಲ್ ಆಸ್ಪತ್ರೆಯ ಪೊಲೀಸ್ ಹೊರಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ. 'ಶಾಲೆಯಿಂದ ಮನೆಗೆ ಹೊರಡಲು ಮಂಗಳವಾರ ರಿಕ್ಷಾಗಾಗಿ ಕಾಯುತ್ತಿದ್ದಾಗ ಕೆಲ ದುಷ್ಕರ್ಮಿಗಳು ನನ್ನನ್ನು ಅಪಹರಿಸಿದರು. ಬಾಯಿಗೆ ಬಟ್ಟೆ ತುರುಕಿ, ಕೈ ಮತ್ತು ಕಾಲುಗಳನ್ನು ಕಟ್ಟಿದ್ದರು. ಆರು ದುಷ್ಕರ್ಮಿಗಳು ಎರಡು ದಿನಗಳವರೆಗೆ ನನ್ನ ಮೇಲೆ ಪದೇ ಪದೇ ಅತ್ಯಾಚಾರ ಎಸಗಿದ್ದಾರೆ' ಎಂದು ಬಾಲಕಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾಳೆ.

ಮಡಿಕೆಯಲ್ಲಿದ್ದ ನೀರು ಕುಡಿದ ಪರಿಶಿಷ್ಟ ಜಾತಿಯ ವ್ಯಕ್ತಿಗೆ ಥಳಿತ

ಜೈಸಲ್ಮೇರ್ (ಪಿಟಿಐ): ಮೇಲ್ವರ್ಗದ ಜನರಿಗಾಗಿ ಇರಿಸಿದ್ದ ನೀರನ್ನು ಕುಡಿದರು ಎಂಬ ಕಾರಣಕ್ಕೆ ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಯೊಬ್ಬರನ್ನು ಕಬ್ಬಿಣದ ಸರಳಿನಿಂದ ಥಳಿಸಲಾಗಿದೆ ಎನ್ನಲಾದ ಘಟನೆಯು ರಾಜಸ್ಥಾನದ ಜೈಸಲ್ಮೇರ್ ಜಿಲ್ಲೆಯ ಗ್ರಾಮವೊಂದರಲ್ಲಿ ನಡೆದಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಘಟನೆಗೆ ಸಂಬಂಧಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ(ದೌರ್ಜನ್ಯ ತಡೆ) ಕಾಯ್ದೆ ಅಡಿ ನಾಲ್ವರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಸಂತ್ರಸ್ತ ಚತುರ ರಾಮ್ ಹೆಂಡತಿ ಜೊತೆ ದಿಗ್ಗಾ ಗ್ರಾಮಕ್ಕೆ ಮಂಗಳವಾರ ಸಂಜೆ ತೆರಳುತ್ತಿದ್ದರು. ಮಾರ್ಗ ಮಧ್ಯೆ, ದಿನಸಿ ಅಂಗಡಿಯೊಂದರ ಮುಂದೆ ಇರಿಸಲಾಗಿದ್ದ ಮಡಿಕೆಯಲ್ಲಿದ್ದ ನೀರು ಕುಡಿದರು. ಇದರಿಂದ ಕುಪಿತರಾದ ಸುಮಾರು ಐದು ಜನರು ರಾಮ್ ಅವರನ್ನು ನಿಂದಿಸಿದರು ಮತ್ತು ಕಬ್ಬಿಣದ ಸರಳಗಳು, ಕೋಲುಗಳಿಂದ ಅವರನ್ನು ಥಳಿಸಿದರು. ರಾಮ್ ಅವರ ಒಂದು ಕಿವಿಯ ಹಿಂಭಾಗಕ್ಕೆ ಮತ್ತು ದೇಹದ ಇತರ ಭಾಗಗಳಿಗೆ ಪೆಟ್ಟು ಬಿದ್ದಿದೆ. ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು, ಅಲ್ಲದೆ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಆರೋಪಿಗಳು ಗುಂಡು ಹಾರಿಸಿದ್ದಾಗಿಯೂ ರಾಮ್ ಹೇಳಿದ್ದಾರೆ. ಆದರೆ ಈ ಕುರಿತು ಇನ್ನಷ್ಟೇ ಪರಿಶೀಲನೆ ನಡೆಸಬೇಕಿದೆ ಎಂದು ಪೊಲೀಸರು ಹೇಳಿದ್ದಾರೆ.

ಅಬಕಾರಿ ನೀತಿ: ಮತ್ತೊಂದು ವಿಡಿಯೊ ಬಿಡುಗಡೆ

'ಭ್ರಷ್ಟಾಚಾರದ ಹಣ: ಎಎಪಿ ಚುನಾವಣಾ ಪ್ರಚಾರ'

ನವದೆಹಲಿ (ಪಿಟಿಐ): 'ದೆಹಲಿಯ ಆಮ್ ಆದ್ಮಿ ಪಕ್ಷದ (ಎಎಪಿ) ಸರ್ಕಾರವು ಆಯ್ದ ಕೆಲವರಿಗೆ ನೆರವಾಗಲು ಅಬಕಾರಿ ನೀತಿಯನ್ನು ರೂಪಿಸಿದ್ದು, ಇಲ್ಲಿ ಭ್ರಷ್ಟಾಚಾರದದಿಂದ ಗಳಿಸಿದ ಹಣವನ್ನು ಗೋವಾ ಹಾಗೂ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಪ್ರಚಾರಕ್ಕೆ ಬಳಸಿಕೊಂಡಿದೆ' ಎಂದು ಬಿಜೆಪಿ ಗುರುವಾರ ಗಂಭೀರ ಆರೋಪ ಮಾಡಿದೆ. ಅಬಕಾರಿ ನೀತಿಯಲ್ಲಿ ಭ್ರಷ್ಟಾಚಾರ ನಡೆದಿರುವುದನ್ನು ಪುಷ್ಟೀಕರಿಸುತ್ತದೆ ಎನ್ನಲಾದ ರಹಸ್ಯ ಕಾರ್ಯಾಚರಣೆ ವಿಡಿಯೊವನ್ನು ಬಿಡುಗಡೆ ಮಾಡಿದೆ.

'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಸರ್ಕಾರವು ಅಬಕಾರಿ ನೀತಿಯಿಂದ ಸಣ್ಣ ಉದ್ದಿಮೆದಾರರನ್ನು ಉದ್ದೇಶಪೂರ್ವಕವಾಗಿ ಹೊರಗಿಟ್ಟಿದೆ. ಈ ಮೂಲಕ ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಸಾಧಿಸಿರುವ ಕೆಲವೇ ವ್ಯಕ್ತಿಗಳಿಗೆ ನೆರವು ನೀಡಿದೆ' ಎಂದು ವಿಡಿಯೊದಲ್ಲಿ ಕಾಣಿಸಿಕೊಂಡಿರುವ ವ್ಯಕ್ತಿಯೊಬ್ಬರು ಹೇಳಿದ್ದಾರೆ ಎಂದು ಬಿಜೆಪಿ ತಿಳಿಸಿದೆ.

ಅಬಕಾರಿ ನೀತಿಯಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತಂತೆ ಸಿಬಿಐ ಆರಂಭಿಸಿರುವ ತನಿಖೆಯಲ್ಲಿ ಆರೋಪಿಯಾಗಿರುವ ವ್ಯಕ್ತಿ ಈ ವಿಡಿಯೊದಲ್ಲಿ ಮಾತನಾಡಿದ್ದಾರೆ ಎಂದು ಬಿಜೆಪಿ ಹೇಳಿದೆ. ಅಬಕಾರಿ ನೀತಿ ಕುರಿತಂತೆ ಇದು ಬಿಜೆಪಿ ಬಿಡುಗಡೆ ಮಾಡಿರುವ ಎರಡನೇ ರಹಸ್ಯ ಕಾರ್ಯಾಚರಣೆ ವಿಡಿಯೊ ಆಗಿದೆ. 'ದೆಹಲಿಯಲ್ಲಿ ಮದ್ಯದ ಪರವಾನಗಿ ಪಡೆಯಲು ಕಮಿಷನ್ ನೀಡಿದ್ದೇವೆ' ಎಂಬುದಾಗಿ ಪ್ರಕರಣದ ಆರೋಪಿಯೊಬ್ಬರ ತಂದೆಯು ಮಾತನಾಡಿದ್ದಾರೆ ಎನ್ನಲಾದ ಮೊದಲ ವಿಡಿಯೊವನ್ನು ಬಿಜೆಪಿ ಸೆ.5ರಂದು ಬಿಡುಗಡೆ ಮಾಡಿತ್ತು.

> ರಹಸ್ಯ ಕಾರ್ಯಾಚರಣೆ ವಿಡಿಯೊವನ್ನು ಬಿಜೆಪಿ ಮಾಡಿಲ್ಲ. ಸಾರ್ವಜನಿಕ ವೇದಿಕೆಯಲ್ಲಿ ಈಗಾಗಲೇ ಇರುವ ವಿಡಿಯೊವನ್ನು ಪಕ್ಷ ಹಂಚಿಕೊಂಡಿದೆ
> **ಸುಧಾಂಶು ತ್ರಿವೇದಿ,** ಬಿಜೆಪಿ ವಕ್ತಾರ

'ಅಬಕಾರಿ ಮಾರುಕಟ್ಟೆಯಲ್ಲಿ ಹಣದ ವಹಿವಾಟು ಕೆಲವೇ ವ್ಯಕ್ತಿಗಳ ನಿಯಂತ್ರಣದಲ್ಲಿ ಇರಬೇಕು ಎಂಬುದು ಎಎಪಿ ಉದ್ದೇಶವಾಗಿತ್ತು' ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಅವರು ಆರೋಪಿಸಿದ್ದಾರೆ. 'ಏಳೆಂಟು ವರ್ಷಗಳಲ್ಲಿ ಎಎಪಿ ಸರ್ಕಾರ ಮಾಡಿರುವಷ್ಟು ಅಧಿಕಾರ ದುರುಪಯೋಗವನ್ನು ಬೇರಾವುದೇ ಪಕ್ಷಗಳು ಮಾಡಿಲ್ಲ. ಆದರೆ, ಅಕ್ರಮವಾಗಿ ಹಣ ಕೇಳಿದವರ ವಿಡಿಯೊ ಮಾಡಿದರೆ ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಕೇಜ್ರಿವಾಲ್ ಅವರು ಜನರಿಗೆ ಹೇಳಿದ್ದರು' ಎಂಬುದನ್ನು ತ್ರಿವೇದಿ ನೆನಪಿಸಿದ್ದಾರೆ.

ಭ್ರಷ್ಟಾಚಾರಕ್ಕಾಗಿಯೇ ಈ ಯೋಜನೆಯನ್ನು ರೂಪಿಸಲಾಗಿದೆ ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ಅದೇಶ್ ಗುಪ್ತಾ ಆರೋಪಿಸಿದ್ದಾರೆ. ಕೇಜ್ರಿವಾಲ್ ಅವರು ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯಲು ನೈತಿಕತೆ ಇಲ್ಲ ಎಂದು ಪಕ್ಷದ ಮುಖಂಡ ಮಂಜಿಂದರ್ ಸಿಂಗ್ ಸಿರ್ಸಾ ಹೇಳಿದ್ದಾರೆ.

ಕೇಜ್ರಿವಾಲ್‌ಗೆ ಆಟೊರಿಕ್ಷಾ ಉಡುಗೊರೆ: ಕಳೆದವಾರ ಗುಜರಾತ್ ಭೇಟಿ ವೇಳೆ ಆಟೊರಿಕ್ಷಾದಲ್ಲಿ ಸಂಚರಿಸಿದ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ದೆಹಲಿಯ ಬಿಜೆಪಿ ಘಟಕವು ಐದು ಆಟೊರಿಕ್ಷಾಗಳನ್ನು ಗುರುವಾರ ಉಡುಗೊರೆಯಾಗಿ ನೀಡಿದೆ.

'27 ಬೆಂಗಾವಲು ವಾಹನಗಳು, 200 ಮಂದಿ ಭದ್ರತಾ ಸಿಬ್ಬಂದಿ ಇದ್ದರೂ, ಕೇಜ್ರಿವಾಲ್ ಅವರು ಆಟೊರಿಕ್ಷಾದಲ್ಲಿ ಸಂಚರಿಸುವ ನಾಟಕ ಆಡುತ್ತಾರೆ. ಆಟೊರಿಕ್ಷಾದಲ್ಲಿ ಸಂಚರಿಸುವ ಅವರ ಬಯಕೆಯನ್ನು ಈಡೇರಿಸುತ್ತಿದ್ದೇವೆ. ದೆಹಲಿಯಲ್ಲಿ ಓಡಾಡಲು ಅವರಿಗೆ ಐದು ರಿಕ್ಷಾಗಳನ್ನು ಉಡುಗೊರೆಯಾಗಿ ನೀಡಿದ್ದೇವೆ' ಎಂದು ದೆಹಲಿ ವಿಧಾನಸಭೆ ವಿರೋಧಪಕ್ಷದ ನಾಯಕ ರಾಮ್‌ವೀರ್ ಸಿಂಗ್ ಬಿಧುರಿ ಅವರು ಹೇಳಿದ್ದಾರೆ.

ಧೈರ್ಯವಿದ್ದರೆ 4 ದಿನದಲ್ಲಿ ಬಂಧಿಸಿ: ಸಿಸೋಡಿಯಾ ಸವಾಲು



ಧೈರ್ಯವಿದ್ದರೆ ತಮ್ಮನ್ನು ನಾಲ್ಕು ದಿನಗಳಲ್ಲಿ ಬಂಧಿಸುವಂತೆ ದೆಹಲಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ಬಿಜೆಪಿಗೆ ಸವಾಲು ಹಾಕಿದ್ದಾರೆ. ರಹಸ್ಯ ಕಾರ್ಯಾಚರಣೆಯದ್ದು ಎಂದು ಹೇಳಲಾದ ವಿಡಿಯೊವನ್ನು ಸಿಬಿಐಗೆ ನೀಡುವಂತೆಯೂ ಅವರು ಆಗ್ರಹಿಸಿದ್ದಾರೆ.

'ಒಂದು ವೇಳೆ ಸಿಬಿಐ ನನ್ನನ್ನು ನಾಲ್ಕು ದಿನದೊಳಗೆ ಬಂಧಿಸದಿದ್ದಲ್ಲಿ, ರಹಸ್ಯ ಕಾರ್ಯಾಚರಣೆಯ ವಿಡಿಯೊ ಮತ್ತೊಂದು ಸುಳ್ಳು ಎಂದೂ, ದೆಹಲಿ ಸರ್ಕಾರವನ್ನು ಕೆಡವಲು ಬಿಜೆಪಿ ಕಚೇರಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ರೂಪಿಸಿರುವ ಸಂಚಿನ ಭಾಗ ಎಂಬುದು ಸಾಬೀತಾಗುತ್ತದೆ' ಎಂದು ಸಿಸೋಡಿಯಾ ಹೇಳಿದ್ದಾರೆ.

ಸೋಮವಾರದೊಳಗೆ ಸಿಬಿಐ ಬಂಧಿಸದಿದ್ದರೆ, ಸರ್ಕಾರ ಉರುಳಿಸುವ ಸಂಚು ರೂಪಿಸಲು ಪ್ರಧಾನಿ ಕಚೇರಿಯನ್ನು ಬಳಸಿಕೊಂಡಿದ್ದು ತಪ್ಪು ಎಂದು ಮೋದಿ ಅವರು ಕ್ಷಮೆ ಕೇಳಬೇಕು ಎಂದೂ ಅವರು ಆಗ್ರಹಿಸದ್ದಾರೆ.

ಸಿಸೋಡಿಯಾ ಬೆಂಬಲಕ್ಕೆ ನಿಂತಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, 'ಸತ್ಯ ಹಾಗೂ ಧೈರ್ಯ ಉಳ್ಳವರು ಮಾತ್ರ ಇಂತಹ ಸವಾಲು ಎಸೆಯಬಲ್ಲರು' ಎಂದು ಹೇಳಿದ್ದಾರೆ. ಸಿಸೋಡಿಯಾ ಅವರ ಸವಾಲನ್ನು ಬಿಜೆಪಿ ಒಪ್ಪಿಕೊಳ್ಳುವ ವಿಶ್ವಾಸವಿದೆ ಎಂದು ಅವರು ಹೇಳಿದ್ದಾರೆ.

ಬಿಜೆಪಿ ಸೇರಲು ಕಾಂಗ್ರೆಸ್ ಶಾಸಕರಿಗೆ ₹40 ಕೋಟಿ: ದಿನೇಶ್ ಆರೋಪ

ಪ್ರಜಾವಾಣಿ ವಾರ್ತೆ

ಪಣಜಿ: 'ಬಿಜೆಪಿ ಸೇರಲು ಗೋವಾ ಕಾಂಗ್ರೆಸ್‌ನ ಶಾಸಕರಿಗೆ ತಲಾ ₹30 ರಿಂದ ₹40 ಕೋಟಿ ನೀಡಲಾಗಿದೆ' ಎಂದು ಗೋವಾ ಕಾಂಗ್ರೆಸ್ ಉಸ್ತುವಾರಿ ದಿನೇಶ್ ಗುಂಡೂರಾವ್ ಆರೋಪಿಸಿದ್ದಾರೆ.

ಗೋವಾ ಕಾಂಗ್ರೆಸ್‌ನ 11 ಶಾಸಕರಲ್ಲಿ ಎಂಟು ಶಾಸಕರು ಬುಧವಾರ ಬಿಜೆಪಿ ಸೇರಿದ್ದರು. ಕಾಂಗ್ರೆಸ್ ಅನ್ನು ಬಿಜೆಪಿ ಜತೆ ವಿಲೀನ ಮಾಡುವ ಸಂಬಂಧ ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗಿತ್ತು. ಕಾಂಗ್ರೆಸ್ ಶಾಸಕಾಂಗ ಪಕ್ಷವನ್ನು ಬಿಜೆಪಿ ಜತೆ ವಿಲೀನ ಮಾಡುವ ಸಂಬಂಧ ನೀಡಲಾಗಿದ್ದ ಮನವಿ ಪತ್ರವನ್ನು ಗೋವಾ ವಿಧಾನಸಭಾ ಸ್ಪೀಕರ್ ಗುರುವಾರ ಮಾನ್ಯ ಮಾಡಿದ್ದಾರೆ. ಇದೇ ವೇಳೆ ರಾಜ್ಯ ಕಾಂಗ್ರೆಸ್‌ನಲ್ಲಿನ ಬೆಳವಣಿಗೆ ಮತ್ತು ಸ್ಥಿತಿಯನ್ನು ಪರಿಶೀಲಿಸಲು ದಿನೇಶ್ ಗುಂಡೂರಾವ್ ಅವರು ಇಲ್ಲಿಗೆ ಬಂದಿದ್ದಾರೆ.

'ಆ ಎಂಟು ಶಾಸಕರು ಗೋವಾದ ಅಭಿವೃದ್ಧಿಗಾಗಿ ಬಿಜೆಪಿಗೆ ಹೋಗಿಲ್ಲ. ಅವರು ಅಧಿಕಾರ ಮತ್ತು ಹಣಕ್ಕಾಗಿ ಈ ಕೆಲಸ ಮಾಡಿದ್ದಾರೆ. ಅವರು ಮಾಡಿರಬಹುದಾದ ತಪ್ಪಿಗಾಗಿ ಕೇಂದ್ರದ ತನಿಖಾ ಸಂಸ್ಥೆಗಳನ್ನು ಬಿಟ್ಟು ಬೆದರಿಸಲಾಗಿದೆ ಮತ್ತು ಎಲ್ಲರಿಗೂ ₹30 ಕೋಟಿಯಿಂದ ₹40 ಕೋಟಿ ನೀಡಲಾಗಿದೆ. ಕೆಲವರಿಗೆ ಸಚಿವ ಸ್ಥಾನವನ್ನೂ ನೀಡಲಾಗುತ್ತದೆ' ಎಂದು ಅವರು ಆರೋಪಿಸಿದ್ದಾರೆ.

> ಬಿಜೆಪಿ ಸೇರಲು ಒಪ್ಪದ ನಮ್ಮ ಒಬ್ಬ ಶಾಸಕರಿಗೆ ₹50 ಕೋಟಿ ಮತ್ತು ಸಚಿವ ಸ್ಥಾನದ ಆಮಿಷ ಒಡ್ಡಲಾಗಿತ್ತು. ಆದರೂ ಅವರು ಕಾಂಗ್ರೆಸ್‌ನಲ್ಲೇ ಉಳಿದಿದ್ದಾರೆ
> **ದಿನೇಶ್ ಗುಂಡೂರಾವ್**
> ಗೋವಾ ಕಾಂಗ್ರೆಸ್ ಉಸ್ತುವಾರಿ

'ಹೈಕಮಾಂಡ್ ನಿರ್ಧಾರ': ಬಿಜೆಪಿ ಹೈಕಮಾಂಡ್ ಸಮ್ಮತಿಯ ಮೂಲಕವೇ ಕಾಂಗ್ರೆಸ್‌ನ ಎಂಟು ಶಾಸಕರು ಬಿಜೆಪಿ ಸೇರಿದ್ದಾರೆ ಎಂದು ಗೋವಾ ಬಿಜೆಪಿ ಘಟಕದ ಅಧ್ಯಕ್ಷ ಸದಾನಂದ ಶೇಟ್ ತಾನಾವಡೆ ಹೇಳಿದ್ದಾರೆ.

'ಅನರ್ಹಗೊಳಿಸಲು ಶಿಫಾರಸು: ಮಾಹಿತಿ ಬಹಿರಂಗಪಡಿಸಿ'

ರಾಂಚಿ (ಪಿಟಿಐ): 'ಚುನಾವಣಾ ಆಯೋಗವು ನನ್ನನ್ನು ಅನರ್ಹಗೊಳಿಸಲು ಶಿಫಾರಸು ಮಾಡಿದೆಯೇ ಇಲ್ಲವೇ ಎನ್ನುವುದನ್ನು ಸ್ಪಷ್ಟಪಡಿಸಿ' ಎಂದು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ರಾಜ್ಯಪಾಲ ರಮೇಶ್ ಬೈಸ್ ಅವರನ್ನು ಆಗ್ರಹಿಸಿದ್ದಾರೆ.

ರಾಜ್ಯಪಾಲರನ್ನು ಗುರುವಾರ ಭೇಟಿ ಮಾಡಿ, ಮನವಿ ಪತ್ರ ನೀಡಿದ ಸೊರೇನ್, 'ಶಾಸಕರನ್ನು ಖರೀದಿಸಲು, ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿಯು ಈ 'ಅನಿಶ್ಚಿತ ವಾತಾವರಣ'ವನ್ನು ಬಳಸಿಕೊಳ್ಳುತ್ತಿದೆ' ಎಂದೂ ಆರೋಪಿಸಿದ್ದಾರೆ.

'ಚುನಾವಣಾ ಆಯೋಗ ಏನು ಹೇಳಿದೆ ಎನ್ನುವ ಪತ್ರವನ್ನು ಬಹಿರಂಗಪಡಿಸಿ. ಈ ಕುರಿತು ಆದಷ್ಟು ಬೇಗ ಸೂಕ್ತ ವಿಚಾರಣೆ ನಡೆದು, ಈ 'ಅನಿಶ್ಚಿತ ವಾತಾವರಣ'ವನ್ನು ಅಂತ್ಯಗೊಳಿಸಿ. ಆರೋಗ್ಯಕರ ಪ್ರಜಾಪ್ರಭುತ್ವಕ್ಕೆ ಇಂಥ ವಾತಾವರಣ ಮಾರಕವಾಗಲಿದೆ' ಎಂದಿದ್ದಾರೆ.

'ಸರ್ಕಾರ ಬದಲಾದರೆ ಹಿಂದುಳಿದ ರಾಜ್ಯಗಳಿಗೆ ವಿಶೇಷ ಸ್ಥಾನಮಾನ'

ಪಟ್ನಾ (ಪಿಟಿಐ): ಕೇಂದ್ರದಲ್ಲಿ ಬಿಜೆಪಿಯೇತರ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದರೆ ತಮ್ಮ ರಾಜ್ಯವೂ ಸೇರಿ ಹಿಂದುಳಿದ ಎಲ್ಲ ರಾಜ್ಯಗಳಿಗೆ ವಿಶೇಷ ಸ್ಥಾನಮಾನ ನೀಡುವಂತೆ ಒತ್ತಾಯಿಸುವುದಾಗಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಗುರುವಾರ ಭರವಸೆ ನೀಡಿದ್ದಾರೆ.

ಕಳೆದ ತಿಂಗಳು ಬಿಜೆಪಿ ಜತೆಗಿನ ಮೈತ್ರಿ ಕಡಿದುಕೊಂಡ ಜೆಡಿಯು ನಾಯಕ ಕುಮಾರ್, ಸಮಾರಂಭವೊಂದರಲ್ಲಿ ಭಾಗವಹಿಸಿದ ಬಳಿಕ ಪತ್ರಕರ್ತರ ಪ್ರಶ್ನೆಗೆ ಈ ರೀತಿ ಉತ್ತರಿಸಿದ್ದಾರೆ.

'ಒಂದು ವೇಳೆ ಕೇಂದ್ರದಲ್ಲಿ ಸರ್ಕಾರ ನಡೆಸುವ ಅವಕಾಶ ನಮಗೆ ಸಿಕ್ಕಿದರೆ, ಹಿಂದುಳಿದ ಎಲ್ಲ ರಾಜ್ಯಗಳು ಖಂಡಿತವಾಗಿಯೂ ವಿಶೇಷ ವರ್ಗದ ಸ್ಥಾನಮಾನ ಪಡೆಯಲಿವೆ' ಎಂದು ಅವರು ಹೇಳಿದರು.

ಎನ್‌ಡಿಎ ಮೈತ್ರಿಯಿಂದ ಹೊರ ಬಂದ ನಂತರ ಬಿಹಾರದಲ್ಲಿ ಆರ್‌ಜೆಡಿ, ಕಾಂಗ್ರೆಸ್ ಹಾಗೂ ಎಡಪಕ್ಷಗಳು ಸೇರಿ ಏಳು ಪಕ್ಷಗಳ ಮಹಾಮೈತ್ರಿ ಸರ್ಕಾರವನ್ನು ಜೆಡಿಯು ನಾಯಕ ನಿತೀಶ್ ಕುಮಾರ್ ಅವರು ಮುನ್ನಡೆಸುತ್ತಿದ್ದಾರೆ.

ಎಐಸಿಸಿ ಅಧ್ಯಕ್ಷ ಚುನಾವಣೆ 9,000ಕ್ಕೂ ಹೆಚ್ಚು ಮತದಾರರು

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆಯು ಮುಕ್ತವಾಗಿದ್ದು, ಇದರಲ್ಲಿ ಗೋಪ್ಯವಾಗಿ ಇಡುವಂತಹದು ಏನೂ ಇಲ್ಲ ಎಂದು ಪಕ್ಷದ ಕೇಂದ್ರ ಚುನಾವಣಾ ಪ್ರಾಧಿಕಾರದ ಅಧ್ಯಕ್ಷ, ಹಿರಿಯ ನಾಯಕ ಮಧುಸೂದನ್ ಮಿಸ್ತ್ರಿ ಹೇಳಿದರು.

ರಾಜ್ಯ ಘಟಕಗಳಿಗೆ ಅಧ್ಯಕ್ಷರ ನೇಮಕ ಮತ್ತು ಎಐಸಿಸಿಗೆ ಆಹ್ವಾನಿತರನ್ನು ನೇಮಿಸುವುದನ್ನು ಅಧ್ಯಕ್ಷರ ವಿವೇಚನೆಗೆ ಬಿಡುವ ಕುರಿತು ಪ್ರದೇಶ ಕಾಂಗ್ರೆಸ್ ಸಮಿತಿಗಳು ನಿರ್ಣಯ ಕೈಗೊಳ್ಳಲಿವೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರು ಅಥವಾ ರಾಜ್ಯಗಳಿಂದ ಎಐಸಿಸಿಗೆ 10 ಮಂದಿ ಆಹ್ವಾನಿತರನ್ನು ಆಯ್ಕೆ ಮಾಡಲು ಬಯಸುವವರು ಮತದಾರರ ಕುರಿತ ಮಾಹಿತಿಗೆ ಪ್ರಾಧಿಕಾರ ಪ್ರಕಟಿಸಿರುವ ಪಟ್ಟಿಯನ್ನು ಗಮನಿಸಬಹುದಾಗಿದೆ' ಎಂದು ತಿಳಿಸಿದರು.

9000ಕ್ಕೂ ಅಧಿಕ ಮತದಾರರಿಗೆ ಕ್ಯೂಆರ್ ಕೋಡ್ ಒಳಗೊಂಡ ಗುರುತಿನ ಚೀಟಿಯನ್ನು ಈಗಾಗಲೇ ನೀಡಲಾಗಿದೆ. ಎಲ್ಲ ಮತದಾರರ ಪಟ್ಟಿಯನ್ನು ಎಐಸಿಸಿ ಮುಖ್ಯ ಕಚೇರಿಯಲ್ಲಿಯೂ ಸೆ.20ರಂದು ಪ್ರಕಟಿಸಲಾಗುವುದು ಎಂದು ತಿಳಿಸಿದರು.

'ಚುನಾವಣೆ ಸಿದ್ಧತೆ ಕುರಿತು ರಾಜ್ಯಗಳಲ್ಲಿನ ಪಕ್ಷದ ಚುನಾವಣಾಧಿಕಾರಿಗಳ ಜೊತೆ ಚರ್ಚೆ ನಡೆಸಿದ್ದು, ಪರಿಸ್ಥಿತಿ ಅವಲೋಕಿಸಲಾಗಿದೆ' ಎಂದರು.

ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿಯ 23 ಸದಸ್ಯರ ಪೈಕಿ 12 ಜನರು ಚುನಾಯಿತರಾದರೆ, 11 ಮಂದಿ ನಾಮ ನಿರ್ದೇಶನಗೊಳ್ಳುತ್ತಾರೆ. 12ಕ್ಕೂ ಹೆಚ್ಚು ಮಂದಿ ಸ್ಪರ್ಧೆಯಲ್ಲಿದ್ದರೆ ಚುನಾವಣೆ ನಡೆಯಬೇಕಾಗುತ್ತದೆ ಎಂದರು. ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಚುನಾವಣೆ ಕುರಿತಂತೆ ಸೆಪ್ಟೆಂಬರ್ 22ರಂದು ಅಧಿಸೂಚನೆ ಹೊರಬೀಳಲಿದೆ.

ಸಂಕ್ಷಿಪ್ತ ಸುದ್ದಿ

ಜಾರ್ಖಂಡ್: ಶೇ 77ರಷ್ಟು ಮೀಸಲಾತಿಗೆ ಸಂಪುಟ ಅಸ್ತು

ರಾಂಚಿ (ಪಿಟಿಐ): ಪರಿಶಿಷ್ಟ ಜಾತಿ, ಪಂಗಡ, ಇತರ ಹಿಂದುಳಿದ ವರ್ಗ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಶೇ 77ರಷ್ಟು ಮೀಸಲಾತಿ ನೀಡುವ ಪ್ರಸ್ತಾವಕ್ಕೆ ಜಾರ್ಖಂಡ್ ಸರ್ಕಾರ ಒಪ್ಪಿಗೆ ನೀಡಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಖಾಲಿ ಇರುವ ಹುದ್ದೆಗಳ ಭರ್ತಿ ಮತ್ತು ಸೇವಾ ಕಾಯ್ದೆ 2001ಕ್ಕೆ ತಿದ್ದುಪಡಿ ತಂದು ಶೇ 77ರಷ್ಟು ಮೀಸಲಾತಿ ನೀಡುವ ಮಸೂದೆಗೆ ಮುಖ್ಯಮಂತ್ರಿ ಹೇಮಂತ್ ಸೊರೇನ್ ನೇತೃತ್ವದಲ್ಲಿ ಬುಧವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಅಲ್ಲದೆ ಇದನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲು ಸಂಪುಟ ನಿರ್ಧರಿಸಿದೆ' ಸಂಪುಟ ಕಾರ್ಯದರ್ಶಿ ವಂದನಾ ದಾಡೇಲ್ ತಿಳಿಸಿದ್ದಾರೆ.

ಹೊಸ ಮೀಸಲಾತಿ ಪ್ರಸ್ತಾವನೆ ಪ್ರಕಾರ ಪರಿಶಿಷ್ಟ ಜಾತಿಯವರು ಶೇ 12ರಷ್ಟು, ಪರಿಶಿಷ್ಟ ವರ್ಗದವರು ಶೇ 28, ಅತ್ಯಂತ ಹಿಂದುಳಿದ ವರ್ಗದವರು ಶೇ 15, ಒಬಿಸಿ ಶೇ 12 ಮತ್ತು ಆರ್ಥಿಕವಾಗಿ ಹಿಂದುಳಿದರು ಶೇ 10ರಷ್ಟು ಮೀಸಲಾತಿ ಪಡೆಯಲಿದ್ದಾರೆ.

ಇಬ್ಬರು ಉಗ್ರರ ಬಂಧನ

ಜಮ್ಮು (ಪಿಟಿಐ): ಸಭ್ಯರ ಸೋಗಿನಲ್ಲಿದ್ದ ಇಬ್ಬರು ಭಯೋತ್ಪಾದಕರನ್ನು (ಹೈಬ್ರಿಡ್ ಟೆರರಿಸ್ಟ್) ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿ ಬಂಧಿಸಿರುವ ಭದ್ರತಾ ಪಡೆಗಳು, ಸಂಭವನೀಯ ದಾಳಿಯ ಕೃತ್ಯವನ್ನು ವಿಫಲಗೊಳಿಸಿವೆ.


ಜಾಫರ್ ಇಕ್ಬಾಲ್ ಮತ್ತು ಬಲ್ ಅಂಗ್ರಲಾ ಬಂಧಿತರು. ಜಾಫರ್ ಎಂಬಾತ, ಈ ಹಿಂದೆ ಗುಂಡಿನ ಚಕಮಕಿಯಲ್ಲಿ ಮೃತಪಟ್ಟಿದ್ದ ಲಷ್ಕರ್ ಎ ತೊಯಬಾ ಸಂಘಟನೆಯ ಉಗ್ರ ಮೊಹಮ್ಮದ್ ಇಶಾಕ್‌ನ ಸಹೋದರ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತರಿಂದ ಅಡಗುತಾಣದಲ್ಲಿ ಇರಿಸಿದ್ದ ವಿವಿಧ ಶಸ್ತ್ರಾಸ್ತ್ರಗಳು, ಸ್ಫೋಟಕಗಳು ಹಾಗೂ ₹1.81 ಲಕ್ಷ ನಗದು ಜಪ್ತಿ ಮಾಡಲಾಗಿದೆ. ಯೋಜಿತ ದಾಳಿಯಲ್ಲಿ ಭಾಗಿಯಾಗಿ, ಸುಳಿವು ಬಿಟ್ಟುಕೊಡದೇ ಸಭ್ಯರ ಸೋಗಿನಲ್ಲಿ ಸಮಾಜದಲ್ಲಿ ಬದುಕುವುದು ಇವರ ಕಾರ್ಯಶೈಲಿ.

ಜಾಫರ್ ಇಕ್ಬಾಲ್ ಎಂಬಾತ ಪಾಕಿಸ್ತಾನದ ಸಂಘಟನೆಯ ಜೊತೆಗೆ ಸಂಪರ್ಕದಲ್ಲಿದ್ದಾನೆ ಎಂಬ ಮಾಹಿತಿ ಆಧರಿಸಿ ಮಹೋರ್ ಠಾಣೆ ಪೊಲೀಸರು, ಭದ್ರತಾ ಸಿಬ್ಬಂದಿಯ ಜೊತೆಗೂಡಿ ಜಂಟಿ ಕಾರ್ಯಾಚರಣೆ ನಡೆಸಿದ್ದರು.

ಪ್ಲಾಸು ನಲ್ಲಾದಲ್ಲಿ ಇಕ್ಬಾಲ್‌ನನ್ನು ಬಂಧಿಸಲಾಯಿತು. ಆತ ನೀಡಿದ ಮಾಹಿತಿ ಆಧರಿಸಿ ಎರಡು ಪಿಸ್ತೂಲು, ನಾಲ್ಕು ಮ್ಯಾಗಜೀನ್, 22 ಶಸ್ತ್ರಾಸ್ತ್ರಗಳು, ಒಂದು ಗ್ರೆನೈಡ್ ಅನ್ನೂ ಜಪ್ತಿ ಮಾಡಲಾಯಿತು ಎಂದು ರಿಯಾಸಿ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಗುಪ್ತಾ ಅವರು ಹೇಳಿದರು

'ನಗ್ನ' ಚಿತ್ರ ತಿರುಚಲಾಗಿದೆ: ರಣವೀರ್



ಮುಂಬೈ (ಪಿಟಿಐ): 'ಸಾಮಾಜಿಕ ಜಾಲತಾಣದಲ್ಲಿ ನಾನು ಹಂಚಿಕೊಂಡ ನನ್ನ 'ನಗ್ನ' ಚಿತ್ರಗಳಲ್ಲಿ ಒಂದು ಚಿತ್ರವನ್ನು ತಿರುಚಲಾಗಿದೆ' ಎಂದು ನಟ ರಣವೀರ್ ಸಿಂಗ್ ಗುರುವಾರ ಮುಂಬೈ ಪೊಲೀಸರಿಗೆ ತಿಳಿಸಿದ್ದಾರೆ.

ಆಗಸ್ಟ್ 29ರಂದು ರಣವೀರ್ ಸಿಂಗ್ ತಮ್ಮ ವಿರುದ್ಧದ ದೂರಿನ ವಿಚಾರಣೆಗೆ ಹಾಜರಾಗಿದ್ದರು.

'ನನ್ನ ಖಾಸಗಿ ಅಂಗಗಳು ಕಾಣುತ್ತಿರುವ ಚಿತ್ರವನ್ನು ನಾನು ಅಪ್‌ಲೋಡ್ ಮಾಡಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ನಾನು ಹಂಚಿಕೊಂಡ ಚಿತ್ರದಲ್ಲಿ ನಾನು ಒಳಉಡುಪು ಧರಿಸಿದ್ದೆ ಎಂದು ರಣವೀರ್ ಸಿಂಗ್ ಹೇಳಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಚಿತ್ರವನ್ನು ತಿರುಚಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಆ ಚಿತ್ರವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ನಗ್ನ' ಚಿತ್ರಗಳನ್ನು ಹಂಚಿಕೊಳ್ಳುವ ಮೂಲಕ ರಣವೀರ್ ಸಿಂಗ್ ಅವರು, ಮಹಿಳೆಯ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ ಹಾಗೂ ಮಹಿಳೆಯರ ಘನತೆಗೆ ಕುಂದುಂಟು ಮಾಡಿದ್ದಾರೆ ಎಂದು ಸರ್ಕಾರೇತರ ಸಂಸ್ಥೆಯೊಂದು ರಣವೀರ್ ಸಿಂಗ್ ವಿರುದ್ಧ ದೂರು ನೀಡಿತ್ತು. ಈ ದೂರಿನ ಅನ್ವಯ ಪೊಲೀಸರು ಜುಲೈನಲ್ಲಿ ಎಫ್‌ಐಆರ್ ದಾಖಲು ಮಾಡಿದ್ದರು.

ನೇಮಕಾತಿ ಹಗರಣ: ಆಯೋಗದ ಮಾಜಿ ಅಧ್ಯಕ್ಷ ಬಂಧನ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಶಾಲಾ ಸೇವಾ ಆಯೋಗ (ಎಸ್‌ಎಸ್‌ಸಿ) ನಡೆಸಿದ ಶಿಕ್ಷಕರ ನೇಮಕಾತಿ ಹಗರಣದ ತನಿಖೆ ನಡೆಸುತ್ತಿರುವ ಸಿಬಿಐ, ಆಯೋಗದ ಮಾಜಿ ಅಧ್ಯಕ್ಷ ಕಲ್ಯಾಣ್‌ಮಯ್ ಗಂಗೂಲಿ ಅವರನ್ನು ಗುರುವಾರ ಬಂಧಿಸಿದೆ.

ಸಿಬಿಐ ಕಚೇರಿಗೆ ಹಾಜರಾಗಿ ವಿಚಾರಣೆ ಎದುರಿಸುವಂತೆ ಗಂಗೂಲಿ ಅವರಿಗೆ ಸಿಬಿಐ ಸಮನ್ಸ್ ನೀಡಿತ್ತು. ವಿಚಾರಣೆ ಬಳಿಕ ಅವರನ್ನು ಬಂಧಿಸಲಾಯಿತು. ಈ ಪ್ರಕರಣದಲ್ಲಿ ಗಂಗೂಲಿ ಹೆಸರು ಕೇಳಿಬಂದ ಬಳಿಕ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲಾಗಿತ್ತು.

6 ಕಡೆಗಳಲ್ಲಿ ಶೋಧ: ಈ ಪ್ರಕರಣ ಸಂಬಂಧ ದೆಹಲಿ ಮತ್ತು ಕೋಲ್ಕತ್ತದ ಆರು ಸ್ಥಳಗಳಲ್ಲಿ ಸಿಬಿಐ ಗುರುವಾರ ಶೋಧ ಕಾರ್ಯಾಚರಣೆ ನಡೆಸಿತು. ಅವುಗಳಲ್ಲಿ ಎರಡು ಸಾಫ್ಟ್‌ವೇರ್ ಸಂಸ್ಥೆಗಳ ಆವರಣಗಳೂ ಸೇರಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಿಕ್ಷಕರ ನೇಮಕಾತಿ ವೇಳೆ ಅಭ್ಯರ್ಥಿಗಳಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ದಾಖಲೆಗಳನ್ನು ತಿದ್ದಲಾಗಿದೆ ಎಂದು ಆರೋಪಿಸಲಾಗಿತ್ತು. ದಾಖಲೆ ತಿದ್ದುವ ವಿಚಾರದಲ್ಲಿ ಸಹಾಯ ಮಾಡಿರುವ ಸಂಸ್ಥೆಯನ್ನು ತನಿಖೆಗೆ ಒಳಪಡಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಕಲ್ಕತ್ತ ಹೈಕೋರ್ಟ್ ನಿರ್ದೇಶನದ ಮೇರೆಗೆ ಪಶ್ಚಿಮ ಬಂಗಾಳ ಶಿಕ್ಷಣ ಸಚಿವ ಪರೇಶ್ ಚಂದ್ರ ಅಧಿಕಾರಿ ಮತ್ತು ಅವರ ಮಗಳು ಅಂಕಿತಾ ಅಧಿಕಾರಿ ವಿರುದ್ಧ ಮೇ 18ರಂದು ಸಿಬಿಐ ಎಫ್‌ಐಆರ್ ದಾಖಲಿಸಿತ್ತು.

200 ಅಡಿ ಆಳದ ಕೊಳವೆ ಬಾವಿಗೆ ಬಿದ್ದ ಬಾಲಕಿ

ಜೈಪುರ (ಪಿಟಿಐ): 'ರಾಜಸ್ಥಾನದ ದೌಸಾ ಜಿಲ್ಲೆಯ ಅಭನೇರಿ ಬಳಿಯ ಜಸ್ಸಾ ಪಾಡಾ ಹಳ್ಳಿಯಲ್ಲಿ ಅಂಕಿತಾ ಎಂಬ 2 ವರ್ಷದ ಬಾಲಕಿಯೊಬ್ಬಳು ಗುರುವಾರ ತನ್ನ ಮನೆಯ ಹೊರಗೆ ಆಟ ಆಡುತ್ತಿದ್ದ ವೇಳೆ 200 ಅಡಿ ಆಳದ ಕೊಳವೆ ಬಾವಿಗೆ ಬಿದ್ದಿದ್ದಾಳೆ' ಎಂದು ಪೊಲೀಸರು ತಿಳಿಸಿದ್ದಾರೆ.

'60ರಿಂದ 70 ಅಡಿ ಆಳದಲ್ಲಿ ಬಾಲಕಿ ಸಿಲುಕಿಕೊಂಡಿದ್ದು, ರಕ್ಷಣಾ ಕಾರ್ಯ ಪ್ರಗತಿಯಲ್ಲಿದೆ' ಎಂದಿದ್ದಾರೆ.

ನ್ಯಾಯಮೂರ್ತಿಗಳಿಗೆ ಸಚಿವ ಕಿರಣ್ ರಿಜಿಜು ಪತ್ರ

14ನೇ ಹಣಕಾಸು ಆಯೋಗವು 1,800 ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಲು ಶಿಫಾರಸು ಮಾಡಿದೆ. ಸದ್ಯ 896 ಇಂಥ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿವೆ.

'ತ್ವರಿತ ನ್ಯಾಯಾಲಯಗಳ ಸ್ಥಾಪನೆ ಚುರುಕುಗೊಳಿಸಿ'

ನವದೆಹಲಿ (ಪಿಟಿಐ): ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರಿಕರ ವಿರುದ್ಧದ ಗಂಭೀರ ಅಪರಾಧ ಪ್ರಕರಣಗಳ ವಿಚಾರಣೆಗೆ ತ್ವರಿತ ನ್ಯಾಯಾಲಯಗಳು ಮತ್ತು ತ್ವರಿತ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವ ಪ್ರಕ್ರಿಯೆ ಚುರುಕುಗೊಳಿಸಲು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರ ಬರೆದಿದ್ದಾರೆ.

14ನೇ ಹಣಕಾಸು ಆಯೋಗವು 1,800 ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಲು ಶಿಫಾರಸು ಮಾಡಿದೆ. ಆದರೆ, ಜುಲೈ 31ರ ವೇಳೆಗೆ ಕೇವಲ 896 ತ್ವರಿತ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ನ್ಯಾಯಾಲಯಗಳಲ್ಲಿ 13.18 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ ಎಂದು ಸಚಿವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.



ಕಿರಣ್ ರಿಜಿಜು

ಪೋಕ್ಸೊ ಪ್ರಕರಣಗಳ ವಿಚಾರಣೆಗಾಗಿ ಕೇಂದ್ರ ಪ್ರಾಯೋಜಿತ ಯೋಜನೆಯಡಿ ತ್ವರಿತ ವಿಚಾರಣೆಯ ವಿಶೇಷ ನ್ಯಾಯಾಲಯಗಳನ್ನು (ಎಫ್‌ಟಿಎಸ್‌ಸಿಎಸ್) ಸ್ಥಾಪಿಸಬೇಕು. 28 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ 1,023 ಎಫ್‌ಟಿಎಸ್‌ಸಿಎಸ್ ಮಂಜೂರು ಮಾಡಲಾಗಿದೆ. ಆದರೆ, ಜುಲೈ 31ರ ವೇಳೆಗೆ 731 ಎಫ್‌ಟಿಎಸ್‌ಸಿಎಸ್ ಕಾರ್ಯನಿರ್ವಹಿಸುತ್ತಿವೆ. ಈ ನ್ಯಾಯಾಲಯಗಳಲ್ಲಿ 3.28 ಲಕ್ಷ ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ಇದು ಆತಂಕಕಾರಿ ಸ್ಥಿತಿ ಎಂದು ಸಚಿವ ರಿಜಿಜು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಮತ್ತು ಪ್ರಕರಣಗಳ ವಿಚಾರಣೆ ಬಾಕಿ ತಡೆಯಲು ಈ ನ್ಯಾಯಾಲಯಗಳಿಗೆ ಅಗತ್ಯ ಸೂಚನೆ ನೀಡುವಂತೆ ಸಚಿವರು ಮುಖ್ಯ ನ್ಯಾಯಮೂರ್ತಿಗಳಿಗೆ ಮನವಿ ಮಾಡಿದ್ದಾರೆ.

ಐ ಲವ್ ಯೂ ಟೆನಿಸ್..

ರೋಜರ್ ಫೆಡರರ್ ವಿದಾಯ



ನನ್ನ ಟೆನಿಸ್ ಕುಟುಂಬವೇ...

ಹಲವು ವರ್ಷಗಳಿಂದ ಟೆನಿಸ್ ನನಗೆ ನೀಡಿರುವ ಕಾಣಿಕೆಗಳು ಶ್ರೇಷ್ಠವಾಗಿವೆ. ನಿಸ್ಸಂಶಯವಾಗಿಯೂ ಈ ಹಾದಿಯಲ್ಲಿ ನಾನು ಭೇಟಿಯಾದವರು, ನನ್ನ ಪ್ರತಿಸ್ಪರ್ಧಿಗಳು, ಗೆಳೆಯರು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಈ ಕ್ರೀಡೆಗೆ ಜೀವನಾಡಿಗಳಾಗಿರುವ ಅಭಿಮಾನಿಗಳು. ಇವತ್ತು ನಿಮ್ಮೆಲ್ಲರೊಂದಿಗೆ ಒಂದು ಸುದ್ದಿಯನ್ನು ಹಂಚಿಕೊಳ್ಳುತ್ತಿದ್ದೇನೆ.

ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕಳೆದ ಮೂರು ವರ್ಷಗಳಲ್ಲಿ ನಾನು ಗಾಯ ಹಾಗೂ ಶಸ್ತ್ರಚಿಕಿತ್ಸೆಗಳ ಸವಾಲುಗಳನ್ನು ಎದುರಿಸಿದ್ದೇನೆ. ಇದೆಲ್ಲದರಾಚೆಯೂ ನಾನು ಮತ್ತೆ ಸ್ಪರ್ಧಾತ್ಮಕ ಟೆನಿಸ್‌ಗೆ ಮರಳಲು ಎಲ್ಲ ಬಗೆಯಿಂದಲೂ ಶ್ರಮಿಸಿದ್ದೇನೆ. ಆದರೆ ನನ್ನ ದೇಹದ ಇತಿಮಿತಿಗಳನ್ನೂ ಅರಿತಿರುವೆ. ದೇಹ ನೀಡಿದ ಸಂದೇಶವೂ ಸ್ಪಷ್ಟವಾಗಿದೆ. ಈಗ ನನಗೆ 41 ವರ್ಷ. ಕಳೆದ 24 ವರ್ಷಗಳಲ್ಲಿ 1500 ಪಂದ್ಯಗಳನ್ನು ಆಡಿದ್ದೇನೆ. ಟೆನಿಸ್ ನನ್ನ ನಿರೀಕ್ಷೆಗೂ ಮೀರಿದ ಮಮತೆಯನ್ನು ದಯಪಾಲಿಸಿದೆ. ವೃತ್ತಿಪರ ಟೆನಿಸ್‌ಗೆ ವಿದಾಯ ಹೇಳುವ ಸಮಯ ಈಗ ಬಂದಿದೆ. ಮುಂದಿನ ವಾರ ಲಂಡನ್‌ನಲ್ಲಿ ನಡೆಯಲಿರುವ ಲೇವರ್ ಕಪ್ ಟೂರ್ನಿಯಲ್ಲಿ ಆಡುವೆ. ಅದು ನನ್ನ ಕೊನೆಯ ಎಟಿಪಿ ಸ್ಪರ್ಧೆಯಾಗಲಿದೆ. ಭವಿಷ್ಯದಲ್ಲಿಯೂ ಮತ್ತೊಂದಿಷ್ಟು ಟೆನಿಸ್ ಆಡುವೆ. ಆದರೆ, ಗ್ರ್ಯಾನ್‌ಸ್ಲಾಮ್ ಅಥವಾ ಟೂರ್‌ಗಳಲ್ಲಿ ಅಲ್ಲ.

ಇದೊಂದು ಕಠಿಣ ಹಾಗೂ ಕಹಿಯಾದ ನಿರ್ಧಾರ. ಏಕೆಂದರೆ ನನಗೆಲ್ಲವನ್ನೂ ಕೊಟ್ಟ ಆಟದಿಂದ ದೂರವಾಗುತ್ತಿರುವೆ. ಈ ಭೂಮಿಯ ಮೇಲಿರುವ ಅತ್ಯಂತ ಅದೃಷ್ಟವಂತರಲ್ಲಿ ನಾನೂ ಒಬ್ಬ. ಟೆನಿಸ್ ಆಡುವಂತಹ ವಿಶೇಷ ಪ್ರತಿಭೆಯು ಒಲಿಯಿತು. ನಾನೂ ಊಹಿಸಲೂ ಸಾಧ್ಯವಾಗದಷ್ಟು ಔನತ್ಯವನ್ನು ಇಲ್ಲಿ ಸಾಧಿಸಿದೆ. ಅಂದುಕೊಂಡಿದ್ದಕ್ಕಿಂತಲೂ ದೀರ್ಘ ಕಾಲ ಆಡಿದೆ.

ಈ ಸಂದರ್ಭದಲ್ಲಿ ನನ್ನ ಪತ್ನಿ ಮಿರ್ಕಾಗೆ ಕೃತಜ್ಞತೆ ಹೇಳಲೇಬೇಕು. ಈ ಮಹತ್ವದ ಪಯಣದ ಪ್ರತಿಯೊಂದು ನಿಮಿಷದಲ್ಲಿಯೂ ಆಕೆ ನನ್ನೊಂದಿಗಿದ್ದಾಳೆ. ಫೈನಲ್ ಪಂದ್ಯಗಳಿಗಿಂತಲೂ ಮುನ್ನ ಆತ್ಮವಿಶ್ವಾಸ ಉದ್ದಿಪನಗೊಳಿಸಿದ್ದು, ಎಂಟು ತಿಂಗಳ ಗರ್ಭಿಣಿಯಾಗಿದ್ದಾಗಲೂ ನನ್ನ ಬಹುತೇಕ ಎಲ್ಲ ಪಂದ್ಯಗಳನ್ನೂ ವೀಕ್ಷಿಸಿದ್ದು ಮರೆಯಲು ಸಾಧ್ಯವೇ. 20 ವರ್ಷಗಳಲ್ಲಿ ನನ್ನ ಎಲ್ಲ ಬಾಲಿಶತನಗಳು, ವೈರುಧ್ಯಗಳನ್ನು ಸಹನೆಯಿಂದ ನಿಭಾಯಿಸಿದ್ದಾಳೆ. ನನ್ನ ಚೆಂದದ ನಾಲ್ವರು ಮಕ್ಕಳಿಗೂ ಧನ್ಯವಾದಗಳು. ಹೊಸ ತಾಣಗಳನ್ನು ನೋಡುವ ಅವರ ಉತ್ಸುಕತೆ, ನನ್ನ ಪಂದ್ಯಗಳನ್ನು ಅವರು ಆಸ್ವಾದಿಸುವ ರೀತಿ ಅವಿಸ್ಮರಣೀಯ. ಪ್ರೇಕ್ಷಕರ ಗ್ಯಾಲರಿಯಲ್ಲಿರುವ ಕುಟುಂಬವು ನನ್ನ ಪಂದ್ಯಗಳನ್ನು ನೋಡುವಾಗ ಪುಳಕಿತಗೊಂಡ ಕ್ಷಣಗಳು ಎಂದೆಂದಿಗೂ ಸ್ಮರಣಾರ್ಹ.

ಪ್ರೀತಿಯ ಅಪ್ಪ,ಅಮ್ಮ ಹಾಗೂ ಸಹೋದರಿಯ ಪ್ರೋತ್ಸಾಹವಿಲ್ಲದಿದ್ದರೆ ಜೀವನದಲ್ಲಿ ಯಾವ ಸಾಧನೆಯನ್ನೂ ಮಾಡಲೂ ಸಾಧ್ಯವಾಗುತ್ತಿರಲಿಲ್ಲ. ಮಾಜಿ ಕೋಚ್‌ಗಳು ತೋರಿದ ಮಾರ್ಗದರ್ಶನ ಮಹತ್ವದ್ದು. ಎಳವೆಯಲ್ಲಿ ನನ್ನ ಮೇಲೆ ವಿಶ್ವಾಸವಿಟ್ಟ ಸ್ವಿಸ್ ಟೆನಿಸ್‌ಗೆ ಆಭಾರಿ. ತಂಡದ ಇವಾನ್, ಡ್ಯಾನಿ, ರೋಲ್ಯಾಂಡ್, ವಿಶೇಷವಾಗಿ ಸೆವಿ ಹಾಗೂ ಪಿಯರ್ ಅವರ ಸಹಾಯವೂ ದೊಡ್ಡದು. 17 ವರ್ಷಗಳಿಂದ ನನ್ನ ವ್ಯವಹಾರಗಳನ್ನು ನಿರ್ವಹಿಸುತ್ತಿರುವ ಟೋನಿ ಅವರೆಲ್ಲರಿಗೂ ಧನ್ಯವಾದಗಳು.

ನನ್ನ ಸಮಕಾಲೀನ ಆಟಗಾರರು, ಸ್ನೇಹಿತರಿಗೂ ವಂದನೆಗಳು. ಕೋರ್ಟ್‌ನಲ್ಲಿ ಅಪ್ಪಟ ಕ್ರೀಡಾಮನೋಭಾವದಿಂದ ಪೈಪೋಟಿ ಮಾಡಿದ್ದೇವೆ. ನಾವೆಲ್ಲರೂ ಸೇರಿ ಟೆನಿಸ್‌ನ ಘನತೆಯನ್ನು ಮತ್ತಷ್ಟು ಹೆಚ್ಚಿಸಿರುವುದು ಹೆಮ್ಮೆಯ ಸಂಗತಿ. ಅವರೆಲ್ಲರಿಗೂ ನಾನು ಆಭಾರಿ. ಬೇರೆಲ್ಲಕ್ಕಿಂತ ಮುಖ್ಯವಾಗಿ ಅಭಿಮಾನಿಗಳಿಗೆ ವಿಶೇಷ ವಂದನೆಗಳು. ನನ್ನ ಸಾಮರ್ಥ್ಯ ಹಾಗೂ ಆತ್ಮವಿಶ್ವಾಸವನ್ನು ಸದಾ ಹೆಚ್ಚಿಸಿದವರು ನೀವು.

24 ವರ್ಷಗಳ ಈ ಸಾಹಸಮಯ ಪಯಣವು ಒಮ್ಮೊಮ್ಮೆ 24 ಗಂಟೆಗಳಲ್ಲಿಯೇ ಮುಗಿದಂತೆ ಭಾಸವಾಗುತ್ತದೆ. 40 ದೇಶಗಳ ವಿವಿಧ ತಾಣಗಳಲ್ಲಿ ಅಪಾರ ಅಭಿಮಾನಿಗಳ ಮುಂದೆ ಆಡಿದ ಅದೃಷ್ಟಶಾಲಿ ನಾನು. ನಗು, ಅಳು ಹಾಗೂ ನೋವುಗಳನ್ನು ಅನುಭವಿಸಿರುವೆ. ಈ ದಾರಿಯಲ್ಲಿ ಅತ್ಯಂತ ಆತ್ಮೀಯ ಹಾಗೂ ಸಜ್ಜನ ಸ್ನೇಹಿತರನ್ನು ಗಳಿಸಿದ್ದೇನೆ. ಜೀವಮಾನದ ಆಸ್ತಿ ಅವರೆಲ್ಲರೂ. ತಮ್ಮ ಕಾರ್ಯಬಾಹುಳ್ಯದ ನಡುವೆಯು ಪಂದ್ಯಗಳನ್ನು ನೋಡುತ್ತ ನನ್ನನ್ನು ಹುರಿದುಂಬಿಸಲು ಸಮಯ ಮೀಸಲಿಟ್ಟಿದ್ದಾರೆ. ಅವರಿಗೆ ಸದಾ ಕೃತಜ್ಞನಾಗಿರುವೆ.

ತವರೂರು ಬಾಸೆಲ್‌ನಲ್ಲಿ ಟೆನಿಸ್ ಪ್ರೀತಿ ಶುರುವಾದಾಗ ಇನ್ನೂ ಚಿಕ್ಕ ಬಾಲಕನಾಗಿದ್ದೆ. ಅಂಕಣಗಳಲ್ಲಿ ಬಾಲ್ ಕಿಡ್ ಆಗಿ ಹಿರಿಯರ ಆಟವನ್ನು ಬೆರಗುಗಣ್ಣುಗಳಿಂದ ನೋಡುತ್ತಿದ್ದೆ. ಆ ದಿಗ್ಗಜರ ಆಟ, ಸಾಧನೆಗಳು ನನ್ನಲ್ಲೂ ಶ್ರಮಪಟ್ಟು ಕಲಿಯುವ ಛಲ ಹುಟ್ಟಿಸಿದವು. ಈ ಹಂತಕ್ಕೆ ಬೆಳೆಯಲು ಆ ಕ್ಷಣಗಳೇ ಮೆಟ್ಟಿಲುಗಳು. ಆ ಸ್ವಿಸ್ ಬಾಲ್ ಕಿಡ್ ಈ ಎತ್ತರಕ್ಕೆ ಬೆಳೆಯಲು ನೇರ ಹಾಗೂ ಪರೋಕ್ಷವಾಗಿ ಶಕ್ತಿ ತುಂಬಿದ ಎಲ್ಲರಿಗೂ ನಾನು ಚಿರಋಣಿ.

ಅಂತಿಮವಾಗಿ ಟೆನಿಸ್ ಆಟವೇ ನಿನ್ನನ್ನು ಎಂದಿಗೂ ಬಿಡುವುದಿಲ್ಲ ಐ ಲವ್ ಯೂ...

(ಫೇಸ್‌ಬುಕ್‌ನಲ್ಲಿ ರೋಜರ್ ಫೆಡರರ್ ಪೋಸ್ಟ್ ಮಾಡಿರುವ ವಿದಾಯ ಪತ್ರದ ಸಾರಾಂಶ)

ಹೆಸರು	ರೋಜರ್ ಫೆಡರರ್
ಜನ್ಮದಿನ	ಆಗಸ್ಟ್ 8, 1981
ಹುಟ್ಟೂರು	ಬಾಸೆಲ್, ಸ್ವಿಟ್ಜರ್‌ಲೆಂಡ್
ವೃತ್ತಿಪರ ಆಟಗಾರ ಆಗಿದ್ದು	1998
ಪತ್ನಿ	ಮಿರ್ಕಾ ಫೆಡರರ್
ಮಕ್ಕಳು 4	ಅವಳಿ ಹೆಣ್ಣು (ಮೈಲಾ, ಚಾರ್ಲೀನ್) ಮತ್ತು ಅವಳಿ ಗಂಡು (ಲಿಯೊ, ಲೆನಿ)

ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ

ಆಸ್ಟ್ರೇಲಿಯಾ ಓಪನ್ 6	(2004, 2006, 2007, 2010, 2017, 2018)
ಫ್ರೆಂಚ್ ಓಪನ್ 1	(2009)
ವಿಂಬಲ್ಡನ್ 8	(2003, 2004, 2005, 2006, 2007, 2009, 2012, 2017)
ಅಮೆರಿಕ ಓಪನ್ 5	(2004, 2005, 2006, 2007, 2008)

ಸಾಧನೆ

ಒಟ್ಟು ಪ್ರಶಸ್ತಿ	103
ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ	20
ಎಟಿಪಿ ಟೂರ್ ಫೈನಲ್ಸ್	6 (2003, 2004, 2006, 2007, 2010, 2011)
ಗರಿಷ್ಠ ರ‍್ಯಾಂಕ್	1 (2004ರ ಫೆಬ್ರುವರಿ)
ಗೆಲುವು/ ಸೋಲು	1,251/275
ಒಟ್ಟು ಬಹುಮಾನ ಮೊತ್ತ	₹1,041 ಕೋಟಿ
ವರ್ಷಾಂತ್ಯಕ್ಕೆ ನಂ.1 ರ‍್ಯಾಂಕ್	2004, 2005, 2006, 2007, 2009
ನಂ.1 ನಲ್ಲಿದ್ದ ಒಟ್ಟು ವಾರಗಳು	310
ಒಲಿಂಪಿಕ್ಸ್	2008ರ ಬೀಜಿಂಗ್ ಕೂಟದ ಡಬಲ್ಸ್ ವಿಭಾಗದಲ್ಲಿ ಚಿನ್ನ (ಸ್ಟಾನಿಸ್ಲಾಸ್ ವಾವ್ರಿಂಕಾ ಜತೆ); 2012ರ ಲಂಡನ್ ಒಲಿಂಪಿಕ್ಸ್ ಸಿಂಗಲ್ಸ್‌ನಲ್ಲಿ ಬೆಳ್ಳಿ
ಡೇವಿಸ್ ಕಪ್ ಪ್ರಶಸ್ತಿ	1 (2014)
ಹಾಪ್‌ಮನ್ ಕಪ್ ಪ್ರಶಸ್ತಿ	3 (2001, 2018, 2019)

ದುಲೀಪ್ ಟ್ರೋಫಿ: ರೋಹನ್ ಶತಕ

ಸೇಲಂ, ತಮಿಳುನಾಡು (ಪಿಟಿಐ): ಆರಂಭಿಕ ಬ್ಯಾಟರ್ ರೋಹನ್ ಎಸ್. ಕುನ್ನುಮಲ್ (143) ಮತ್ತು ನಾಯಕ ಹನುಮ ವಿಹಾರಿ (ಬ್ಯಾಟಿಂಗ್ 107) ಅವರ ಶತಕದ ನೆರವಿನಿಂದ ದಕ್ಷಿಣ ವಲಯ ತಂಡ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಉತ್ತರ ವಲಯ ವಿರುದ್ಧ ಉತ್ತಮ ಮೊತ್ತದತ್ತ ಮುನ್ನಡೆದಿದೆ.

ಸೇಲಂನಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ದಿನವಾದ ಗುರುವಾರದ ಆಟದ ಅಂತ್ಯಕ್ಕೆ ದಕ್ಷಿಣ ವಲಯ 2 ವಿಕೆಟ್‌ಗೆ 324 ರನ್ ಗಳಿಸಿದೆ. ಮೊದಲು ಬ್ಯಾಟ್ ಮಾಡಿದ ದಕ್ಷಿಣ ವಲಯ ತಂಡಕ್ಕೆ ರೋಹನ್ ಮತ್ತು ಮಯಂಕ್ ಅಗರವಾಲ್ (49 ರನ್, 59 ಎ.) ಮೊದಲ ವಿಕೆಟ್‌ಗೆ 102 ರನ್ ಸೇರಿಸಿದರು.

ಕೊಯಮತ್ತೂರಿನಲ್ಲಿ ನಡೆಯುತ್ತಿರುವ ಇನ್ನೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಕೇಂದ್ರ ವಲಯ ತಂಡ ಪಶ್ಚಿಮ ವಲಯ ತಂಡವನ್ನು 9 ವಿಕೆಟ್‌ಗೆ 252 ರನ್‌ಗಳಿಗೆ ನಿಯಂತ್ರಿಸಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ವಲಯ 90 ಓವರ್‌ಗಳಲ್ಲಿ 2 ವಿಕೆಟ್‌ಗೆ 324 (ರೋಹನ್ ಕುನ್ನುಮಲ್ 143, ಮಯಂಕ್ ಅಗರವಾಲ್ 49, ಹನುಮ ವಿಹಾರಿ ಬ್ಯಾಟಿಂಗ್ 107, ಬಾಬಾ ಇಂದ್ರಜಿತ್ ಬ್ಯಾಟಿಂಗ್ 20, ನವದೀಪ್ ಸೈನಿ 51ಕ್ಕೆ 1) ಉತ್ತರ ವಲಯ ವಿರುದ್ಧದ ಪಂದ್ಯ

ಕೊಯಮತ್ತೂರಿನ ಪಂದ್ಯ: ಮೊದಲ ಇನಿಂಗ್ಸ್: ಪಶ್ಚಿಮ ವಲಯ: 82 ಓವರ್‌ಗಳಲ್ಲಿ 9ಕ್ಕೆ 252 (ಪೃಥ್ವಿ ಶಾ 60, ರಾಹುಲ್ ತ್ರಿಪಾಠಿ ಬ್ಯಾಟಿಂಗ್ 64, ಶಮ್ಸ್ ಮುಲಾನಿ 41, ಕುಮಾರ್ ಕಾರ್ತಿಕೇಯ 66ಕ್ಕೆ 5) ಕೇಂದ್ರ ವಲಯ ವಿರುದ್ಧದ ಪಂದ್ಯ

ಋತುರಾಜ್ ಶತಕ ಸೊಬಗು

ಭಾರತ 'ಎ' ಗೌರವಯುತ ಮೊತ್ತ; ಫಿಷರ್‌ಗೆ 4 ವಿಕೆಟ್

ಪ್ರಜಾವಾಣಿ ವಾರ್ತೆ



ಋತುರಾಜ್ ಗಾಯಕವಾಡ ಶತಕ ಸಂಭ್ರಮ –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಬೆಂಗಳೂರು: ಋತುರಾಜ್ ಗಾಯಕವಾಡ ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ನ್ಯೂಜಿಲೆಂಡ್ ಎ ತಂಡದ ವಿರುದ್ಧದ 'ಟೆಸ್ಟ್'ನಲ್ಲಿ ಸುಂದರ ಶತಕ ದಾಖಲಿಸಿದರು.

ಮೊದಲ ದಿನದಾಟದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಆತಿಥೇಯ ಬ್ಯಾಟರ್‌ಗಳು ಹಾಗೂ ಪ್ರವಾಸಿ ಬಳಗದ ಬೌಲರ್‌ಗಳಿಗೆ ಉದ್ಯಾನನಗರಿಯ ಅಂಗಳ ಸಮಾನ ನ್ಯಾಯ ಒದಗಿಸಿತು. ಭಾರತ ಎ ತಂಡವು 86.4 ಓವರ್‌ಗಳಲ್ಲಿ 293 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಕಿವೀಸ್ ಬಳಗದ ಮ್ಯಾಥ್ಯೂ ಫಿಷರ್ ನಾಲ್ಕು ವಿಕೆಟ್ ಗಳಿಸಿದರು.

ಭಾರತ ತಂಡದ ನಾಯಕ ಪ್ರಿಯಾಂಕ್ ಪಾಂಚಾಲ್ ವಿಕೆಟ್ ಗಳಿಸಿದ ಫಿಷರ್ ಆರಂಭಿಕ ಪೆಟ್ಟು ಕೊಟ್ಟರು. ಊಟದ ವಿರಾಮಕ್ಕೆ 66 ರನ್‌ಗಳಿಗೆ ಎರಡು ವಿಕೆಟ್‌ಗಳು ಪತನವಾಗಿದ್ದವು.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ಋತುರಾಜ್ (108; 127ಎಸೆತ, 4X12, 6X2) ಆತ್ಮವಿಶ್ವಾಸಭರಿತ ಆಟವಾಡಿದರು. ಆದರೆ ಇನ್ನೊಂದು ಬದಿಯಲ್ಲಿ ವಿಕೆಟ್‌ಗಳು ಪತನವಾದವು. ಇದರಿಂದಾಗಿ 111 ರನ್ ಮೊತ್ತಕ್ಕೆ ನಾಲ್ಕು ವಿಕೆಟ್‌ಗಳು ಪತನಾದವು. ಈ ಸಂದರ್ಭದಲ್ಲಿ ಋತುರಾಜ್ ಜೊತೆಗೂಡಿದ ಉಪೇಂದ್ರ ಯಾದವ್ (76; 134ಎ, 4X9, 6X2) ಐದನೇ ವಿಕೆಟ್ ಜೊತೆಯಾಟದಲ್ಲಿ 134 ರನ್ ಸೇರಿಸಿ ಇನಿಂಗ್ಸ್‌ಗೆ ಬಲ ತುಂಬಿದರು.

ಚೆಂದದ ಡ್ರೈವ್, ಸ್ವೀಪ್‌ಗಳ ಆಟವಾಡಿದ ಋತುರಾಜ್ ಬೌಲರ್‌ಗಳಿಗೆ ಸವಾಲೊಡ್ಡಿದರು. ಅವರು ಎತ್ತಿದ ಎರಡು ಸಿಕ್ಸರ್‌ಗಳಿಗೆ ಚೆಂಡು ಖಾಲಿ ಗ್ಯಾಲರಿಗೆ ಹೋಗಿ ಬಿತ್ತು.

ಆದರೆ, ಛಲದ ಆಟವಾಡಿದ ಪ್ರವಾಸಿ ಬಳಗವೂ ದಿನದ ಕೊನೆಯಲ್ಲಿ ಪ್ರಿಯಾಂಕ್ ಪಾಂಚಾಲ್ ಬಳಗವು 300ರ ಗಡಿ ದಾಟದಂತೆ ನೋಡಿಕೊಂಡಿತು.

ಸಂಕ್ಷಿಪ್ತ ಸ್ಕೋರು: ಭಾರತ ಎ: 86.4 ಓವರ್‌ಗಳಲ್ಲಿ 293 (ಅಭಿಮನ್ಯು ಈಶ್ವರನ್ 38, ಋತುರಾಜ್ ಗಾಯಕವಾಡ 108, ರಜತ್ ಪಾಟೀದಾರ್ 30, ಉಪೇಂದ್ರ ಯಾದವ್ 76, ಜೇಕಬ್ ಡಫಿ 56ಕ್ಕೆ2, ಸೀನ್ ಸೊಲಿಯಾ 47ಕ್ಕೆ1, ಮ್ಯಾಥ್ಯೂ ಫಿಷರ್ 52ಕ್ಕೆ4)

ಹಾಕಿ ಆಟಗಾರ್ತಿ ನಮಿತಾ ಟೊಪ್ಪೊ ವಿದಾಯ



ನಮಿತಾ ಟೊಪ್ಪೊ

ನವದೆಹಲಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದ ಮಿಡ್‌ಫೀಲ್ಡರ್ ನಮಿತಾ ಟೊಪ್ಪೊ ಅವರು ಗುರುವಾರ ನಿವೃತ್ತಿ ಪ್ರಕಟಿಸಿದರು.

2012 ರಲ್ಲಿ ಮೊದಲ ಬಾರಿ ಭಾರತ ಸೀನಿಯರ್ ತಂಡದಲ್ಲಿ ಸ್ಥಾನ ಪಡೆದಿದ್ದ ಅವರು 168 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ.

27 ವರ್ಷದ ನಮಿತಾ, 2014 ಮತ್ತು 2018 ರಲ್ಲಿ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚು ಹಾಗೂ ಬೆಳ್ಳಿ ಜಯಿಸಿದ್ದ ಭಾರತ ತಂಡದಲ್ಲಿ ಆಡಿದ್ದರು.

'ಕಳೆದ 10 ವರ್ಷಗಳು ಖಂಡಿತವಾಗಿಯೂ ನನ್ನ ಜೀವನದ ಅತ್ಯುತ್ತಮ ವರ್ಷಗಳಾಗಿವೆ. ಪ್ರಮುಖ ಟೂರ್ನಿಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಬೇಕೆಂಬುದು ಕನಸಾಗಿತ್ತು. ಅದನ್ನು ಈಡೇರಿಸಲು ಸಾಧ್ಯವಾಗಿರುವುದು ಸಂತಸದ ವಿಷಯ' ಎಂದು ಹಾಕಿ ಇಂಡಿಯಾ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ನಮಿತಾ ಹೇಳಿದ್ದಾರೆ.

ಒಡಿಶಾದ ಸುಂದರಗಡ ಜಿಲ್ಲೆಯ ನಮಿತಾ ಅವರು ರೂರ್ಕೆಲಾದ ಸ್ಪೋರ್ಟ್ಸ್ ಹಾಸ್ಟೆಲ್‌ನಲ್ಲಿದ್ದುಕೊಂಡು ಹಾಕಿ ತರಬೇತಿ ಪಡೆದಿದ್ದರು. 2007 ರಲ್ಲಿ ಮೊದಲ ಬಾರಿ ಒಡಿಶಾ ತಂಡದಲ್ಲಿ ಆಡಿದ್ದ ಅವರು 2011 ರಲ್ಲಿ ಭಾರತ 18 ವರ್ಷದೊಳಗಿನ ತಂಡಕ್ಕೆ ಆಯ್ಕೆಯಾಗಿದ್ದರು.

2013ರ ಎಫ್‌ಐಎಚ್ ಮಹಿಳಾ ಜೂನಿಯರ್ ವಿಶ್ವಕಪ್, ಎಫ್‌ಐಎಚ್ ಮಹಿಳಾ ವಿಶ್ವಲೀಗ್–2, ಏಷ್ಯನ್ ಚಾಂಪಿಯನ್ಸ್ ಟ್ರೋಫಿ, 2014ರ ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು 2016ರ ರಿಯೊ ಒಲಿಂಪಿಕ್ ಕೂಟ ಸೇರಿದಂತೆ ಹಲವು ಪ್ರಮುಖ ಟೂರ್ನಿಗಳಲ್ಲಿ ರಾಷ್ಟ್ರೀಯ ತಂಡದ ಪರ ಆಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಎಂಐ ಕೇಪ್‌ಟೌನ್‌ಗೆ ಕ್ಯಾಟಿಚ್ ಕೋಚ್



ಕ್ಯಾಟಿಚ್

ಮುಂಬೈ (ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ಆಟಗಾರ ಸೈಮನ್ ಕ್ಯಾಟಿಚ್ ಅವರು ಚೊಚ್ಚಲ ದಕ್ಷಿಣ ಆಫ್ರಿಕಾ ಟಿ20 ಲೀಗ್‌ನಲ್ಲಿ ಆಡಲಿರುವ ಮುಂಬೈ ಇಂಡಿಯನ್ಸ್ ಕೇಪ್‌ಟೌನ್ (ಎಂಐ ಕೇಪ್‌ಟೌನ್) ತಂಡದ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದಾರೆ.

ದಕ್ಷಿಣ ಆಫ್ರಿಕಾದ ದಿಗ್ಗಜ ಬ್ಯಾಟರ್ ಹಾಶಿಮ್ ಆಮ್ಲಾ ಅವರು ಬ್ಯಾಟಿಂಗ್ ಕೋಚ್ ಆಗಿ, ನ್ಯೂಜಿಲೆಂಡ್‌ನ ಮಾಜಿ ಆಟಗಾರ ಜೇಮ್ಸ್ ಪಮೆಟ್ ಅವರು ಫೀಲ್ಡಿಂಗ್ ಕೋಚ್ ಆಗಿ, ದಕ್ಷಿಣ ಆಫ್ರಿಕಾ ತಂಡದ ಇನ್ನೊಬ್ಬ ಮಾಜಿ ಆಟಗಾರ ರಾಬಿನ್ ಪೀಟರ್‌ಸನ್, ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.

'ಮುಂಬೈ ಇಂಡಿಯನ್ಸ್ ಕೇಪ್‌ಟೌನ್ ತಂಡದ ಮುಖ್ಯ ಕೋಚ್ ಹುದ್ದೆಯನ್ನು ನೀಡಿರುವುದು ಗೌರವವೇ ಸರಿ. ಒಂದು ಹೊಸ ತಂಡವನ್ನು ಕಟ್ಟಿ, ಆಟಗಾರರ ಕೌಶಲ ಹೆಚ್ಚಿಸುವುದು ಯಾವಾಗಲೂ ವಿಶೇಷ ಅನುಭವ ನೀಡುತ್ತದೆ' ಎಂದು ಕ್ಯಾಟಿಚ್ ಪ್ರತಿಕ್ರಿಯಿಸಿದ್ದಾರೆ.

ವಿಶ್ವಕಪ್: ಭಾರತ–ಪಾಕ್ ಪಂದ್ಯದ ಟಿಕೆಟ್ ಮಾರಾಟ!

ದುಬೈ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ಹಾಗೂ ಪಾಕಿಸ್ತಾನ ನಡುವಣ ಪಂದ್ಯದ ಎಲ್ಲ ಟಿಕೆಟ್‌ಗಳೂ ಬಿಕರಿಯಾಗಿವೆ.

ಅಕ್ಟೋಬರ್ 16ರಂದು ಟೂರ್ನಿ ಆರಂಭವಾಗಲಿದೆ. ಭಾರತ ಹಾಗೂ ಪಾಕ್ ಪಂದ್ಯವು 23ರಂದು ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ನಡೆಯಲಿದೆ.

'ಮಾರಾಟ ಆರಂಭವಾಗಿ ಕೆಲವೇ ನಿಮಿಷಗಳಲ್ಲಿ ಎಲ್ಲ ಟಿಕೆಟ್‌ಗಳೂ ಬಿಕರಯಾಗಿವೆ. ಮರುಮಾರಾಟಕ್ಕಾಗಿ ಅಧಿಕೃತ ವೇದಿಕೆಯನ್ನೂ ಕಲ್ಪಿಸಲಾಗಿದೆ. ಅದರಲ್ಲಿ ಅಭಿಮಾನಿಗಳು ತಮ್ಮ ಟಿಕೆಟ್‌ಗಳನ್ನು ಮುಖಬೆಲೆಗೆ ವಿನಿಮಯ ಮಾಡಿಕೊಳ್ಳಲು ಅವಕಾಶವಿದೆ' ಎಂದು ಐಸಿಸಿಯು ಪ್ರಕಟಣೆಯಲ್ಲಿ ತಿಳಿಸಿದೆ.

'82 ದೇಶಗಳ ಅಭಿಮಾನಿಗಳು ಟಿಕೆಟ್‌ಗಳನ್ನು ಖರೀದಿಸಿದ್ದಾರೆ. ಟೂರ್ನಿಯಲ್ಲಿ ಒಟ್ಟು 16 ತಂಡಗಳು ಸ್ಪರ್ಧಿಸಲಿವೆ. ಕೋವಿಡ್ ನಂತರದ ಕಾಲಘಟ್ಟದಲ್ಲಿ ಐಸಿಸಿ ಟೂರ್ನಿಗಳಲ್ಲಿ ಪೂರ್ಣಪ್ರಮಾಣದ ಪ್ರೇಕ್ಷಕರಿಗೆ ಅವಕಾಶ ನೀಡುತ್ತಿರುವುದು ಇದೇ ಮೊದಲು. 2020ರಲ್ಲಿ ಮಹಿಳಾ ಟಿ20 ವಿಶ್ವಕಪ್ ನಂತರ ಪ್ರೇಕ್ಷಕರ ಪ್ರವೇಶವನ್ನು ಕಡಿತಗೊಳಿಸಲಾಗಿತ್ತು. ಎಂ.ಸಿ.ಜಿಯಲ್ಲಿ 86,174 ಆಸನ ಸಾಮರ್ಥ್ಯವಿದೆ' ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಡುರಾಂಡ್ ಕಪ್ ಫೈನಲ್‌ಗೆ ಬಿಎಫ್‌ಸಿ

ಕೋಲ್ಕತ್ತ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಡುರಾಂಡ್ ಕಪ್ ಫೈನಲ್‌ಗೆ ಲಗ್ಗೆ ಇಟ್ಟಿತು.

ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಗೋಲಿನ 'ಉಡುಗೊರೆ' ನೀಡಿದ ಹೈದರಾಬಾದ್ ಫುಟ್‌ಬಾಲ್ ಕ್ಲಬ್ ತಂಡವು ಬಿಎಫ್‌ಸಿಯ ಜಯಕ್ಕೆ ಕಾರಣವಾಯಿತು.

ಪಂದ್ಯದ 30ನೇ ನಿಮಿಷದಲ್ಲಿ ಹೈದರಾಬಾದ್ ತಂಡದಲ್ಲಿರುವ ಸ್ಪೇನ್ ಡಿಫೆಂಡರ್ ಓಡೀ ಒನಾಯಿಂಡಿಯಾ ಝುಬಾಲಾ ಬಿಎಫ್‌ಸಿಗೆ 'ಉಡುಗೊರೆ' ನೀಡಿದರು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಬಿಎಫ್‌ಸಿ ಆಡಲಿದೆ. ಇದೇ ಮೊದಲ ಬಾರಿಗೆ ಡುರಾಂಡ್ ಕಪ್ ಜಯಿಸುವತ್ತ ಚಿತ್ತ ನೆಟ್ಟಿದೆ.

ಕುಸ್ತಿ: ನಿಶಾಗೆ ನಿರಾಸೆ

ಬೆಲ್‌ಗ್ರೇಡ್ (ಪಿಟಿಐ): ಭಾರತದ ನಿಶಾ ದಹಿಯಾ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆಲ್ಲುವ ಅವಕಾಶ ಕಳೆದುಕೊಂಡರು.

ಮಹಿಳೆಯರ 68 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಕಂಚಿನ ಪದಕಕ್ಕಾಗಿ ನಡೆದ 'ಪ್ಲೇ ಆಫ್' ಹಣಾಹಣಿಯಲ್ಲಿ ಅವರು ಕೆನಡಾದ ಲಿಂಡಾ ಮೊರಾಯೆಸ್ ಎದುರು ಪರಾಭವಗೊಂಡರು. ನಿಶಾ, ಸೆಮಿಫೈನಲ್‌ನಲ್ಲಿ 4–5 ರಲ್ಲಿ ಜಪಾನ್‌ನ ಅಮಿ ಇಶಿಲ್ ಎದುರು ಸೋತಿದ್ದರು.

ಪ್ರಣವ್ 76ನೇ ಜಿಎಂ

ಬೆಂಗಳೂರು: ಕರ್ನಾಟಕದ ಚೆಸ್ ಪ್ರತಿಭೆ ಪ್ರಣವ್ ಆನಂದ್ ಅವರು ಭಾರತದ 76ನೇ ಗ್ರ್ಯಾಂಡ್ ಮಾಸ್ಟರ್ ಎನಿಸಿಕೊಂಡರು.

ವಿಶ್ವ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಅವರು 2,500 ಎಲೊ ಪಾಯಿಂಟ್ಸ್ ಗಡಿ ದಾಟಿದರು.

17 ವರ್ಷದೊಳಗಿನವರ ಸ್ಯಾಫ್ ಫುಟ್‌ಬಾಲ್ ಟೂರ್ನಿ

ಭಾರತ ಬಾಲಕರಿಗೆ ಕಿರೀಟ



ಸ್ಯಾಫ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡ ಭಾರತ ತಂಡ –ಟ್ವಿಟರ್ ಚಿತ್ರ

ನವದೆಹಲಿ (ಪಿಟಿಐ): ಹೊಂದಾಣಿಕೆಯ ಆಟವಾಡಿದ ಭಾರತ ಬಾಲಕರ ತಂಡದವರು 17 ವರ್ಷದೊಳಗಿನವರ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಕೊಲಂಬೊದಲ್ಲಿ ಗುರುವಾರ ನಡೆದ ಫೈನಲ್‌ನಲ್ಲಿ ಭಾರತ, 4–0 ಗೋಲುಗಳಿಂದ ನೇಪಾಳ ತಂಡವನ್ನು ಮಣಿಸಿತು. ಲೀಗ್ ಹಂತದಲ್ಲಿ ಇದೇ ತಂಡದ ಕೈಯಲ್ಲಿ ಭಾರತ 1–3 ರಲ್ಲಿ ಸೋಲು ಅನುಭವಿಸಿತ್ತು. ಆದರೆ ಫೈನಲ್‌ನಲ್ಲಿ ಚೇತೋಹಾರಿ ಪ್ರದರ್ಶನ ನೀಡಿ ಸತತ ಎರಡನೇ ಬಾರಿ ಚಾಂಪಿಯನ್ ಆಯಿತು.

ಬಾಬಿ ಸಿಂಗ್, ಕೊರೌ ಸಿಂಗ್, ನಾಯಕ ವನ್ಲಾಲ್‌ಪೆಕ ಗುಯಿಟೆ ಮತ್ತು ಅಮನ್ ಅವರು ಗೋಲು ಗಳಿಸಿದರು.

ಆರಂಭದಿಂದಲೇ ಎದುರಾಳಿ ರಕ್ಷಣಾ ವಿಭಾಗದ ಮೇಲೆ ಒತ್ತಡ ಹೇರುವಲ್ಲಿ ಯಶಸ್ವಿಯಾದ ಭಾರತ, 18ನೇ ನಿಮಿಷದಲ್ಲಿ ಮುನ್ನಡೆ ಗಳಿಸಿತು. ಗುಯಿಟೆ ನೀಡಿದ ಕ್ರಾಸ್‌ನಲ್ಲಿ ಬಾಬಿ, ಹೆಡ್ ಮಾಡಿ ಚೆಂಡನ್ನು ಗುರಿ ಸೇರಿಸಿದರು. 30ನೇ ನಿಮಿಷದಲ್ಲಿ ಕೊರೌ ಸಿಂಗ್, ತಂಡದ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಹಿನ್ನಡೆ ಅನುಭವಿಸಿದ ಎದುರಾಳಿ ತಂಡ ಒರಟಾದ ಆಟವಾಡಿತು. 39ನೇ ನಿಮಿಷದಲ್ಲಿ ನೇಪಾಳ ತಂಡದ ನಾಯಕ ಪ್ರಶಾಂತ್, ಭಾರತದ ಡ್ಯಾನಿ ಲೈಶ್ರಾಮ್ ಅವರ ಬೆನ್ನಿಗೆ ಮೊಣಕೈಯಿಂದ ಗುದ್ದಿ ಕೆಳಕ್ಕೆ ಬೀಳಿಸಿದರು. ರೆಫರಿ ರೆಡ್ ಕಾರ್ಡ್ ತೋರಿಸಿ ಪ್ರಶಾಂತ್ ಅವರನ್ನು ಹೊರಕ್ಕೆ ಕಳುಹಿಸಿದರು.

ಮಾಜಿ ಅಂಪೈರ್ ರವೂಫ್ ನಿಧನ



ಅಸದ್ ರವೂಫ್

ನವದೆಹಲಿ (ಪಿಟಿಐ): ಐಸಿಸಿ ಎಲೈಟ್ ಪ್ಯಾನೆಲ್‌ನ ಮಾಜಿ ಅಂಪೈರ್, ಪಾಕಿಸ್ತಾನದ ಅಸದ್ ರವೂಫ್ (66) ಹೃದಯಾಘಾತದಿಂದ ಗುರುವಾರ ನಿಧನರಾದರು.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 2000 ಇಸವಿಯಲ್ಲಿ ಅಂಪೈರಿಂಗ್ ವೃತ್ತಿ ಆರಂಭಿಸಿದ್ದ ಅವರು 64 ಟೆಸ್ಟ್ (49ರಲ್ಲಿ ಅಂಗಳದ ಅಂಪೈರ್ ಮತ್ತು 15 ರಲ್ಲಿ ಟಿ.ವಿ ಅಂಪೈರ್), 139 ಏಕದಿನ ಹಾಗೂ 28 ಟಿ20 ಪಂದ್ಯಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. 2006 ರಲ್ಲಿ ಐಸಿಸಿ ಎಲೈಟ್ ಪ್ಯಾನೆಲ್‌ಗೆ ಸೇರ್ಪಡೆಯಾಗಿದ್ದರು.

ಒಂದು ಕಾಲದಲ್ಲಿ ಅತ್ಯುತ್ತಮ ಅಂಪೈರ್ ಎನಿಸಿಕೊಂಡಿದ್ದ ಅವರು ಕ್ರಿಕೆಟ್ ವಲಯದಲ್ಲಿ ಗೌರವಕ್ಕೆ ಪಾತ್ರರಾಗಿದ್ದರು. ಆದರೆ 2013 ರಲ್ಲಿ ನಡೆದಿದ್ದ ಐಪಿಎಲ್ ಸ್ಪಾಟ್ ಫಿಕ್ಸಿಂಗ್‌ನಲ್ಲಿ ರವೂಫ್ ಹೆಸರೂ ಕೇಳಿಬಂದಿತ್ತು. ಬುಕ್ಕಿಗಳಿಂದ ದುಬಾರಿ ಉಡುಗೊರೆ ಪಡೆದ ಆರೋಪಕ್ಕೆ ಗುರಿಯಾಗಿದ್ದರು.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) 2016 ರಲ್ಲಿ ಅವರ ಮೇಲೆ ಐದು ವರ್ಷ ನಿಷೇಧ ಹೇರಿತ್ತು. ಅದೇ ವರ್ಷ ಎಲೈಟ್ ಪ್ಯಾನೆಲ್‌ನಿಂದ ಐಸಿಸಿ ವಜಾಗೊಳಿಸಿತ್ತು. ಪಾಕಿಸ್ತಾನ ಕ್ರಿಕೆಟ್ ಮಂಡಳಿ ಕೂಡಾ ನಿಷೇಧ ಹೇರಿದ್ದರಿಂದ ಅವರ ಅಂಪೈರಿಂಗ್ ವೃತ್ತಿಗೆ ತೆರೆಬಿದ್ದಿತ್ತು.

ರವೂಫ್ ಕಳೆದ ಕೆಲ ವರ್ಷಗಳಿಂದ ಲಾಹೋರ್‌ನ ಲಂಡಾ ಬಜಾರ್‌ನಲ್ಲಿ ಬಟ್ಟೆ ಮತ್ತು ಚಪ್ಪಲಿ ವ್ಯಾಪಾರದಲ್ಲಿ ತೊಡಗಿದ್ದರು.

ಕ್ವಾರ್ಟರ್ ಫೈನಲ್‌ಗೆ ಲಿನೆಟ್, ಸ್ವಾನ್

ಚೆನ್ನೈ (ಪಿಟಿಐ): ಪೋಲೆಂಡ್‌ನ ಮಾಗ್ದಾ ಲಿನೆಟ್ ಮತ್ತು ಬ್ರಿಟನ್‌ನ ಕೇಟಿ ಸ್ವಾನ್ ಅವರು ಡಬ್ಲ್ಯುಟಿಎ ಚೆನ್ನೈ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.


ಗುರುವಾರ ನಡೆದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಲಿನೆಟ್ 6–2, 6–0 ರಲ್ಲಿ ರಷ್ಯಾದ ಒಕ್ಸಾನಾ ಸೆಲೆಖ್ಮೆತೇವಾ ಅವರನ್ನು ಮಣಿಸಿದರು. ಇನ್ನೊಂದು ಪಂದ್ಯದಲ್ಲಿ ಸ್ವಾನ್ 7–6, 6–2 ರಲ್ಲಿ ಅನಸ್ತೇಸಿಯಾ ಗಸನೋವಾ ವಿರುದ್ಧ ಗೆದ್ದರು. ಅರ್ಜೆಂಟೀನಾದ ನಡಿಯಾ ಪೊದೊರೊಸ್ಕ 3–6, 6–2, 7–6 ರಲ್ಲಿ ತತಿಯಾನಾ ಮರಿಯಾಗೆ ಆಘಾತ ನೀಡಿದರು.

ಡಬಲ್ಸ್‌ನಲ್ಲಿ ಭಾರತದ ರುತುಜಾ ಭೋಸ್ಲೆ ಮತ್ತು ಕರ್ಮನ್ ಕೌರ್ ಜೋಡಿ 0–6, 3–6 ರಲ್ಲಿ ಕೆನಡಾದ ಗ್ಯಾಬ್ರಿಯೆಲಾ ದಬ್ರೊವ್‌ಸ್ಕಿ– ಬ್ರೆಜಿಲ್‌ನ ಲೂಯಿಸಾ ಸ್ಟೆಫಾನಿ ಎದುರು ಪರಾಭವಗೊಂಡಿತು.

ಶೌಚಾಲಯ, ಸ್ನಾನದ ಕೋಣೆಯಲ್ಲಿ ಸಿರಿಂಜ್‌ಗಳು

ಕುಸ್ತಿ ಆಯ್ಕೆ ಟ್ರಯಲ್ಸ್; ಡೋಪಿಂಗ್ ಛಾಯೆ?

● ವೆಂಕಟೇಶ ಜಿ.ಎಚ್



ಶಿವಮೊಗ್ಗ: ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನಲ್ಲಿ ಆಗಸ್ಟ್ 14, 15ರಂದು ನಡೆದ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡದ ಆಯ್ಕೆ ಟ್ರಯಲ್ಸ್‌ನಲ್ಲಿ ಡೋಪಿಂಗ್‌ನ ಆರೋಪ ಕೇಳಿಬಂದಿದೆ.

ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಂಡಿದ್ದ ಕೆಲವರು ಉದ್ದೀಪನ ಮದ್ದು ತೆಗೆದುಕೊಂಡಿರುವ ಸಂಶಯ ಇದೆ. ಇದಕ್ಕೆ ಪೂರಕವಾಗಿ ಅಲ್ಲಿನ ಶೌಚಾಲಯ ಹಾಗೂ ಸ್ನಾನದ ಕೋಣೆಯಲ್ಲಿ ಸಿರಿಂಜ್‌ಗಳು ಬಿದ್ದಿರುವ ವಿಡಿಯೊ ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಂಡಿದ್ದ ಕೆಲವರು 'ಪ್ರಜಾವಾಣಿ'ಗೆ ನೀಡಿದ್ದಾರೆ. ಈ ವೇಳೆ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ– National Anti Doping Agency)ದ ಪರೀಕ್ಷೆ ನಡೆದಿಲ್ಲ.

'ಉದ್ದೀಪನ ಮದ್ದು ತೆಗೆದುಕೊಳ್ಳದೇ ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗಿಯಾಗುವವರಿಗೆ ಇದರಿಂದ ಅನ್ಯಾಯವಾಗುತ್ತಿದೆ' ಎಂದು ಕೆಲವು ಕುಸ್ತಿಪಟುಗಳು ಪತ್ರಿಕೆ ಎದುರು ಅಳಲು ತೋಡಿಕೊಂಡರು.

ಒತ್ತಡದಲ್ಲಿ ಗಮನ ಹರಿಸಿಲ್ಲ: 'ನಾವು ಆಯ್ಕೆಟ್ರಯಲ್ಸ್ ಆಯೋಜಿಸಿದ್ದೆವು. ಆಯ್ಕೆ ಪ್ರಕ್ರಿಯೆಯ ಒತ್ತಡದಲ್ಲಿದ್ದೆವು. ಹೀಗಾಗಿ ಆ ಬಗ್ಗೆ ಗಮನ ಹರಿಸಿಲ್ಲ. ಶೀಘ್ರವೇ ಮೈಸೂರಿನಲ್ಲಿ ನಡೆಯಲಿರುವ 15 ವರ್ಷದೊಳಗಿನವರ ದಸರಾ ಕುಸ್ತಿ ಪಂದ್ಯಾವಳಿ ವೇಳೆ ಕಟ್ಟುನಿಟ್ಟಿನ ನಿಗಾ ವಹಿಸಲಿದ್ದೇವೆ' ಎಂದು ಆಯ್ಕೆ ಟ್ರಯಲ್ಸ್‌ನ ಸಂಘಟಕರೂ ಆದ ಹಿರಿಯ ಕುಸ್ತಿ ಕೋಚ್, ದಾವಣಗೆರೆಯ ವಿನೋದ್‌ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಹಣ, ಅವಕಾಶ: 'ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದರೆ ಇಲ್ಲವೇ ರಾಜ್ಯ ಮಟ್ಟದಲ್ಲಿ ಪದಕ ಗಳಿಸಿದರೆ ಇಲಾಖೆಯಿಂದ ಪ್ರತಿಭಾ ಪುರಸ್ಕಾರದ ರೂಪದಲ್ಲಿ ಲಕ್ಷಗಟ್ಟಲೇ ಹಣ ದೊರೆಯುತ್ತದೆ. ಜೊತೆಗೆ ಹೆಸರು ಗಳಿಸಲು ಅವಕಾಶ. ಇನ್ನು ಖೇಲೋ ಇಂಡಿಯಾಗೆ ಆಯ್ಕೆಯಾದರೆ ವಾರ್ಷಿಕ ₹ 6 ಲಕ್ಷ ನಗದು ಸಿಗುತ್ತದೆ. ಹೀಗಾಗಿ ಕೆಲವರು ಅಡ್ಡದಾರಿ ಹಿಡಿಯುತ್ತಾರೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಯುವಜನ ಸೇವೆ, ಕ್ರೀಡಾ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

'ಕುಸ್ತಿ ಮಾತ್ರವಲ್ಲ ಪವರ್ ಲಿಫ್ಟಿಂಗ್, ಜೂಡೊ, ಅಥ್ಲೆಟಿಕ್ಸ್‌ನಲ್ಲೂ ಉದ್ದೀಪನ ಮದ್ದು ಸೇವನೆ ನಡೆಯುತ್ತಿದೆ. ಕೊಠಡಿಯಲ್ಲೇ ಚುಚ್ಚುಮದ್ದು ಚುಚ್ಚಿಕೊಂಡು ಬರುತ್ತಾರೆ. ಕೆಳಹಂತದಲ್ಲಿ ಪರೀಕ್ಷೆ ನಡೆಯದ ಕಾರಣ ಡೋಪಿಂಗ್ ಮಾಡಿಕೊಂಡವರು ಸಿಕ್ಕಿಬೀಳುವುದಿಲ್ಲ' ಎಂದು ಕುವೆಂಪು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ಮುಖ್ಯಸ್ಥ ಡಾ.ಅಪ್ಪಣ್ಣ ಗಸ್ತಿ ಹೇಳುತ್ತಾರೆ.

'ನಾಡಾಗೆ ಹಣ ಕೊಡುವ ಅಗತ್ಯವಿಲ್ಲ'

'ಸ್ಪರ್ಧೆ ಆಯೋಜಿಸುತ್ತಿದ್ದೇವೆ ಎಂದು ನಾಡಾಗೆ ಆಯಾ ರಾಜ್ಯದ ಸಂಬಂಧಿಸಿದ ಕ್ರೀಡಾ ಸಂಘಟನೆಯಿಂದ ಪತ್ರ ಬರೆದರೆ ಅವರೇ ಬಂದು ಪರೀಕ್ಷೆ ಮಾಡುತ್ತಾರೆ. ಹಣ ಕೊಡುವ ಅಗತ್ಯವಿಲ್ಲ' ಎಂದು ಫಿಫಾ–ಎಎಫ್‌ಸಿ ಮೆಡಿಕಲ್ ಅಂಡ್ ಡೋಪಿಂಗ್ ಕಂಟ್ರೋಲ್ ಆಫಿಸರ್ ಡಾ.ಕಿರಣ್ ಕುಲಕರ್ಣಿ ತಿಳಿಸಿದರು.

'ಡೋಪಿಂಗ್ ಇಂದು ನಮ್ಮ ಕ್ರೀಡಾಕ್ಷೇತ್ರದಲ್ಲಿನ ದೊಡ್ಡ ಪಿಡುಗು. ಶಕ್ತಿಧಾತುವಾಗಿ ಸ್ಟಿರಾಯ್ಡ್ಸ್, ಸ್ಟಿಮ್ಯುಲೆಂಟ್ಸ್ (ಉದ್ದೀಪಕ), ತೂಕ ಇಳಿಸಲು ದೇಹದಲ್ಲಿನ ನೀರಿನ ಅಂಶ ತೆಗೆದುಹಾಕಲು ಡೈಯುರೆಟಿಕ್ಸ್ (diuretics) ತೆಗೆದುಕೊಳ್ಳುತ್ತಾರೆ. ಇದರಿಂದ ಮುಂದೆ ದೇಹದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ' ಎಂದು ಅವರು ವಿವರಿಸಿದರು.

'ಟೆಸ್ಟಿಂಗ್ ದುಬಾರಿ'

'ಉದ್ದೀಪನ ಮದ್ದು ಪರೀಕ್ಷೆ ನಡೆಸಲು ಒಬ್ಬ ಸ್ಪರ್ಧಿಗೆ ಅಂದಾಜು ₹ 23,000 ಖರ್ಚಾಗುತ್ತದೆ. ಅಷ್ಟು ಹಣ ಭರಿಸುವ ಶಕ್ತಿ ಕ್ರೀಡಾಕೂಟದ ಆಯೋಜಕರಿಗೆ ಇರುವುದಿಲ್ಲ. ಎಲ್ಲ ಕೂಟಗಳಿಗೂ ನಾಡಾದವರನ್ನು ಕರೆಸಲು ಆಗದು ಎಂದು ವಿನೋದ್‌ಕುಮಾರ್ ತಿಳಿಸಿದರು.

'ಈ ಹಂತದಲ್ಲಿ ಉದ್ದೀಪನ ಮದ್ದು ಸೇವನೆ ಪಿಡುಗು ತಡೆಗೆ 10 ವರ್ಷಗಳಿಂದ ಹೋರಾಟ ಮಾಡುತ್ತಿದ್ದೇನೆ. ನಾಡಾ ಅಧಿಕಾರಿಗಳನ್ನು ಸಂಪರ್ಕಿಸಿ ಕ್ರೀಡಾಪಟುಗಳಿಗೆ ನಿರಂತರವಾಗಿ ಜಾಗೃತಿ ಶಿಬಿರ ಆಯೋಜಿಸಲು ಮನವಿ ಕೂಡ ಮಾಡಿದ್ದೇನೆ' ಎಂದು ಅವರು ಹೇಳಿದರು.